ಸಮಾಧಿಗಳು ಮತ್ತು ವಾಸ್ತುಶಿಲ್ಪ

ಫೆಲೋಷಿಪ್ ಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ

ಸಾದರಪಡಿಸಿದ ಸಂಶೋಧನಾ ಪ್ರಬಂಧ

ಸಂಶೋಧಕ

ಪುನೀತ್ ಟಿ.ಆರ್



ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು

2015-16

ಸಮಾಧಿಗಳು ಮತ್ತು ವಾಸ್ತುಶಿಲ್ಪ

ಫೆಲೋಷಿಪ್‌ಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಸಾದರಪಡಿಸಿದ ಸಂಶೋಧನಾ ಪ್ರಬಂಧ

2015–16

ಸಂಶೋಧಕರು

ಪುನೀತ್ ಟಿ. ಆರ್.

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು

ಪರಿವಿಡಿ

ಪೀಠಿಕೆ

ಮಾನವನಿಗೆ ಒದಗುವ ಎಲ್ಲ ಸಂಕಷ್ಟಗಳಿಗಿಂತಲೂ ಸಾವಿನ ಭಯ ಎಂಬುದು ಅವನ ಜೀವನದಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡುವ ಒಂದು ಸ್ಥಿತಿ, ಸಾವಂತೂ ಅವನನ್ನು ಒಂದು ನಿಮಿಷದಲ್ಲಿ ಇಲ್ಲ ಗೈಯುವ ಇನ್ನೊಂದು ಭಯಂಕರ ಸ್ಥಿತಿ. ಇದು ಒಮ್ಮೆಲೆ ಅವನಲ್ಲಿ ಪ್ರೀತಿ–ಭಯ, ವಿಶ್ವಾಸ–ಕ್ರೋಧ, ಆಕರ್ಷಣೆ–ವಿಕರ್ಷಣೆ, ಭೀತಿಯನ್ನು ಹುಟ್ಟು ಹಾಕಿದೆ.

ಮಾನವನ ಹುಟ್ಟು ಅನಿವಾರ್ಯವಾಗದೇ ಇರಬಹುದು. ಆದರೆ ಹುಟ್ಟಿದ ಮೇಲೆ ಮರಣವೆಂಬುದು ಅವನಗೆ ಅನಿವಾರ್ಯವೂ ಪ್ರಕೃತಿ ನಿಯಮವೂ ಹೌದು. ಕನ್ನಡದ ಹೆಸರಾಂತ ಗಾದೆಯಂತೆ 'ಹುಟ್ಟು ಉಚಿತ ಸಾವು ಖಚಿತ' ಎಂಬ ಮಾತಿನಂತೆ ಸಾವಿನ ಅರ್ಥ, ಕಲ್ಪನೆ ಮುಂತಾದ ವ್ಯಾಖ್ಯಾನಗಳು ವ್ಯಕ್ತಿಯಿಂದ ವ್ಯಕ್ತಿಗೆ, ಸಂಸ್ಕೃತಿಯಿಂದ ಸಂಸ್ಕೃತಿಗೆ, ಕಾಲದಿಂದ ಕಾಲಕ್ಕೆ ಬದಲಾಗುತ್ತ ಹೋಗುತ್ತವೆ.

ಸತ್ತ ಆತ್ಮದ ಬಗ್ಗೆ ಪ್ರೀತಿ. ಆದರೆ ಕಳೇಬರದ ಬಗ್ಗೆ ಭೀತಿ ಅವನಲ್ಲುಂಟಾಗುತ್ತದೆ. ಪರಸ್ಪರ ವಿರುದ್ಧವಾದ ಅವನ ಈ ಭಾವನೆಗಳು ಅವನು ಶವನಗಳನ್ನು ರಕ್ಷಿಸಿಟ್ಟ ವಿವಿಧ ರೀತಿಗಳು. ಸಮಾದಿ ಮಾಡುವುದು, ಸುಡುವುದು, ಮುಂತಾದ ಸಂಪೂರ್ಣ ನಿರ್ನಾಮ ಮಾಡುವ ರೀತಿಗಳಲ್ಲಿ ಸುವ್ಯಕ್ತವಾಗಿದೆ. ಪ್ರಾಚೀನ ಪ್ರಪಂಚದಲ್ಲಿ ಪ್ರಚಲಿತವಿದ್ದ ಶವ ಸಂಸ್ಕಾರಗಳನ್ನು ಕಾಲಾನುಕ್ರಮದಲ್ಲಿ ಸಮೀಕ್ಷೆ ಮಾಡಿದಾಗ, ಶವ ಸಂಸ್ಕಾರ ಮಾಡುವ ವಿಧಾನ, ಸಮಾಧಿಗಳ ಮುಂದೆ ನೀಡುವ ಬಲಿ, ಕಾಣಿಕೆಗಳು ಕಂಡು ಬಂದಿದೆ.

ಸತ್ತವರ ಗೌರವಾರ್ಥವಾಗಿ ನಿಲ್ಲಿಸಿರುವ ಸ್ಮಾರಕಗಳು ಈ ಎಲ್ಲದರ ನಡುವೆ ಒಂದು ಐಕ್ಯತೆ, ಸಾಮ್ಯತೆಗಳಾಗಿ ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಸಾವು ಎಂಬುದು ಸಾರ್ವತ್ರಿಕವಾಗಿ ಪ್ರಪಂಚದ ಎಲ್ಲಾ ಸಮಾಜಗಳಲ್ಲಿಯೂ ತನ್ನ ಕಾರ್ಯರೂಪವನ್ನು ತೋರಿಸುತ್ತದೆ ಎಂಬುದು ಸಾವಿನ ಬಗ್ಗೆ ಮಾನವನ ಮೂಲಭೂತ ಭಾವನೆಗಳು ಒಂದೇ ಆಗಿರುವುದರಿಂದ ಅವನು ಅದರ ಬಗ್ಗೆ ತನಗಿರುವ ಭೀತಿಯ ಅಭಿವ್ಯಕ್ತಿಯೂ ಸಾಮ್ಯವನ್ನು ತೋರಿಸಿದ್ದಾನೆ.

ಮಾನವನ ನಾಗರೀಕತೆಯ ಸಂಸ್ಕೃತಿಯ ಆರಂಭಕಾಲದಿಂದಲೂ ಅವುಗಳ ಬೆಳವಣಿಗೆಯ ಜೊತೆ ಜೊತೆಗೆ ಸಾವಿನ ನಂತರದ ಜೀವನದ ಬಗ್ಗೆ ಹಲವಾರು ನಂಬಿಕೆಗಳು ಕಲ್ಪನೆಗಳು ಬೆಳೆದುಬಂದಿವೆ. ಅವುಗಳನ್ನು ಸ್ಥೂಲವಾಗಿ ಹೀಗೆ ಪರಿಚಯ ಮಾಡಿಕೊಳ್ಳಬಹುದು.

ಸತ್ತವರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಅಶಕ್ತರಾಗಿರುತ್ತಾರೆ. ಆದ್ದರಿಂದ ಅವರಿಗೆ ಅವಶ್ಯವಿರುವ ಅಗತ್ಯಗಳನ್ನು ಬದುಕಿರುವವರು ಪೂರೈಸಬೇಕು. ಸತ್ತವ್ಯಕ್ತಿ ತಮಗೆ ಪ್ರಿಯನಾದವನಾಗಿರಲಿ, ಅಪ್ರಿಯನಾಗಿರಲಿ ಈ ರೀತಿಯ ಅಗತ್ಯಗಳನ್ನು ಪೂರೈಸದಿದ್ದರೆ ಅವನು ತಮಗೆ ತೊಂದರೆಯನ್ನುಂಟುಮಾಡಬಹುದು.

ಜನಾಂಗದ ಮುಖ್ಯಸ್ಥರು, ಹಿರಿಯರು, ನಾಯಕರು, ವೀರರು ಮುಂತಾದ ಲೌಕಿಕ ಜೀವನದಲ್ಲಿ ಪ್ರಭಾವಶಾಲಿಗಳಾಗಿರುವ ವ್ಯಕ್ತಿಗಳು ಸತ್ತ ನಂತರವೂ ತಮ್ಮ ಪ್ರಭಾವವನ್ನು ಉಳಿಸಿಕೊಳ್ಳುತಾರೆ. ಅವರ ಬೌತಿಕ ದೇಹ ನಶಿಸಿಹೋಗಿದ್ದರೂ ಅವರ ಆತ್ಮ ಬದುಕಿರುವ ತಮಗೆ ಒಳ್ಳೆಯದನ್ನೋ ಅಥವಾ ಕೆಟ್ಟದ್ದನ್ನೋ ಮಾಡುವ ಶಕ್ತಿ ಪಡೆದಿದೆ ಎಂಬ ನಂಬಿಕೆ. ಸತ್ತ ಹಿರಿಯರನ್ನು ಮುಂದಿನ ಪೀಳಿಗೆಯವರು ಸ್ಮರಿಸಬೇಕು ಎಂಬುದು ಭಯ ಮಿಶ್ರಿತ ಕೃತಜ್ಞತಾಭಾವ. ಸತ್ತ ಹಿರಿಯರು ಮತ್ತೆ ತಮ್ಮ ಮನೆಯಲ್ಲಿಯೇ ಪುನರ್ಜನ್ಮವೆತ್ತಿ ಬರುತ್ತಾರೆ ಎಂಬ ಭಾವನೆ. ಈ ನಂಬಿಕೆಗಳು ಕಲ್ಪನೆಗಳು ಮಾನವನ ಸಂಸ್ಕೃತಿಯ ಮೂಲಭೂತ ಆಶಯಗಳಾಗಿ ಪರಿಸರ ಹಾಗೂ ಜನರ ಮನೋಧರ್ಮವನ್ನು ಅನುಸರಿಸಿ ಬೆಳದಿವೆ.

ಪೂರ್ವಜರ ಆರಾಧನಾ ಸಂಪ್ರದಾಯದ ವಿಶೇಷ ಗುಣವೆಂದರೆ, ಸತ್ತ ವ್ಯಕ್ತಿಗಳನ್ನು ಮನುಷ್ಯ ಮಾತ್ರದವರೆಂದು ಭಾವಿಸದೆ ದೈವಾಂಶ ಸಂಭೂತರೆಂದೆ ಪರಿಗಣಿಸಲಾಗಿರುವುದು. ಈ ಹಿರಿಯರ ಆರಾಧನಾ ಸಂಪ್ರದಾಯ ದೇಶದ ಹಲೆವೆಡೆಗಳೆಂತೆ ಕರ್ನಾಟಕದಲ್ಲಿಯೂ ಪ್ರಚಲಿತದಲ್ಲಿರುವುದನ್ನು ನಾವು ಕಾಣಬಹುದು.

ಅಧ್ಯಾಯ –1

ಸಮಾಧಿ ಮತ್ತು ಶಿಲಾಯುಗ ಸಂಸ್ಕೃತಿ

ಪರ್ಯಾಯ ಭಾರತ ಈ ವಲಯದಲ್ಲಿ ಮೂರು ಸಂಪ್ರದಾಯಗಳನ್ನು ಗುರುತಿಸಲಾಗಿದೆ. ಇವು ಬೃಹತ್ ಶಿಲಾಯುಗ ಸಂಸ್ಕೃತಿ ತುಂಗಭದ್ರ ಬಯಲಿನ ಬಿಳಿಚಿತ್ರಗಳು, ಮಣ್ಪಾತ್ರೆಗಳು ಸಂಸ್ಕೃತಿ ಮತ್ತು ದ.ಭಾರತದ ಬೃಹತ್ ಶಿಲಾಯುಗ ಸಂಸ್ಕೃತಿ ಬೃಹತ್ ಶಿಲಾಯುಗ ದೃಷ್ಟಿಯಿಂದ ಹೆಚ್ಚಿನ ಸಂಶೋಧನೆಗೆ ಒಳಪಟ್ಟ ಪ್ರದೇಶವಾಗಿದೆ

ಪರ್ಯಾಯ ಭಾರದಾಚೆಯ ವಲಯ. ಈ ವಲಯ ಕಾಶ್ಮೀರ ಕಣಿವೆಯನ್ನೊಳಗೊಳ್ಳುತ್ತದೆ. ಇಲ್ಲಿ ಸು.10 ನೆಲೆಗಳಲ್ಲಿ ನಲುಸುಗಲ್ಲುಗಳು ಕಂಡುಬಂದಿವೆ. ಕರೇವ ಮಣ್ಣು ಮತ್ತು ಸುಣ್ಣದ ನೆಲೆಗಟ್ಟಿಗಳಲ್ಲಿ ಹೊಂದಿದ್ದ ತಡಿಕೆ ಮನೆಗಳಲ್ಲಿ ಇವರು ವಾಸಿಸುತ್ತಿದ್ದರು. ಅಕ್ಕಿ ಕಾಳುಗಳು ಬೆಳೆಯುತ್ತಿದ್ದರಲ್ಲದೆ ಕುರಿ, ಮೇಕೆಗಳನ್ನು ಸಾಕಿಕೊಂಡಿದ್ದರು. ಇವರ ಕಾಲದಲ್ಲಿ ಕಬ್ಬಿಣದ ಬಳಕೆ ಹೆಚ್ಚಾಗಿದ್ದಿತು.

ವಿಂದ್ಯಪ್ರದೇಶ ಉತ್ತರವಿಂದ್ಯಪರ್ವತ ಶ್ರೇಣಿಗೆ ಸೇರುವ ಅಲಹಾಬಾದ್ ಪರ್ವತ ನೆಲೆಗಳೂ ಇವೆ. ಕಲ್ಲವೃತ್ತದಿಂದ ಆವೃತವಾದ ನೆಲಕೋಣೆಗಳು ಈ ಪ್ರದೇಶದ ನಮೂನೆಯಾಗಿವೆ. ಇಲ್ಲಿ ಉತ್ಖನನಕ್ಕೊಳಗಾಗಿರುವ ಗೋರಿಗಳಲ್ಲಿ ಕಬ್ಬಿಣದ ಉಪಕರಣಗಳಿದ್ದವು. ಶಿಲಾಯುಗ ಸಂಸ್ಕೃತಿಯ ಸೂಕ್ಷ್ಮ ಪೀಠೋಪಕರಣ ಹಾಗೂ ಮಣ್ಪಾತ್ರೆಗಳು ಮಾತ್ರ ಕಂಡುಬಂದಿವೆ. ಕೋಟೆಯ (ಅಲಹಾಬಾದ್ ಜಿಲ್ಲೆ) ಮತ್ತು ಕಕೋರಿಯ (ವಾರಣಾಸಿ ಜಿಲ್ಲೆ) ಸೇರಿಸಬಹುದಾದ ವಸತಿನೆಲೆಗಳು ಗೋರಿ–ಉತ್ತರ ಭಾರತದ ಬೃಹತ್ ಶಿಲಾಯುಗ ಸೂಚನೆ.

ಈಶಾನ್ಯ ಭಾರತ ಇಲ್ಲಿನ ನಾಗ, ಖಾಸಿ, ಮೊದಲಾದ ಆದಿವಾಸಿ ಪಂಗಡಗಳ ಬೃಹತ್ ಶಿಲಾ ಸ್ಮಾರಕಗಳನ್ನು ನಿರ್ಮಿಸುವ ಸಂಪ್ರದಾಯ ಇಂದಿಗೂ ಚಾಲ್ತಿಯಲ್ಲಿದೆ. ಇವು ಸ್ಮಾರಕಗಳೇ ಹೊರತು ಅವಶೇಷಗಳುಳ್ಳ ಗೋರಿಗಳಲ್ಲಿ ಸಾಮಾನ್ಯ ನಮೂನೆಗಳಿಂದ ನಲುಸುಗಲ್ಲುಗಳು, ಕಲ್ಪವೃತ್ತಗಳು ಮತ್ತು ಕಲ್ಮನೆಗಳು.

ಬೃಹತ್ ಶಿಲಾಯುಗ ಸಂಸ್ಕೃತಿ : ಬೃಹತ್ ಶಿಲಾ ಸಮಾಧಿಗಳೇ ಪ್ರಧಾನವಾಗಿ ಕಂಡುಬರುವ ಕಾಲಾವಧಿ. ಯುರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಮುಖ್ಯವಾಗಿ ಪಶ್ಚಿಮ ಮಧ್ಯ ಯುರೋಪ್, ಇರಾನ್, ಪಾಕಿಸ್ತಾನ, ಭಾರತ, ಆಗ್ನೇಯ ಏಷ್ಯ ಮತ್ತು ಜಪಾನಿನಲ್ಲಿ ಈ ಸಂಸ್ಕೃತಿಯ ಸಮಾಧಿಗಳು ಕಂಡುಬರುತ್ತವೆ. ಆದರೆ, ಇವೆಲ್ಲವೂ ಸಮಕಾಲೀನವಾದುವಲ್ಲ. ಇವುಗಳಲ್ಲಿ ಪಶ್ಚಿಮ ಯುರೋಪಿನ ಸಮಾಧಿಗಳು ಅತ್ಯಂತ ಪ್ರಾಚೀನವಾದವು. ಪ್ರ.ಶ.ಪೂ. 4ನೆಯ ಸಹಸ್ರಮಾನಕ್ಕೆ ಸೇರುವ ಈ ಸಮಾಧಿಗಳು ನವಶಿಲಾಯುಗ–ಕಂಚಿನಯುಗದ ಅವಶೇಷಗಳಾಗಿವೆ. ಭಾರತದಲ್ಲಿ ಇವು ಪ್ರ.ಶ.ಪೂ. 1300ರ ಹೊತ್ತಿಗೆ, ಅಂದರೆ ಆದಿ ಕಬ್ಬಿಣಯುಗ ಸಂಸ್ಕೃತಿಯೊಂದಿಗೆ ಮೊದಲ ಬಾರಿಗೆ ಕಾಣಬರುತ್ತವೆ. ಪಂಜಾಬ್, ಗಂಗಾನದಿ ಬಯಲು, ರಾಜಸ್ತಾನದ ಮರುಭೂಮಿ ಪ್ರದೇಶ ಮತ್ತು ಉತ್ತರ ಗುಜರಾತನ್ನು ಹೊರತುಪಡಿಸಿ ಭಾರತದ ಉಳಿದೆಲ್ಲ ಭಾಗಗಳಲ್ಲಿ ಬೃಹತ್ ಶಿಲಾಯುಗ ಗೋರಿಗಳು ಹರಡಿವೆ. ಪರ್ಯಾಯ ಭಾರತದಲ್ಲಿ ಮುಖ್ಯವಾಗಿ ಆಂಧ್ರ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಇವು ಅತ್ಯಧಿಕ ಸಂಖ್ಯೆಯಲ್ಲಿವೆ. ಬಿ.ಕೆ. ಥಾಪರ್ ಅವರು ಸಮಾಧಿಗಳನ್ನು ನಾಲ್ಕು ಪ್ರಾದೇಶಿಕ ವಲಯ ಅಥವಾ ಸಂಕೀರ್ಣಗಳಾಗಿ ವಿಂಗಡಿಸಿದ್ದಾರೆ. ಇವು–ಪರ್ಯಾಯ ಭಾರತ, ಪರ್ಯಾಯ ಭಾರದಾಚೆಯ ವಲಯ, ವಿಂಧ್ಯ ಪ್ರದೇಶ ಮತ್ತು ಈಶಾನ್ಯ ಭಾರತ ಸಮಾಧಿ ನಮೂನೆಗಳು: ಈ ಕೆಳಕಂಡ ನಮೂನೆಗಳನ್ನು ವಿ.ಡಿ.ಕೃಷ್ಣಸ್ವಾಮಿಯವರು ಗುರುತಿಸಿದ್ದಾರೆ.

1. ನಿಲಸುಗಲ್ಲುಗಳು (ಮೆನ್ಹಿರ್): ನೇರವಾಗಿ ನಿಲ್ಲಿಸಿರುವ ಉದ್ದ ಚಪ್ಪಡಿಗಲ್ಲು ಅಥವಾ ಬಂಡೆಗಳು ಈ ವರ್ಗಕ್ಕೆ ಸೇರುತ್ತವೆ. ಇವುಗಳ ಸುತ್ತ ಕೆಲವೊಮ್ಮೆ ಕಲ್ಲು ವೃತ್ತಗಳಿರುತ್ತವೆ. ಎರಡು ವಿಶಿಷ್ಟ



ನಿಲಸು ಗಲ್ಲುಗಳು

ನಮೂನೆಗಳೆಂದರೆ ಸಮನಾಂತರ ಪಂಕ್ತಿಯಲ್ಲಿ ನಿಲ್ಲಿಸಿದ ಕಲ್ಲುಗಳು ಮತ್ತು ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ನೆಟ್ಟಿರುವ ಕಲ್ಲುಗಳು



ಕಲ್ಮನೆ

2. ಕಲ್ಮನೆ (ಡಾಲ್ಮೆನ್): ಭೂಮಟ್ಟದಲ್ಲಿ 4–5 ಚಪ್ಪಡಿಕಲ್ಲುಗಳಿಂದ ರಚಿಸಿದ ಪುಟ್ಟ ಕೋಣೆಯನ್ನು ಕಲ್ಮನೆ ಎನ್ನುವರು. ಕೋಣೆಯ ಮೇಲ್ಭಾಗವನ್ನು ಚಪ್ಪಡಿಕಲ್ಲಿನಿಂದ ಮುಚ್ಚಲಾಗಿರುತ್ತದೆ. ಕೆಲವೊಮ್ಮೆ ಯಾವುದಾದರೂ ಬದಿಯ ಗೋಡೆಯಂತಿರುವ ಚಪ್ಪಡಿಕಲ್ಲಿನಲ್ಲಿ ವೃತ್ತಾಕಾರದ ಕಂಡಿಯಿರುತ್ತದೆ.



ಕಲ್ಲು ವೃತ್ತಗಳು

3. ಕಲ್ಲುಗುಪ್ಪೆಗಳು (ಕೇಯಿರ್ನ್) : ಸಮಾಧಿಯ ಮೇಲೆ ಗುರುತಿಗಾಗಿ ಒತ್ತಾಗಿ ಗುಡ್ಡೆ ಹಾಕಿದ ಸಣ್ಣ ಕಲ್ಲುಗಳೇ ಕಲ್ಲುಗುಪ್ಪೆಗಳು.



ಅಸ್ಥಿ ಮಡಿಕೆಗಳು

4. ಕಲ್ಲುವೃತ್ತಗಳು (ಸರ್ಕಲ್) : ಸಮಾಧಿಯ ಸುತ್ತಲೂ ಸಣ್ಣಬಂಡೆಗಳನ್ನು ನೆಲಮಟ್ಟದಲ್ಲಿ ವೃತ್ತಾಕಾರದಲ್ಲಿ ಜೋಡಿಸಿರುತ್ತಾರೆ. ಸಾಮಾನ್ಯವಾಗಿ ಒಂದು ಸಮಾಧಿಗೆ ಒಂದೇ ಕಲ್ಲು ವೃತ್ತವಿರುತ್ತದೆ. ಏಕ ಕೇಂದ್ರದ ಎರಡು ಅಥವಾ ಹೆಚ್ಚಿನ ವೃತ್ತಗಳು ವಿರಳವಾಗಿ ಕಂಡುಬಂದಿವೆ.

5. ಅಸ್ಥಿ ಮಡಕೆಗಳು : ಅಸ್ಥಿ ಅವಶೇಷಗಳನ್ನು ಮಡಕೆಗಳೊಳಗೆ ಇಟ್ಟು ಅವುಗಳನ್ನು ಹೂಳಲಾಗುತ್ತಿತ್ತು. ಇಂತಹ ಮಡಕೆಗಳು ಗುಡಾಣದ ಆಕಾರ–ಗಾತ್ರಗಳಲ್ಲಿರುತ್ತವೆ. ಇವುಗಳ ತಳ ಪುಟ್ಟದಾಗಿರುತ್ತದೆ. ಅಲೆಯಾಗಿ ಹೊಟ್ಟೆಯುಬ್ಬಿರುತ್ತವೆ. ಮಡಕೆಗಳನ್ನು ಗುಳಿಗಳೊಳಗೆ ಹೂಳಿರುತ್ತಾರೆ. ಭೂ ಮಟ್ಟದಲ್ಲಿ ಇವುಗಳ ಸುತ್ತ ಗುರುತಿಗಾಗಿ ಕಲ್ಲು ವೃತ್ತವಿರಬಹುದು ಅಥವಾ ಮಡಕೆಯ ಮೇಲೆ ಒಂದು ದೊಡ್ಡ ಚಪ್ಪಡಿಕಲ್ಲನ್ನು ಹಾಸಿರಬಹುದು.

6. ಶವಪೆಟ್ಟಿಗೆ: ಈ ಪ್ರಕಾರದಲ್ಲಿ ಸುಡಾವೆಮಣ್ಣಿನಿಂದ ತಯಾರಿಸಿದ ಕಾಲಿರುವ ಪೆಟ್ಟಿಗೆಯೊಳಗೆ ಅಸ್ಥಿಯನ್ನು ಇಟ್ಟಿರುತ್ತಾರೆ.

7. ಸಮಾಧಿದಿಬ್ಬ (ಬರೊ) : ಗೋಲ ಅಥವಾ ಅಂಡಾಕಾರದಲ್ಲಿ ನಿರ್ಮಿಸಿರುವ ಮಣ್ಣಿನ ದಿಬ್ಬ. ಈ ಪ್ರಕಾರದಲ್ಲಿ ಕಲ್ಲನ್ನು ಬಳಸಿರುವುದಿಲ್ಲ.



ನೆಲ ಕೋಣೆ

8. ನೆಲಕೋಣೆ (ಸಿಸ್ಟ್) : ನೆಲದಡಿಯಲ್ಲಿ ರಚಿಸಿರುವ ಆಯತಾಕಾರದ ಕಲ್ಲುಚಪ್ಪಡಿಯ ಕೋಣೆ ಅಥವಾ ಪೆಟ್ಟಿಗೆ. ನಾಲ್ಕು ಚಪ್ಪಡಿಕಲ್ಲುಗಳನ್ನು ಒಂದಕ್ಕೊಂದು ಆನಕೆಯಾಗಿರುವಂತೆ ನಿಲ್ಲಿಸಿ ಮೇಲ್ಭಾಗವನ್ನು ಮತ್ತೊಂದು ಚಪ್ಪಡಿಕಲ್ಲಿನಿಂದ ಮುಚ್ಚಿರುತ್ತಾರೆ. ಈ ಪ್ರಕಾರದಲ್ಲಿ ಪ್ರಾದೇಶಿಕ ವೈವಿಧ್ಯ ಕಂಡುಬರುತ್ತದೆ.



ಟೋಪಿಕಲ್ಲು

೯. ಟೋಪಿಕಲ್ಲು : ಒಂದು ಬದಿ ಸಮತಲವಾಗಿದ್ದು, ಇನ್ನೊಂದು ಬದಿಯಲ್ಲಿ ಅರೆ ವೃತ್ತಾಕಾರವಾಗಿರುವಂತೆ ಮತ್ತು ತುದಿಯ ಕಡೆ ಸಪೂರವಾಗುತ್ತ ಹೋಗುವಂತೆ ಕೆತ್ತಿದ 4 ಚಪ್ಪಡಿಕಲ್ಲುಗಳನ್ನು ತ್ರಿಪದಿಯ ರೀತಿಯಲ್ಲಿ ತುದಿ ಒಂದನ್ನೊಂದು ಸೇರುವಂತೆ ಓರೆಯಾಗಿ ನಿಲ್ಲಿಸಿ ಅದರ ಮೇಲೆ ಗುಮ್ಮಟಾಕಾರದ ಕಲ್ಲನ್ನು ಇಡಲಾಗುತ್ತದೆ.

10. ಹೆಡೆಕಲ್ಲು (ಹುಡ್‌ಸ್ಟೋನ್) : ಹೆಡೆಯ ರೀತಿಯಲ್ಲಿರುವ ಜಂಬುಕಲ್ಲಿನ ಶಿಲೆ.

11. ಮಾನವಾಕೃತಿಯ ಚಪ್ಪಡಿಕಲ್ಲು (ಆಂಥ್ರೋಪೊಮಾರ್ಫ್) : ಸು. 20 ಸೆಂ.ಮೀ. ದಪ್ಪದ ಚಪ್ಪಡಿಕಲ್ಲಿನಲ್ಲಿ ಕೆತ್ತಿದ ಮಾನವ ಆಕೃತಿಯನ್ನು ಹೋಲುವ ಕಲ್ಲುಗಳು, ಬೃಹತ್ತಾದ ಚಪ್ಪಡಿಕಲ್ಲಿನ ಮನುಷ್ಯಾಕಾರದ



ಮಾನವಾಕೃತಿಯ ಚಪ್ಪಡಿಕಲ್ಲು

ಗೊಂಬೆಗಳು ಬೃಹತ್ ಶಿಲಾಸಂಸ್ಕೃತಿಯ ಮತ್ತೊಂದು ಅಪರೂಪದ ಅವಶೇಷಗಳು. ಇಂತಹ ಅವಶೇಷಗಳು ಕಳೆದ ಶತಮಾನದ ಕೊನೆಯ ದಶಕಗಳಿಂದ ಹೆಚ್ಚು ಬೆಳಕಿಗೆ ಬಂದಿವೆ. ದಕ್ಷಿಣ ಭಾರತದ ಕರ್ನಾಟಕ (4) ತಮಿಳುನಾಡು (2) ಆಂಧ್ರಪ್ರದೇಶ (11) ಈ ನೆಲೆಗಳಲ್ಲಿ ಇಂಥ

ಪ್ರಕಾರದ ಗೊಂಬೆಗಳು ಲಭಿಸಿವೆ. ಬೃಹದಾಕಾರದ ಚಪ್ಪಡಿಕಲ್ಲುಗಳಲ್ಲಿ ಮಾನವನಂತೆ ಕಾಣುವ ಸಾಮಾನ್ಯವಾಗಿ ಪುರಷನ, ಅಪರೂಪವಾಗಿ ಸ್ತ್ರೀಯ ಬಾಹ್ಯಾಕಾರವನ್ನಷ್ಟೇ ಗುರ್ತಿಸಿ ಅದರಲ್ಲಿ ಕಣ್ಣು, ಮೂಗು, ಬಾಯಿ ಮೊದಲಾದ ಮುಖಲಕ್ಷಣಗಳನ್ನು ತೋರಿಸದೆ ಅರ್ಧಗೋಲಾಕೃತಿಯ ತಲೆ, ಅಡ್ಡಚಾಚಿದ ಕೈಗಳು, ಕಾಲುಗಳನ್ನು ಅಗಲಿಸಿ ನಿಂತಿರುವಂತೆ ತೋರಿಸಿಲಾಗಿದೆ. ಕಾಲುಗಳನ್ನು ಬಿಡಿಬಿಡಿಯಾಗಿ ತೋರಿಸಿರುವುದಿಲ್ಲ. ಮೆಟ್ಟೂರು (ತಮಿಳುನಾಡು), ಐಹೊಳೆ, ಹಿರೇಬೆನಕಲ್ಲು ಶಿವಮೊಗ್ಗ ಮೊದಲಾದೆಡೆಗಳಲ್ಲಿ ಇಂತ ಗೊಂಬೆಗಳು ಕಲ್ಗೋರಿಯ ಒಂದು ಭಾಗವಾಗಿ ತೋರಿಬಂದಿವೆ. ಆದ್ದರಿಂದ ಬೃಹತ್ ಶಿಲಾಸಂಸ್ಕೃತಿಯ ಶಿಲ್ಪಗಳೆಂದೂ ಪರಿಗಣಿತವಾಗಿವೆ.



ಐಹೊಳೆ

ಐಹೊಳೆ ಹಿರೇಬೆನೆಕಲ್ಲು (ಗಂಗಾವತಿ ತಾಲ್ಲೂಕು, ರಾಯಚೂರು ಜಿಲ್ಲೆ) ಹುಲಿಕುಂಟೆ (ಹರಪನಹಳ್ಳಿ ತಾಲ್ಲೂಕು) ಮತ್ತು ಕುಮತಿ (ಕೂಡ್ಲಿಗಿ ತಾಲ್ಲೂಕು) ಬಳ್ಳಾರಿ ಜಿಲ್ಲೆಯ ನಾಲ್ಕು ಪ್ರದೇಶಗಳಲ್ಲಿ ಇಂಥ ಪ್ರಕಾರದ ಈ ಬಗೆಯ ಕಲ್ಲುಗೊಂಬೆಗಳು ಪತ್ತೆಯಾಗಿವೆ. ಈ ಎಲ್ಲಾ ಪ್ರದೇಶದ ಗೊಂಬೆಗಳನ್ನು ಗಮನಿಸಿದಾಗ ಅವುಗಳ ರಚನೆಯಲ್ಲಿ ಅಂಥ ಬಹುಮುಖ್ಯ ವ್ಯತ್ಯಾಸಗಳು ಕಂಡುಬರದಿದ್ದರೂ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬಂದಿವೆ. ಐಹೊಳೆಯ ಗೊಂಬೆಗಳಲ್ಲಿ ಅತಿ ನೀಳವಾದ ಮುಂಡ ನೆಲದಲ್ಲಿ ಹುದುಗಿಸಲು ಅನುಕೂಲವಾಗುವಂತೆ ಚೂಪಾದ ಬುಡದ ಭಾಗವಿದೆ. ಹಿರೇಬೆನೆಕಲ್ಲಿನಲ್ಲಿ ಇಂಥ ಗೊಂಬೆಗಳು ಗಾತ್ರದಲ್ಲಿ ಅತೀ ದೊಡ್ಡವಾಗಿದ್ದು, ಮುಕ್ಕಾಲು ಭಾಗ ಭೂಮಿಯಲ್ಲಿ ಹುದುಗಿಕೊಂಡಿವೆ. ಕುಮತಿಯ ಗೊಂಬೆಗಳು 2.5 ಮೀಟರ್ ಎತ್ತರ 1.5 ಅಗಲವಾದ ಎದೆಯಭಾಗ

15–20 ಸೆಂ.ಮೀ.ಗಳಷ್ಟು ದಪ್ಪವಾಗಿವೆ. ಸ್ಥಳೀಯವಾಗಿ ಇಲ್ಲಿ ಈ ಕಲ್ಲುಗೊಂಬೆಗಳನ್ನು ಪಾಂಡವ ಕಲ್ಲುಗಳೆಂದು ಕರೆದು ವರ್ಷಕ್ಕೊಮ್ಮೆ ಇವುಗಳಿಗೆ ಎಡೆ ಇಡುವ ಪದ್ಧತಿ ಇದೆ.

ಒಟ್ಟಿನಲ್ಲಿ ಈ ಬಗೆಯ ಗೊಂಬೆಗಳನ್ನು ಬೃಹತ್ ಶಿಲಾಸಂಸ್ಕೃತಿಯ ಧಾರ್ಮಿಕ ನಂಬಿಕೆ, ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಆಕರಗಳಾಗಿರುವುದರೊಂದಿಗೆ ಕರ್ನಾಟಕ ಮೂರ್ತಿಶಿಲ್ಪದ ಪೂರ್ವಭಾವಿ ಹಂತದ ಮೇಲೂ ಬೆಳಕು ಚೆಲ್ಲುತ್ತವೆ. ಬೃಹತ್ ಶಿಲಾಸಂಸ್ಕೃತಿಯ ಜನರ ನಿರ್ಮಾಣ ಕೌಶಲ್ಯ ಹಾಗೂ ಅನುಸರಿಸುತ್ತಿದ್ದ ಸರಳ ಮತ್ತು ಚತುರ ತಾಂತ್ರಿಕ ಕುಶಲತೆಗಳು ತರುವಾಯ ಕಾಲದ ಶಿಲಾನಿರ್ಮಿತಗಳಿಗೆ ನಾಂದಿಯಾದವು. ಉಜ್ವಲ ಪ್ರತಿಭೆ ಅನ್ನಲು ಸಾಧ್ಯವಿಲ್ಲದಿದ್ದರೂ ಅಂದಿನ ಕಾಲಕ್ಕೆ ಎಷ್ಟು ಸಾಧ್ಯವಿತ್ತೋ ಅಷ್ಟು ಪರಿಣತಿ, ಪ್ರತಿಭೆಗಳು ಈ ಬಗೆಯ ಕಲಾನಿರ್ಮಿತಿಗಳಲ್ಲಿತ್ತು ಎಂಬುದು ಗಮನಾರ್ಹ

12. ನೆಲದಡಿಯ ಕಲ್ಗುಹೆಗಳು (ರಾಕ್ ಕಟ್ ಕೇವ್ಸ್) : ಇವು ಭೂಮಿಯಡಿಯಲ್ಲಿರುವ ಜಂಬುಕಲ್ಲು ಬಂಡೆಯಲ್ಲಿ ಕೊರೆದು ಮಾಡಿದ ಶಿಲಾಲಯಗಳು. ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿರುವ ಬೃಹತ್ ಶಿಲಾಯುಗ ಕಾಲದ ಸಮಾಧಿ ನೆಲೆ ಉಮ್ಮಿಚಿಪೊಯಿಲ್, ಪಶ್ಚಿಮಘಟ್ಟ ಶ್ರೇಣಿಗೆ ಸೇರಿದ ಒಂದು ಜಂಬಿಟ್ಟಿಗೆ ಗುಡ್ಡದ ಸಮತಟ್ಟಾದ ನೆತ್ತಿಯಲ್ಲಿ ನೆಲದಡಿಯ ಕಲ್ಗುಹೆ ಪ್ರಕಾರದ ಒಂಬತ್ತು ಸಮಾಧಿಗಳಿವೆ. ಇವುಗಳಲ್ಲಿ ಎರಡನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಉತ್ಖನನಕ್ಕೆ ಒಳಪಡಿಸಿತು. ಜಂಬಿಟ್ಟಿಗೆಯೊಳಗೆ ಕೊರೆದ ಒಂದು ಗುಹೆಯ ವಾಸ್ತು ಗಮನಾರ್ಹ. ಇದರೊಳಗೆ ಇಳಿಯಲು 4 ಮೆಟ್ಟಿಲುಗಳು ಇದ್ದು, ಇದರ ಮೇಲ್ಭಾಗದಲ್ಲಿ ಸಜ್ಜದಂತಹ ಮುಂಚಾಚು ಇದೆ. ಪ್ರವೇಶದ್ವಾರ ಆಯತಾಕಾರವಾಗಿದ್ದು, ದೇವಾಲಯದ ದ್ವಾರಬಂಧವನ್ನು ಹೋಲುತ್ತದೆ. ಅರ್ಧ ಚಂದ್ರಾಕೃತಿಯ ವಿನ್ಯಾಸದಲ್ಲಿರುವ ಈ ಗುಹಾಸಮಾಧಿಯಲ್ಲಿ



ಚಪ್ಪಡಿ ಕಲ್ಲು ಸಮಾಧಿ

75ಕ್ಕೂ ಹೆಚ್ಚು ಮಣ್ಪಾತ್ರೆಗಳನ್ನಿಡಲಾಗಿತ್ತು. ಜೊತೆಯಲ್ಲಿ ಚಿನ್ನದ ಉಂಗುರ, ಕಬ್ಬಿಣದ ಉಪಕರಣಗಳು ಹಾಗೂ ಸುಡಾವೆ ಮಣ್ಣಿನ ಮಣಿಯಿದ್ದವು. ಮಣ್ಪಾತ್ರೆಗಳಲ್ಲಿ ಒಂದು ನವಶಿಲಾ ಸಂಸ್ಕೃತಿಯ ನಸುಗೆಂಪು ಲೇಪನಯುಳ್ಳ ಅರ್ಧ ಗೋಲಾಕೃತಿಯ ಸಾದಾಬಟ್ಟಲು. ಇದನ್ನು ಗಮನಿಸಿದರೆ ಇಲ್ಲಿಯ ಗುಹಾಸಮಾಧಿಗಳಲ್ಲಿ ಪ್ರಾಚೀನವಾದವು. ನವಶಿಲಾ ಬೃಹತ್ ಶಿಲಾಸಂಸ್ಕೃತಿಗಳ ಪರಸ್ಪರ ವ್ಯಾಪಕ ಹಂತಕ್ಕೆ ಸೇರಿದವೆಂದು ಹೇಳಬಹುದು. ಈ ಪ್ರಕಾರದ ಬೃಹತ್ ಶಿಲಾಸಮಾಧಿಯ ವ್ಯವಸ್ಥಿತ ಉತ್ಖನನವಾದುದು ಮೊದಲು ಈ ನೆಲೆಯಲ್ಲಿಯೇ.

ಸಮಾಧಿ ನಮೂನೆ ಆಯಾ ಪ್ರದೇಶದಲ್ಲಿರುವ ನೈಸರ್ಗಿಕ ಶಿಲಾರಚನೆಗನುಸಾರವಾಗಿರುತ್ತದೆ. ಉದಾಹರಣೆಗೆ ನೆಲದಡಿಯ ಕಲ್ಗುಹೆ ಕೇರಳ, ದಕ್ಷಿಣಕನ್ನಡ ಜಿಲ್ಲೆಗಳ ವಿಶಿಷ್ಟ ಪ್ರಕಾರವಾಗಿವೆ. ಹೆಡೆಕಲ್ಲು ಮತ್ತು ಟೋಪಿಕಲ್ಲುಗಳು ಹೆಚ್ಚಾಗಿ ಕೇರಳದಲ್ಲಿವೆ. ವಿರಳವಾದ ಮಾನವಾಕೃತಿಯ ಕಲ್ಲುಗಳು ಆಂಧ್ರ-ಕರ್ನಾಟಕ-ತಮಿಳುನಾಡುಗಳಿಗೆ ಸೀಮಿತವಾಗಿವೆ. ಕಲ್ಲುವೃತ್ತಗಳಲ್ಲಿ ಸಮಾಧಿ ವೃತ್ತದ ಕೇಂದ್ರಭಾಗದಲ್ಲಿ ಮಾತ್ರ ಇರುತ್ತದೆಂದು ಈವರೆಗೆ ತಿಳಿಯಲಾಗಿತ್ತು. ಆದರೆ ಕಲ್ಲುವೃತ್ತದ ಹೊರಸುತ್ತಿನಲ್ಲಿಯೂ ಶವಕುಣಿ ಇರಬಹುದಾದ ಸಾಧ್ಯತೆಯನ್ನು ಧಾಮ್ನ ಮತ್ತು ಮಹುರ್ಜರಿ (ವಿದರ್ಭ ಪ್ರಾಂತ ಮಹಾರಾಷ್ಟ್ರ) ಗಳಲ್ಲಿ ನಡೆದ ಉತ್ಖನನಗಳು ತೋರಿಸಿಕೊಟ್ಟಿವೆ. ಇಂತಹ ಶವಪುಣಿಗಳ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ.

ಹೆಚ್ಚಿನ ಬೃಹತ್ ಶಿಲಾಸಮಾಧಿಗಳು ಆಯ್ದ ಅಸ್ಥಿ ಭಾಗಗಳನ್ನು ಮಾತ್ರ ಹೂಳಿರುವಂಥ ಆಂಶಿಕ ಸಮಾಧಿಗಳು. ವಿದರ್ಭ (ಮಹಾರಾಷ್ಟ್ರ) ಖೈರ್‌ವಾಡ ಮತ್ತು ರಾಯ್‌ಪುರದ ಸಮಾಧಿಗಳಲ್ಲಿ ಸುಟ್ಟ ಚಿಹ್ನೆಯಿರುವ ಮಾನವ ಮೂಳೆಗಳಿದ್ದು, ಇದನ್ನು ದಹನದ ಆನಂತರ ಹೂಳಿರಬೇಕೆಂಬುದು ಎಸ್.ಆರ್.ವಾಳಿಂಬೆಯವರ ಅಭಿಪ್ರಾಯ. ಪೂರ್ಣ ಸಮಾಧಿಗಳು ವಿರಳ. ಮಹುರ್ಜರಿ ಮತ್ತು ರಾಯ್‌ಪುರಗಳಲಿ ಅಪರೂಪವಾಗಿ ಒಂದೇ ಸಮಾಧಿಯಲ್ಲಿ ಒಂದಕ್ಕಿಂತ ಹೆಚ್ಚು ಅಸ್ಥಿಪಂಜರುಗಳು ಕಾಣಸಿಕ್ಕಿವೆ. ಹೆಚ್ಚಿನ ಸಮಾಧಿಗಳು 18-35ರ ವಯೋಮಾನದ ಮಧ್ಯವಯಸ್ಕರದ್ದಾಗಿವೆ. ಅಸ್ಥಿ ಅವಶೇಷಗಳ ಜೊತೆಯಲ್ಲಿ ಸಾಮಾನ್ಯವಾಗಿ ಮಣ್ಪಾತ್ರೆಗಳು, ತಾಮ್ರ ಮತ್ತು ಕಬ್ಬಿಣದ ವಸ್ತುಗಳು ಅಪರೂಪಕ್ಕೆ ಚಿನ್ನದ ಆಭರಣಗಳು ಇರುತ್ತದೆ. ವಿದರ್ಭ ಪ್ರಾಂತದ ಕೆಲವೊಂದು ಸಮಾಧಿಗಳಲ್ಲಿ ಅವಶೇಷಗಳೊಂದಿಗೆ ಕುದುರೆಯ ಅಸ್ಥಿಪಂಜರೂಗಳು ತಾಮ್ರದ ಅಶ್ವಾಭರಣಗಳು ಇರುವುದು ಅವಶೇಷವಾಗಿದೆ.

ಮಣ್ಪಾತ್ರೆಗಳು : ಬೃಹತ್ ಶಿಲಾಯುಗ ಸಮಾಧಿಗಳಲ್ಲಿ ಸರ್ವೇಸಾಮಾನ್ಯವಾಗಿರುವ ಪ್ರಕಾರವೆಂದರೆ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳು, ಬೋಗುಣಿ, ಅಂಚಿನ ಬಟ್ಟಲು, ಶಂಕುವಿನಾಕಾರದ ಬಟ್ಟಲು, ಗಿಂಡಿ- ಇವು ಮುಖ್ಯ ನಮೂನೆಗಳು. ದಕ್ಷಿಣ ಭಾರತದ ಸಮಾಧಿಗಳಿಗೆ ಮೀಸಲಾಗಿರುವ ನಮೂನೆಯೆಂದರೆ 3-4 ಕಾಲಿನ ಮಡಕೆಗಳು, ಹೊಳಪಿನ ಕಪ್ಪುಪಾತ್ರೆಗಳು, ಮತ್ತೊಂದು ಮುಖ್ಯ ಪ್ರಕಾರ, ಲಾಳಿಕೆಯಾಕಾರದ ಮುಚ್ಚಳಗಳೂ, ನಳಿಕೆಯುಳ್ಳ ಪಾತ್ರೆ, ಸಿಂಬಿ, ಹಿಡಿಕೆಯುಳ್ಳ ಮುಚ್ಚಳಗಳು ಈ ಪ್ರಕಾರದ ಸಾಮಾನ್ಯ ಆಕಾರಗಳು. ವಿದರ್ಭದ ಕೆಲವೊಂದು ಸಮಾಧಿಗಳಲ್ಲಿ, ಆಂಧ್ರದ ಯೇಲೇಶ್ವರಂನಲ್ಲಿ ಹಾಗೂ ತಮಿಳುನಾಡಿನ ಆದಿಚನ್ನಲೂರಿನಲ್ಲಿ ಹಕ್ಕಿ ಮತ್ತು ಪ್ರಾಣಿಯಾಕಾರದ ಹಿಡಿಕೆಗಳಿರುವ ಮುಚ್ಚುಳಗಳು ಸಿಕ್ಕಿವೆ. ಸಮಾಧಿಗಳಲ್ಲಿ ಅಪರೂಪವಾಗಿ ಕಂಡುಬರುವ ಮತ್ತೊಂದು ಪ್ರಕಾರವೆಂದರೆ, ಮಸುಕು ಕೆಂಪುಬಣ್ಣದ ಪಾತ್ರೆಗಳು, ಅಭ್ರಕಯುಕ್ತ ಮಣ್ಪಾತ್ರೆಗಳು ವಿದರ್ಭದ ಸಮಾಧಿಗಳಿಗೆ ಸೀಮಿತವಾಗಿವೆ. ಸಮಕಾಲೀನ ವಸತಿ ನೆಲೆಗಳಲ್ಲೂ ಪ್ರಧಾನವಾಗಿ ಕಂಡುಬರುವ ಈ ಪ್ರಕಾರದಲ್ಲಿ ಲಾಳಿಕೆಯಂತಹ ಬಾಯಿಯ ಗೋಲು ಮೈಯ ಮಡಕೆಗಳೇ ಹೆಚ್ಚಾಗಿವೆ. ಇವುಗಳ ಹೊರಮೈ ಮೇಲೆ ಕಪ್ಪು ಬಣ್ಣದಲ್ಲಿ ಸಮಾನಾಂತರ ಗೆರೆಗಳನ್ನು ಚಿತ್ರಿಸಲಾಗಿರುತ್ತದೆ. ತಮಿಳುನಾಡು ಮತ್ತು ಕರ್ನಾಟಕದ ಕೆಲವು ಸಮಾಧಿಗಳಲ್ಲಿ ಕೆಂಪು ಲೇಪನದಡಿ ಬಳಿ ಚಿತ್ರವುಳ್ಳ ಪಾತ್ರೆಗಳು ದೊರಕಿವೆ. ಎಲ್ಲಾ ಪ್ರಕಾರಗಳಲಿ, ವಿಶೇಷವಾಗಿ ಕಪ್ಪು-ಕೆಂಪು ದ್ವಿವರ್ಣ ಪಾತ್ರೆಗಳಲ್ಲಿ, ಗೀರುಚಿತ್ರಗಳನ್ನು ಸಾಮಾನ್ಯವಾಗಿ ಕಾಣಬಹುದು.



ಮಣ್ಪಾತ್ರೆ

ವಸತಿ ನೆಲೆಗಳು ಈ ಸಂಸ್ಕೃತಿಯ ವಸತಿ ನೆಲೆಗಳು ಬೆರಳೆಣಿಕೆಯಲ್ಲಿ ಕಂಡುಬಂದಿರುವುದು ಸೋಜಿಗವೇ ಆಗಿವೆ. ವಿದರ್ಭ ಪ್ರಾಂತದಲ್ಲಿ ನೂರಕ್ಕೂ ಹೆಚ್ಚು ಸಮಾಧಿಗಳಿದ್ದರೆ ವಸತಿ ನೆಲೆಗಳ ಸಂಖ್ಯೆ

ಕೇವಲ ಏಳು. ಹಾಗಾಗಿ ಈ ಕಾಲದ ಜನಜೀವನದ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಬ್ರಹ್ಮಗಿರಿ, ಚಂದ್ರವಳ್ಳಿ, ಹಳ್ಳೂರು, ತಿರುಮಕೂಡಲ ನರಸೀಪುರ, ಬನಹಳ್ಳಿ (ಕರ್ನಾಟಕ), ಕೇಸರಪಲ್ಲಿ, ಧರಣಿಕೋಟ (ಆಂಧ್ರಪ್ರದೇಶ) , ಪೈಯಂಪಳ್ಳಿ, ಆದಿಚಿನ್ನಲೂರು (ತಮಿಳುನಾಡು), ನಾಯ್‌ಕುಂಡ್, ಬಾಗಿಮೊಹರಿ, ಮಹುರ್ಜರಿ (ಮಹಾರಾಷ್ಟ್ರ) ಮೊದಲಾದ ವಸತಿ ನೆಲೆಗಳಲಿ ಸಣ್ಣ ಪ್ರಮಾಣದಲ್ಲಿ ಉತ್ಖನನ ನಡೆಸಲಾಗಿದೆ. ಸುಣ್ಣ ಲೇಪಿತ ನೆಲಗಟ್ಟುಗಳಿದ್ದ ಮಣ್ಣಿನ ಮನೆಗಳ (ವೃತ್ತ, ಚೌಕ, ಆಯತಾಕಾರ) ಅವಶೇಷ, ಒಲೆ, ಕಣಜ (ಧಾನ್ಯ ಶೇಖರಣಾ ಗುಂಡಿಗಳು), ಕಬ್ಬಿಣ ಮತ್ತು ತಾಮ್ರದ ಉಪಕರಣಗಳು, ಜಾನುವಾರು, ಎಮ್ಮೆ, ಕುರಿ, ಹಂದಿ, ಕತ್ತೆ, ನಾಯಿ, ಕುದುರೆ, ಮುಂತಾದ ಸಾಕುಪ್ರಾಣಿ ಹಾಗೂ ವನ್ಯಮೃಗಗಳ ಮೂಳೆಗಳು, ಸುಟ್ಟ ಧಾನ್ಯ-ಕಾಳುಗಳು ಉತ್ಖನನದಲ್ಲಿ ಕಂಡುಬಂದಿವೆ.

ನೀರಿನ ಸೆಲೆಗಳ ಸಮೀಪದಲ್ಲಿ ಫಲವತ್ತಾದ ಅಥವಾ ಖನಿಜ ಸಂಪತ್ತು (ಕಬ್ಬಿಣ, ತಾಮ್ರ, ಚಿನ್ನ, ಬೆಳ್ಳಿ, ಸತು-ತವರ) ಹೇರಳವಾಗಿರುವ ಪ್ರದೇಶದಲ್ಲಿ ವಸತಿ ನೆಲೆಗಳಿದ್ದರೆ ಸಮಾಧಿಗಳು ಕೃಷಿಗೆ ಯೋಗ್ಯವಲ್ಲದ ಸ್ಥಳ ಅಥವಾ ಬಂಜರು ಭೂಮಿಯಲ್ಲಿ ಇಲ್ಲವೇ ಬಂಡೆಗಳು ಸುಲಭವಾಗಿ ಸಿಗುವಂತಹ ಸ್ಥಳಗಳಲ್ಲಿ ಇರುತ್ತವೆ. ವಸತಿ ನೆಲೆಯ ಆಯ್ಕೆಯಲ್ಲಿ ವಾಣಿಜ್ಯ ಚಟುವಟಿಕೆಗಳು ಮುಖ್ಯ ಪಾತ್ರವಹಿಸಿದ್ದಂತೆ ತೋರುತ್ತದೆ.

ತಂತ್ರಜ್ಞಾನ, ಕಬ್ಬಿಣ ತಂತ್ರಜ್ಞಾನ ಬೃಹತ್ ಶಿಲಾಯುಗದ ಒಂದು ವಿಶೇಷ ಅಂಶವಾಗಿದೆ. ಈ ಯುಗದಲ್ಲಿ ಕಬ್ಬಿಣ ತಂತ್ರಜ್ಞಾನ ಭಾರತದಾದ್ಯಂತ ಪಸರಿಸಿತು. ಒಂದು ಕೆ.ಜಿ.ಯಷ್ಟು ಅದಿರಿನಿಂದ ಸು. 350ಗ್ರಾಂ, ಪರಿಶುದ್ಧ ಕಬ್ಬಿಣವನ್ನು ಪಡೆಯುವ ಪರಿಣಿತಿಯನ್ನು ಈ ಜನ ಸಾಧಿಸಿದ್ದರು ಎಂಬುದು ವಿಶ್ವಾಸ್ ಗೋಗ್ಟೆಯವರ ನಾಯ್‌ಕುಂಡ್ ಅಧ್ಯಯನದಿಂದ ತಿಳಿದುಬಂದಿದೆ. ಕಠಾರಿ, ಭಲ್ಲೆ, ತ್ರಿಶೂಲ, ಬಾಣದಮೊನೆ, ಕೊಕ್ಕೆ, ಕೊಂಡಿ, ಹಣತೆ, ಸೌಟು, ಬಾಚಿ, ಮಚ್ಚು, ನೇಗಿಲಿನ ಗುಳ, ಉಳಿ, ಚಾಣ, ಚಪ್ಪಟೆ ಕೊಡಲಿ-ಹೀಗೆ ನಾನಾ ವಿಧದ ಉಪಕರಣಗಳನ್ನು ತಯಾರಿಸುವ ಕೌಶಲ್ಯ ಇವರಲ್ಲಿತ್ತು. ಕುದುರೆಯ ಕಡಿವಾಣದ ಭಾಗಗಳನ್ನೂ ಇವರು ಕಬ್ಬಿಣದಿಂದಲೇ ಮಾಡುತ್ತಿದ್ದರು. ಇವರು ತಯಾರಿಸುತ್ತಿದ್ದ ತಾಮ್ರ-ಕಂಚು, ಚಿನ್ನದ ವಸ್ತುಗಳಲ್ಲೂ ಕಲಾವಂತಿಕೆಯನ್ನು ಕಾಣಬಹುದು. ಪ್ರಾಣಿ ಪಕ್ಷಿ, ಹಿಡಿಕೆಯಿರುವ ಮುಚ್ಚುಳಗಳಂತೂ ಸುಂದರವಾಗಿವೆ. ತಾಮ್ರದ ತಗಡುಗಳಿಂದ ಮಾಡಿದ ಕುದುರೆಯ ಮುಖದ ಆಭರಣಗಳು ಇವರ ಕಲಾಪ್ರಜ್ಞೆಗೆ ಉತ್ತಮ ಉದಾಹರಣೆಗಳಾಗಿವೆ. ಇವನ್ನು ಪ್ರಾಯಶಃ ಚರ್ಮಕ್ಕೆ ಹೊಂದಿಸಿ ಕುದುರೆಯ ಮುಖಕ್ಕೆ ಕಟ್ಟುತ್ತಿದ್ದರು. ಮಹುರ್ಜರಿಯಲ್ಲಿ ಸಿಕ್ಕಿರುವ ತಾಮ್ರದ ಅಡ್ಡಣಿ ಉಲ್ಲೇಖಾರ್ಹ. ಬಳೆ, ಉಂಗುರ, ಬಟ್ಟಲು, ತಟ್ಟೆ, ಹಿಡಿಕೆ ಮೊದಲಾದ ದಿನಬಳಕೆ ವಸ್ತುಗಳಿಗೆ ತಾಮ್ರ ಮತ್ತು ಕಂಚುಗಳೆರಡನ್ನೂ ಬಳಸಿದ್ದಾರೆ.

ಮಹುರ್ಜರಿ, ಆದಿಚನ್ನಲೂರು, ಅರಿಪ್ಪ ಮೊದಲಾದ ಕಡೆಗಳಲ್ಲಿ ಕಿವಿಯ ಓಲೆತಂತಿ ಮೊದಲಾದ ಚಿನ್ನದ ಆಭರಣಗಳು ಸಿಕ್ಕಿವೆ. ಮಣಿಗಾರಿಕೆಯಲ್ಲಿಯೂ ಇವರು ಪ್ರಸಿದ್ಧಿ ಹೊಂದಿದ್ದರು ಎಂಬುದಕ್ಕೆ ಸ್ಫಿಯಟೈಟಿನ ಮತ್ತು ಎಚ್ಚಿದ ಮಂದಗೆಂಪಿನ ಮಣಿಗಳೇ ಸಾಕ್ಷಿ.



ನಿಲ್ಲಿಸುಗಲ್ಲುಗಳು

ಕಾಲಮಾನ: 1940ರ ದಶಕದವರೆಗೂ ಬೃಹತ್ ಶಿಲಾಸಂಸ್ಕೃತಿಯ ಕಾಲಮಾನ ಗೋಜಲಾಗಿಯೇ ಉಳಿದಿತ್ತು. 4000 ದಿಂದ 400 ವರ್ಷ ಹಿಂದಿನ ದೀರ್ಘ ಅವಧಿಯೊಳಗೆ ಈ ಸಂಸ್ಕೃತಿಯನ್ನು ಎಲ್ಲೆಂದರಲ್ಲಿ ಸೇರಿಸುವ ಪ್ರವೃತ್ತಿ ಇದ್ದಿತ್ತು. 1946–47ರ ಬ್ರಹ್ಮಗಿರಿ ಉತ್ಖನನ ಮೊದಲಬಾರಿಗೆ ಒಂದು ಸಾಪೇಕ್ಷ ಚೌಕಟ್ಟನ್ನು ಇದಕ್ಕೆ ಒದಗಿಸಿತು. ಇಲ್ಲಿಯವರೆಗೂ 50ಕ್ಕೂ ಹೆಚ್ಚು ಇಂಗಾಲ–14ರ ಕಾಲಮಾನಗಳು ದೊರೆತಿದ್ದು ಈ ಸಂಸ್ಕೃತಿಯ ಕಾಲಮಾನ ಪ್ರಾದೇಶಿಕ ವ್ಯತ್ಯಾಸವಿರುವುದನ್ನು ಸ್ಪಷ್ಟಪಡಿಸಿದೆ. ದಕ್ಷಿಣ ಭಾರತದಲ್ಲಿ ಬೃಹತ್ ಶಿಲಾಸಂಸ್ಕೃತಿ ಕ್ರ.ಶ.ಪೂ. 1200–ಪ್ರ.ಶ. 200ರವರೆಗೆ ಅಸ್ತಿತ್ವದಲ್ಲಿತ್ತು. ವಿದರ್ಭ ಪ್ರಾಂತದಲ್ಲಿ ಪ್ರ.ಶ.ಪೂ. ಹೊತ್ತಿಗೆ ಪ್ರಾರಂಭಗೊಂಡು ಕ್ರ.ಶ.ಪೂ. 300ರ ಸುಮಾರಿಗೆ ಅಂತ್ಯಕಂಡಿತು. ಕಾಶ್ಮೀರದಲ್ಲಿ ಇದರ ಕಾಲಮಾನ ಕ್ರ.ಶ.ಪೂ. 1800–1600

ಲೋಹಯುಗ ಸಮುದಾಯಗಳು

ಶಿವಮೊಗ್ಗ ಜಿಲ್ಲೆಯಲ್ಲಿ 12 ಬೃಹತ್ ಶಿಲಾಯುಗದ ನೆಲೆಗಳನ್ನು ಗುರುತಿಸಲಾಗಿದೆ. ಈ ನಿವೇಶನದಲ್ಲಿನ ವಿವಿಧ ಗೋರಿಗಳನ್ನು ಕೋಣೆ–ಕಿಂಡಿ, ಗೋರಿ, ಶಿಲಾವೃತ್ತಗೋರಿ, ನಿಲಸುಗಲ್ಲು ಹಾಗೂ ಮೃತ್ಪಾತ್ರೆ



ಸಮಾಧಿಗಳೆಂದೂ ವಿಂಗಡಿಸಬಹುದು. ಇವುಗಳಲ್ಲಿ ಕೋಣೆ–ಕಿಂಡಿಗೋರಿಗಳನ್ನು 4 ಶಿಲಾಚಪ್ಪಡಿಗಳನ್ನು ನೆಟ್ಟಗೆ ನಿಲ್ಲಿಸಿ ಅವುಗಳ ಮೇಲೆ ಮತ್ತೊಂದು ಅಂತಹುದೇ ಶಿಲಾಚಪ್ಪಡಿಯಿಂದ ಮುಚ್ಚಿ ಮತ್ತು ಯಾವುದಾದರೊಂದು ನೇರವಾಗಿರುವ ಶಿಲೆಯಲ್ಲಿ ಒಂದು ರಂಧ್ರವಿರುವಂತೆ ನಿರ್ಮಿಸಲಾಗಿದೆ. ಈ ಸಮಾಧಿಯ ಸುತ್ತ ದೊಡ್ಡಗಾತ್ರದ ಗುಂಡುಕಲ್ಲುಗಳನ್ನಿರಿಸಿ ಶಿಲಾವೃತ್ತ ಗೋರಿಗಳನ್ನು ರಚಿಸಲಾಗಿದೆ. ಎತ್ತರವಾದ ನೈಸರ್ಗಿಕವಾದ ಶಿಲಾಕಂಬಗಳನ್ನು ನೆಟ್ಟಗೆ ನಿಲ್ಲಿಸಿದ ಗೋರಿಗಳು ನಿಲುಸುಗಲ್ಲುಗಳು, ಇವೆಲ್ಲವುಗಳ ನಿರ್ಮಾಣಕ್ಕೆ ವಿವಿಧ ರೀತಿಯ ಸ್ಥಳೀಯ ಕಲ್ಲುಗಳನ್ನು ಉಪಯೋಗಿಸಲಾಗಿದೆ. ಬೃಹತ್ ಶಿಲಾಯುಗದಿಂದ ಕಬ್ಬಿಣದ ಉಪಯೋಗ ಮಾನವನ ವಿಕಾಸ ಮತ್ತು ಅಭಿವೃದ್ಧಿಯಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದೆ. ಇದರ ಅವಶ್ಯಕತೆಯನ್ನು ಪೂರೈಸಲು ಬೃಹತ್ ಶಿಲಾಯುಗದ ಜನರು ಶಂಕರಗುಡ್ಡ ಮತ್ತು ಚಟ್ಟನಹಳ್ಳಿ, ಆಗುಂಬೆ ಗುಡ್ಡಗಾಡು ಪ್ರದೇಶ ಹಾಗೂ ಸಹ್ಯಾದ್ರಿ ಪರ್ವತ ಶ್ರೇಣಿಯ ಮತ್ತಿಮನೆ, ಕೊಡಚಾದ್ರಿ, ಕೋಟೆಬರೆ ಮತ್ತು ಅಂಬರಗುಡ್ಡಗಳ ಸಮೀಪದ ನಿಕ್ಷೇಪಗಳಿಂದ ಕಬ್ಬಿಣದ ಅದಿರನ್ನು ಸಂಗ್ರಹಿಸಿ ತಮಗೆ ಬೇಕಾದ ವಿವಿಧ ಕಬ್ಬಿಣದ ಆಯುಧಗಳನ್ನು ತಯಾರಿಸುತ್ತಿದ್ದರು. ಅದೇರೀತಿ ಕುದುರೆಕೊಂಡ–ಪಲವನಹಳ್ಳಿ ಕ್ಷೇತ್ರ ಮತ್ತು ಹೊನ್ನೇಹಟ್ಟಿ ಪ್ರದೇಶಗಳಲ್ಲಿ ದೊರೆಯುತ್ತಿದ್ದ ಬಂಗಾರದ ಅದಿರನ್ನು ಶೇಖರಿಸಿ ತಮ್ಮ ಅಲಂಕಾರಕ್ಕಾಗಿ ಆಭರಣಗಳನ್ನು ತಯಾರಿಸುತ್ತಿದ್ದರು. ಕೆಲವು ಬೃಹತ್ ಶಿಲಾಯುಗದ ನೆಲೆಗಳು ಈ ಸಂಪನ್ಮೂಲಗಳಿರುವ ಸಮೀಪದಲ್ಲಿವೆ. ಇನ್ನು ಕೆಲವೊಂದು ನೆಲೆಗಳು ನದಿದಂಡೆ ಅಥವಾ ಜಲಸಂಪತ್ತಿರುವ ಪ್ರದೇಶಗಳಲ್ಲಿವೆ.

ಈ ನಿವೇಶನಗಳು ಕೇವಲ ವಾಸಸ್ಥಾನಕ್ಕೆ ಯೋಗ್ಯವಲ್ಲದೆ ಸುತ್ತಮುತ್ತ ಇರುವ ಫಲವತ್ತಾದ ಭೂಮಿಯು ಕೃಷಿಗಾಗಿ ಬಳಕೆಯಾಗುತ್ತಿತ್ತು.

ತುಮಕೂರು

ಕಬ್ಬಿಣ ಯುಗದ ಸಮಾಧಿಗಳು

ಕಸಾಪುರದಿಂದ ಕತ್ತಿರಾಜನಹಳ್ಳಿಗೆ ಹೋಗುವ ರಸ್ತೆಯಲ್ಲಿ ಗ್ರಾಮದಿಂದ 1ಕಿ.ಮೀ. ದೂರದಲ್ಲಿ ರಸ್ತೆಯ ಎಡಭಾಗದಲ್ಲಿ ಕಂಬಾರರ ತಿಮ್ಮಣ್ಣನ ಹೊಲದಲ್ಲಿ ಜನರು ಪಾಂಡವರ ಕಲ್ಲೆಂದು ಕರೆಯುವ ಕಲ್ಲುಗಳು ನಿಂತಿರುತ್ತವೆ. ಜನರು ಇವುಗಳನ್ನು ಪಾಂಡವರು ವನವಾಸ ಬಂದಾಗ ಆನೆಗಳನ್ನು ಕಟ್ಟಲು ನಿಲ್ಲಿಸಿರುವ ಕಲ್ಲೆಂದು ಭಾವಿಸಿ ಇಂದಿಗೂ ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಆದರೆ ಇತ್ತೀಚೆಗೆ ನಿಧಿಶೋಧಕರು ಈ ಕಲ್ಲುಗಳ ಮಧ್ಯದಲ್ಲಿ ನಿಧಿ ಇದೆಯೆಂದು ಭಾವಿಸಿ ಮಣ್ಣನ್ನು ಅಗೆದಿರುತ್ತಾರೆ. ಈ ಮೂರು ಕಲ್ಲುಗಳೊಳಗೊಂಡಂತೆ ವೃತ್ತಾಕಾರವಾಗಿ ಒಂದೂವರೆ ಅಡಿ ಎತ್ತರದ ಕಲ್ಲುಗಳು ನಿಲ್ಲಿಸಿರುತ್ತಾರೆ. ಒಂದು ಸಮಾಧಿಯ ಮೇಲೆ ಎರಡು ಕಲ್ಲುಗಳನ್ನು ನಿಲ್ಲಿಸಿ ಅದರ ಮೇಲೆ ಒಂದು ಬಂಡೆಯನ್ನು ಹಾಸಲಾಗಿದೆ. ಈ ಸಮಾಧಿಗಳು ಕಬ್ಬಿಣ ಯುಗದ ಕಾಲದ ಸಮಾಧಿಗಳಾಗಿರುತ್ತವೆ. ಕಬ್ಬಿಣ ಯುಗದ ಬೃಹತ್ ಶಿಲಾಸಂಸ್ಕೃತಿಯು ಶಿಲಾಯುಗ ಸಂಸ್ಕೃತಿಯ ಕೊನೆಯ ಹಂತ. ಮಾನವನು ಈ ಸಮಯಕ್ಕಾಗಲೇ ಲೋಹದ ತಯಾರಿಕೆಯನ್ನು ತಿಳಿದುಕೊಂಡಿದ್ದು, ಕಬ್ಬಿಣವನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದುದು ತಿಳಿದುಬರುತ್ತದೆ. ವಿವಿಧ ಮಾದರಿಯ ಮಡಕೆ ತಯಾರಿಸುವುದನ್ನು ಅರಿತುಕೊಂಡಿದ್ದನು. ಈ ಸಂಸ್ಕೃತಿಯ ಮುಖ್ಯ ಅಂಶವೆಂದರೆ 1) ಮಾನವ ಒಂದು ಕಡೆ ನೆಲೆಸಿ ವಾಸ್ತವ್ಯವಿದ್ದುದು ಮತ್ತು 2) ಸತ್ತವರ ಸಂಸ್ಕಾರಕ್ಕೋಸ್ಕರ ಬೃಹತ್ ಶಿಲಾ ಸ್ಮಾರಕಗಳನ್ನು ರಚಿಸುತ್ತಿದ್ದುದು. ಹೀಗೆ ಈ ಸಂಸ್ಕೃತಿಯ ಎರಡು ವಿಭಿನ್ನ ಪ್ರಕಾರಗಳನ್ನು ಕಾಣಬಹುದು. ಬೃಹತ್ ಶಿಲಾ ಸ್ಮಾರಕಗಳ ನೆಲೆ ಹೊಂದಿದ ಕತ್ತಿರಾಜನಹಳ್ಳಿಗೆ ಈ ಸಮಾಧಿಗಳು 2ಕಿ.ಮೀ. ದೂರದಲ್ಲಿವೆ.

ಉಡುಪಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

ಬೃಹತ್ ಶಿಲಾಯುಗದ ಸಮಾಧಿ ನೆಲೆಗಳು ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ವ್ಯಾಪಕವಾಗಿ ಕಂಡುಬಂದಿವೆ. ಜಿಲ್ಲೆಯ ಬೃಹತ್ ಶಿಲಾಯುಗದ ನೆಲೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದಾಗಿದೆ.

1. ರಂಧ್ರವಿರುವ ತೊಟ್ಟಿಲು ಸಮಾಧಿಗಳು

2. ಗುಹಾ ಸಮಾಧಿಗಳು

3. ಮೃತ್ಪಾತ್ರೆ/ಕುಂಭಾ ಸಮಾಧಿಗಳು

4. ಗರ್ಭಿಣಿಯರ ಸಮಾಧಿಗಳು

ರಂಧ್ರವಿರುವ ತೊಟ್ಟಿಲು ಸಮಾಧಿಗಳು ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳಲ್ಲಿ ಸಮುದ್ರಮಟ್ಟಕ್ಕೆ ಎತ್ತರವಿರುವ ಪ್ರದೇಶಗಳಲ್ಲಿ ಹಾಗೂ ಸುಲಭವಾಗಿ ಗ್ರಾನೈಟ್ ದೊರೆಯುವ ಪ್ರದೇಶಗಳಲ್ಲಿ ಅತಿ ವಿರಳವಾಗಿ ಕಂಡುಬರುತ್ತವೆ. ಗುಹಾ ಸಮಾಧಿಗಳು ಅತ್ಯಂತ ವ್ಯಾಪಕವಾಗಿ ಕರಾವಳಿ ತೀರ ಪ್ರದೇಶದ ಸಮೀಪದಲ್ಲಿ ಕಂಡುಬರುತ್ತದೆ. ಮೃತ್ಪಾತ್ರೆ ಅಥವಾ ಕುಂಭ ಸಮಾಧಿ ಅತ್ಯಂತ ವಿರಳವಾಗಿ ಕಂಡಬಂದಿದ್ದು, ಇನ್ನೂ ಸಿಗುವ ಸಾಧ್ಯತೆಗಳಿವೆ. ಗರ್ಭಿಣಿಯರ ಸಮಾಧಿಗಳು, ಗುಹಾಸಮಾಧಿಗಳ ಪಕ್ಕದಲ್ಲಿಯೇ ಕಂಡಬಂದಿದ್ದು, ಅವುಗಳನ್ನು ಖಚಿತಪಡಿಸಿಕೊಳ್ಳಬೇಕಿದೆ. ಕಾರ್ಕಳದ ಬೋರ್ಕಟ್ಟೆ ಹಾಗೂ ಕೋಣಾಜೆ ಮಾದರಿಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿರುವ ಡಾ.ಅ.ಸುಂದರ ಅವರು ಅವುಗಳ ಕಾಲವನ್ನು ಸರಿ ಸುಮಾರು ಕ್ರಿಪೂ. ಎಂಟುನೂರು ಎಂದು ಗುರುತಿಸಿದ್ದಾರೆ. ಗುಹಾಸಮಾಧಿ ಮಾದರಿಗಳನ್ನು ಅಧ್ಯಯನ ಮಾಡಿರುವ ಡಾ.ಅ.ಸುಂದರ ಹಾಗೂ ಡಾ.ಪುಂಡಿಕಾಯ್ ಗಣಪಯ್ಯ ಭಟ್ ಕ್ರಿ.ಪೂ. ಒಂದನೆಯ ಶತಮಾನದಿಂದ ಕ್ರಿ.ಶ. ಎರಡು ಮೂರನೇ ಶತಮಾನದ ಕಾಲಮಾನಕ್ಕೆ ಅನ್ವಯಿಸಿದ್ದಾರೆ. ಪ್ರಸ್ತು ಲೇಖನದ ಲೇಖಕ ಯು.ಜಿ.ಸಿ. ಕಿರುಸಂಶೋಧನಾ ಕಾರ್ಯದ ನಿಮಿತ್ತ ಉಡುಪಿ ಜಿಲ್ಲೆಯ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳ ದಾಖಲೀಕರಣ ನಡೆಸುತ್ತಿದ್ದು, ನಂತರವಷ್ಟೆ ಬೃಹತ್ ಶಿಲಾಯುಗದ ಆರ್ಥಿಕ,ಸಾಮಾಜಿಕ ಮಹತ್ವಗಳನ್ನು ಸಮಗ್ರವಾಗಿ ವಿವೇಚಿಸುವುದು ಸಾಧ್ಯವಾಗಬಹುದು. ಉಡುಪಿ ತಾಲೂಕಿನ ಬಾರ್ಕೂರು, ಬಾರಳಿ, ಬೆಳ್ಳರ್ಪಳ್ಳಿ, ಬೋಳುಗುಡ್ಡೆ, ಕಕ್ಕುಂಜೆ, ಕೆಳಕುಂಜಾಲು, ಕೀರಾಡಿ, ಮೈರುಕೊಮ್ಮೆ, ಮೂಡುಧಿಡುಂಬೂರು, ಪರ್ಕಳ, ಸಾಂತೂರು, ಪೆರಂಪಳ್ಳಿ, ಕುರ್ಕಾಲು ಸುಭಾಷ್ ನಗರ, ಶಿರ್ವ, ಉಪ್ಪೂರು ಜಾತಬೆಟ್ಟು, ನಟ್ಟೂರಿನ ಅಡ್ಕದಕಟ್ಟೆ ಹಾಗೂ ಬೊಮ್ಮರಬೆಟ್ಟುವಿನಲ್ಲಿ ಸಮಾಧಿಗಳಿವೆ. ಕುಂದಾಪುರ ತಾಲೂಕಿನ ಅಮಾಸೆ ಬೈಲು, ಬಸ್ರೂರು, ಹಳ್ನಾಡಿ, ಹರ್ಕಾಡಿ, ಕಡಸ, ವಲ್ಲೂತುರುಗಳಲ್ಲಿಯೂ ಗುಹಾ ಸಮಾಧಿಗಳಿವೆ. ಉಡುಪಿಯ ಹಿರಿಯಡ್ಕ, ಶಿರ್ವಗಳಲ್ಲಿ ಮೃತ್ಪಾತ್ರೆ ಸಮಾಧಿಗಳಿವೆ. ಕುಂದಾಪುರದ ಬೇಳೂರಿನಲ್ಲಿ ಮೃತ್ಪಾತ್ರೆ ಸಮಾಧಿ ಇದೆ. ಉಡುಪಿ ನಟ್ಟೂರಿನ ಅಡ್ಕದ ಕಟ್ಟೆ ಹಾಗೂ ಕುರ್ಕಾಲುವಿನಲ್ಲಿ

ಗರ್ಭಿಣಿಯರ ಸಮಾಧಿಗಳಿವೆ. ಕಾರ್ಕಳದ ಬೋರ್ಕಟ್ಟೆ, ಕೋಣಾಜೆ, ಕುಂದಾಪುರದ ಬೇಳೂರಿನಲ್ಲಿ ರಂಧ್ರವಿರುವ ತೊಟ್ಟಿಲು ಸಮಾಧಿಗಳಿವೆ.

ವೈಜ್ಞಾನಿಕ ವರ್ಗೀಕರಣ, ದಾಳಕೆ ಹಾಗೂ ಉತ್ಖನನಗಳನ್ನು ನಡೆಸದೆ ಯಾವುದೇ ಅಭಿಪ್ರಾಕ್ಕೆ ಬರುವುದು ಅಸಮಂಜಸವೆನಸುತ್ತದೆ. ಆದ್ದರಿಂದ ಉಡುಪಿ ಜಿಲ್ಲೆ ಬೃಹತ್ ಶಿಲಾಯುಗದ ಸಮಾಧಿ ನೆಲಗಳ ಸಂಕ್ಷಿಪ್ತ ವಿವರಗಳಿಗೆ ಮಾತ್ರವೇ ಈ ಲೇಖನವನ್ನು ಸೀಮಿತಗೊಳಿಸಲಾಗಿದೆ. ಈಗಾಗಲೇ ಬೊಮ್ಮರಬೆಟ್ಟು ಹಾಗೂ ನಟ್ಟೂರಿನಲ್ಲಿರುವ ಎರಡು ಗುಹಾ ಸಮಾಧಿಗಳನ್ನು ಮುಲ್ಕಿ ಸುಂದರರಾಯ್‌ಶೆಟ್ಟಿ ಕಾಲೇಜಿನ ಪುರಾತತ್ವ ವಿಭಾಗದಿಂದ ಪ್ರಾಯೋಗಿಕ ಉತ್ಖನನ ನಡೆಸಲು ನಿರ್ಧರಿಸಲಾಗಿದ್ದು, ಇದರಿಂದ ಈ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಒಳನೋಟಗಳು ದೊರೆಯಬಹುದೆಂದು ನಿರೀಕ್ಷಿಸಲಾಗಿದೆ.

ತೇರದಾಳ : ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನಲ್ಲಿ ಕಸಬೆಯಿದ 29ಕಿ.ಮೀ. ಪಶ್ಚಿಮಕ್ಕಿರುವ ಪಟ್ಟಣ, ಐತಿಹಾಸಿಕ ಸ್ಥಳ.

ಈ ಊರಿನ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳಿವೆ. ಊರಿನ ಪಶ್ಚಿಮ ದಿಕ್ಕಿಗೆ ಸು.5ಕಿ.ಮೀ. ದೂರದಲ್ಲಿ ವಿಭೂತಿ ಮಡ್ಡಿ ಎಂದು ಕರೆಯಲಾಗುವ ತಾಮ್ರ-ಶಿಲಾಯುಗ ಅವಶೇಷಗಳಿಂದ ಕೂಡಿದ ಒಂದು ವಸತಿನೆಲೆ ಇದೆ. ಊರಿನ ಉತ್ತರಕ್ಕೆ ಗುಡ್ಡ ಪ್ರದೇಶದಲ್ಲಿ ಮತ್ತು 5 ಕಿ.ಮೀ. ವ್ಯಾಪ್ತಿಯಲ್ಲಿರುವ ಹನಗಂಡಿ, ಹಳಿಂಗಳಿ, ಮಾದಲಮಟ್ಟಿ, ಆಸಂಗಿ ಮುಂತಾದ ಹಳ್ಳಿಗಳಲ್ಲಿ ಸು.1000 ಬೃಹತ್ ಶಿಲಾಗೋರಿಗಳಿವೆ. 1964-66ರಲ್ಲಿ ತಾಮ್ರ-ಶಿಲಾಯುಗ ವಸತಿನೆಲೆ, ಕಲ್ಗೋರಿ ಮತ್ತು 2 ಬೃಹತ್ ಶಿಲಾಗೋರಿಗಳ ಉತ್ಖನನ ನಡೆಸಲಾಯಿತು.

ತೇರದಾಳ ಪ್ರದೇಶದ ಬೃಹತ್ ಶಿಲಾಗೋರಿಗಳಲ್ಲಿ ಕೋಣೆ ಗೋರಿಗಳು ವಿಶಿಷ್ಟವಾದುವು. ಇವುಗಳಲ್ಲಿ ಎರಡು ವಿಧಗಳಿವೆ. ವರ್ತುಲಾಕಾರದ ದಾರಿ ಕೋಣೆಗೋರಿಗಳು ಮತ್ತು ಶಿಲುಬೆಯಾಕಾರದ ದಾರಿ ಕೋಣೆಗೋರಿಗಳು. ಕೆಲವಕ್ಕೆ ದಾರಿ ಉದ್ದವಿರುತ್ತದೆ. ಪ್ರತಿ ಬದಿಯಲ್ಲಿಯೂ ದೊಡ್ಡ ಚಪ್ಪಡಿ ಕಲ್ಲನ್ನು ನೆಟ್ಟಗೆ ನಿಲ್ಲಿಸಿ ಕೋಣೆಯನ್ನು ನಿರ್ಮಿಸಲಾಗಿರುತ್ತದೆ. ಕೋಣೆ ಮತ್ತು ಅದರ ದಾರಿಯನ್ನು ನಾಲ್ಕಾರು ಚಪ್ಪಡಿಕಲ್ಲುಗಳನ್ನು ಮೇಲೆ ಅಡ್ಡಲಾಗಿಟ್ಟು ಮುಚ್ಚಲಾಗಿರುತ್ತದೆ. ದೊಡ್ಡ ದೊಡ್ಡ ಕೋಣೆಗಳ ಆಧಾರವಾಗಿ ನಾಲ್ಕು ಕಂಬಗಳಿರುತ್ತವೆ. ಕೋಣೆಯ ಹೊರಬದಿಯಲ್ಲಿ ಸಣ್ಣ ಕಲ್ಲುಗಳನ್ನು ಒತ್ತೊತ್ತಾಗಿ ರಾಶಿ ಹಾಕಿ, ಈ ರಾಶಿಯು ಚೆಲ್ಲಾಪಿಲ್ಲಿಯಾಗದ ಹಾಗೆ ಸುತ್ತಲೂ ತುಂಡು ಕಲ್ಲುಗಳಿಂದ ಕೋಣೆಯಷ್ಟೇ

ಅಥವಾ ಅದಕ್ಕಿಂತ ತುಸು ಕಡಿಮೆ ಎತ್ತರದ ಚೌಕೋನ ಕಟ್ಟೆಯೊಂದನ್ನು ಕಟ್ಟಲಾಗಿರುತ್ತದೆ. ಕೆಲವೊಮ್ಮೆ ವರ್ತುಲಾಕಾರದ ಕಟ್ಟೆಯಿದ್ದು, ಅದರ ಹೊರಬದಿಯಲ್ಲಿ ಒತ್ತೊತ್ತಾಗಿ ಕಲ್ಲಿನ ರಾಶಿಯನ್ನು ಅದರ ಸುತ್ತಲ ಮತ್ತೆ ಚೌಕೋನ ಕಟ್ಟೆಯಿರುತ್ತದೆ. ವರ್ತುಲ ವಿನ್ಯಾಸದ ದಾರಿಕೋಣೆ ಗೋರಿಯಲ್ಲಿ ಒಂದರ ಪಕ್ಕದಲ್ಲಿ ಮತ್ತೊಂದು ನಿಲ್ಲಿಸಿ, ಮಾಡಿದ ಕೋಣೆಯ ದಾರಿ ಚಿಕ್ಕದಿರುತ್ತದೆ. ಕೋನೆಯ ಮೇಲೆ ಮುಚ್ಚಲು ಕಲ್ಲುಚಪ್ಪಡಿಗಳೂ ಇವನ್ನು ಹೊರಲು 3 ಅಥವಾ 4 ಕಂಬಗಳೂ ಇರುತ್ತವೆ. ಹೊರಬದಿಲ್ಲಿ ಒತ್ತೊತ್ತಾಗಿ ಕಲ್ಲುರಾಶಿಯಿದ್ದು, ಅದು ಒಂದು ಅಥವಾ ಎರಡು ದುಂಡುಕಟ್ಟೆಯಿಂದ ಭದ್ರವಾಗಿ ಆವರಿಸಲ್ಪಟ್ಟಿರುತ್ತದೆ. ಇವಲ್ಲದೆ ಸು.15 ಕಲ್ಲುರಾಶಿಗಳನ್ನೊಳಗೊಂಡ ದುಂಡುಕಟ್ಟೆಗಳೂ ಉಂಟು.

ಈ ಮೂರು ವಿಧದ ಬೃಹತ್ ಶಿಲಾಗೋರಿಗಳಲ್ಲಿ ಎರಡನ್ನು ಉತ್ಖನನ ಮಾಡಲಾಯಿತು. (1996). ಆದರೆ ಇವೆಲ್ಲವೂ ಹಿಂದೆಯೆ ಅಗೆಯಲ್ಪಟ್ಟು, ಅವುಗಳಲ್ಲಿದ್ದ ಅವಶೇಷಗಳು ನಾಶವಾಗಿದ್ದುದು ಕಂಡುಬಂದಿತು. ಕೋಣೆಗೋರಿಗಳಲ್ಲಿ ಮಾನವನ ಅಸ್ಥಿಚೂರುಗಳು, ಮಣ್ಣಾತ್ರೆಗಳು ಮತ್ತು ಭಗ್ನಾವಶೇಷಗಳು ಅಸ್ತವ್ಯಸ್ತವಾಗಿದ್ದವು. ದಾರಿಯುಳ್ಳ ದುಂಡುಕೋಣೆ ಗೋರಿಗಳಲ್ಲಿ ಕೆಂಪುವರ್ಣದ ಒಂದು ಮಡಕೆಯಲ್ಲಿ ಅಸ್ಥಿಚೂರುಗಳಿದ್ದವು. ದುಂಡು ಕಟ್ಟೆಗಳಲ್ಲಿ ಮಾತ್ರ ಕೆಲವೇ ಮಣ್ಪಾತ್ರೆಯ ಚೂರುಗಳು ದೊರೆತವು.

ಅಸ್ಥಿ ಚೂರುಗಳು ಆ ವ್ಯಕ್ತಿಯ ವಯಸ್ಸು, ಲಿಂಗ, ಎತ್ತರ ಮತ್ತು ಜನಾಂಗ ತಿಳಿಯಲಾಗದಷ್ಟು ಸಣ್ಣದಿದ್ದವು. ಪ್ರಾಯಶಃ ಕೋಣೆಗೋರಿಯಲ್ಲಿ ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳ ಅಸ್ಥಿಗಳಿದ್ದ ಹಾಗೆ ತೋರುವುದು. ಮಣ್ಪಾತ್ರೆಗಳಲ್ಲಿ ಹೊಳಪಾದ ಕೆಂಪುವರ್ಣದ್ದೇ ಹೆಚ್ಚಾಗಿದ್ದವು. ಕೆಲವು ಮಾತ್ರ ಕಪ್ಪು-ಕೆಂಪು ದ್ವಿವರ್ಣದವು. ಇನ್ನು ಕೆಲವು ದೊರಗುಮೈಯುಳ್ಳವುಗಳಾಗಿ ಲೇಪನವಿಲ್ಲದವು. ಬಲವಾದ ದಪ್ಪ ಹಿಡಿಕೆಯುಳ್ಳ ಕೊಡ, ಗಡಿಗೆ, ಬಾನಿ, ಚೊಂಬು, ಅರ್ಧಗೋಲಾಕೃತಿಯ ಪಾತ್ರೆ, ತಟ್ಟೆಗಳು, ಸಣ್ಣ ಬುಡದ ಅಗಲ ಬಾಯುಳ್ಳ ಲೋಟಗಳು, ಕಾಲಿರುವ ಬಟ್ಟಲು ಮುಂತಾದವು. ತಾಮ್ರದ ತಗಡಿನ ಪಟ್ಟಿಗಳು, ಕಬ್ಬಿಣದ ತೂಗುದೀಪದ ತರಹದ ಹಣತೆ, ತಂತಿ ಇತ್ಯಾದಿಗಳೂ ದೊರಕಿದವು. ಈ ಕೋಣೆಗೋರಿಗಳ ಕಾಲಮಾನ ಪ್ರ.ಶ.ಪೂ.ಸು. 1000–800.

ಬೃಹತ್ ಶಿಲಾಗೋರಿಯ ರೀತಿಯಲ್ಲಿದ್ದ ಸು. 6 ಮೀ. ವ್ಯಾಸದ ಒಂದು ದುಂಡುಕಲ್ಲುಗುಪ್ಪೆಯನ್ನೂ ಇಲ್ಲಿ ಅಗೆಯಲಾಯಿತು. ಅನರೀಕ್ಷಿತವಾಗಿ ಇದರಲ್ಲಿ ತಾಮ್ರ-ಶಿಲಾಸಂಸ್ಕೃತಿಯ ಒಂದು ಶವಕುಣಿ ಕಂಡುಉಬಂದಿತು. ಇದರಲ್ಲಿ ಒಂದು ವ್ಯಕ್ತಿಯ ತಲೆ, ಎದೆ ಹಾಗೂ ತೊಡೆಯ ಭಾಗದ ಅಸ್ಥಿ ಚೂರುಗಳನ್ನು ಪೂರ್ವ-ಈಶಾನ್ಯ ಅಭಿಮುಖವಾಗಿ ಇಡಲಾಗಿದ್ದಿತು. ಜೊತೆಗೆ, ಬೂದವರ್ಣದ ಮೂರು ಮಣ್ಪಾತ್ರೆಗಳು,

ತಾಮ್ರದ ಒಂದು ಬಳೆ ಮತ್ತು ಕೆಲವು ಸೂಕ್ಷ್ಮ ಶಿಲೋಪಕರಣಗಳು ಇದ್ದವು. ತಾಮ್ರ–ಶಿಲಾಯುಗದ ಜ್ಷುಣೆಗೆ ಹೀಗೆ ಕಲ್ಲುಗುಪ್ಪೆಯಿದ್ದು, ಪ್ರಥಮವಾಗಿ ಕಂಡುಬಂದಿರುವುದು ಇಲ್ಲಿಯೇ. ತಾಮ್ರ–ಶಿಲಾಯುಗದ ವಸತಿನೆಲೆ ಬಹುಮಟ್ಟಿಗೆ ನಶಿಸಿದೆ. ಇಲ್ಲಿ ಸಣ್ಣ ಪ್ರಮಾಣದ ಉತ್ಖನನದಲ್ಲಿ ಸುಟ್ಟುಹೋದ ಮರದ ಕಂಬಗಳು, ವರ್ಣಚಿತ್ರವುಳ್ಳ ಮತ್ತು ಸಾದಾ ಮಣ್ಪಾತ್ರೆಗಳು ಕಲ್ಲಿನ ಸೂಕ್ಷ್ಮ ಶಿಲೋಪಕರಣಗಳು ದೊರಕಿದ್ದವು. ಸ್ಥಳೀಯ ತಾಮ್ರ–ಶಿಲಾಯುಗೀನ ಮಣ್ಪಾತ್ರೆಗಳ ಜೊತೆಗೆ ತಪತಿ ನದಿ ಬಯಲಿನಲ್ಲಿರುವ ಸಾವಳ್ದ ಮುಂತಾದ ಪ್ರದೇಶಗಳ ಮಣ್ಪಾತ್ರೆ ಮಾದರಿಗಳೂ ದೊರಕಿವೆ. ಇಂಗಾಲ–14 ವಿಧಾನದಿಂದ ಇಲ್ಲಿಯ ತಾಮ್ರ–ಶಿಲಾಯುಗ ಸಂಸ್ಕೃತಿ ಪ.ಶ.ಪೂ. 1800ರಲ್ಲಿ ಆರಂಭವಾಯಿತೆನ್ನಬಹುದು.

ಬೃಹತ್ ಶಿಲಾಸಮಾಧಿ

ಬೃಹತ್ ಶಿಲಾಯುಗಕ್ಕೆ ಅನ್ವಯಿಸುವ ಶಿಲಾಕೋಣೆ ಸಮಾಧಿಗಳು ದ.ಭಾರತದ ಉದ್ದಗಲಕ್ಕೂ ವ್ಯಾಪಕವಾಗಿ ಕಂಡಬಂದಿದೆ. ಗ್ರಾನೈಟ್ ಶಿಲೆಯಿಂದ ಮೊದಲಾದ ನಾಲ್ಕು ಶಿಲಾಚಪ್ಪಡಿಗಳನ್ನು ಕೋಣೆಯ ಆಕಾರದಲ್ಲಿ ನಿಲ್ಲಿಸಿ, ಅವುಗಳ ಮೇಲೆ ಮತ್ತೊಂದು ಶಿಲಾ ಚಪ್ಪಡಿಯನ್ನಿರಿಸಿ ಈ ಸಮಾಧಿ ರಚನೆಗಳನ್ನು ರೂಪಿಸಲಾಗಿದೆ. ಈ ರಂಧ್ರವೊಂದನ್ನು ಕೊರೆಯಲಾಗಿದೆ. ಈ ರೀತಿಯ ಸಮಾಧಿ ರಚನೆಗಳು ಬಂಟ್ವಾಳ ತಾಲೂಕಿನ ಬಡಗ ಕಜೆಕಾರು, ಕಾರ್ಕಳ ತಾಲ್ಲೂಕಿನ ಬೋರ್ಕಟ್ಟೆ, ಮಂಗಳೂರು ತಾಲ್ಲೂಕಿನ ಕೋಣಾಜೆ, ಕುಂದಾಪುರ ತಾಲ್ಲೂಕಿನ ಬೇಳೂರು ಮತ್ತು ಉಡುಪಿ ತಾಲ್ಲೂಕಿನ ಕುಕ್ಕುಂಜೆ ಹಾಗೂ ಅವರ್ಸೆಗಳಲ್ಲಿ ಬೆಳಕಿಗೆ ಬಂದಿವೆ. ಈ ಪೈಕಿ ಬಡಗ ಕಜೆಕಾರಿನ ಸಮಾಧಿ ನವೇಶನವು ಅತ್ಯಂತ ವಿಶಾಲವಾಗಿದ್ದು, ಇಲ್ಲಿ ಸುಮಾರು 30ಕ್ಕಿಂತಲೂ ಹೆಚ್ಚು ಶಿಲಾಕೋಣೆಗಳನ್ನು ಗುರತಿಸಲಾಗಿದೆ. ಸ್ಥಳೀಯವಾಗಿ ಇವುಗಳನ್ನು ಪಾಂಡವರ ಕಲ್ಲುಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಕೆಲವು ಪೂರ್ಣವಾಗಿ ನೆಲದ ಮೇಲ್ಭಾಗದಲ್ಲಿದ್ದರೆ ಇನ್ನೂ ಕೆಲವು ಅರ್ಧಭಾಗ ನೆಲದೊಳಗೆ ಹೂತುಕೊಂಡಂತಿವೆ. ಈ ಶಿಲಾಕೋಣೆಗಳ ಮೇಲ್ಭಾಗವನ್ನು 2.50 ಮೀಟರ್‌ನಂದ 3.50 ಮೀಟರಿನಷ್ಟು ಉದ್ದ ಹಾಗೂ 2.0ರಿಂದ 2.50ಮೀಟರಿನಷ್ಟು ಅಗಲದ ಶಿಲಾಚಪ್ಪಡಿಗಳಿಂದ ಮುಚ್ಚಲಾಗಿದ್ದು, ನಾಲ್ಕು ಶಿಲಾ ಚಪ್ಪಡಿಗಳಲ್ಲಿ ಯಾವುದಾದರೂ ಒಂದರಲ್ಲಿ ಸುಮಾರು 50 ಸೆಂ.ಮೀ. ವ್ಯಾಸದ ಒಂದು ರಂಧ್ರವಿರುವುದನ್ನು ಕಾಣಬಹುದು. ಕೆಲವು ಶಿಲಾಕೋಣೆಗಳಲ್ಲಿ ರಂಧ್ರವಿರುವ ಚಪ್ಪಡಿಯ ಎದುರು ಭಾಗದಲ್ಲಿ ಸುಮಾರು ಒಂದು ಮೀಟರ್ ಉದ್ದ ಹಾಗೂ 75 ಸೆಂ.ಮೀ. ಅಗಲದ ಕಿರಿದಾದ ದಾರಿಯೊಂದನ್ನು ನಿರ್ಮಿಸಿರುವುದನ್ನು ಗುರುತಿಸಿರಬಹುದು. ಬಡಗ ಕಜೆಕಾರಿನ ಶಿಲಾಕೋಣೆಗಳು ನಾಶಹೊಂದುವ ಸ್ಥಿತಿಯಲ್ಲಿದ್ದು ಇವುಗಳೊಂದಿಗೆ ಯಾವುದೇ ಪ್ರಾಚೀನ ವಸ್ತುಗಳು ಕಂಡುಬಂದಿಲ್ಲ.

ತುಳುನಾಡಿನಲ್ಲಿ ಗುರುತಿಸಲಾದ ಶಿಲಾಕೋಣೆ ಗೋರಿಗಳು ಉತ್ತರ ಕರ್ನಾಟಕದ ಐಹೊಳೆ, ಹಗರಟಗಿ ರಾಜನ ಕುಳೂರು ಮತ್ತು ಅಕ್ಕರಗಬ್‌ಗಳಲ್ಲಿ ಕಂಡುಬರುವ ಇದೇ ರೀತಿಯ ರಚನೆಗಳನ್ನು ಹೋಲುತ್ತವೆ ಎಂಬುದು ಗಮನಾರ್ಹ. ಇಂತಹ ಶಿಲಾಕೋಣೆಗಳು ಇತರೆಲ್ಲಾ ಕಡೆಗಳಲ್ಲಿ ಮಣ್ಣಿನ ನೆಲದ ಮೇಲೆ ನಿರ್ಮಿಸಲ್ಪಟ್ಟಿದ್ದರೆ ಕೋಣಾಜೆಯಲ್ಲಿ ಕಂಡುಬರುವ ಗೋರಿಗಳನ್ನು ವಿಶಾಲವಾದ ಬಂಡೆಗಲ್ಲಿನ ಮೇಲೆ ನಿರ್ಮಿಸಿರುವುದು ಕುತೂಹಲಕರ. ಬಂಡೆಗಲ್ಲುಗಳ ಮೇಲೆ ನರ್ಮಿತವಾದ ಇದೇ ರೀತಿಯ ರಚನೆಗಳನ್ನು ರಾಯಚೂರು ಜಿಲ್ಲೆಯ ಹಿರೇಬೆನಕಲ್ ಪ್ರದೇಶದಲ್ಲಿ ವಿಶೇಷವಾಗಿ ಕಾಣಬಹುದಾಗಿದೆ.

ಗುಂಡಗಿನ ಗೋಳಾಕಾರದ ಮಣ್ಣಿನ ಪಾತ್ರೆಗಳಲ್ಲಿ ಮೃತರ ಅಸ್ಥಿ ಅವಶೇಷಗಳನ್ನಿರಿಸಿ ಹೂಳುವ ಪದ್ಧತಿಯೂ ಬೃಹತ್ ಶಿಲಾಯುಗದ ಸಂಸ್ಕೃತಿಯಲ್ಲೂ ಬಹಳವಾಗಿ ಪ್ರಚಲಿತವಿದ್ದಂತೆ ತೋರುತ್ತದೆ. ದ.ಭಾರತದ ಹಲವೆಡೆಗಳಲ್ಲಿ ಇಂತಹ ಮೃತ್ಪಾತ್ರೆ ಸಮಾಧಿಗಳು ಕಂಡುಬಂದಿವೆ. ತುಳುನಾಡಿನಲ್ಲಿ ಈ ತನಕ ನಾಲ್ಕು ನೆಲೆಗಳಲ್ಲಿ ಪುತ್ತೂರು, ಕದಂಡ್ಕು ಬಡಗ ಕಜೆಕಾರು, ವಡ್ಡರ್ಸೆ ಈ ರೀತಿಯ ಅವಶೇಷಗಳು ಬೆಳಕಿಗೆ ಬಂದಿವೆ. ಬಡಗ ಕಜೇಕಾರಿನ ಒಂದೇ ನವೇಶನದಲ್ಲಿ ಶಿಲಾಕೋಣೆ ಸಮಾಧಿಗಳು ಮತ್ತು ಮೃತ್ಪಾತ್ರೆ ಸಮಾಧಿಗಳು ಕಂಡುಬರುವುದು ಗಮನಾರ್ಹ. ಪುತ್ತೂರಿನಲ್ಲಿ ಬೆಳಕಿಗೆ ಬಂದ ಮೃತ್ಪಾತ್ರೆ ಸಮಾಧಿಗಳಲ್ಲಿ ಅಗಲ ಬಾಯಿಯ ಬಟ್ಟಲಿನಾಕಾರದ ಮಣ್ಣಿನ ಪಾತ್ರೆಗಳು, ಆಟಿಕೆಗಳನ್ನು ಹೋಲುವ ರೀತಿ ಚಿಕ್ಕಗಾತ್ರದ ಮಣ್ಣಿನ ಕುಡಿಕೆಗಳು, ಹಿತ್ತಾಳೆ ಚೂರುಗಳು ಹಾಗೂ ಎರಡು ಚಿನ್ನದ ಮಣಿಗಳು ಪತ್ತೆಯಾಗಿವೆ. ಈ ಪೈಕಿ ಅತಿ ಚಿಕ್ಕಗಾತ್ರದ ಮಣ್ಣಿನ ಕುಡಿಕೆಗಳು ವಿಶೇಷವಾಗಿ ಗಮನಾರ್ಹವಾಗಿವೆ. ಇದೇ ರೀತಿಯ ಮಣ್ಣಿನ ಕುಡಿಕೆಗಳು ಕೊಡಗಿನಲ್ಲಿ ಮತ್ತು ಬೆಳವನ ಕೂಡಿಗೆ ಎಂಬಲ್ಲಿ ಗುರುತಿಸಲಾದ ಶಿಲಾಕೋಣೆ ಸಮಾಧಿಗಳೂ ಕಂಡುಬಂದಿವೆ.

ಕರ್ನಾಟಕದ ಇತರ ಪ್ರದೇಶಗಳಿಗೆ ಹೋಲಿಸಿದರೆ ಪ್ರಾಗೈತಿಹಾಸಿಕ ಸಂಶೋಧನೆ ಅಧ್ಯಯನದ ದೃಷ್ಟಿಯಿಂದ ಅವಿಭಜಿತ ದ.ಕನ್ನಡ ಜಿಲ್ಲೆಯಲ್ಲಿ ಇಂದಿಗೂ ಹಿಂದುಳಿದ ಪ್ರದೇಶವಾಗಿಯೇ ಉಳಿದುಕೊಂಡಿದೆ ಎಂದರೆ ತಪ್ಪಾಗಲಾರದು. ತುಳುನಾಡಿನ ಇತಿಹಾಸ ರಚನೆಯ ಪ್ರಯತ್ನಗಳು ಇಪ್ಪತ್ತನೆಯ ಶತಮಾನದ ಆದಿಯಷ್ಟೇ ಪ್ರಾರಂಭವಾಗಿದ್ದರೂ, ನಂತರದ ವರ್ಷಗಳಲ್ಲಿ ಈ ಪ್ರದೇಶದ ಇತಿಹಾಸ ಕುರಿತು ಹಲವಾರು ಮೌಲಿಕ ಗ್ರಂಥಗಳು ರಚನೆಯಾಗಿದ್ದರೂ ಸಂಶೋಧನೆಯ ಪ್ರಯತ್ನ ಕಡಿಮೆ. ತುಳುನಾಡಿನ ಸಂಸ್ಕೃತಿಯ ಹಾಗೂ ಸಮಾಧಿಯ ಬಗ್ಗೆ ಮೊತ್ತಮೊದಲಿಗೆ ಬೆಳಕಿಗೆ ತಂದವರು ಪಿ.ಗುರುರಾಜ್‌ಭಟ್ 1969ರಲ್ಲಿ ಬಂಟ್ವಾಳ ತಾಲ್ಲೂಕಿನ ಬಡಗ ಕಜೆಕಾರು ಗ್ರಾಮದಲ್ಲಿ. ಬೃಹತ್ ಶಿಲಾಯುಗದ ಸಮಾಧಿಗಳನ್ನು ಪತ್ತೆಹಚ್ಚುವ ಮೂಲಕ ಈ ಅಧ್ಯಯನಕ್ಕೆ ನಾಂದಿಹಾಡಿದರು.

ಬೃಹತ್ ಶಿಲಾಯಗದ ಸಮಾಧಿಗಳು :-

ಬೃಹತ್ ಶಿಲಾಯುಗದ ಸಮಾಧಿಗಳ ನಿರ್ಣಯದ ತಾಂತ್ರಿಕ ಬೆಳವಣಿಗೆಯ ದೃಷ್ಟಿಯಿಂದ ಗುಹಾಸಮಾಧಿ ರಚನೆಗಳು ಈ ಸಂಸ್ಕೃತಿಯ ಕೊನೆಯ ಹಂತಕ್ಕೆ ಅನ್ವಯಿಸುತ್ತದೆ. ಅಲ್ಲದೆ, ಕೇರಳ ಕೊಚ್ಚಿನ್ ಮತ್ತು ಮಲಪುರಂ ಪ್ರದೇಶಗಳಲ್ಲಿ ಬೆಳಕಿಗೆ ಬಂದ ಇಮತಹ ಸಮಾಧಿಗಳ ರಚನೆಯಲ್ಲಿ "ಕೊಟೆಡ್ ಪೈಂಟೆಡ್ ವೇರ್" ಮಾದರಿಯ ಮಡಿಕೆಗಳು ಕಂಡುಬಂದಿವೆ. ಈ ಮಾದರಿಯ ಮಣ್ಣಿನ ಮಡಿಕೆಗಳು ಕ್ರಿ.ಪೂ. ಸುಮಾರು 2ನೇ ಶತಮಾನದಿಂದ 2–3ನೇ ಶತಮಾನದವರೆಗೂ ಬಳಕೆಯಲ್ಲಿದ್ದುದು ಇತರೆಡೆಗಳಲ್ಲಿ ದೊರೆತ ಆಧಾರಗಳಿಂದ ಖಚಿತವಾಗಿವೆ. ಗುಹಾ ಸಮಾಧಿ ರಚನೆಗಳ ಪೈಕಿ ಮೇಲ್ಭಾಗದಲ್ಲಿ ರಂಧ್ರಾಕಾರದಲ್ಲಿ ತೆರೆದಿರುವ ಬಾವಿಯ ಆಕಾರದ ರಚನೆಗಳು ತಾಂತ್ರಿಕವಾಗಿ ಗುಹಾ ಸಮಾಧಿಗಳ ನಿರ್ಮಾಣದ ಕೊನೆಯ ಹಂತಕ್ಕೆ ಸೇರಿದವು ಎಂಬುದು ವಿದ್ವಾಂಸರ ಅಭಿಪ್ರಾಯ. ಈ ಆಧಾರಗಳ ಬೆಳಕಿನಲ್ಲಿ ತುಳುನಾಡಿನಲ್ಲಿ ಕಂಡುಬರುವ ಗುಹಾ ಸಮಾಧಿಗಳ ರಚನೆಗಳನ್ನು ಸಮಾರು ಕ್ರಿ.ಪೂ. 2ನೇ ಶತಮಾನದ ಅವಧಿಯೊಳಗೆ ಗುರುತಿಸಿದರೆ ತಪ್ಪಾಗಲಾರದು.

ಈ ಮೇಲಿನ ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ ತುಳುನಾಡಿನಲ್ಲಿ ಕಂಡುಬರುವ ವಿವಿಧ ರೀತಿಯ ಬೃಹತ್ ಶಿಲಾಯುಗದ ಸಂಸ್ಕೃತಿಯ ಸಮಾಧಿಗಳ ರಚನೆಯ ಕಾಲವನ್ನು ಕೆಳಗಿನಂತೆ ನಿರ್ಧರಿಸಬಹುದಾಗಿದೆ.

1. ಶಿಲಾಕೋಣೆ ಸಮಾಧಿಗಳು – ಸುಮಾರು ಕ್ರಿ.ಪೂ. ರಿಂದ 600 ಕ್ರಿ.ಪೂ 100
2. ಮೃತ್ಪಾತ್ರೆ ಸಮಾಧಿಗಳು – ಸುಮಾರು ಕ್ರಿ.ಪೂ. ರಿಂದ 800 ಕ್ರಿ.ಪೂ. 600
3. ಗುಹಾ ಸಮಾಧಿಗಳು – ಸುಮಾರು ಕ್ರಿ.ಪೂ. 2ನೇ ಶತಮಾನದಿಂದ 2–3ನೇ ಶತಮಾನದವರೆಗೆ

ಶಿಸ್ತುಬದ್ಧವಾದ ಅನ್ವೇಷಣೆ ಹಾಗೂ ಅಧ್ಯಯನಗಳ ಕೊರತೆಯಿಂದಾಗಿ ತುಳನಾಡಿನಲ್ಲಿ ಪ್ರಾಗೈತಿಹಾಸಿಕ ಮಾನವನ ಸಂಸ್ಕೃತಿಯ ಬೆಳವಣಿಗೆಯ ವಿವಿಧ ಹಂತಗಳ ಸ್ಪಷ್ಟವಾದ ಚಿತ್ರಣಗಳನ್ನು ನೀಡುವುದು ಕಷ್ಟಸಾಧ್ಯ. ಆದರೆ, ಈ ಪ್ರದೇಶಗಳಲ್ಲಿ ಮಾನವನ ಚಟುವಟಿಕೆಗಳು ಆದಿಶಿಲಾಯುಗದ ಕಾಲದಿಂದಲೇ ಪ್ರಾರಂಭವಾಗಿದ್ದವು ಎಂಬುದು ಮೇಲಿನ ವಿವರಣೆಗಳಿಂದ ಖಚಿತವಾಗುತ್ತವೆ. ಪ್ರಸ್ತುತ ಲಭ್ಯವಿರುವ ಆಧಾರಗಳ ಹಿನ್ನೆಲೆಯಲ್ಲಿ ಈ ಪ್ರದೇಶವನ್ನು ವ್ಯಾಪಕ ಮತ್ತು ಪುರಾತತ್ವ ಅನ್ವೇಷಣೆಗೊಳಪಡಿಸುವ ಮೂಲಕ ಇಲ್ಲಿನ ಪ್ರಾಗೈತಿಹಾಸದ ಕುರಿತು ಸಮಗ್ರವಾದ ಮತ್ತು ಹೆಚ್ಚು ಅಧಿಕಾರಯುಕ್ತವಾದ ವಿವರಗಳನ್ನು ನೀಡಲು ಸಾಧ್ಯವಾಗಬಹುದು.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿರುವ ಬೃಹತ್ ಶಿಲಾಸಂಸ್ಕೃತಿಯ ಸಮಾಧಿ ನೆಲೆ. ಇದನ್ನು ಪಾಂಡವಪರೆ, ಪಾಂಡವ ಬಂಡೆ ಎಂದು ಕರೆಯುವರು. ಕೆ.ಕೆ. ಸುಬ್ಬಯ್ಯನವರು 1971ರಲ್ಲಿ 200 ಗೋರಿಗಳನ್ನು ಶೋಧಿಸಿದರು. ಅವುಗಳಲ್ಲಿ ಪ್ರಮುಖವಾದ ನಾಲ್ಕು ಗೋರಿಗಳಲ್ಲಿ ಮೊದಲು ಉತ್ಖನನ ನಡೆಸಲಾಯಿತು. 1975ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು



ಗುಹಾ ಸಮಾಧಿ

ಪುರಾತತ್ವ ವಿಭಾಗ ಇನ್ನಷ್ಟು ವಿಸ್ತೃತ ಅಧ್ಯಯನಕ್ಕಾಗಿ ಶಿಲಾಗೋರಿಗಳನ್ನು ಉತ್ಖನನಕ್ಕೊಳಪಡಿಸಿತು. 1995ರಲ್ಲಿ ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ವಿಭಾಗ 11 ಬೃಹತ್ ಶಿಲಾಗೋರಿಗಳಲ್ಲಿ ಉತ್ಖನನ ನಡೆಸಿತು. ಇಲ್ಲಿ ನಡೆಸಿದ ಉತ್ಖನನಗಳಿಂದ ಒರಟುಕಲ್ಲುಗುಂಡುಗಳಿಂದ ದುಂಡಾಗಿ ನಿರ್ಮಿಸಿದ ಕಲ್ಲುವೃತ್ತ ಗೋರಿಗಳು. ಕಲ್ಲುವೃತ್ತ ಸಹಿತ ನೆಲಕೋಣೆ ಗೋರಿಗಳು, ನಿಲಸುಗಲ್ಲುಗಳು ಈ ಮೂರು ಬಗೆಯ ಶಿಲಾಗೋರಿಗಳು ಬೆಳಕಿಗೆ ಬಂದವು. ಒಂದು ಮತ್ತು ಎರಡನೆಯ ಮಾದರಿಯ ಶಿಲಾಗೋರಿಗಳು ಅಧಿಕ ಸಂಖ್ಯೆಯಲ್ಲಿವೆ. ಮೊದಲನೆಯ ಪ್ರಕಾರದಲ್ಲಿ ಕಲ್ಲುವೃತ್ತಗಳ ಕೇಂದ್ರದಲ್ಲಿ ಶವಕುಣಿಗಳಿವೆ. ವೃತ್ತದೊಳಗಿನ ಭಾಗವನ್ನು ಕಲ್ಲುತುಂಡುಗಳಿಂದ ತುಂಬಲಾಗಿದೆ. ಶವಕುಣಿಗಳು ಆಯತಾಕಾರವಾಗಿದ್ದು ಇವುಗಳಲ್ಲಿ

ಕೆಲವಕ್ಕೆ ತಳದಲ್ಲಿ ಚಪ್ಪಡಿಗಳಿವೆ. ನೆಲಕೋಣೆ ಗೋರಿಯಲ್ಲಿ ಆಯತಾಕಾರದ ಶವಕುಣಿಯನ್ನು ತೋಡಿ ಅದರ 4 ಬದಿಗಳಲ್ಲಿ ಗ್ರಾನೈಟ್ ಕಲ್ಲುಚಪ್ಪಡಿಗಳನ್ನು ನಿಲ್ಲಿಸಿ ಮತ್ತೊಂದು ಚಪ್ಪಡಿಕಲ್ಲಿನಿಂದ ಅದನ್ನು ಮುಚ್ಚಲಾಗಿದೆ. ತಳದಲ್ಲಿ ಚಪ್ಪಡಿಗಲ್ಲನ್ನು ಹಾಸಿ ನಿರ್ಮಿಸಿದ ಗೋರಿಗಳು ವಿರಳವಾಗಿವೆ. ಪೂರ್ವದಿಕ್ಕಿನ ಕಲ್ಲುಚಪ್ಪಡಿಯ ಮೇಲೆ ಗ ಮಾದರಿಯ ಕಿಂಡಿ ಇದೆ. ಈ ಪ್ರದೇಶದಲ್ಲಿ ಎರಡು ನಿಲಸುಗಲ್ಲುವಗಳಿವೆ. ಇವು ಗಾತ್ರದಲ್ಲಿ ದೊಡ್ಡದಾಗಿದ್ದು ಬೃಹತ್ ಶಿಲಾಸಂಸ್ಕೃತಿಯ ಒಂದು ಭಾಗವೋ ಅಥವಾ ಸ್ಮಾರಕ ಶಿಲೆಯೋ ಎನ್ನುವುದು ಅವುಗಳ ಉತ್ಖನನದಿಂದ ಮಾತ್ರ ಹೇಳಲು ಸಾಧ್ಯ. ಉತ್ಖನನ ಮಾಡಿದ ಶಿಲಾಗೋರಿಗಳಲ್ಲಿ ವಿವಿಧ ಪ್ರಕಾರಗಳ ಅವಶೇಷಗಳ ದೊರೆತಿವೆ. ಶಂಕುವಿನಾಕಾರದ ಹೊಳಪಿನ ಕಪ್ಪುಬಣ್ಣದ ಮಡಕೆಗಳು, ಚಿಕ್ಕ ತಟ್ಟೆ-ಲೋಟಗಳು, ಬಿಳಿ ವರ್ಣಚಿತ್ರವಿರುವ ಕಪ್ಪು-ಕೆಂಪು ದ್ವಿವರ್ಣ ಮಡಕೆಗಳು, ಕೆಂಪುಬಣ್ಣದ ದೊಡ್ಡಮಡಕೆ, ನಳಿಕೆ ಬಾಯಿ ಮತ್ತು ಮೂರು ಕಾಲುಗಳುಳ್ಳ ಮಡಕೆ, ಬತ್ತದ ಹೊಟ್ಟು ಮತ್ತು ರಾಗಿ ತುಂಬಿದ ಪಾತ್ರೆ, ತಟ್ಟೆ, ಲೋಟ, ಹೂಜಿಗಳು, ಬಿಳಿ ರೇಖೆಗಳಿಂದ ಅಲಂಕರಿಸಿದ ಕಾರ್ನೇಲಿಯನ್ ಮತ್ತು ಜೇಡಿಮಣ್ಣಿನಿಂದ ತಯಾರಿಸಿದ ಮಣಿಗಳು, ಸಣ್ಣ ದುಂಡನೆಯ ನಾಣ್ಯದ ಮಾದರಿಯ ಆಭರಣ ಮತ್ತು ಮಾನವನ ಎಲುಬು, ಹಲ್ಲು, ಕಬ್ಬಿಣದ ವಸ್ತುಗಳು ಇಲ್ಲಿ ದೊರೆತಿವೆ. ಅವಶೇಷಗಳ ತೌಲನಿಕ ವಿಶ್ಲೇಷಣೆಯಿಂದ ವಿದ್ವಾಂಸರು ಈ ಸಂಸ್ಕೃತಿಯ ಕಾಲವನ್ನು ಪ್ರ.ಶ.ಪೂ. 1000-600 ಎಂದು ನಿರ್ಧರಿಸಿರುತ್ತಾರೆ.

ಹಿರೆಬೆನಕಲ್ಲು:



ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಪುರಾತತ್ವ ನೆಲೆ, ಸುತ್ತಲೂ ಎತ್ತರದ ಬೆಟ್ಟಗಳ ಸಾಲುಗಳಿಂದ ಸುತ್ತುವರೆಯಲ್ಪಟ್ಟಿದೆ. ಬೃಹತ್ ಬಂಡೆಗಳ ರಾಶಿಯ ಈ ಬೆಟ್ಟಗಳಲ್ಲಿ ಜನವಸತಿಗೆ ಯೋಗ್ಯವಾದ ಅಸಂಖ್ಯಾತ ಗವಿಗಳು, ಕಲ್ಲಾಸರೆಗಳಿವೆ. ಈ ಬೆಟ್ಟಗಳ ಸುತ್ತೆಲ್ಲ ವಿಶಾಲವಾದ ಬಯಲು ಭೂಮಿಯಿದೆ. ಗ್ರಾಮದ ಉತ್ತರಕ್ಕೆ 1 1/2 ಕಿ.ಮೀ.

ದೂರದಲ್ಲಿ ಕಿಟ್ಟದಂಥ ಬೂದಿಗುಡ್ಡೆಯಿದ್ದು, ಅದು ಕಾಲಕ್ರಮೇಣ ಪೂರ್ಣ ನೆಲಸಮವಾಗಿದೆ. ಈ ನೆಲೆಯಲ್ಲಿ ನವಶಿಲಾತಾಮ್ರಯುಗ ಸಂಸ್ಕೃತಿಯ ಮಣ್ಪಾತ್ರೆ ಚೂರುಗಳು, ಚರ್ಟ್, ಜಾಸ್ಪರ್ ಮುಂತಾದ ಕಲ್ಲುಗಳ ಚಕ್ಕೆ ಉಪಕರಣಗಳು, ಅರೆಬರೆ ಪಳೆಯುಳಿಕೆಗಳಾದ ಪ್ರಾಣಿಗಳ



ಎಲುಬುಗಳು ಮುಂತಾದ ಜನವಸತಿಗೆ ಸಂಬಂಧಿಸಿದ ಅವಶೇಷಗಳಿವೆ. ವಿಶೇಷವಾಗಿ ಇಲ್ಲಿಯ ವೈವಿಧ್ಯಮಯ ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳಿಗೆ ಈ ನೆಲೆ ಹೆಸರುವಾಸಿಯಾಗಿದೆ. ಈ ನಲೆಯ ಬಗ್ಗೆ ಮೊದಲು ಸೂಚನೆ ಕೊಟ್ಟವನು ಕೀಸ್. 1915ರಲ್ಲಿ ಎಲ್.ಮನ್ ಇಲ್ಲಿಯ ಬೆಟ್ಟಗಳಲ್ಲಿ ಬೃಹತ್ ಶಿಲಾಗೋರಿ ನೆಲೆಯ ಸಮೀಪ ಮೂರು ಗವಿಚಿತ್ರಗಳನ್ನೂ ಶೋಧಿಸಿದ. ಈ ಎಲ್ಲ ಶೋಧನೆಗಳನ್ನು ಗಮನಿಸಿದ ಹಿಂದಿನ ಹೈದರಾಬಾದ್ ಸಂಸ್ಥಾನದ ಪುರಾತತ್ವ ಸರ್ವೇಕ್ಷಣ ಇಲಾಖೆ ಇದನ್ನು ಸಂರಕ್ಷಿಸುತ್ತಿದೆ.



1964–68ರಲ್ಲಿ ಅ.ಸುಂದರ ಅವರು ನೆಲೆ ಪರಿಶೀಲನೆಯಲ್ಲಿ ಸು.8 ಗವಿಚಿತ್ರಗಳನ್ನೂ ಬೃಹತ್ ಶಿಲಾ ಸಂಸ್ಕೃತಿ ಜನರ 2 ವಸತಿ ನೆಲೆಗಳನ್ನೂ ಪತ್ತೆಹಚ್ಚಿದರು. 2003–04ರಲ್ಲಿ ಪುರಾತತ್ವ ಇಲಾಖೆ ಇಲ್ಲಿಯ ಒಂದು ವಸತಿ ನೆಲೆಯಲ್ಲಿ ಸಣ್ಣ ಪ್ರಮಾಣದಲ್ಲಿ ಉತ್ಖನನ ನಡೆಸಿತು.



ಸ್ಥಳೀಯವಾಗಿ ದುರ್ಗದ ದಡಿ ಎಂದು ಕರೆಯುಲಾಗುವ ಬಿಳಿ-ಬೂದುವರ್ಣದ ಕಲ್ಲಿನ ಬೆಟ್ಟದ ಮೇಲೆ ಸು. 1 1/2 ಕಿ.ಮೀ. ಉದ್ದಗಲದಷ್ಟು ವಿಸ್ತಾರವಾದ ಸಮತಟ್ಟಿನ ಪ್ರದೇಶದಲ್ಲಿ ಮೂರು ಸ್ಥಳಗಳಲ್ಲಿ 300ಕ್ಕೂ ಹೆಚ್ಚು ಬೃಹತ್ ಶಿಲಾಗೋರಿಗಳಿವೆ. ಸ್ಥಳೀಯರು ಈ ಕಲ್ಮನೆಗಳನ್ನು ಮೋರಿಯರ ಮನೆಗಳು ಎಂದು ಕರೆಯುತ್ತಾರೆ. ಪಶ್ಚಿಮದಿಂದ ಮೊದಲನೆಯ ಸ್ಥಳದಲ್ಲಿ ಅರ್ಧ ಹುಗಿದ ವೃತ್ತ ಕಂಡಿ ಇರುವ ಆಯತಾಕಾರದ ಕಲ್ಗೋರಿಗಳಿದ್ದರೆ ಆದರ ಮುಂದಿನದರಲ್ಲಿ ನೆಲದ ಮೇಲೆ ನಿರ್ಮಿಸಿದ ಪೆಟ್ಟಿಗೆಯಾಕಾರದ ವಿವಿಧ ಪ್ರಮಾಣದ ಚೌಕೋನ ಕಂಡಿ ಕಲ್ಮನೆಗಳಿವೆ. ಇದರ ಮುಂದಿನ ಸ್ಥಳದಲ್ಲಿ ನೆಲದಲ್ಲಿ ಅರ್ಧಹುಗಿದ ಚೌಕೋನದ ಕಂಡಿ ಮನೆಗಳಿವೆ. ಈ ಮೂರು ಪ್ರಕಾರದ ಕಲ್ಮನೆಗಳು ಕಲ್ಲು ಚಪ್ಪಡಿಗಳಿಂದ ನಿರ್ಮಿತವಾಗಿವೆ.

ಒಂದು ಪ್ರಕಾರದಲ್ಲಿ ಕಲ್ಮನೆಯನ್ನು ನೆಲದ ಮೇಲಯೇ ಸ್ವಸ್ತಿಕ್ ವಿನ್ಯಾಸದಲ್ಲಿ ರಚಿಸಲಾಗಿದೆ. ಇದರಲ್ಲಿ ವೃತ್ತ, ಅರ್ಧ ವೃತ್ತಾಕಾರ ಅಥವಾ ತ್ರಿಕೋನ, ಚೌಕೋನಾಕಾರದ ಸಣ್ಣ ದೊಡ್ಡ ಕಂಡಿ ಮಧ್ಯದಲ್ಲಿಯೋ ಇಲ್ಲವೆ ಮೇಲಿನ ಅಥವಾ ಕೆಳಂಚಿನಲ್ಲಿ, ಪೂರ್ವ ಅಥವಾ ಪಶ್ಚಿಮ ಬದಿಯ ನಿಲುಗಲ್ಲಿನಲ್ಲಿರಬಹುದು. ಕಲ್ಮನೆಯ ಹೊರಬದಿಯಲ್ಲಿ ಸುತ್ತಲ ಕಲ್ಲುತುಂಡುಗಳನ್ನು ಪೇರಿಸಿ ಅದರ ಸುತ್ತಲೂ ಒಂದರ ಪಕ್ಕದಲ್ಲೊಂದರಂತೆ ಮೇಲಿನ ಅಡ್ಡಚಪ್ಪಡಿಗೆ ಅನಿಸಿ ದೊಡ್ಡ ಕಲ್ಲುಚಪ್ಪಡಿಗಳನ್ನು ನಿಲ್ಲಿಸಲಾಗಿರುತ್ತದೆ. ಅಪರೂಪವಾಗಿ ಹೀಗೆ ನಲ್ಲಿಸಿದ ಕಲ್ಲಚಪ್ಪಡಿಗಳಲ್ಲಿ ಒಂದು ಕೈಯನ್ನು ಮೇಲಕ್ಕೆತ್ತಿದ ಮನುಷ್ಯನ ಸೂಕ್ಷ್ಮ ಸ್ವರೂಪವನ್ನು ಕಾಣಬಹುದು. ಹಿರೆ ಬೆನಕಲ್ಲಿನ ಕಲ್ಮನೆಗಳಲ್ಲೊಂದರಲ್ಲಿ ವಿರುದ್ಧ ದಿಕ್ಕಿಗೆ ಅಡ್ಡ ಬಾಗಿದ ಎರಡು ಕೊಂಬೆಯ ದೊಡ್ಡ ನಿಲಸಕಲ್ಲು ಒಂದು ಕಲ್ಮನೆಗೆ ಒರಗಿ ನಿಂತಿದೆ. ಈ ಮಾದರಿಯ ಕಲ್ಮನೆಗಳಿರುವ ನೆಲೆಗಳು ದಕ್ಷಿಣ ಭಾರದಲ್ಲಿ ವಿರಳ. ಸುಸ್ಥಿತಿಯಲ್ಲಿರುವ ಇಂಥ ಕಲ್ಮನೆಯೊಳಗೆ ಏನೂ ಇಲ್ಲದಿರುವುದು ಕುತೂಹಲಕಾರಿಯಾಗಿದೆ.

ಇವಲ್ಲದೆ, ಅಪರೂಪದ ಇನ್ನೆರಡು ಪ್ರಕಾರದ ಕಲ್ಮೆಗಳಿವೆ. ತುಂಡುಕಲ್ಲುಗಳನ್ನು ಒಂದರ ಮೇಲೊಂದು ಇಟ್ಟು ಸು.60.ಸೆಂ.ಮೀ. ಎತ್ತರದ ಕಂಬಗಳನ್ನಾಗಿ ಮಾಡಿ ಅವುಗಳ ಮೇಲೆ ಅಡ್ಡಾದಿಡ್ಡಿಯಾಕಾರದ ದಪ್ಪದ ಚಪ್ಪಡಿಯನ್ನು ಅಡ್ಡಲಾಗಿ ಇಡಲಾಗಿದೆ. ಇವು ಯಾವುದೇ ನಿರ್ದಿಷ್ಟ ವಿನ್ಯಾಸದಲ್ಲಿರುವುದಿಲ್ಲ. ಸ್ಥಳೀಯರ ಪ್ರಕಾರ ಇಂಥ ಕಲ್ಮನೆಗಳನ್ನು ಹಿಂದೆ ಸಣ್ಣ ಪ್ರಾಣಿಗಳನ್ನು ಹಿಡಿಯಲು ನಿರ್ಮಿಸಲಾಗುತ್ತಿತ್ತು. ಇನ್ನೊಂದು ಸಣ್ಣ ಗವಿಯ ಮುಂಬದಿಯಲ್ಲಿ ತುಂಡುಕಲ್ಲಿನ ಗೋಡೆಯನ್ನು ನಿರ್ಮಿಸಿ ಮನೆಯನ್ನಾಗಿ ಮಾಡಲಾಗಿದೆ. ಇವು ನೆಲೆಯ ಪಶ್ಚಿಮ ಬಾಗದಲ್ಲಿ ಗಣನೀಯ ಸಂಖ್ಯೆಯಲ್ಲಿವೆ. ಇವು ಬೃಹತ್ ಶಿಲಾ ಸಂಸ್ಕೃತಿಗೆ ಸೇರರಿದವೆಂದು ಹೇಳಲು ಸದ್ಯಕ್ಕೆ ಖಚಿತ ಆಧಾರಗಳಿಲ್ಲ. ಈ ನೆಲೆಯ ಸಮೀಪ ಮತ್ತು ಇದರ ಸಮೀಪ ಬೆಟ್ಟದ ತಪ್ಪಲಿನ ತಳವಾರನ ಮೂಲೆ ಎಂಬ ಭಾಗದಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಜನವಾಸ್ತವ್ಯದ ನೆಲೆಗಳಿರುವುದನ್ನು ಗುರುತಿಸಲಾಗಿದೆ.

ಈ ಗ್ರಾಮದ ಸುತ್ತ ಮುತ್ತಲಿನ ಬಳೆಭಾವಿ, ಶಿವಪುರ, ಮಲ್ಲಾಪುರ, ಚಿಕ್–ರಾಮಾಪುರ, ಅಂಜನಹಳ್ಳಿ, ಆನೆಗೊಂದಿ, ಹಂಪಿ ಮುಂತಾದ ಗ್ರಾಮಗಳ ಬೆಟ್ಟದ ಸಾಲುಗಳಲ್ಲಿ ಚಿತ್ರಿತ ಗವಿಗಳು, ಬೃಹತ್ ಶಿಲಾ ಸಂಸ್ಕೃತಿಯ ಕಲ್ಮನೆಗಳು ಅಧಿಕವಾಗಿವೆ. ಹಿರೆಬೆನಕಲ್ಲಿನ ಗವಿಚಿತ್ರಗಳೆಲ್ಲವೂ ಕೆಮ್ಮಣ್ಣಿನ ಬಣ್ಣದವು. ಒಟ್ಟಾರೆ ಈ ಚಿತ್ರಗಳನ್ನು ಮೂರು ಮುಖ್ಯ ವರ್ಗಗಳನ್ನಾಗಿ ವಿಂಗಡಿಸಬಹುದು:

1. ನೆರಳಿನಾಕೃತಿಯ ಅಥವಾ ಬಾಹ್ಯ ರೇಖಾಕೃತಿಯ ಈ ಚಿತ್ರಗಳನ್ನು ಗವಿಒಳಗಿನ, ಅಕ್ಕಪಕ್ಕದ ಮತ್ತು ಚಾವಣಿಯ ಒರಟು ಮೇಲ್ಮೈಯ ಬಂಡೆಗಳ ಮೇಲೆ ಬಿಡಿಬಿಡಿಯಾಗಿ, ಬೇರೆಬೇರೆ ಕಾಲಘಟ್ಟಗಳಲ್ಲಿ ಬಿಡಿಸಲಾಗಿದೆ. ಚಿಕ್ಕಮಕ್ಕಳು ಸೇರಿದಂತೆ ಕೈ–ಕೈಹಿಡಿದುಕೊಂಡು ತಮ್ಮ ಸಂಪ್ರದಾಯದ ಕುಣಿತಕ್ಕೆ ಸಿದ್ಧರಾಗಿ ವೃತ್ತ ಅಥವಾ ನೇರಸಾಲಿನಲ್ಲಿ ನಂತ ಮನುಷ್ಯರ ಸಾಲು, ಕುದುರೆ ಸವಾರರು, ಕತ್ತಿ, ಬಿಲ್ಲು ಬಾಣ ಮುಂತಾದ ಆಯುಧಗಳನ್ನು ಹಿಡಿದು ನಿಂತವರು, ಪ್ರಾಣಿಗಳನ್ನು ಹಿಂಬಾಲಿಸುತ್ತಿರುವ ಕುದುರೆ ಮೇಲಿರುವ ಬೇಟೆಗಾರರು, ಸಂಭೋಗದಲ್ಲಿ ತೊಡಗಿರುವ ಜೋಡಿ, ಧಾರ್ಮಿಕ ಕಟ್ಟಳೆಗನುಗುಣವಾಗಿ ಮೈತುಂಬ ರೇಖಾಚಿತ್ರಗಳಿಂದ ಅಲಂಕೃತವಾಗಿ ವಿಶಿಷ್ಟ ಭಂಗಿಯಲ್ಲಿರುವ ನಗ್ನ ಮನುಷ್ಯ

2. ನವಿಲು, ಆನೆ, ಹುಲಿ, ಚಿರತೆ, ಜಿಂಕೆ, ಜಿಂಕೆಗಳ ಸಾಲು, ದನ, ಗೂಳಿ ಮುಂತಾದ ಪಶು–ಪಕ್ಷಿಗಳು; ಜನಸಮುದಾಯದ ಕಟ್ಟುಕಟ್ಟಳೆಗಳಿಗೆ ಸಂಬಂಧಿಸಿದ ವೈವಿಧ್ಯಮಯ ರೇಖಾಮಂಡಲಗಳು. ಇವಲ್ಲದೆ ಅಪರೂಪವಾಗಿ ಹಿರೆಬೆನಕಲ್ಲಿನ 2ನೆಯ ಕಲ್ಲಾಸರೆಯಲ್ಲಿ ಕಾಡಿನಲ್ಲಿ ಕರಡಿಯಿಂದ

ಹಿಂಬಾಲಿಸಲ್ಪಟ್ಟು ಜೀವಭಯದಿಂದ ಓಡುತ್ತಿರುವ ಮನುಷ್ಯನ ಚಿತ್ರ ತುಂಬ ಸಹಜವಾಗಿದೆ. 3ನೆಯ ಗವಿಯಲ್ಲಿ ಮೇಲೆ ಹೇಳಿದ ಮೈತುಂಬ ರೇಖಾಚಿತ್ರಗಳಿಂದ ಅಲಂಕೃತನಾದ, ಎರಡೂ ಕೈಗಳನ್ನು ಅರ್ಧಕ್ಕೆ ಮೇಲೆಕ್ಕೆತ್ತಿ ದೊಗ್ಗಾಲಿನಲ್ಲಿ ನಂತ, ಪ್ರಮಾಣಬದ್ಧ, ಸು. 2 ಕಿ.ಮೀ. ಎತ್ತರದ ನಗ್ನ ಮನುಷ್ಯನ ಚಿತ್ರ ತಲೆಯ ಮೇಲಿನ ಬಂಡೆಯ ಮೇಲಿದೆ. ಅಲ್ಲಿ ಅಷ್ಟು ಪ್ರಮಾಣಬದ್ಧವಾಗಿ ಚಿತ್ರವನ್ನು ಬಿಡಿಸಲು ಹೇಗೆ ಸಾಧ್ಯವಾಯಿತೆಂಬುದು ಕುತೂಹಲಕಾರಿಯಾದ ವಿಷಯ. ಜಿಂಕೆಗಳ ಸಾಲಿನಲ್ಲಿ ಎಲ್ಲ ಜಿಂಕೆಗಳೂ ಒಂದೆ ಪ್ರಮಾಣ ಮತ್ತು ಆಕಾರದಲ್ಲಿವೆ. ಒಂದು ಅಗಲವಾದ ದಪ್ಪ ಎಲೆಯಲ್ಲಿ ಜಿಂಕೆ ಆಕೃತಿಯನ್ನು ಕತ್ತರಿಸಿಕೊಂಡು ಅದನ್ನು ಬಂಡೆಯ ಮೇಲಿಟ್ಟುಕೊಂಡು ಒಂದರ ಪಕ್ಕದಲ್ಲೊಂದರಂತೆ ಬಿಡಿಸಿರಬೇಕೆಂದು ಕಾಣುತ್ತದೆ. ಈಗಿನ ಕಾಲದಲ್ಲಿ ಸ್ಟೆನ್ಸಲ್ ಉಪಯೋಗಿಸಿಕೊಂಡು ಬರೆದಂತೆ. ಇನ್ನೋದರಲ್ಲಿ ತಲೆಗೆ ವಿಶಿಷ್ಟವಾದ ಟೋಪಿಯನ್ನು ಹಾಕಿಕೊಂಡ ಒಬ್ಬ ನಗ್ನ ವ್ಯಕ್ತಿ ಸಾಮಾಜಿಕ ಕಟ್ಟಳೆಯಲ್ಲಿ ತೊಡಗಿದಂತೆ ಕಾಣುತ್ತದೆ. ಇವನ ಬದಿಯಲ್ಲಿ ಸಂಕಲನ ಚಿಹ್ನೆಯುಳ್ಳ ವೃತ್ತವಿದೆ. ಈ ಪ್ಕರಾದ ಸಂಕೇತ ಸಿಂಧೂ ಲಿಪಿಯಲ್ಲೂ ಇದೆ. ರೇಖಾ ಚಿತ್ರಗಳಲ್ಲಿ ಒಂದು



ಹಿರೇಬೆನಕಲ್ ಸಮಾಧಿಯೊಳಗಿನ ಭಿತ್ತಿ ಚಿತ್ರಗಳು


ಮೂಲೆಯಲ್ಲಿ ಮತ್ತು ಬಾಹುಗಳ ಮಧ್ಯದಲ್ಲಿ ಗುಣುಸುಗಳುಳ್ಳ ಒಂದನ್ನೊಂದು ಛೇದಿಸುವ ಎರಡು ಚತುರ್ಭುಜಾಕೃತಿ, ಮೂರು ಸಾಲಿನ ಒಂಬತ್ತು ಚುಕ್ಕೆಗಳನ್ನು ಉದದ ಅಡ್ಡಗೆರೆಗಳಿಂದ ಸೇರಿಸಿ

ಉಂಟಾದ ನಾಲ್ಕು ಚತುರ್ಭುಜಗಳಲ್ಲಿ ಒಂದನ್ನೊಂದು ಛೇದಿಸುವ ಕರ್ಣರೇಖೆಗಳ ಮಂಡಲಗಳಿವೆ. ಇವು ಕೂಡ ಹರಪ್ಪ ಮುದ್ರಿಕೆಗಳಲ್ಲಿವೆ. ಹೀಗೆ ಆಯಾಯ ಕಾಲದ ಜನಸಮುದಾಯದ ಕಸುಬು, ಸಾಮಾಜಿಕ ಕಟ್ಟುಕಟ್ಟಲೆಗಳು, ಮನರಂಜನೆ, ಪರಿಸರ, ಜನರ ಸೌಂದರ್ಯ ಪ್ರಜ್ಞೆ, ವರ್ಣಚಿತ್ರಕಲೆ ಮುಂತಾದ ಸ್ವಾರಸ್ಯಕರ ವಿಷಯಗಳಿಂದ ಈ ಗವಿಚಿತ್ರಗಳು ಅರ್ಥಪೂರ್ಣ ಹಾಗೂ ಮಹತ್ವದ್ದಾಗಿವೆ.



ಹಿರೇಬೆನಕಲ್ ಸಮಾಧಿಯೊಳಗಿನ ಭಿತ್ತಿ ಚಿತ್ರಗಳು

ಒಂದನೆಯ ಗವಿಯ ಪೂರ್ವಬದಿಯಲ್ಲಿ ಒಂದೇ ಮುಂಡದಲ್ಲಿ ಪರಸ್ಪರ ಅಭಿಮುಖವಾಗಿ ನಿಂತಿರುವ ದನಗಳ ಚಿತ್ರ ವಿಶೇಷವೆನಿಸುತ್ತದೆ. ದಕ್ಷಿಣಬದಿಯಲ್ಲಿ ಪರಸ್ಪರ ಕೈ, ಕೈಹಿಡಿದು ಸಾಲಾಗಿ ನಂತು ನೃತ್ಯ ಮಾಡುತ್ತಿರುವ 10 ಜನರ, 13 ಜನರ ತಂಡಗಳ ಚಿತ್ರಗಳು ಆ ಕಾಲದ ಸಾಮಾಜಿಕ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಮೂಹ ನೃತ್ಯದಲ್ಲಿ ತಲೆಯಲ್ಲಿ ಸಣ್ಣ ಸಣ್ಣ ಗೆರೆಗಳನ್ನು ಎಳೆದು ಅವರನ್ನು ಸ್ತ್ರೀಯರೆಂದು ಸೂಚಿಸಿರುವುದು ಕಲಾವಿದರ ರೂಪಗ್ರಹಿಕೆಗೆ ಸಾಕ್ಷಿಯಾಗಿದೆ. ಚಿತ್ರಗಳಲ್ಲಿ ಸವಾರರು ಕೊಡಲಿಗಳನ್ನು ಹಿಡಿದಿರುವುದು ಹುಲಿಯೊಂದಕ್ಕೆ ಭಲ್ಲೆ ಎಸೆಯುತ್ತಿರುವ ಮನುಷ್ಯ ಚಿತ್ರಗಳು ಬೇಟೆಗಾರಿಕೆಯನ್ನು ತಿಳಿಸುತ್ತವೆ. ಎರಡನೆಯ ಕಲ್ಲಾಸರೆಯ ಚಿತ್ರಿತಭಾಗ ಸು.20ಮೀ. ಅಗಲ ಮತ್ತು 18ಮೀ. ಎತ್ತರವಾಗಿದ್ದು, ಉಳಿದೆಲ್ಲ ಚಿತ್ರಗಳಿಗಿಂತ ಅತ್ಯಂತ ದೊಡ್ಡ ಪ್ರಮಾಣದಲ್ಲಿದೆ. ಇಲ್ಲಿ ಮೇಲೆ ಮತ್ತು ಕೆಳಗೆ ಎರಡು ಬೃಹತ್ ಹೆಬ್ಬಾವುಗಳನ್ನು ಮನುಷ್ಯರು ಬೇಟೆಯಾಡುತ್ತಿರುವ ಚಿತ್ರಗಳಿವೆ. ಹೆಬ್ಬಾವುಗಳಲ್ಲಿ ಅರೆವೃತ್ತಾಕಾರದ ತಲೆ



ಹಿರೇಬೆನಕಲ್ ಸಮಾಧಿಯೊಳಗಿನ ಭಿತ್ತಿ ಚಿತ್ರಗಳು

(ಹೆಡೆ) ಆದರಲ್ಲಿ ಎರಡು ಕಣ್ಣು, ಬಾಯಿಯಿಂದ ಹೊರಬಂದ ಸೀಳುನಾಲಗೆ, ದಪ್ಪನಾದ ದೇಹ ಮತ್ತು ಬಾಲ ಎಲ್ಲ ಅಂಗಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಈ ಹೆಬ್ಬಾವುಗಳ ಮೇಲೆಲ್ಲಾ ಕೆಲವು ಮನುಷ್ಯರು ನಿಂತು ತುಳಿಯುತ್ತಿರುವಂತಿದೆ. ಸುತ್ತೆಲ್ಲ ಗರ್ಭಿಣಿ, ಸ್ತ್ರೀ, ಹಸು, ಹಂದಿಯ ಚಿತ್ರಗಳಿವೆ. ಈವರೆಗೆ ತಿಳಿದಂತೆ ಮಧ್ಯಪ್ರದೇಶದ ರಾಯ್‌ಸೇ ಜಿಲ್ಲೆಯ ಗೋರಾಗಂಜ್‌ನ ಸನಕುಸ್ ಮತ್ತು ಭಾಗವಾನ ನದಿಗಳ ನಡುವೆ ಇರುವ ಜವರ ಕಲ್ಲಾಸರೆಯ 306.ಮೀ. ಉದ್ದದ ಕೋಣದ ಚಿತ್ರವನ್ನು ದೇಶದ ಪ್ರಾಗಿತಿಹಾಸ ಕಾಲದ ಅತ್ಯಂತ ದೊಡ್ಡ ಚಿತ್ರವೆಂದು ತಿಳಿಯಲಾಗಿತ್ತು. ಆದರೆ, 12 ಮೀ. ಉದ್ದ ಹಿರೆಬೆನಕಲ್ಲಿನ 2ನೇ ಕಲ್ಲಾಸರೆಯ ಹೆಬ್ಬಾವಿನ ಚಿತ್ರಗಳೇ ದೇಶದ ಅತಿ ದೊಡ್ಡ ಚಿತ್ರಗಳೆಂದು ಗುರುತಿಸಲಾಗಿದೆ.

ನಾಲ್ಕನೆಯ ಗವಿಯಲ್ಲಿ ಎರಡು ಕಾಲುಗಳನ್ನು ಸೊಟ್ಟಗೆ ಮಾಡಿನಂತ ಪುರಷನ ನಗ್ನ ಚಿತ್ರವಿದೆ. ಎರಡು ಕೈಗಳನ್ನು ಅರ್ಧಮೇಲಕ್ಕೆತ್ತಿದ್ದು ಹಸ್ತ, ಕಣ್ಣು, ಕಿವಿಗಳನ್ನು ತೋರಿಸಿಲ್ಲ. ಶಿಶ್ನವನ್ನು ಬಿಡಿಸಲಾಗಿದೆ. ಮೈತುಂಬ ತ್ರಿಕೋನಾಕರಾದ ವಜ್ರಾಕೃತಿಯ ರೇಖೆಯನ್ನು ಎಳೆಯಲಾಗಿದೆ. ಇದು ಮಾಂತ್ರಿಕ ಆಚರಣೆಯಲ್ಲಿ ನಿರತನಾದ ಮನುಷ್ಯನ ಚಿತ್ರವೆಂದು ಗುರುತಿಸಬಹುದು. ನಾಲ್ಕನೆಯ ಗವಿಯಲ್ಲಿ ಚಿತ್ರಗಳು ಸಾಕಷ್ಟು ಮಾಸಿದ್ದು, ನವಿಲು, ಅಶ್ವ ಸವಾರರು, ಚಿಗರೆಯ ಚಿತ್ರಗಳಿವೆ. ಐದನೆಯ ಗವಿಯ ಮನುಷ್ಯ ಚಿತ್ರವೊಂದು ಗಮನಸೆಳೆಯುತ್ತದೆ. ಡೊಂಕು ಡೊಂಕಾದ ಕೋಡುಗಳುಳ್ಳ ಜಿಂಕೆಗಳ ಹಿಂಡಿನ ಮಧ್ಯ ಅವನು ನಿಂತಿದ್ದು, ತಲೆಗೆ ಜಿಂಕೆ ರೀರಿಯ ಕೋಡುಗಳನ್ನು ಮತ್ತು ಸೊಂಟಕ್ಕೆ ಬಾಲವನ್ನು ಕಟ್ಟಿಕೊಂಡಿದ್ದಾನೆ. ಸೂಕ್ಷ್ಮಗ್ರಹಿಕೆಯ ಪ್ರಾಣಿಗಳಾದ ಜಿಂಕೆಗಳನ್ನು ಅವುಗಳಂತೆಯೇ ನಟಿಸಿ ಆಹಾರಕ್ಕಾಗಿ ಸೆರೆ ಹಿಡಿಯುವ ತಂತ್ರವಾಗಿರಬಹುದೆಂದು ಈ ಚಿತ್ರವನ್ನು ಗ್ರಹಿಸಬಹುದಾಗಿದೆ. ಆರನೆಯ ಗವಿಯಲ್ಲಿ ಬಿಲ್ಲ ಬಾಣಗಳನ್ನು ಹಿಡಿದ ಮನುಷ್ಯರ, ಭರ್ಜಿಗಳನ್ನಿಡಿದ ಅಶ್ವಸವಾರರ, ಕೆಚ್ಚಲುಳ್ಳ ಆಕಳು, ನವಿಲು, ಗೂಳಿಗಳ ಚಿತ್ರಗಳಿವೆ. ಇಲ್ಲಿ ಒಬ್ಬ ಕುದುರೆ ಸವಾರನ್ನು ಚಿಗರಿಯನ್ನು ಹಿಡಿಯಲು ಪ್ರಯತ್ನಿಸುತ್ತಿರುವ ಹುಲಿಯ ಕಡೆಗೆ ಬಿಲ್ಲಿಗೆ ಹೂಡಿದ ಬಾನದಿಂದ ಹೊಡೆಯುತ್ತಿರುವಂತಿದೆ.

ಏಳನೆಯ ಗವಿ ಇರುವ ಭಾಗಕ್ಕೆ ಮ್ಯಾದರಬಂಡೆ ಎಂದು ಹೆಸರು. ಇಲ್ಲಿ ಕೆಲವು ಗೂಳಿಗಳ, ನವಿಲಿನ ಚಿತ್ರಗಳು, ಎಂಟರಲ್ಲಿ ಹುಲಿಗಳ, ಒಂಬತ್ತರಲ್ಲಿ ಹುಲಿ ಮತ್ತು ರೇಖಾಕೃತಿಗಳ, ಹತ್ತರಲ್ಲಿ ಹಿಡಿಕೆಯುಳ್ಳ ಉದ್ದ ಕತ್ತಿಗಳನ್ನು, ಬಿಲ್ಲು ಬಾಣಗಳನ್ನು ಹಿಡಿದುಕೊಂಡು ನಂತ ಮನುಷ್ಯರ ಚಿತ್ರಗಳಿವೆ. ಹನ್ನೊಂದನೆಯ ಗವಿಯಲ್ಲಿ ಕೈ–ಕೈಹಿಡಿದು ನೃತ್ಯ ಮಾಡುತ್ತಿರುವ ಮನುಷ್ಯರ ನೇರ ಹಾಗೂ ವೃತ್ತಸಾಲುಗಳಿವೆ. ಆಯಾ ಮನುಷ್ಯ ಚಿತ್ರಗಳ ಕೆಲಗೆ ನೇರವಾಗಿ ಮತ್ತು ದ್ವಿಅರೆ ವೃತ್ತಾತಕಾರದ ಗೆರೆಗಳಿವೆ. ಮನುಷ್ಯ ಜೋಡಿಯ ಸಂಭೋಗ, ಗೂಳಿಗಳ ಮತ್ತು ಜಿಂಕೆಗಳ ಸಾಲು ಚಿತ್ರಗಳು ಕೂಡ ಇಲ್ಲಿವೆ.

ಹನ್ನೆರಡನೆಯ ಗವಿಯಲ್ಲಿ ಕೈ-ಕೈ ಹಿಡಿದುಕೊಂಡು ಸಾಲಾಗಿ ನಿಂತು ನೃತ್ಯಮಾಡುತ್ತಿರುವ 27 ಜನರ ತಂಡದ ಚಿತ್ರ, ಅರ್ಧಚಂದ್ರಾಕೃತಿಯ ಗೆರೆಯ ಮೇಲೆ ನಂತ ಹನ್ನೆರಡು ಜನರ ಮತ್ತೊಂದರಲ್ಲಿ ಒಬ್ಬ ಮನುಷ್ಯ ಒಂದು ಗೂಳಿಯನ್ನು ಚಪ್ಪರಿಸುತ್ತಿರುವ ಚಿತ್ರಗಳಿವೆ. ಇನ್ನೊಂದೆಡೆ ಇಪ್ಪತ್ಮೂರು ಕುದುರೆ ಸವಾರರ ಸಾಲು. ಹದಿನಾಲ್ಕು ಜಿಂಕೆಗಳ ಸಾಲು, ಆಯುಧ ಪ್ರಾಣಿಯಾದ ಮನುಷ್ಯನ ಚಿತ್ರಗಳಿವೆ. ಹದಿಮೂರನೆಯ ಗವಿಯಲ್ಲಿ ಎತ್ತುಗಳ, ಜಿಂಕೆಗಳ ಚಿತ್ರಗಳಿವೆ. ಹದಿನಾಲ್ಕನೆಯ ನೆಲೆ ಬೃಹತ್ ಶಿಲಾಸಮಾಧಿಗಳ ಕೋಣೆಗಳಿರುವ ಸ್ಥಳದಲ್ಲಿದೆ. ಇಲ್ಲಿಯ ಒಂದು ಶಿಲಾ ಕೋಣೆಯ ಹಲಗೆಗಳ ಮೇಲೆ ತಿಳಿ ಕೆಂಪುವರ್ಣದ ಮೂರು ಜಿಂಕೆಗಳ ಚಿತ್ರಗಳಿವೆ. ಹದಿನೈದನೆಯ ಕಲ್ಲಾಸರೆಯಲ್ಲಿ ಅರ್ಥವಾಗದ ಒಂದು ವಿಶಿಷ್ಟವಾದ ಆಕೃತಿ ಇದೆ. ಹದಿನಾರರಲ್ಲಿ ಮೀನು ಮತ್ತು ಮನುಷ್ಯನ ಚಿತ್ರಗಳಿವೆ. ಐದು ಉಡಗಳಿದ್ದು ದೇಹದ ಮೇಲೆಲ್ಲಾ ಅನೇಕ ವಜ್ರಾಕೃತಿಯ ರೇಖೆಗಳಿವೆ. ಮೀನಿನ ದೇಹದ ಅಕ್ಕಪಕ್ಕಗಳಲ್ಲಿ ರೆಕ್ಕೆಗಳನ್ನು ಬಿಡಿಸಲಾಗಿದೆ. ಹದಿನೇಳನೆಯ ಗವಿಯಲ್ಲಿ ಮನುಷ್ಯ ಹಾಗೂ ಹಲ್ಲಿಯಾಕಾರದ ಎರಡು ಆಕೃತಿಗಳಿವೆ. ಮನುಷ್ಯಾಕೃತಿ 5ಮೀ. ಉದ್ದವಿದ್ದು ತ್ರಿಕೋನಾಕಾರದ ತಲೆ, ಬೆನ್ನು ಬಾಗಿಸಿದ ಭಂಗಿಯಲ್ಲಿದೆ. ಎಡಗೈ ತುಂಡಾದಂತೆ ಇದೆ. ಮೈಮೇಲೆಲ್ಲಾ ಅಡ್ಡಗೆರೆಗಳಿದ್ದು, ಹೊಟ್ಟೆಯಲ್ಲಿ ಅದೇ ಆಕಾರದ ಚಿಕ್ಕ ಮನುಷ್ಯಾಕೃತಿ ಇದೆ. ಹಲ್ಲಿಯಾಕಾರದ ಇನ್ನೊಂದು ಚಿತ್ರ 7 ಮೀ. ಉದ್ದವಾಗಿದ್ದು ವೃತ್ತಕಾರದ ತಲೆ, ಮುಂಡ, ಉದ್ದವಾದ ಬಾಲಗಳಿವೆ. ಇಲ್ಲಿನ ಗವಿ ವರ್ಣಚಿತ್ರಗಳು ಕಾಲಮಾನದ ದೃಷ್ಟಿಯಿಂದ ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ಕಾಲಕ್ಕೆ ಸೇರುತ್ತವೆ. ಚಿತ್ರಿತ ಗವಿಗಳ ಸುತ್ತಮುತ್ತಲ ಸಾಂಸ್ಕೃತಿಕ ಪರಿಸರ, ಚಿತ್ರಗಳ ಶೈಲಿ. ಪ್ರಮಾಣ, ಕಾಲನಿರ್ಧರಿತ ಚಿತ್ರಗಳೊಡನೆ ಹೋಲಿಕೆ ಮುಂತಾದ ಅಂಶಗಳನ್ನು ಅನುಲಕ್ಷಿಸಿ ಇಲ್ಲಿಯ ಚಿತ್ರಗಳು ಪ್ರಾಯಶಃ ಬೃಹತ್ ಶಿಲಾಯುಗದ-ಆದಿ ಮಧ್ಯ (ಪ್ರ.ಶ.ಪೂ.ಸು. 1000-500) ಭಾಗಕ್ಕೆ ಸೇರುತ್ತವೆ ಎಂದು ಅ.ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಚಿತ್ರಗಳು ವಿಷಯ ವೈವಿಧ್ಯತೆ ಹಾಗೂ ತಾಂತ್ರಿಕ ದೃಷ್ಟಿಯಿಂದ ಗಮನಸೆಳೆಯುತ್ತವೆ. ಪ್ರಾಣಿ ಚಿತ್ರಗಳು ಪ್ರಧಾನವಾಗಿದ್ದರೂ ಮನುಷ್ಯ ಚಿತ್ರಗಳೇನೂ ವಿರಳವಾಗಿಲ್ಲ. ಪ್ರಾಣಿಗಳಲ್ಲಿ ಜಿಂಕೆ, ಹಸು, ಗೂಳಿ, ಹುಲಿ, ನಾಯಿ, ಕೋಣ, ಕುದುರೆ, ನವಿಲು, ಹಾವು, ಉಡ, ಮೀನು ಹೀಗೆ ವೈವಿಧ್ಯತೆ ಕಂಡುಬರುತ್ತದೆ. ಮನುಷ್ಯ ಚಿತ್ರಗಳಲ್ಲಿ ಬಿಡಿ ಮತ್ತು ಗುಂಪುಗಳಿವೆ. ಗುಂಪು ಚಿತ್ರಗಲಲ್ಲಿ ಕೈ-ಕೈಹಿಡಿದುಕೊಂಡು ಸಾಲಾಗಿ ನಿಂತು ನರ್ತಿಸುತ್ತಿರುವ ಸ್ತ್ರೀ-ಪುರಷರನ್ನೊಳಗೊಂಡ ತಂಡಗಳು ಹೆಚ್ಚಾಗಿವೆ. ಇವುಗಳಲ್ಲಿ 4-27 ಜನರಿದ್ದಾರೆ. ಜೊತೆಗೆ ಪಶುಪಾಲನೆ, ಬೇಟೆಗಾರಿಕೆಯಂತಹ ದೃಶ್ಯಚಿತ್ರಗಳೂ ಇವೆ. ಚಿತ್ರಗಳು ಸಂಖ್ಯಾತ್ಮಕವಾಗಿ ವಿಪುಲವಾಗಿರುವಂತೆ ಅವುಗಳ ಅಳತೆಯಲ್ಲಿ ವೈವಿಧ್ಯತೆ ಇಲ್ಲ. ಚಿಕ್ಕ ಚಿಕ್ಕ ಚಿತ್ರಗಳ ಜೊತೆಗೆ 5-12ಮೀ. ವರೆಗಿನ ಬೃಹತ್ ಪ್ರಮಾನದ

ಚಿತ್ರಗಳಿರುವುದು ಹಿರೆಬೆನಕಲ್ಲಿನ ವೈಶಿಷ್ಟ್ಯ. ವಿಶೇಷವೆಂದರೆ ಇಲ್ಲಿಯ 17ನೆಯ ಚಿತ್ರಗಳನ್ನು ದೇಶದ ಪ್ರಾಗಿತಿಹಾಸ ಕಾಲದ ಗವಿವರ್ಣ ಚಿತ್ರಗಳಲ್ಲೇ ಅತ್ಯಂತ ಬೃಹತ್ ಪ್ರಮಾಣದ ಚಿತ್ರಗಳೆಂದು ಗುರುತಿಸಬಹುದು.

ಅಧ್ಯಾಯ – 2

ಸ್ಮಾರಕಗಳ ಉಗಮ ಮತ್ತು ವಿಕಾಸ

ಗತಿಸಿ ಹೋದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಗುರುತಿಗಾಗಿಯೇ, ಮಡಿದವನ ಸ್ಮರಣೆ ಬರುವಂತೆಯೋ, ಕೆಲವಾರು ಸಂಕೇತಗಳನ್ನೋ, ಗುರುತುಗಳನ್ನೋ ಒಂದು ನಿಗದಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು, ಇವು ಸಾಮಾನ್ಯವಾಗಿ ಆಯಾ ದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ ಪ್ರತಿಷ್ಠೆಗಳನ್ನನುಸರಿಸಿಯೇ ಬೆಳೆದಿದೆ. ಬೃಹದಾಕಾರದ ಪಿರಮಿಡ್ಡುಗಳಿಂದ ಹಿಡಿದು ಸಣ್ಣ ಪುಟ್ಟ ಕಲ್ಲುಗಳವರೆಗೂ ಇವುಗಳ ವ್ಯಾಪ್ತಿಯನ್ನು ಗುರುತಿಸಬಹುದು. ಹಾಗೆಯೇ ಪ್ರಾಗೈತಿಹಾಸಿಕ ಕಾಲದ ಕಲ್ಲಿನ ಮನೆಗಳಿಂದ ಹಿಡಿದು ಅಮೃತ ಶಿಲೆಗಳಿಂದ ನಿರ್ಮಿಸಿದ ಉನ್ನತ ನಾಗರಿಕತೆಯ ಶ್ರೇಷ್ಠ ವಾಸ್ತುವಿನವರೆಗೂ ಇದರ ವೈಭವವನ್ನು ಗುರುತಿಸಬಹುದು. ಈ ಕಾರಣದಿಂದ ಸ್ಮಾರಕಗಳು ಮಾನವನ ಜೀವನ ವಿಧಾನವನ್ನೂ ಜೀವನದ ಬಗ್ಗೆ ಅವನಗಿರುವ ಧೋರಣೆಯನ್ನೂ, ಅಂದಿನ ಅವನ ನಾಗರಿಕತೆ ಮತ್ತು ಸಂಸ್ಕೃತಿಯನ್ನೂ ತಿಳಿಸಿ ಕೊಡುವ ಪುರಾವೆಗಳಾಗಿವೆ.

ಎಲ್ಲಾ ಸ್ಮಾರಕಗಳು ಸತ್ತ ವ್ಯಕ್ತಿಯ ನೆನಪನುಂಟು ಮಾಡಲು ಇರುವ ಸಂಕೇತಗಳು: ಸತ್ತ ವ್ಯಕ್ತಿಯ ನೆನಪನ್ನು ಘನೀಭವಿಸಿ ಅಭಿವ್ಯಕ್ತಿಗೊಳಿಸುವ ಸಾಧನಗಳು. ಇದಕ್ಕೆ ಕಾರಣವೆಂದರೆ ಈ ಎಲ್ಲ ಸಾಧನೆಗಳು ಆಯಾ ವರ್ಗಕ್ಕನುಗುಣವಾಗಿ ಮಾಡಿಕೊಂಡ ನಿರ್ದಿಷ್ಟವಾದ ಸಂಕೇತಗಳಾಗಿದ್ದು, ಅವು ಪರಂಪರಾಗತವಾಗಿ ಒಪ್ಪಿಕೊಂಡಂತವು ಎಂಬುದು. ಇವೆಲ್ಲವೂ ಮತ್ತೆ ಮತ್ತೆ ಅದೇ ಸಂದರ್ಭದಲ್ಲಿ ಅದೇ ಸನ್ನಿವೇಶಗಳಲ್ಲಿ ಉಪಯೋಗಿಸಲ್ಪಡುವುವು., ಆಗಲೇಹೇಳಿದಂತೆ ಈ ಎಲ್ಲ ಸಂಕೇತಗಳು ಸಾರ್ವತ್ರಿಕ ಅಲ್ಲ: ಆಯಾ ಸಂಸ್ಕೃತಿಗಳ. ಜನರ ನಂಬಿಕೆ ಮತ್ತು ಕಲ್ಪನೆ, ಪರಿಸರಗಳನ್ನು ಅವಲಂಬಿಸಿ ಇರುವಂಥವು.

ಸ್ಮಾರಕ ಶಿಲೆಗಳನ್ನು ನೆಡುವುದಕ್ಕಾಗಿ ಕರ್ತನಿಂದಲೇ ಅಗೆಯಲ್ಪಟ್ಟ ಸತ್ತವನ ಗುಣಿಯಲ್ಲಿ ಸಂಬಂಧಿಗಳು ಅನ್ನ, ಹಣ, ಉಂಗುರ ಮುಂತಾದವುಗಳನ್ನು ತಮ್ಮ ಶಕ್ತ್ಯಾನುಸಾರ ಹಾಕುತ್ತಾರೆ. ಆನಂತರ ಕಲ್ಲನ್ನು

ಹೊತ್ತು ತಂದವರೇ ಅದನ್ನು ಗುಣಿಯಲ್ಲಿ ನಲ್ಲುವ ಹಾಗೆ ಮಾಡುತ್ತಾರೆ. ಇಲ್ಲಿಯೇ ಕರ್ತನು ಹಾಗೂ ಹೆಂಗಸರು ಅವನಿಗೆ ಆಹಾರವನ್ನು ಅರ್ಪಿಸುತ್ತಾರೆ. ಆನಂತರ ಈ ಜನರೆಲ್ಲ ಮನೆಗೆ ಬಂದು ಒಂದೆರಡು ಹಸುಗಳನ್ನು ಬಲಿ ಕೊಡುತ್ತಾರೆ. ತನಗೆ ಬಲಿ ಕೊಡಬೇಕಾದ ಹಸುಗಳನ್ನು ವ್ಯಕ್ತಿ ಸಾಯುವುದಕ್ಕಿಂತ ಮುನ್ನವೇ ಆಯ್ಕೆ ಮಾಡಿಕೊಂಡಿರುತ್ತಾನೆ. ಅವರು ಅದರ ಕರುಳನ್ನು ತೆಗೆದು ಅನ್ನದಲ್ಲಿ ಬೇಯಿಸಿ ನಾಲ್ಕು ಭಾಗಗಳನ್ನಾಗಿ ಮಾಡಿ ಸತ್ತವನಿಗೆ, ಭೂದೇವಿಗೆ ಹಾಗೂ ತಮಗಿಂತ ಹಿಂದೆ ಇತರರು ಹಾಕಿದ ಸ್ಮಾರಕ ಶಿಲೆಗಳ ಮುಂದೆ ಹಾಕುತ್ತಾರೆ.

ಇದೇ ರೀತಿಯ ಸಂಸ್ಕಾರ ವಿಧಿಯನ್ನು ಸಂಗಮ ಕಾಲದ ತಮಿಳು ಸಾಹಿತ್ಯ ಕೃತಿಗಳಲ್ಲಿ ಕಾಣಬಹುದಾಗಿದೆ. ಆದರೆ ಅವು ವೀರರಿಗೆ ಮತ್ತು ಮಹಾಸತಿಯರಿಗೆ ಇತರ ಶ್ರೇಷ್ಠ ವ್ಯಕ್ತಿಗಳಿಗೆ ಹಾಕುವ ಸ್ಮಾರಕ ಶಿಲೆಗಳಾಗಿವೆ. ಆ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿಶದವಾಗಿ ಚರ್ಚಿಸಲಾಗಿದೆ.

ಈ ರೀತಿಯ ಸ್ಮಾರಕ ಶಿಲೆಗಳನ್ನು ಸಾಲುಸಾಲಾಗಿ ದುಂಡಾಗಿ, ಲಾಳಾಕಾರವಾಗಿ ಮಣಿಮರದ ನಾಗಾ ಜನಾಂಗದವರು ತಮ್ಮ ವಂಶದ ಹಿರಿಯರಿಗೆ ನೆಡುತ್ತಾರೆ. ಭಿಲ್ಲ ಜನಾಂಗದವರು. ತಮ್ಮಲ್ಲಿನ ಮುಖ್ಯಸ್ಥನಿಗೆ 'ದೇವಸ್ಥಾನ'ವನ್ನು ಅವನ ಸ್ಮಾರಕವಾಗಿ ಮಾಡುತ್ತಾರೆ.

ಈ ರೀತಿ ಸ್ಮಾರಕಗಳನ್ನು ಹಾಕುವ ಪದ್ಧತಿ ಮತ್ತು ಶವ ಸಂಸ್ಕಾರದ ರೀತಿಗಳು ಕಾಲಾನುಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ. ಪ್ರಾಗ್ಐತಿಹಾಸಿಕ ಕಾಲದಿಂದ ಆ ಜನಾಂಗದವರ ನಂಬಿಕೆ, ಧರ್ಮ ಮತ್ತು ಸನ್ನಿವೇಶಗಳೊಂದಿಗೆ ಬೆಳೆದು ಬಂದವು. ಆದರೆ ಮೂಲಭೂತವಾದ ಈ ಪದ್ಧತಿಗಳು ತಮ್ಮ ಆಶಯಗಳನ್ನೂ ವಿಶಿಷ್ಟತೆಗಳನ್ನೂ ಉಳಿಸಿಕೊಂಡು ಹೆಚ್ಚಿನ ಅರ್ಥವ್ಯಾಪ್ತಿಯನ್ನು ಪಡೆದವು ಎಂಬುದು ಗಮನಸಬೇಕಾದ ಅಂಶ.

ಅಂದರೆ ಭೂತ, ಪ್ರೇತಗಳ ಬಗ್ಗೆ ಇದ್ದ ಪ್ರೇತಾತ್ಮನಿಗೆ ಅವಶ್ಯವಾದ ಅನುಕೂಲಗಳನ್ನು ಒದಗಿಸುವ ಮತ್ತು ಅವುಗಳ ಒಂದು ಕಡೆ ಇದ್ದು ರಕ್ಷಣೆಯನ್ನು ಪಡೆಯುವ ಸಾಧನವಾಗಿ ಈ ಶಿಲೆಗಳು ಹುಟ್ಟಿಕೊಂಡವು. ಆನಂತರದಲ್ಲಿ ಮೃತನ ಆತ್ಮವು ಆ ಶಿಲೆಯಲ್ಲಿ ನೆಲೆಸಿರುವುದೆಂಬ ನಂಬಿಕೆಯ ಮೇಲೆ ಅದನ್ನು ಆರಾಧಿಸಲು ಆರಂಭಿಸಿದರು. ಇದೇ ಶಿಲೆಗಳು ಕಾಲಾನುಕ್ರಮದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳ ಪ್ರಭಾವದಿಂದಾಗಿ ಸತ್ತ ವ್ಯಕ್ತಿಗಳ ಸ್ಮಾರಕಗಳಾಗಿಯೋ, ಅವನ ಸಾವನ್ನು ತಿಳಿಸುವ ದಾಖಲೆಗಳಾಗಿಯೋ ಪರಿಣಮಿಸಿದವು.

ಸಮಾಧಿ ಪೆಟ್ಟಿಗೆಗಳು







ಬಹುಪಾಲು ಸ್ಮಾರಕಗಳು ಕಲ್ಲುಗಳೇ ಆಗಿರುವುದನ್ನು ಗಮನಿಸಬಹುದು. ಈ ಹಿಂದೆ ನಾವು ಗಮನಿಸಿರುವಂತೆ ಕಲ್ಲುಗಳಲ್ಲಿ ಮೃತನ ಆತ್ಮ ರಕ್ಷಣೆ ಪಡೆಯುವುದೆಂಬ ನಂಬಿಕೆ ಇದ್ದಿತು. ಶಿಲೆಗಳ ಆರಾದನೆ ವಿಶೇಷವಾದ ಮಹತ್ವವನ್ನು ಪಡೆಯುವುದಕ್ಕೆ ಕಾರಣ, ಇವು ಎಲ್ಲಾ ಪ್ರದೇಶಗಳಲ್ಲಿ ಸುಲಭವಾಗಿಯು ತಮ್ಮ ಸಹಜ ಆಕೃತಿಗಳಿಂದಲೆ ಜನರಲ್ಲಿ ಒಂದು ಭಾವನೆಯನ್ನು ಮೂಡಿಸುವಂತೆಯೂ ದೊರೆಯುತ್ತವೆ ಎಂಬುದು. ಸ್ಮಾರಕವಾಗಿ ನಡೆಯಬೇಕಾದ ಶಿಲೆ ಹೀಗೆ ಇರಬೇಕೆಂಬ ನಿಯಮ ಆಯಾ ಜನಾಂಗ ಮತ್ತು ಆ ಜನಾಂಗದ ಸಂಸ್ಕೃತಿಯನ್ನು ಅನುಸರಿಸುತ್ತದೆಯೇವಿವಾ ಸಾರ್ವತ್ರಿಕವಲ್ಲ. ಭಾರತದ ಪ್ರತಿಯೊಂದು ಹಳ್ಳಿಗಳಲ್ಲಿಯೂ ಪೂಜೆಗೊಳಗಾದ ಒಂದಾಲ್ಲ ಒಂದು ಕಲ್ಲು ಇದ್ದೇ ಇರುತ್ತದೆ. ಅದು ಇಂಥದ್ದನ್ನೇ ಪ್ರತಿನಿದಿಸುತ್ತದೆ. ಎಂದು ಖಚಿತವಾಗಿ ಹೇಳಲಾಗುವುದಿಲ್ಲ ಆ ಕಲ್ಲನ್ನು ಆರಾಧಿಸುವ ಜನ ಅದಕ್ಕೆ ಯಾವ ಐತಿಹ್ಯವನ್ನು ಆರೋಪಿಸುತ್ತಾರೆಯೋ ಅ ಕಲ್ಲಿನ ಐತಿಹ್ಯವಾಗಿರುತ್ತದೆ. ಆ ಐತಿಹ್ಯದ ಕಲ್ಲು ಒಂದು ಸಂಕೇತ ಮಾತ್ರ ಈ ತೆರನ ಸಂಕೇತಗಳು ದೇವತೆಗಳ, ಗ್ರಾಮ ದೇವತೆಗಳ ಕ್ಷೇತ್ರ ಪಾಲಕರ ಪೂರ್ವಜರ ಅಥವಾ ಕಾಲ ಗರ್ಭದಲ್ಲಿ ಅಡಗಿ ಹೋದ ಅನ್ಯಾಯದ ಮೂಕ ಸಾಕ್ಷಿಯೂ ಆಗಿರಬಹುದು.

ಕಾಥೆವಾಡದಲ್ಲನ ಪ್ರತಿಯೊಂದು ಹಳ್ಳಿಯ ಬಳಿಯೂ ನಮಗೆ ಈ ತೆರನ ಸ್ಮಾರಕ ಶಿಲೆಗಳು ಕಂಡು ಬರುತ್ತವೆ. ಅವು ತಮ್ಮ ವಂಶದ ಅಥವಾ ಊರಿನ ಯಾವುದೇ ವ್ಯಕ್ತಿಯ ಗೌರವಾರ್ಥವಾಗಿ ನೆಟ್ಟ ಕಲ್ಲುಗಳು ಊರಿನ ದನಗಳನ್ನು ರಕ್ಷಿಸಲು ಹೋಗಿ ಸತ್ತ, ಯುದ್ಧದಲ್ಲಿ ಆಕಸ್ಮಿಕವಾಗಿ ಸತ್ತ ಮತ್ತು ತಮ್ಮ ಗಂಡನೊಂದಿಗೆ ಸಹಗಮನ ಮಾಡಿದ ಮಾಹಾ ಸತಿಯರ ಸ್ಮಾರಕ ಶಿಲೆಗಳಾಗಿರುತ್ತವೆ. ಈ ಕಲ್ಲುಗಳ ಮೇಲೆ ಸತ್ತ ವ್ಯಕ್ತಿಯ ಹೆಸರು, ಮಾಡಿದ ಕಾಲ ಮತ್ತು ಕಾರಣಗಳನ್ನು ಬರೆಯಲಾಗಿರುತ್ತದೆ. ಹಾಗೂ ಸತ್ತವರ ಚಿತ್ರಗಳನ್ನು ಬಿಡಿಸಲಾಗಿರುತ್ತದೆ.

ದಕ್ಷಿಣ ಭಾರತದ ಹಲವಾರು ಕಡೆಗಳಲ್ಲಿ ಸಹಗಮನ ಮಾಡಿದ ಸ್ತ್ರೀಯರ ಸ್ಮಾರಕವಾಗಿ ಒಂದು ಕಲ್ಲನ್ನು ನೆಟ್ಟಿರುತ್ತಾರೆ.ಅಥವಾ ಒಂದು ವೇದಿಕೆಯನ್ನು ನಿರ್ಮಿಸಿರುತ್ತಾರೆ. ಹಾಗೆಯೇ ವೀರನಿಗೂ ಅವನನ್ನು ಸಮಾಧಿ ಮಾಡಿದ ಕಡೆಯೇ ಅಥವಾ ದತ್ತಿಯಾಗಿ ಬಿಟ್ಟ ಜಮೀನಿನಲ್ಲಿಯೇ ಒಂದು ಶಿಲೆಯನ್ನು ಹಾಕಿರುತ್ತಾರೆ.

ಪಶ್ಚಿಮಭಾರತದಲ್ಲಿ'ಪಾಲಿಯಾ'(ಕಾಪಾಡುವವರು)'ಖಾಂಬಿಯಾ'(ಕಂಬ) ಅಥವಾ 'ಚರಾ'(ಸಮಾಧಿಕಲ್ಲು) ಎಂಬುದಾಗಿ ಕೆಲವೊಂದು ವಿಶಿಷ್ಟವಾದ ಸ್ಮಾರಕಗಳಿವೆ. ಇವು ಜಗಳಗಳಲ್ಲಿ ಮಡಿದವರಿಗೋ, ಹುತಾತ್ಮರಿಗೋ, ವಂಶದ ಶ್ರೇಷ್ಠಗುಣಗಳನ್ನುಳ್ಳ ವ್ಯಕ್ತಿಗೋ ಅಥವಾ ಕೆಲವೊಮ್ಮೆ

ಭೂತಪೀಡಿತನಾದ ವ್ಯಕ್ತಿ ಸತ್ತಾಗಲೋ ನಿರ್ಮಿಸಿದ ಸ್ಮಾರಕಗಳು. ಇಂಥ ಆತ್ಮಗಳ ಸ್ಮಾರಕ ಶಿಲೆಗಳನ್ನಾಗಲೀ, ಮರದ ಕಂಬವನ್ನಾಗಲೀ ಅಥವಾ ಮರದಿಂದ ಮಾಡಿದ ಬೊಂಬೆಯನ್ನಾಗಲೀ ಹಾಕಿಸದಿದ್ದರೆ ಅವರು ತಮ್ಮ ಸಂಸಾರವನ್ನೂ ತಮ್ಮ ದನಕರುಗಳನ್ನೂ, ತಮ್ಮನ್ನೂ ತೊಂದರೆಗೆ ಸಿಲುಕಿಸುತ್ತಾರೆಂದು ಅಲ್ಲಿನ ಜನ ನಂಬುತ್ತಾರೆ. ಇವುಗಳನ್ನು ಊರಿನ ಮೈದಾನದಲ್ಲಿ ಅರಳೀಮರದ ಅಂಜೂರಮರದ ಕೆಳಗೋ ಅಥವಾ ಕೆರೆಯ ಬಳಿಯೋ, ವ್ಯಕ್ತಿ ಸತ್ತ ಸ್ಥಳದ ಬಳಿಯೋ ನೆಟ್ಟಿರುತ್ತಾರೆ. ಅದು ಊರಿನ ಹಿತರಕ್ಷಣೆಗಾಗಿ ಮಡಿದ ವ್ಯಕ್ತಿಗಳ ಸ್ಮಾರಕವಾಗಿದ್ದರೆ ಕಲ್ಲಿನ ಒಂದು ಮುಖದಲ್ಲಿ ವ್ಯಕ್ತಿಯೊಬ್ಬ ಕತ್ತಿಯನು ಮತ್ತು ಗುರಾಣಿಯನ್ನು ಹಿಡಿದು ನಿಂತಿರುವ ಹಾಗೆ, ಕೆಲವೊಮ್ಮೆ ಒಬ್ಬ ಮನುಷ್ಯ ಮತ್ತು ಸ್ತ್ರೀ ಅಥವಾ ಹನುಮಂತನನ್ನು ಬಿಡಿಸಿರುತ್ತಾರೆ. ಇನ್ನೊಂದು ಮುಖದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಿರುತ್ತಾರೆ. ಇಲ್ಲಿಯೇ ಸತ್ತ ವ್ಯಕ್ತಿಯ ಸಾವಿಗೆ ಕಾರಣ ಮತ್ತು ಅವನು ಸತ್ತ ದಿನದ ವಿವರಗಳನ್ನು ನಮೂದಿಸಿರುತ್ತಾರೆ. ಈ ಕಲ್ಲಿಗೆ ಜನ ಪೂಜೆ-ಪುನಸ್ಕಾರಗಳನ್ನು ಮಾಡುತ್ತಾರೆ. ಹರಕೆಯನ್ನು ಹೊತ್ತು ಬೇಡಿಕೆಗಳನ್ನು ಸಲ್ಲಿಸುತ್ತಾರೆ.

ಮಾರಿಯಾ ಜನಾಂಗದಲ್ಲಿ ಶ್ರೀಮಂತ ವ್ಯಕ್ತಿ ಸತ್ತರೆ ಅವನ ಸಂಬಂದಿಗಳು ಅವನ ಸ್ಮಾರಕವಾಗಿ ಕಲ್ಲನನು ನಡುವುದರ ಬದಲುಮರದ ಕಂಬವನ್ನು ನಿಲ್ಲಿಸುತ್ತಾರೆ. ಈ ಕಂಬಗಳನ್ನು ಸಮಾನ್ಯವಾಗಿ ರಸ್ತೆಯ ಅಂಚಿನಲ್ಲಿಯೇ ನೆಟ್ಟಿರುತ್ತಾರೆ. ಇದಕ್ಕೆ ಕಾರಣ ಸಾಮಾನ್ಯವಾಗಿ ಇವು ಜನ ಓಡಾಡುವ ಕಡೆ ಇದ್ದು, ಅವರ ಕಣ್ಣಿಗೆ ಬೀಳುತ್ತಿರಲಿ ಎಂಬುದಷ್ಟೆ ಈ ಕಂಬಗಳು ಅಲ್ಲಿ ದೊರೆಯುವ ಸಾಜ ಅಥವಾ ಸಾರಿಯಾ ಎಂಬ ಮರಗಳದ್ದಾಗಿರುತ್ತದೆ. ಇದೇ ಜನಾಂಗದವರ ಸ್ಮಾರಕ ಶಿಲೆಗಳ ಪ್ರತಿಷ್ಠಾಪನೆಯ ಸಂಪ್ರದಾಯ ವಿಧಿಗಳನ್ನು ಈಗಾಗಲೇ ಗುರುತಿಸಿದ್ದೇವೆ. ಇವುಗಳನ್ನು ಸಂಪ್ರದಾಯದ ವಿಧಿಗಳಿಗೆ ಅನುಸಾರವಾಗಿ ಅಂತ್ಯ ಸಂಸ್ಕಾರದ ಆಚರಣೆಯ ವಿಧಿಯಲ್ಲಿಯೇ ನೆಡುತ್ತಾರೆ.

ಕೆಲವೊಮ್ಮೆ ಸತ್ತವರ ಪ್ರತಿಮೆಗಳನ್ನೂ ಗೊಂಬೆಗಳನ್ನು ಹಲವಾರು ಕಡೆಗಳಲ್ಲಿ ಗಮನಿಸಬಹುದು ಇವು ಮಣ್ಣಿನಿಂದ ಅಥವಾ ಮರದಿಂದ ಮಾಡಿದುದಾಗಿರುತ್ತದೆ. ಮತ್ತೆ ಕೆಲವರು ವಿಶಾಲವಾದ ಕಲ್ಲು ಚಪ್ಪಡಿಗಳನ್ನು ಕೆಲವು ಕಲ್ಲುಗಳ ಆಸರೆಯಿಂದ ನಿಲ್ಲಿಸಿರುತ್ತಾರೆ. ಇದೇ ಪ್ರದೇಶದಲ್ಲಿರುವ ಕೊರಕು ಜನಾಂಗದವರೂ ಸ್ಮಾರಕ ಶಿಲೆ ನೆಡುತ್ತಾರೆ.

ಶವಸಂಸ್ಕಾರದ ಆರಂಭದ ದಿಶೆಯಲ್ಲಿ ಸತ್ತವನ ಆಯುಧಗಳು, ಅವನ ಮರಣೋತ್ತರ ಜೀವನದಲ್ಲಿ ಉಪಯೋಗಕ್ಕೆ ಬರಲೆಂದು ಅವುಗಳನ್ನು ಅವನ ಸಮಾಧಿಯೊಡನೆ ಸೇರಿಸಿ ಬಿಡುತ್ತಿದ್ದರು. ಆದರೆ ಆಯುಧಗಳ ಬಗ್ಗೆ ಮಾನವನ ನಂಬಿಕೆ ಮತ್ತು ದೃಷ್ಟಿಕೋನ ಬೆಳೆದ ಹಾಗೆ ವೀರನ ಆಯುಧ ಅವನಿಗೆ

ದೈವದತ್ತವಾದದ್ದು, ಅದೇ ಅವನ ಎಲ್ಲ ವಿಜಯಗಳಿಗೆ ಕಾರಣವಾಯಿತೆಂದು ಭಾವಿಸಿ, ಅದನ್ನೂ ವೀರನ ಮರಣಾನಂತರ ವೀರನಷ್ಟೇ ಗೌರವದಿಂದ ಕಾಣಲಾರಂಬಿಸಿದರು.

ಚಿತ್ರದುರ್ಗ ಬೆಟ್ಟದ ಮೇಲೆ 'ಗೊಂಬಿ ಮನೆ' – ಎಂಬ ಒಂದು ಮಂಟಪ ಇದೆ. ಇದರಲ್ಲಿ ಎರಡು ಕುದುರೆಗಳ ಮತ್ತು ಆನೆಗಳ ಭಗ್ನ ವಿಗ್ರಹಗಳು ಇವೆ. ಪಾಳೆಯಗಾರರ ಪಟ್ಟದ ಕುದುರೆ ಮತ್ತು ಆನೆಯ ಸ್ಮಾರಕಗಳಿರಬಹುದೇ? ಎಂಬ ಸಂಶಯ ಬರುತ್ತದೆ. ಕುದುರೆಯ ಸ್ಮಾರಕವೆಂದು ಅನುಮಾನಕ್ಕೆ ಆಸ್ಪದ ನೀಡುವ ಕುದುರೆಯ ಶಿಲ್ಪವಿರುವ ಶಿಲೆಯೊಂದು ಕೋಲಾರ ಜಿಲ್ಲೆ. ಚಿಂತಾಮಣಿ ತಾಲ್ಲೋಕ್ ತಳಗವಾರ ಎಂಬ ಗ್ರಾಮದಲ್ಲಿ ನಮಗೆ ದೊರೆಯುತ್ತದೆ.

ಅಧ್ಯಾಯ - ೩

ಸಮಾಧಿ ವಾಸ್ತುಶಿಲ್ಪ

ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕಟ್ಟಲ್ಪಟ್ಟ ಗೃಹ ಗುಡಿ, ಮುಂತಾದವುಗಳನ್ನು ವಾಸ್ತುವೆಂದು ಕರೆಯಲಾಗಿದೆ. ಇವು ವಸ್ತುಗಳು ಇವುಗಳಿಗೆ ಆಧಾರವೊ ವಸ್ತುವೇ. ಭೂಮಿಯ ಮೇಲೆ ಕಟ್ಟಲ್ಪಟ್ಟ ಕಟ್ಟಡಗಳಂತೆಯೇ ಕಟ್ಟಡದ ನಕ್ಷೆಗಳು,ಅಳತೆಗಳು, ಕಟ್ಟಡದ ನಕ್ಷೆಯನ್ನೊಳಗೊಂಡ ಭೂಮಿ ವಸತಿ ಗೃಹಗಳು ಸಹ ವಾಸ್ತುಗಳೇ ವಿಶಾಲವಾದ ಅರ್ಥದಲ್ಲಿ ವಾಸ್ತುವೆಂಬುದು ಭೂಮಿ, ಕಟ್ಟಡ, ವಾಹನ ಹಾಗೂ ಪರ್ಯಂಶಗಳನ್ನೊಳಗೊಂಡಿದೆ. ಗ್ರಾಮಗಳು, ನಗರಗಳು, ಕೋಟೆಗಳು, ಪಟ್ಟಣಗಳು, ಮರಗಳು ಸಹ ವಾಸ್ತುಗಳೆಂದು ಗರುಡಪುರಾಣದಲ್ಲಿ ಹೇಳಿದೆ.

ಆಲಯಗಳನ್ನು ಕಟ್ಟಲು ಬಳಸಿದ ಇಟ್ಟಿಗೆ, ಕಲ್ಲು ಮರ ಹಾಗೂ ಕಬ್ಬಿಣಗಳನ್ನು ಸಹ ವಿಶ್ವಕರ್ಮ ವಾಸ್ತುಶಾಸ್ತ್ರದಲ್ಲಿ ವಾಸ್ತುಗಳೆಂದೇ ಕರೆದಿದೆ. ಕಟ್ಟಡಗಳಲ್ಲಿ ಹಲವು ಬಗೆ-ಪ್ರಾಸಾದ, ಮಂಡಪ, ಸಭಾ, ಶಾಲಾ, ಪ್ರಪಾ ಮತ್ತು(ಅ.ರಬ್ಬಿ, ವಾಹನ(ಯಾನ)ಗಳಲ್ಲಿ ಅದಿಕ, ಸ್ಯಂದನ, ಶಿಬಿಕಾ, ರಥ ಎಂದು ನಾಲ್ಕು ವಿಧ, ಪರ್ಯಂಕಗಳು ಆರು-ಪಂಜರ, ಮಂಚಲೀ, ಮಂಚ, ಕಷ್ಟ, ಫಲಕಾಸನ ಮತ್ತು ಬಾಲಪರ್ಯಂಕ. ಎಂದರೆ ಇಂತಹ ಕಟ್ಟಡಗಳಿಗೆ -ನಕ್ಷೆಗಳಿಗೆ ಸಂಬಂಧಿಸಿದ ಶಾಸ್ತ್ರ ಶುಕ್ರನೀತಿಯಲ್ಲಿ ಈ ಶಾಸ್ತ್ರವನ್ನು ಅರಮನೆಗಳ, ರೇವುಗಳ ಮನೆಗಳ, ಕಾಲುವೆಗಳ, ವಿಗ್ರಹಗಳ ರಚನೆಗೆ, ಸಂಬಂದಿಸಿದ ಶಾಸ್ತ್ರವೆಂದೇ ಕರೆಯಲಾಗಿದೆ. ವಾಸ್ತುಕರ್ಮ ಎಂಬುದು ಕಟ್ಟುವಿಕೆಗೆ ಸಂಬಂಧಿಸಿದ ಪದ.

ವಾಸ್ತುಶಾಸ್ತ್ರ

ಭಾರತದಲ್ಲಿ ವಾಸ್ತುಶಾಶ್ತ್ರ ಪ್ರಾಚೀನಶಾಸ್ತ್ರಗಳಲ್ಲೊಂದಾಗಿದೆ. ಇದಕ್ಕೆ ಸಂಬಂಧಿಸಿದ ಪ್ರಾಚೀನ ಗ್ರಂಥವೆಂದರೆ ಸುಮಾರು ಕ್ರಿ.ಶ. ಆರನೆಯ ಶತಮಾನದ ಮಧ್ಯ ಭಾಗದಲ್ಲಿ ವರಾಹಮಿಹಿರನು ಕ್ರೋಢೀಕರಿಸಿದ ಬೃಹತ್ಸಂಹಿತೆ. ಇದು ವಾಸ್ತುಶಿಲ್ಪದಲ್ಲಿ ಪ್ರಾಚಾರ್ಯರೆನಿಸಿದ ಹೆಸರಾಂತ ಮಯ, ವಿಶ್ವಕರ್ಮ, ಗರ್ಗ

ಮತ್ತು ಮನುಗಳು ರೂಪಿಸಿದ ಪ್ರಮಾಣವಾಕ್ಯಗಳನ್ನೂ ಅವರ ಗ್ರಂಥಗಳ ಸಾರಾಂಶಗಳನ್ನೂ ಒಳಗೊಂಡ ಗ್ರಂಥ, ಸೂತ್ರಗಳಲ್ಲಿ, ಪುರಾಣಗಳಲ್ಲಿ. ಆಗಮಗಳಲ್ಲಿ, ತಂತ್ರಗ್ರಂಥಗಳಲ್ಲಿ ವಾಸ್ತುಶಿಲ್ಪದ ಹಲವಾರು ವಿವರಗಳಿವೆ. ಸಾಂಖ್ಯಾಯನ ಮತ್ತು ಅಶ್ವಲಾಯನ ಗೃಹ್ಯಸೂತ್ರಗಳು, ಮತ್ಸ್ಯ, ಅಗ್ನಿ ಗರುಡ,ಸ್ಕಾಂದ ಹಾಗೂ ವಿಷ್ಣು ಧರ್ಮೋತ್ತರ ಪುರಾಣಗಳು, ಕಾಮಿಕ, ಕರಣ(ಕಾರಣ) ವೈಖಾಸನ ಸುಪ್ರಭೇದ ಆಗಮಗಳು.

ಸಮರಾಂಗಣ ಸೂತ್ರಧಾರ'ವನ್ನು ಧಾರಾನಗರದ ಭೋಜರಾಜನು 11ನೆಯ ಶತಮಾನದಲ್ಲಿ ರಚಿಸಿದನೆಂದು ಹೇಳಲಾಗಿದೆ. 83 ಅಧ್ಯಾಯಗಳ ಈ ಗ್ರಂಥದಲ್ಲಿ ಗುಜರಾತಿನಲ್ಲಿ ಕಾಣಿಸಿಕೊಳ್ಳುವ ಅಲಂಕೃತ ಸಭಾಂಟಪಗಳ ಪ್ರಸ್ತಾವವಿದೆ ಇದರಲ್ಲಿಯೂ ಅಪರಾಜಿತಪೃಚ್ಛಾ'ದಲ್ಲಿಯೂ ಲೌಕಿಕ ವಾಸ್ತುಶಿಲ್ಪದ ಬಗೆಗೆ ಹೆಚ್ಚಿನ ವಿವರಗಳು ಲಭಿಸುತ್ತವೆ.

ಈ ಗ್ರಂಥದ ಕರ್ತೃ ಭುವನದೇವಾಚಾರ್ಯ, ಇದನ್ನು ಹೇಮಾದ್ರಿಯ ಪರಿಶೇಷ ಖಂಡದಲ್ಲಿ ಉದ್ಧರಿಸಲಾಗಿದೆ. ಇದೇ ಹೆಸರಿನ ಒಬ್ಬಾತ 'ಶಿಲ್ಪಗ್ರಂಥ'ದ ಕರ್ತೃ. ಇದು ಬಹುಮಟ್ಟಿಗೆ ಅಪರಾಜಿತಪೃಚ್ಛ ಹೋಲುತ್ತದೆ. ಪ್ರಸಾದಮಂಡನ ಹಾಗೂ ರೂಪಮಂಡನ ಗಳ ಕರ್ತೃ ಮಂಡನ ಸೂತ್ರಧಾರ. ಇದು ಸಂಸ್ಕೃತದಲ್ಲಿದ್ದರೂ ಬಹುಮಟ್ಟಿಗೆ ಭಾಷಾ ರೂಪಗಳು ಇದರಲ್ಲಿ ಬೆರೆತಿದೆ. ರಾಜವಲ್ಲಭಮಂಡನ ಹಾಗೂ ಭೂಪತಿವಲ್ಲಭರು ರಚಿಸಿದ ಗ್ರಂಥ ವಾಸ್ತುಶಾಸ್ತ್ರ ಅಥವಾ ಶಿಲ್ಪಶಾಸ್ತ್ರ. ಗುಜರಾತಿನ ಅಹಿಲಪಟ್ಟದಲ್ಲಿ ಪ್ರಕಟವಾದ ಈ ಗ್ರಂಥಕ್ಕೆ ಗುಜರಾತಿ ಭಾಷೆಯಲ್ಲಿ ಒಂದು ಟಿಪ್ಪಣಿ ಸಹ ಇದೆ. ಈ ಮಂಡನೆಯ ಮಾದಪಾಡಿಯ ಅರಸರಾದ ಕುಂಭಕರ್ಣನ (ಕ್ರಿ.ಶ.1419–69) ಆಸ್ಥಾನದಲ್ಲಿದ್ದಾಗ. ರೂಪಮಂಡನ, ಪ್ರಾಸಾದಮಂಡವನ ವಾಸ್ತು ಮಂಡನ, ಆಯತತ್ವ, ವಾಸ್ತುಮಂಡನ, ವಾಸ್ತುಸಾರಗಳೆಂಬ ಇತರ ಗ್ರಂಥಗಳನ್ನೂ ಈತನೇ ರಚಿಸಿದನೆಂದು ಹೇಳಲಾಗಿದೆ.

ಇಲ್ಲಿ ಒಂದು ಅಂಶವನ್ನು ಗಮನಸಬೇಕು ಅತಿ ಪ್ರಾಚೀನವಾದ ಗ್ರಂಥದ ಕಾಲ ಸುಮಾರು ಕ್ರಿ.ಶ. ಆರನೆಯ ಶತಮಾನವೆಂದು ಹೇಳಿದೆ. ಅದಕ್ಕೆ ಮೊದಲೇ ನಮ್ಮಲ್ಲಿ ನೂರಾರು ವಾಸ್ತುಶಿಲ್ಪ ಕಟ್ಟಡಗಳು ಆಗಿ ಹೋದವು. ಅವುಗಳು ಯಾವಶಾಸ್ತ್ರ ಗ್ರಂಥಗಳನ್ನಾಧರಿಸಿ ಕಟ್ಟಲ್ಪಟ್ಟವು ಇಲ್ಲಿ ತತ್ವಗಳನ್ನು ಆಧರಿಸಿ ಆಚರಣೆ ಅಸ್ತಿತ್ವಕ್ಕೆ ಬಂತೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ನಿಜವಾಗಿ ಆಚರಣೆಯೇ ಮೊದಲು ಬಂದದ್ದು, ಅತಿ ಪ್ರಾಚೀನ ಕಾಲದಲ್ಲಿ ಮಾನವ ತನ್ನ, ತನ್ನವರ, ರಕ್ಷಣೆಗಾಗಿ ಒಂದು 'ಮನೆ'ಯನ್ನು ಕಟ್ಟಿಕೊಂಡಂದಿನಂದಲೇ ವಾಸ್ತುಶಿಲ್ಪ ಉಂಟಾಯಿತೆನ್ನಬೇಕು. ಕ್ರಮೇಣ ಜ್ಞಾನ ವಿಕಾಸವಾದಂತೆಲ್ಲಾ ಈ ಕಟ್ಟಡಗಳು, ದೇವಾಲಯಗಳು ಹೆಚ್ಚಿದಂತೆಲ್ಲಾ ಇವುಗಳ ಮೂಲಭೂತ ತತ್ವಗಳನ್ನು ನಿರೂಪಿಸಬೇಕೆಂಬ

ಮನೋಭಾವ ಸ್ಥಪತಿಗಳಾದಾಯಿತು, ಎಂತಲೇ ಆ ಬಳಿಕ ವಾಸ್ತುಶಿಲ್ಪ ಗ್ರಂಥಗಳು ಹುಟ್ಟಿಕೊಂಡವು' ಕ್ರಮೇಣ ಈ ಗ್ರಂಥಗಳಲ್ಲಿ ಪ್ರತಿಪಾದಿತವಾದ ಮೂಲಭೂತ ತತ್ವಗಳನ್ನಾಧರಿಸಿ ಸ್ಥಪತಿಗಳು ಹೊಸ ಹೊಸ ವಿನ್ಯಾಸಗಳನ್ನು ರೂಢಿಸಿಕೊಂಡರು. ಹಾಗೆ ರೂಢಿಸಿದ ನನ್ಯಾಸ-ಶೈಲಿಗಳನ್ನು ತತ್ವಗಳನ್ನಾಗಿ ಮಾರ್ಪಡಿಸಿದಾಗ ಹೊಸ ಹೊಸ ಶಾಸ್ತ್ರ ಗ್ರಂಥಗಳೂ ಹುಟ್ಟಿಕೊಂಡವು. ಹೀಗೆ ಒಂದು ಇನ್ನೊಂದಕ್ಕೆ ಪ್ರೇರಕ, ದೇಶ, ಕಾಲ, ಪರಿಸರಗಳನ್ನವಲಂಬಿಸಿ ಬೇರೆ ಬೇರೆ ಕಡೆ ಭಿನ್ನ ಭಿನ್ನ ಶೈಲಿಗಳು ತಲೆ ಎತ್ತಿದವು.

ಪಾಶ್ಚಾತ್ಯ ವಾಸ್ತುಶಿಲ್ಪ

ಪಾಶ್ಚತ್ಯ ವಾಸ್ತುಶಿಲ್ಪ ಬಹುಮಟ್ಟಿಗೆ ಲೌಕಿಕ. ಆ ವಾಸ್ತುಶಿಲ್ಪಗಳು ಉದ್ದೇಶ, ಲಕ್ಷಣಗಳು ಭಾರತೀಯ ವಾಸ್ತುಶಿಲ್ಪಕ್ಕಿಂತ ಬಹುಮಟ್ಟಿಗೆ, ಭಿನ್ನವಾದುದು, ಅದರಲ್ಲಿ ನಾವು ವಿಶೇಷವಾಗಿ ಕಾಣುವುದು ಉಪಯುಕ್ತತೆ ಹಾಗೂ ಸೌಂದರ್ಯಭಿರುಚಿ. ಗ್ರೀಕ್ ವಾಸ್ತುಶಿಲ್ಪ ಕುಶಲತೆಯ ಪರಾಕಾಷ್ಠತೆಗೆ ನದರ್ಶನ, ಇದರಲ್ಲಿ ಆ ಜನರ ಭೋಗ ಜೀವನ ಹಾಗೂಕಲಾಭಿಜ್ಞತೆಯೂ ಎದ್ದು ಕಾಣುತ್ತದೆ. ರೋಮನ್ ಶೈಲಿಯ ಕಟ್ಟಡಗಳು ವೈಜ್ಞಾನಿಕ ರಚನೆಗಳು, ಫ್ರಾನ್ಸ ದೇಶದ ಗೋಥಿಕ್ ಶೈಲಿ ಭಾವೋದ್ರಿಕ್ತ ಓಜಸ್ಸನ್ನು ಪ್ರತಿನಿಧಿಸುತ್ತದೆ. ಇಟಲಿಯ ಪುನರುಜ್ಜೀವನದ ಕಾಲದ ವಾಸ್ತುಶಿಲ್ಪದಲ್ಲಿ ಸಮಕಾಲೀನ ಪಾಂಡಿತ್ಯದ ಪ್ರತಿಬಿಂಬವಿದೆ. ಈ ಪಾಶ್ಚಾತ್ಯ ಸಂಸ್ಕೃತಿಗಳಿಗಿಂತಲೂ ಪ್ರಾಚೀನವಾದ ಈಜಿಪ್ಟಿನ ಪಿರಮಿಡ್ಡುಗಳಲ್ಲಿ ಆ ನಾಗರೀಕತೆಯ ವಾಸ್ತುಶಿಲ್ಪ ಶೈಲಿ ಎದ್ದು ಕಾಣುತ್ತದೆ. ಸರಳತೆ, ಭವ್ಯತೆ ಮತ್ತು ಶಾಂತಭಾವ, ದೊಡ್ಡಗಾತ್ರದ ಕಟ್ಟಡಗಳಲ್ಲಿ ಭಯ, ವಿಸ್ಮಯ, ನಿಗೂಢತೆ ಅದರ ಮುಖ್ಯ ಲಕ್ಷಣಗಳು ಪಿರಮಿಡ್ಡುಗಳು ವಾಸ್ತವಿಕವಾಗಿ ಧಾರ್ಮಿಕ ಉದ್ದೇಶಕ್ಕಾಗಿ ಕಟ್ಟಲ್ಪಟ್ಟವಾದರೂ ಅವು ಶವಾಗಾರಗಳಾಗಿಯೇ ಉಳಿದವು. ಅದರ ಹಿನ್ನೆಲೆಯಲ್ಲಿ ನಾವು ಕಾಣಬಹುದು ಭಯಮಿಶ್ರಿತ ಗೌರವವನ್ನು.

ಸಮಾಧಿ-ಸಮಾಧಿ ವಾಸ್ತುಶಿಲ್ಪ

ಪ್ರಾಚೀನ ಮಾನವನಲ್ಲಿ ಬಹುಮಟ್ಟಿನ ಕೌತುಕವನ್ನುಂಟು ಮಾಡಿದುದು ಸಾವು. ಪ್ರಾಣಿಗಳನು ತಾನು ಸ್ವತಃ ಕೊಲ್ಲುತ್ತಿದ್ದುದು ಸರಿ. ಆದರೆ ತನ್ನವರೇ ಯಾವ ಆಕಸ್ಮಿಕಕ್ಕೂ ಈಡಾಗದೆ ಸಾಯುತ್ತಿದ್ದರಲ್ಲ! ಈ ಸಾವಿನ ಸಮಸ್ಯೆಯನ್ನು ಅರಿತುಕೊಳ್ಳಲು ಆತ ಯತ್ನಿಸಿದ. ಅದೊಂದು ಬಿಡಿಸಲಾಗದ ಕಗ್ಗಂಟು. ಈ ದೇಹ ನಶಿಸುತ್ತದೆ. ಇಂದು ಇದ್ದು ನಾಳೆ ಇಲ್ಲದಿರುವುದು ಸಹಜ ಎಂದು ಭಾವಿಸದ ಆತ ಹಾಗಿದ್ದಲ್ಲಿ ಇದ್ದಾತನಲ್ಲಿ ಹೋದ ಎಂಬುದನ್ನು ತಿಳಿಯಲಾರದೆ ಹೋದ. ಬಹುಶಃ ಈ ದೇಹ ಬಿಟ್ಟು ಹೋದಾತ

ಮರಳಬಹುದು ಎಂದು ಭಾವಿಸಿದುದು ಆಶ್ಚರ್ಯವಲ್ಲ. ಎಂತಲೇ ಆ ದೇಹವನ್ನು ಕಾಪಾಡಬೇಕೆಂಬ ಯೋಚನೆಯೂ ಬಂದಿತು. ಒಂದು ವೇಳೆ ದೇಹವಿಲ್ಲದಿದ್ದರೂ ದೇಹದೊಳಗಿದ್ದ ಆ ಚೇತನ ಮತ್ತೆ ಹಿಂದಿರುಗಬಹುದೆಂಬ ಭಾವನೆ, ಆ ದೇಹಿ ಅದುವರೆವಿಗೂ ಬಳಸುತ್ತಿದ್ದ ವಸ್ತುಗಳನ್ನು ಪುನಃ ಬಳಸಬಹುದು ಎಂಬ ಊಹೆ ಬಲಗೊಂಡಿತು. ಎಂತಲೇ ದೇಹವನ್ನೂ ಆ ವಸ್ತುಗಳನ್ನೂ ಕಾಪಾಡಲು ಪ್ರಯತ್ನಗಳಾದುವು. ಸಮಾಧಿಗಳನ್ನು ತೋಡಿ ಅವುಗಳಲ್ಲಿ ದೇಹವನ್ನು ಹುದುಗಿಡುವ ಅಥವಾ ದೇಹಗಳನ್ನು ಸುಟ್ಟಬಳಿಕ ಅವುಗಳ ಅಸ್ಥಿಗಳನ್ನು ಶೇಖರಿಸಿಡುವ ಹಾಗೂ ಅದರೊಂದಿಗೆ ಆ ದೇಹಿ ಬಳಸುತ್ತಿದ್ದ ನಿತ್ಯೋಪಯೋಗಿ ವಸ್ತುಗಳನ್ನು ಕಾಪಾಡುವ ಪದ್ದತಿ ಆರಂಭವಾಯಿತು. ಇಂತಹ ಸಮಾಧಿಗಳೂ ಗುಡಿಗಳಂತೆ ಪೂಜಾರ್ಹ ಸ್ಥಳಗಳಾದವು ಇಂದು ನಮ್ಮ ಗಮನಕ್ಕೆ ಬಂದಿರುವ ಹಲವಾರು ದೇವಾಲಯಗಳು ಮೂಲತಃ ಸಮಾಧಿಗಳೇ ಆಗಿದ್ದವು.

ಇಂತಹ ಸಮಾಧಿಮಂದಿರಗಳನ್ನು ನಾವು ವಿಶೇಷವಾಗಿ ಕಾಣುವುದು ಈಜಿಪ್ಟಿನಲ್ಲಿ. ಈ ಸಮಾಧಿಗಳನ್ನು ಅಲ್ಲಿ ಮೊದಮೊದಲು ಗುಹೆಗಳಲ್ಲಿ ತೋಡಿಡುತ್ತಿದ್ದರು. ಈ ದೇಶದಲ್ಲಿ ಕಂಡುಬಂದ ವಿಶ್ವದ ಮೊಟ್ಟಮೊದಲ ಗುಹಾವಾಸ್ತುಗಳು ಸಮಾಧಿಗಳೇ. ಇಂತಹ ಸಮಾಧಿಗಳನ್ನು ಕಟ್ಟಿಸುವುದು ಮಿತಿಮೀರಿದ ವೆಚ್ಚದ್ದಾದ್ದರಿಂದ ಜನಸಾಮಾನ್ಯರು ಈ ಪದ್ದತಿಯನ್ನವಲಂಬಿಸುವುದು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ನಾವು ಕಾಣುವುದು ಬಹುಮಟ್ಟಿಗೆ ಅರಸರ ಅಥವಾ ಶ್ರೀಮಂತ ವರ್ಗಕ್ಕೆ ಸೇರಿದವರ ಸಮಾಧಿಗಳು ನೈಲ್ ಕಣಿವೆಯ ಮೆದುಮ್‌ನಲ್ಲಿರುವ, ಸುಮಾರು ಕ್ರಿ.ಪೂ.2500ಕ್ಕೆ ಸೇರಿದ, ಅಶೆಶ್ ಎಂಬ ಅಧಿಕಾರಿಯ ಸಮಾಧಿ ಇದುವರೆಗೆ ತಿಳಿದಂತೆ ಅತಿ ಪ್ರಾಚೀನ ಗುಹಾ ಸಮಾಧಿ. ದೀರ್‌ಎಲ್ ಬಿಹಾರಿಯಲ್ಲಿ ಹ್ಯಾಟ್ಸೆಪ್ ಷಟ್ಟಳ ಸಮಾಧಿ ಗುಹಾ ವಾಸ್ತುವಿನ ಮೇರುಕೃತಿ ಎನಿಸಿದ ಅಬುಸಿಂಬೆಲ್ ನಲ್ಲಿರುವ 2ನೆಯ ರ್‍ಯಾಮ್ಸಸ್ ದೊರೆಯ ದೇವಾಲಯ ಹೆಸರಿಸತಕ್ಕವುಗಳು. ಮರಣೋತ್ತರ ಸ್ಥಿತಿಯ ಇದೇ ತರಹದ ನಂಬಿಕೆಗಳು ಮೆಡಿಟರೇನಿಯನ್ ಸಮುದ್ರದ ದ್ವೀಪಗಳಲ್ಲೂ ಕಂಡು ಬಂದಿದೆ. ಕ್ರಿ.ಪೂ. 1700–1400 ರ ಕಾಲದಲ್ಲಿ ಕ್ರೀಟ್ ದ್ವೀಪದಲ್ಲಿ ನೆಲದ ಮಟ್ಟಕ್ಕಿಂತ ಕೆಳಗಡೆ ಬಂಡೆಗಳ ದುಂಡುಕೋಣೆಗಳನ್ನು ಕೊರೆದು ಅವಕ್ಕೆ ನೇರವಾದ ತೆರೆದ ಹಾದಿಯನ್ನು ರೂಪಿಸಿದ ಥೋಲೋನ್ ಎಂದು ಕರೆಯಲಾದ ಸಮಾಧಿಗಳು ಕಂಡುಬಂದಿವೆ. ಇಂತಹುದೇ ಪದ್ಧತಿ ಗ್ರೀಸಿನ ಮೈಸೀನಿಯನ್ ಸಂಸ್ಕೃತಿಯಲ್ಲೂ ಕಂಡುಬಂದಿದೆ. ರೋಮ್‌ನ ಸುತ್ತಲೂ ಭೂಗರ್ಭದಲ್ಲಿ ಮೈಲಿಗಟ್ಟಲೆ ಅಂಕುಡೊಂಕಾಗಿ ಹರಡಿರುವ ಒಂದು ಕುಟುಂಬಕ್ಕೆ ಅಥವಾ ಜನಾಂಗಕ್ಕೆ ಮೀಸಲಾಗಿರಿಸಿದ ಸುರಂಗ ಸಮಾಧಿಗಳಿವೆ. ಮೇಲ್ಕಾಣಿಸಿದ ಕಡೆಗಳಲ್ಲಿ ಗುಹೆಗಳು ದೇವಾಗಾರಗಳಾಗಿರುವ ನಿದರ್ಶನಗಳು ಕಡಿಮೆ. ಬಹುಮಟ್ಟಿಗೆ ಇವು ಸಮಾಧಿವಾಸ್ತುಗಳೇ.

ವಾಸಸ್ಥಾನಗಳು ಮತ್ತು ಲೌಕಿಕ ಕಟ್ಟಡಗಳು

ಇಂತಹ ಗುಹಾವಾಸ್ತುಗಳು ಭಾರತದಲ್ಲಿ ಕ್ರಿ.ಪೂ. 3ನೆಯ ಶತಮಾನದ ವೇಳೆಗೆ ಪ್ರಚಾರಕ್ಕೆ ಬಂದವು. ಆದರೆ ಇವುಗಳ ಉದೇಶ ಸಮಾಧಿಗಳಲ್ಲ. ಇವು ದೇವಾಗಾರಗಳಾಗಿಯೋ. ಭಿಕ್ಷುಗಳ, ಸನ್ಯಾಸಿಗಳ ವಾಸಸ್ಥಾನಗಳಾಗಿಯೇ ಅಸ್ತಿತ್ವಕ್ಕೆ ಬಂದವುಗಳು, ಭಾರತದಲ್ಲಿನ ಹಲವು ದೇವಾಲಯಗಳು ಮೂಲತಃ ಸಮಾಧಿಮಂದಿರಗಳಾಗಿದ್ದುವೆಂಬುದು ನಜವಾದರೂ ಅಂತಹವು ಸಂಖ್ಯೆಯಲ್ಲಿ ಅತಿ ವಿರಳ. ತಮಿಳಿನಲ್ಲಿ'ಪಳ್ಳಿಪ್ಪಡೈ' ಎಂಬ ಮಾತಿಗೆ ಸ್ಮಾರಕಗಳೆಂಬ ಸಾಮಾನ್ಯ ಅರ್ಥವಿದ್ದರೂ ಪ್ರಜಾಪ್ರೀತಿಗೆ ಪಾತ್ರರಾದ ಖ್ಯಾತಿವೆತ್ತ ಕೆಲವೇ ಅರಸರ, ಅರಸಿಯರ ಸಮಾಧಿಗಳ ಮೇಲೆ ಗುಡಿಗಳನ್ನು ಕಟ್ಟಿದ್ದರೂ ಅಂತಹವು ಸಂಖ್ಯಾ ದೃಷ್ಟಿಯಿಂದ ಬಹಳ ಕಡಿಮೆ.

ವಾಸ್ತುಶಿಲ್ಪದ ಇತಿಹಾಸದಲ್ಲಿ ನಾವು ಮೊದಲು ಕಾಣುವುದು ಗೃಹಗಳನ್ನು ತನಗಾಗಿ, ತನ್ನವರಿಗಾಗಿ ವಾಸಸ್ಥಳವೊಂದನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದುದೇ 7000 ವರ್ಷಗಳ ಹಿಂದೆ, ಕ್ರಿ.ಪೂ. ಸುಮಾರು 5000ದ ಸುಮಾರಿಗೆ ಎನ್ನಬಹುದು. ಅದಕ್ಕೂ ಹಿಂದೆ ಆತ ತನ್ನ ಸುತ್ತಲಿನ ಪ್ರಾಕೃತಿಕ ಸನ್ನಿವೇಶಗಳನ್ನವಲಂಬಿಸಿದ್ದ. ಅಲೆಮಾರಿ ಜೀವನವನ್ನು ಮುಕ್ತಾಯಗೊಳಿಸಿ ಒಂದು ಕಡೆ ಸ್ಥಿರವಾಗಿ ನೆಲೆಸುವುದನ್ನು ಕಲಿತು. ಜನರೊಡನೆ ಗುಂಪುಗೂಡಿ ವಾಸಮಾಡಲಾರಂಭಿಸಿ, ತಾನು, ತನ್ನದು ಎಂಬ ಮನೋಭಾವ ಬೆಳೆದು, ಕುಟುಂಬ ಪದ್ಧತಿ ಆರಂಭವಾದಾಗ ಮನೆಯ ಅವಶ್ಯಕತೆ ಉಂಟಾಯಿತು. ಈ ಮನೆಗಳು ಪ್ರಾರಂಭದಲ್ಲಿ ಗುಡಿಸಲುಗಳಾಗಿದ್ದವು.

ಅತಿ ಪ್ರಾಚೀನವೆನಿಸಬಹುದಾದ ಗುಡಿಸಲುಗಳು ಅಸ್ಸೀರಿಯದ ಉಬೈದನ್ ಗ್ರಾಮಗಳಲ್ಲಿ ದೊರೆತಿವೆ. ಸುಮಾರು ಕ್ರಿ.ಪೂ 3000ದಷ್ಟೂ ಪ್ರಾಚೀನವಾದ ಇವುಗಳ ರಚನೆ ಜೊಂಡಿನಂದ. ಇದಕ್ಕೆ ಮಣ್ಣುಮೆತ್ತಿ ನಲ್ಲಿಸುತ್ತಿದ್ದಿರಬೇಕು. ಸುಮರನ ಎರಿದು ಎಂಬಲ್ಲಿ ಬೇರೆ ಭಾಗಗಳುಳ್ಳ ಇಂತಹ ಜೊಂಡಿನ ಗುಡಿಸಲಿನ ಅವಶೇಷ ದೊರೆತಿದೆ. ಆದರೆ ಇದು ಮಣ್ಣಿನ ಗೋಡೆಗಳಿಂದ ಮಾಡಿದ ಮನೆಯೊಂದಕ್ಕೆ ಸೇರಿದಂತಿದೆ. ಪಶ್ಚಿಮ ಇರಾನಿನ ಸಿಯಾಲ್ಕನ ಉತ್ಖಲನನದಲ್ಲಿ ಗಟ್ಟಿಸಿದ ಮಣ್ಣಿನ ಗೋಡೆಗಳಿಂದ ಕಟ್ಟಿದ ಮನೆಗಳ ಅವಶೇಷಗಳು ಕಂಡುಬಂದಿವೆ. ಗೋಡೆಹಾಕುವ ಸ್ಥಳದಲ್ಲಿ ಗರಸ ಬೆರೆಸಿದ ಮಣ್ಣು ಅಥವಾ ಜೇಡಿಯನ್ನು ಹಲಗೆಗಳ ಮಧ್ಯೆ ಚೆನ್ನಾಗಿ ಗಟ್ಟಿಸಿ ಅದು ಗಡುಸಾದ ಮೇಲೆ ಹಲಗೆಗಳನ್ನು ತೆಗೆದುಬಿಡುವುದರ ಮೂಲಕ ಇಂಥ ಜೋಡಿ ಗೋಡೆಗಳನ್ನು ಕಟ್ಟುತ್ತಿದ್ದಿರಬೇಕು.

ಭಾರತದಲ್ಲೂ ಮಾನವ ಮೊದಲು ನೈಸರ್ಗಿಕ ತಾಣಗಳನ್ನು ಅರಸಿದ ಮಧ್ಯಭಾರತದಲ್ಲಿರುವ ಬಾಘೈಬೋರ್ ನಲ್ಲಿರುವ ಮುಂಚಾಚಿದ ಬಂಡೆ ಅಂತಹ ಒಂದು ಆಸರೆ ಕ್ರಮೇಣ ಗುಡಿಸಲುಗಳ ರಚನೆ ಆರಂಭವಾಯಿತು.

ಈ ನವಶಿಲಾಯುಗದ ನಿವೇಶನಗಳ ಕಾಲ ಸುಮಾರು ಕ್ರಿ.ಪೂ.1700 ರಿಂದ 1500 ವರ್ಷಗಳು. ದಕ್ಷಿಣ ಭಾರತದಲ್ಲಿ, ಕರ್ನಾಟಕದಲ್ಲಿ ಬೃಹತ್ ಶಿಲಾಯುಗ ಸುಮಾರು ಕ್ರಿ.ಪೂ.800ರ ವೇಳೆಗೆ ಆರಂಭವಾಯಿತೆನ್ನಬಹುದಾದರೂ ಆ ಜನರ ಗೋರಿಗಳನ್ನು ಕಟ್ಟಲು ಮಾತ್ರ ಬೃಹದಾಕಾರದ ಕಲ್ಲುಚಪ್ಪಡಿಗಳನ್ನು ಬಳಸಿದರೇ ಹೊರತು ತಮ್ಮ ವಾಸಕ್ಕಾಗಿ ಎಂದಿನಂತೆ ಜೊಂಡು ಅಥವಾ ಹುಲ್ಲಿನ ಹೊದಿಕೆಗಳಿದ್ದ ಗುಡಿಸಲುಗಳನ್ನು ಕಟ್ಟಿಕೊಂಡರು.

ಗುಡಿಸಲುಗಳೂ ಸಾಮಾನ್ಯವಾಗಿ ವೃತ್ತಾಕಾರದವೇ. ಕ್ರಮೇಣ ಇವುಅಂಡಾಕಾರವಾಗಿ ಮಾರ್ಪಟ್ಟು ಮೇಲ್ಭಾವಣಿಯನ್ನು ಬಗ್ಗಿಸಿದ ಬಿದಿರುಗಳಿಂದ ಪೀಪಾಯಿ ಆಕಾರ ಬರಲು ತೊಗಲಿನ ಅಥವಾ ಸಸ್ಯದ ಸೆಳೆ ರೆಂಬೆಯನ್ನು ಕಮಾನಿನ ತುದಿಗಳ ಮೂಲಕ ಬಿಲ್ಲಿಗೆ ಕಟ್ಟುವ ಹುರಿಯಂತೆ ಬಿಗಿದು ಕಟ್ಟಲಾಯಿತು. ಇದರಿಂದ ಕಮಾನಿನ ತಂತಿಯನ್ನು ಅವುಕಿದಂತಾಗಿ ಅವು ಕುದುರೆಯ ಲಾಳದಾಕಾರವನ್ನು ಪಡೆಯುವಂತಾಯಿತು. ಇಂತಹ ಕಮಾನು ಹಾದಿಗಳನ್ನು ಚೈತ್ಯಗಳೆಂದು ಕರೆದರು. ಇವು ಸಹ ನಂತರದ ಬೌದ್ಧ ವಾಸ್ತುಶಿಲ್ಪದಲ್ಲಿ ಜನಪ್ರಿಯವಾಯಿತು.

ನಂತರದ ಶತಮಾನಗಳಲ್ಲಿ ಕ್ರಮೇಣ ದೊಡ್ಡ ಊರುಗಳೂ ನಗರಗಳೂ ಕೆಲವು ಕಡೆಗಳಲ್ಲಿ ಬೆಳೆದವು. ಅಲ್ಲೂ ಸಹ ಕಟ್ಟಡಗಳಿಗೆ ಇದೇ ವಾಸ್ತುಶಿಲ್ಪ ಶೈಲಿಯನ್ನೇ ಗಮನಾರ್ಹವಾಗಿ ವ್ಯಾಪಕವಾದ ಪ್ರಮಾಣದಲ್ಲಿ ಹಾಗೂ ಗಣನೀಯ ರೂಪದಲ್ಲಿ ಬಳಸಲಾಯಿತು. ನಗರಗಳು ಸಣ್ಣ ರಾಜ್ಯಗಳ ಗಣರಾಜ್ಯಗಳ ಕೇಂದ್ರಗಳಾದಾಗ ಅವುಗಳ ನಡುವಣ ಪರಸ್ಪರ ವೈಷಮ್ಯ ಅವರ ನಡುವೆ ಅಗಿಂದಾಗ್ಗೆ ಕದನಗಳಿಗೆ ದಾರಿ ಮಾಡಿದವು. ಈ ನಗರಗಳ ರಕ್ಷಣೆಗಾಗಿ ಸುತ್ತಲೂ ಕೋಟೆಗಳನ್ನು ಕಟ್ಟಬೇಕಾಯಿತು ಮರದ ಬೇಲಿಗಳಲ್ಲದೆ ಮಣ್ಣಿನ ಕಲ್ಲಿನ ಆಳುವೇರಿಗಳನ್ನು ಕಟ್ಟಿಕೊಳ್ಳಬೇಕಾಯಿತು ಕೋಟೆಯೊಳಗಿನ ಕಟ್ಟಡಗಳೆಲ್ಲ ಮರದವೇಆಗಿವೆ. ಋಗ್ವೇದದಲ್ಲಿ ಕಸಬುದಾರರಲ್ಲಿ ಬಡಗಿಗೆ ವಿಶೇಷವಾದ ಪ್ರಾಶಸ್ತ್ಯ ನೀಡಿರುವುದನ್ನು ಗಮನಸಬಹುದು ಆತ ಸಮಾಜದಲ್ಲಿ ಗೌರವಾನ್ವತ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದಾನೆ. ಆರಂಭದಲ್ಲಿ ಬಡಗಿ ಮರದಲ್ಲಿ ರೂಪಿಸಿದ ವಸ್ತುಶೈಲಿಗಳನ್ನೇ ಕ್ರಮೇಣ ಕಲ್ಲುಕುಟಿಗ ಕಲ್ಲಿನಲ್ಲಿ ಪ್ರತಿರೂಪಗೋಸಿಸಿದ್ದಾನೆಂಬುದನ್ನು ನಾವು ಕಾಣಬಹುದು. ಕ್ರಿ.ಪೂ.5ನೆಯ ಶತಮಾನದಲ್ಲಿ ಮಹಾಗೋವಿಂದನೆಂಬೊಬ್ಬ ಶಿಲ್ಪಿಯನ್ನು ಬೌದ್ಧ ಗ್ರಂಥ

ಕರ್ತೃವಾದ ಧರ್ಮಪಾಲ ಹೆಸರಿಸಿದ್ದಾನೆ. ಈತ ಹಲವಾರು ರಾಜಧಾನಿ ಪಟ್ಟಣಗಳನ್ನು ರೂಪುಗೊಳಿಸಿದನೆಂದು ಹೇಳಿದ.

ಇವುಗಳ ಯಾವ ಅವಶೇಷಗಳೂ ವಿಶೇಷವಾಗಿ ಉಳಿದಿಲ್ಲ ಆದರೆ ಸಮಕಾಲೀನ ಸಾಹಿತ್ಯ ಆಧಾರಗಳಿಂದಲೂ ನಂತರ ಅಸ್ತಿತ್ವಕ್ಕೆ ಬಂದ ಬೌದ್ಧಸ್ತೂಪದಲ್ಲಿ ಕಂಡರಿಸಲಾಗಿರುವ ನಗರವಾಸದ ಚಿತ್ರಗಳಿಂದಲೂ ಅಂದಿನ ನಗರದ ವಿನ್ಯಾಸಗಳು ಹೇಗಿದ್ದುವೆಂಬುದನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು. ಮೌರ್ಯರ ರಾಜಧಾನಿಯಾಗಿದ್ದ ಪಾಟಲೀಪುತ್ರವು ಗಂಗಾತೀರದಲ್ಲಿ ಸುಮಾರು 15 ಕಿ.ಮೀ. ಉದ್ದ, 3 ಕಿ.ಮೀ. ಅಗಲದ ಸಮಾಂತರ ಚತುರ್ಭುಜಾಕಾರದ ಕಿರಿದಾದ ಪ್ರದೇಶದಲ್ಲಿ ವಿಸ್ತರಿಸಿತ್ತಂದೂ ಸುತ್ತಲೂ ಮರದ ಬೇಲಿ ಇದ್ದು ಹೊರಗಡೆ ಆಳವಾದ ನೀರು ತುಂಬಿದ ಕಂದಕವಿತ್ತಂದೂ ಮೆಗಾಸ್ತನೀಸ್ ಬರೆದಿಟ್ಟಿದ್ದಾನೆ. ಈ ಕೋಟೆಯೊಳಗಣ ಅರಮನೆಯಲ್ಲಿ ಸಾಲು ಕಂಬಗಳ ಹಲವು ಹಜಾರಗಳಿದ್ದು, ಆ ಮರದ ಕಂಬಗಳಲ್ಲಿ ಬಳ್ಳಿಗಳನ್ನು, ಪಕ್ಷಿಗಳ ವಿನ್ಯಾಸಗಳನ್ನು ಚಿತ್ರಿಸಿ ಅವುಗಳನ್ನು ಚಿನ್ನದಿಂದ ಅಲಂಕರಿಸಲಾಗಿತ್ತೆಂತೆ. ಸಾಂಚಿಯ ತೋರಣಗಳಲ್ಲಿ ಬುದ್ಧನ ಜನ್ಮ ಸ್ಥಳವಾದ ಕಪಿಲವಸ್ತು. ರಾಜಗೃಹಗಳನ್ನು ಪ್ರತಿನಿಧಿಸುವಂತಹ ಚಿತ್ರಗಳನ್ನು ಹಿನ್ನೆಲೆಯಲ್ಲಿ ತೋರಿಸಲಾಗಿದೆ.



ಲಕ್ಕುಂಡಿಯ ವೀರಗಲ್ಲು, ವೀರತನದ ಸಂಕೇತ

ಅಧ್ಯಾಯ-4

ಶಾಸನ ಮತ್ತು ಸ್ಮಾರಕಗಳು

(ವೀರಗಲ್ಲು ಮಾಸ್ತಿಗಲ್ಲು)

ವೀರತನ

ನಾಗರಿಕತೆಯ ಬೆಳವಣಿಗೆಯ ಒಂದು ಘಟ್ಟದಲ್ಲಿ ಮಾನವನಿಗೆ ತನ್ನ ಅನಾಗರಿಕ ಅಮಾನುಷ ವರ್ತನೆಗಳ ಅರಿವಾಗುತ್ತಿದ್ದಂತೆಯೇ ಅವನು ಅವುಗಳಿಗೆ ಒಂದು ಮಿತಿಯನ್ನು ಹಾಕಿಲು ಪ್ರಯತ್ನಿಸಿದ. ಇದರಿಂದ ಸಂಘಜೀವಿಯಾಗುವುದರಿಂದ ಪ್ರತಿಯೊಬ್ಬನಗೂ ರಕ್ಷಣೆ ದೊರೆಯುವಂತಾಯಿತು. ತಾನೇ ಅರಿತ ತನ್ನ ಹಿಂದಿನ ಅಮಾನುಷ ಶಕ್ತಿ ಪರಾಕ್ರಮಗಳಿಗೆ ನೀತಿ ನಯಮಗಳನ್ನು ಹಾಕುತ್ತಾ ಬಂದಂತೆ ಅವುಗಳಿಗೆ ನೈತಿಕ ಬೆಂಬಲವೂ ದೊರೆಯಿತು. ಈ ರೀತಿಯಲ್ಲಿ ಅವನ ವರ್ಚಸ್ಸನ್ನು ಬೆಳೆಸಿದ ವೀರತನ ಒಂದು ಸಾಮಾಜಿಕ ಮೌಲ್ಯದ ವ್ಯಾಪ್ತಿಯನ್ನು ಪಡೆಯಿತು. ಇದು ಮಾನವನ ಇತಿಹಾಸದಲ್ಲಿಯೇ ಗಮನಾರ್ಹ ಘಟ್ಟವಾಗಿದೆ. ವೀರತನ ಎನ್ನುವುದು ಕೇವಲ ಶಕ್ತಿಯ ಪ್ರಯೋಗವಲ್ಲ ಎಂಬುದನ್ನು ಅವನು ಗಮನಿಸಿದ ಅಂಶವನ್ನೂ ಮತ್ತು ಆ ಗುಣದ ವಿವಿಧ ಮುಖಗಳನ್ನೂ ಅವರು ಕಂಡುಕೊಂಡ ರೀತಿಯನ್ನು ಮುಂದೆ ಗಮನಸೋಣ.

ಮಾನವನು ತಾನು ಕಂಡ ಕೆಟ್ಟದನ್ನು ದೂರ ತಳ್ಳಿ, ಒಳ್ಳೆಯದನ್ನು ಸ್ಥಾಪಿಸಲು ಹಾಗೂ ತನ್ಮೂಲಕವಾಗಿ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಲು ಅನಂತಕಾಲದಿಂದ ಇಂದಿನವರೆಗೂ ಹೋರಾಟ ನಡೆಸುತ್ತಲೇ ಇದ್ದಾನೆ. ಹೋರಾಟ ಎಂಬುದು ಅವನ ಜೀವನದ ಒಂದು ಭಾಗವಾಗಿಯೇ ಉಳಿದಿದೆ. ಈ ರೀತಿಯ ಹೋರಾಟ ಅವನ ಜೀವಂತಿಕೆಯ ಸಂಕೇತವೂ ಹೌದು. ಆದರೆ ಆ ಹೋರಾಟ ಯಾವ ಬಗೆಯದು ಎಂಬುದು ಆ ಹೋರಾಟದಷ್ಟೇ ಮುಖ್ಯ. ಇಲ್ಲಿ ಹೋರಾಟ ಎಂಬ ಪದವನ್ನು ಮಾನವನ ಅಂತರಂಗಕ್ಕೆ ಸಂಬಂಧಿಸಿದ

ಹಾಗೆ ನಾವು ಬಳಸುತ್ತಿಲ್ಲ. ಅವನ ಜೀವನದ ಯಾವುದೇ ಹೋರಾಟವೂ ಹಿಂಸಾತ್ಮಕವಾಗಿಯೇ ಇರುತ್ತದೆ ಎಂಬುದನ್ನು ಇಂದಿನ ಕಾಲದಲ್ಲಿಯೂ ಒಪ್ಪಬೇಕಾಗುತ್ತದೆ.

ಇನ್ನು ಪ್ರಾಚೀನ ಮತ್ತು ಇತಿಹಾಸಕಾಲದ ಮಾನವನ ಹೋರಾಟವೆಂದರೆ ನಮಗೆ ನೆನಪಿಗೆ ಬರುವುದು ಯುದ್ಧ. ಯುದ್ಧವೆಂಬುದು ಒಂದು ಸಾಮೂಹಿಕ ಕ್ರಿಯೆಯಾದಾಗಲೇ ಅದಕ್ಕೆ ಯುದ್ಧದ ಗೌರವ ಮತ್ತು ಜಯಾಪಜಯಗಳು ದೊರೆಯುವುದು. ವ್ಯಕ್ತಿ ಯಾರೇ ಇರಲಿ ಎಂಥ ಬಲಶಾಲಿಯೇ ಇರಲಿ ಅವನ ಶಕ್ತಿ ಸಾಮೂಹಿಕವಾಗಿ ಕೆಲಸ ಮಾಡದಿದ್ದರೆ ಅದು ವ್ಯರ್ಥ ಆಯಾಸದಲ್ಲಿ ಅಂತ್ಯವಾಗುತ್ತದೆ. ಈ ರೀತಿ ಜನರನ್ನು ಸಂಘಟಿಸಲು ಜನರಲ್ಲಿಯೇ ಮೂಡಿಬಂದ ಮೌಲ್ಯವೇ 'ವೀರತನ'. ಧರ್ಮವೆಂಬುದೂ ಒಂದು ಜನಾಂಗದ ಅಥವಾ ದೇಶದ ಜನರ ಅವಿಭಾಜ್ಯ ಭಾಗವೆಂದು ಅಂದು ಪರಿಗಣಿತವಾಗಿದ್ದುದರಿಂದ ತನ್ನ ಅಸ್ತಿತ್ವ ರಕ್ಷಣೆಗಾಗಿ ಧರ್ಮವೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಈ ವೀರತನಕ್ಕೆ ಯುದ್ಧಕ್ಕೆ ಪ್ರೇರಣೆಯನ್ನೋ ಅಥವಾ ಬೆಂಬಲವನ್ನೋ ನೀಡಿತು.

ವೇದಗಳು ನಮ್ಮ ಇತಿಹಾಸವನ್ನು ಬರೆಯಲು ದೊರಕುವ ಮೊದಲ ಮೂಲ ಸಾಮಗ್ರಿಗಳು. ಆರ್ಯರು ಯೋಧ ಪ್ರವೃತ್ತಿಯುಳ್ಳ ಜನಾಂಗ ಎಂಬುದು ಸರ್ವವಿದಿತ. ಇವರಲ್ಲಿ ಸಾಮಾಜಿಕ ನಿಲುವಿನಲ್ಲಿ ವ್ಯಕ್ತಿ ಪರಾಕ್ರಮಕ್ಕೆ ಇಹ –ಪರಗಳೆರಡರಲ್ಲೂ ಉತ್ತಮ ಸ್ಥಾನ ಇತ್ತು. "ಯಾರು ಯುದ್ಧಗಳಲ್ಲಿ ಪರಾಕ್ರಮದಿಂದ ಕಾದಾಡಿ ಮೃತರಾಗಿ (ವೀರ) ಸ್ವರ್ಗದಲ್ಲಿ ವಾಸಿಸುತ್ತಿರುವರೋ, ಯಾರು ಸಹಸ್ರ ಸಂಖ್ಯೆಯಲ್ಲಿ ದಕ್ಷಿಣ ದಾನಮಾಡಿ, ಯಜ್ಞಾನುಷ್ಠಾನ ಕರ್ಮಮಾಡಿ ಉತ್ತಮ ಲೋಕಗಳಲ್ಲಿ ವಾಸಿಸುತ್ತಿರುವರೋ ಅಂಥ ಪಿತೃಗಳ ಬಳಿಗೆ ಹೋಗು ಆತ್ಮವೇ" ಎಂಬ ಒಂದು ಸೂಕ್ತವಿದೆ. ಅಂದರೆ ಯುದ್ಧದಲ್ಲಿ ಮಡಿದವರು ಮತ್ತು 'ದಕ್ಷಿಣದಾನ', 'ಯಜ್ಞಾನುಷ್ಠಾನ" ಮಾಡಿದವರು ಇಬ್ಬರೂ ಸಾಮಾಜಿಕ ಗೌರವಕ್ಕೆ ಏಕರೀತಿಯಲ್ಲಿ ಪಾತ್ರರು ಎಂದಾಯಿತು. ದಕ್ಷಿಣದಾನ ಮತ್ತು ಯಜ್ಞಾನುಷ್ಠಾನ ಕರ್ಮದ ಫಲಗಳು ಯುದ್ಧದಲ್ಲಿ ಮಡಿಯುವುದರಿಂದ ಪ್ರಾಪ್ತವಾಗುತ್ತದೆ ಎಂಬುದು ಮತಿತಾರ್ಥ. ಈ ಒಮದು ಆದರ್ಶಧ್ಯೇಯ ಭಾರತದಲ್ಲಿ ವೈದಿಕ ಪರಂಪರೆ ಬೆಳೆದ ಹಾಗೆ ತನ್ನ ಅರ್ಥವ್ಯಾಪ್ತಿಯನ್ನು ಪಡೆದು ಬಂದಿದೆ. ಅಂದರೆ ದ್ರಾವಿಡ ದೇಶದ ಮೂಲ ಜನಾಂಗಗಳಲ್ಲಿ 'ವೀರತ್ವ'ಕ್ಕೆ ಪ್ರಾಧಾನ್ಯತೆ ಇರಲಿಲ್ಲವೆಂದಾಗಲೀ. ಅದಕ್ಕೆ ಸಾಮಾಜಿಕ–ಮೌಲ್ಯದ ಬೆಲೆ ಇರಲಿಲ್ಲವೆಂದಾಗಲೀ ನಮ್ಮ ಅರ್ಥವಲ್ಲ. ದ್ರಾವಿಡ ದೇಶದ ಜನರೂ ಸಹ ವೀತತ್ವದ ಮೌಲ್ಯಗಳನ್ನು ಅದರ ಧ್ಯೇಯ ಮತ್ತು ಫಲಪ್ರಾಪ್ತಿಯ ಕಲ್ಪನೆಯನ್ನೂ ಆರ್ಯರಂತೆಯೇ ಬೆಳೆಸಿಕೊಂಡರು. ವೈದಿಕ ಧರ್ಮದ ವಿರುದ್ಧವಾಗಿ ಅಹಿಂಸಾತ್ಮಕ ಧ್ಯೇಯಗಳನ್ನುಳ್ಳ ಜೈನ ಮತ್ತು ಬೌದ್ಧ ಧರ್ಮಗಳೂ ಮೇಲಿನ

ಆದರ್ಶ ಧ್ಯೇಯಗಳನ್ನೇ ನೇರವಾಗಿ ಎತ್ತಿ ಹೇಳದಿದ್ದರೂ ತಮ್ಮ ಬೆಂಬಲವನ್ನು ಹಲವಾರು ರೀತಿಗಳಲ್ಲಿ ಸೂಚಿಸಿವೆ.

ಭಾರತೀಯ ಸಮಾಜದಲ್ಲಿದ್ದ ವರ್ಣಾಶ್ರಮ ವ್ಯವಸ್ಥೆಯು ಧರ್ಮಯುದ್ಧಗಳಿಗೆ ಪ್ರಾಮುಖ್ಯವನ್ನು ನೀಡಿತ್ತು. ಕ್ಷತ್ರಿಯರ ಧರ್ಮವೆಂದರೆ ಸಮಾಜದ ರಕ್ಷಣೆ ಮತ್ತು ಪರಿಪಾಲನೆ. ಈ ಪರಿಪಾಲನೆಗೆ ಅಡಚಣೆಯನ್ನುಂಟುಮಾಡುವ ಶಕ್ತಿಯ ವಿರುದ್ಧವಾಗಲಿ ಅಥವಾ ತನ್ನ ಸಮಾಜವನ್ನು ಉಚ್ಚಸ್ಥಿತಿಗೆ ತರುವಲ್ಲಿನ ಕ್ಷತ್ರಿಯರ ಯುದ್ಧವಾಗಲಿ ಅರ್ಥಪೂರ್ಣವಾದದ್ದೆಂದು ಅಂದಿನ ಜನರ ನಂಬಿಕೆ. ಈ ಕಾರಣಗಳಿಗೆ ಯುದ್ಧ ಭೂಮಿಯಲ್ಲಿ ಮಡಿಯುವುದರಿಂದ ತಮ್ಮ ಧರ್ಮಪರಿಪಾಲನೆಯಲ್ಲಿ ಶ್ರೇಷ್ಠಸಿದ್ಧಿಯನ್ನು ಸಾಧಿಸಿದಂತೆ ಎಂದೂ ಮತ್ತು ಆ ಸಿದ್ಧಿ ಹಲವಾರು ಕಡೆಗಳಲ್ಲಿ ರಾಮನ ಪಾದ, ಸೀತೆಯ ಪಾದ, ಪಾರ್ವತಿ ಪಾದ, ಮುಂತಾದ ಪೌರಾಣಿಕ ವ್ಯಕ್ತಿಗಳ ಪಾದಗಳ ಗುರುತು ಇರುವುದನ್ನೂ ಜನ ಅವುಗಳನ್ನು ಆರಾಧಿಸುವುದನ್ನೂ ಗಮನಸಬಹುದು. ಮತ್ತೆ ಕೆಲವು ಕಡೆ ಜೈನ, ಬೌದ್ಧ ಮತ್ತು ವೈದಿಕ ಧರ್ಮ ಪ್ರವಾದಿಗಳ ಪಾದುಕೆಗಳನ್ನು ಅವರ ಪಾದದ ಗುರುತುಗಳನ್ನೂ ಆರಾಧಿಸುವುದನ್ನೂ ಗಮನಸಬಹುದು.

“ಅಂದರೆ ಸತ್ತ ವ್ಯಕ್ತಿಯನ್ನು ಪ್ರತಿನಿಧಿಸಲು ಅವನ ಹೆಸರಿನಲ್ಲಿ ನಿಲ್ಲಿಸಿದ ಸ್ಮಾರಕ ಮಾತ್ರ ಸ್ಮಾರಕವಾಗಬೇಕೆಂದಿಲ್ಲ. ಅವನು ನಡೆದಾಡಿದ ಸ್ಥಳಗಳು, ಅವನು ಇದ್ದ ಜಾಗ, ಅವನು ಉಪಯೋಗಿಸುತ್ತಿದ್ದ ಆಯುಧಗಳು, ಅವನದೆಂದು ಭಾವಿಸಿದ ಪಳೆಯುಳಿಕೆಗಳೂ ಅವನ ಸ್ಮಾರಕಗಳಾಗಬಲ್ಲವು.”

ಬ್ರಿಟಿಷರೊಂದಿಗೆ ಹೋರಾಡಿ ಮಡಿದ ವೀರ ಸಂಗೊಳ್ಳಿರಾಯಣ್ಣ ತನ್ನ ಗೆಳೆಯರ ಕುಯುಕ್ತಿಯಿಂದ ಬ್ರಿಟಿಷರಿಗೆ ಸೆರೆಯಾದನು. ಅವನನ್ನು ಕೊಂದೇ ತೀರಬೇಕೆಂದು ತೀರ್ಮಾನಿಸಿದ ಅಧಿಕಾರಿಗಳು ಕ್ಷಮಾಪತ್ರ ಬರುವುದಕ್ಕೂ ಕಾಯಲಿಲ್ಲ. ಕ್ಷಮಾಪತ್ರ ಬಂದರೆ ರಾಯಣ್ಣನು ಉಳಿದು, ಮೋಸಮಾಡಿದ ತಮ್ಮನ್ನು ಸದೆ ಬಡಿಯುತ್ತಾನೆಂದು ಯೋಚಿಸಿ ಅವರು ಅವನನ್ನು ಕೊಂದು ಹಾಕಿದರು. ರಾಯಣ್ಣನಿಗೆ ಒದಗಿದ ದುರ್ಮರಣಕ್ಕೆ ಮರುಗಿದ. ಅವನ ಪರಾಕ್ರಮದ ಗುಣ ವಿಶೇಷಗಳಿಗೆ ಮಾರುಹೋದ ಜನತೆ ಯಾವ ಮರಕ್ಕೆ ಅವನನ್ನು ನೇಣು ಹಾಕಿ ಪ್ರಾಣ ತೆಗೆದರೋ ಅದನ್ನೇ ಅವನ ಸ್ಮಾರಕವಾಗಿ ಸ್ವೀಕರಿಸಿದರು. ಅದಕ್ಕೆ ಜನ ನಡೆದುಕೊಳ್ಳುವುದರ ಮೂಲಕ ತಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳತೊಡಗಿದರು. ಇದೇ ಶತಮಾನದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ವೀರರಲ್ಲಿ ಅಗ್ರಗಣ್ಯರಾದ ಚಂದ್ರಶೇಖರ್ ಅಜಾದರ ಸ್ಮಾರಕವೂ ಇದೇ ತೆರನಾಗಿದೆ. ಅಲಹಾಬಾದ್‌ನ ಇಂದಿನ ಅಜಾದ್ ಪಾರ್ಕ್‌ನಲ್ಲಿ ಚಂದ್ರಶೇಖರ್ ಒಂದು ನೇರಳೆ ಮರದ ಕೆಳಗೆ ಬ್ರಿಟಷರ ಗುಂಡಿಗೆ ಬಲಿಯಾದ. ಅವನ ಮರಣಾನಂತರ ಆ

ಮರವನ್ನು ಜನ ಪೂಜಿಸಲು ಆರಂಭಿಸಿದರು. ಇದನ್ನು ಸಹಿಸದ ಬ್ರಿಟಿಷ್ ಸರಕಾರದವರು ಆ ಮರವನ್ನು ಕಡಿದು ಹಾಕಿದರು. ಆ ಮರ ಹೋದುದಕ್ಕೆ ಜನ ಚಿಂತಿಸಲಿಲ್ಲ. ಅದೇ ಸ್ಥಳದಲ್ಲಿ ಮತ್ತೊಂದು ನೇರಳೆ ಮರವನ್ನು ನೆಟ್ಟರು. ಅಂದರೆ ಸ್ಮಾರಕದ ಜೊತೆಗೆ ಜನ ವಿಶ್ವಾಸವೂ ಸೇರಿ ಸತ್ತವನಿಗೆಸಂಬಂಧಪಟ್ಟ ಯಾವುದೇ ವಸ್ತು ಸತ್ತವನ ಸ್ಮಾರಕವಾಗಬಲ್ಲದು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಮಾನವ ಕೇವಲ ತನ್ನ ಒಡನಾಡಿಗೆ ಅಂದರೆ ಮನುಷ್ಯನಿಗೆ ಮಾತ್ರ ಈ ರೀತಿಯ ಸ್ಮಾರಕಗಳನ್ನು ನಿರ್ಮಿಸಿದ್ದ ಯಾವ ಯಾವ ಪ್ರಾಣಿಗಳಿಂದ ಅವನು ತನ್ನ ಬದುಕಿನ ಹೋರಾಟದಲ್ಲಿ ಸಹಾಯವನ್ನು ಪಡೆದನೋ ಮತ್ತು ಯಾವ ಒಂದು ಪ್ರಾಣಿಯಲ್ಲಿ ದೈವಾಂಶವನ್ನು ಕಂಡನೋ ಅಂಥ ಪ್ರಾಣಿಗಳಿಗೂ ಸ್ಮಾರಕಗಳನ್ನು ನಿರ್ಮಿಸಿರುವುದನ್ನು ಗಮನಸಬಹುದು. ಮಾನವ ತನ್ನ ದಿನನಿತ್ಯದ ಬದುಕಿಗೆ ನೆರವಾಗುತ್ತಿದ್ದ ಪ್ರಾಣಿಗಳನ್ನು ವಿಶ್ವಾಸದಿಂದ ನೋಡಲು ತೊಡಗಿದ. ಇಂಥ ಪ್ರಾಣಿಗಳಲ್ಲಿ ದನಗಳು, ನಾಯಿ, ಕುದುರೆಗಳು ಅವನ ವಿಶ್ವಾಸಕ್ಕೆ ವಿಶೇಷವಾಗಿ ಪಾತ್ರವಾಗಿವೆ ಹಾಗೂ ಅವನಂದ ಸ್ಮಾರಕ ಶಿಲೆಗಳನ್ನೂ ಪಡೆದಿವೆ.

ಬೇಟೆಯಲ್ಲಿ ಮಾನವನಿಗೆ ಬಲಗೈಯಾಗಿ ನಂತ ಪ್ರಾಣಿ ಎಂದರೆ ನಾಯಿ. ಇದೇ ಬಹುಶಃ ಅವನು ಮೊದಲಿಗೆ ತನ್ನೊಂದಿಗೆ ಸಾಕಲು ಆರಂಭಿಸಿದ ಪ್ರಾಣಿ ಇರಬಹುದೆಂದು ತೋರುತ್ತದೆ. ತನ್ನ ಜೀವನದಲ್ಲಿ ಅನೇಕ ರೀತಿಯಿಂದ ನೆರವಾಗುವ ನಾಯಿಯ ಬಗ್ಗೆ ಮಾನವನಿಗಿದ್ದ ಮತ್ತು ಇಂದಿಗೂ ಇರುವ ವಿಶ್ವಾಸ ಮತ್ತು ಆದರಗಳನ್ನು ಹೀಗೆಂದು ವಿವರಿಸಲು ಸಾಧ್ಯವಿಲ್ಲ. ಅದನ್ನು ತನ್ನ ಮಗನಂತೆ, ಸ್ನೇಹಿತನಂತೆ, ಆಳಿನಂತೆ ಅನೇಕ ರೀತಿಗಳಲ್ಲಿ ನಡೆಸಿಕೊಂಡಿದ್ದಾನೆ. ಬೇಟೆಯಿಂದ ಯಶಸ್ವಿಯಾಗಿ ಬಂದನಂತರ ಬಂಗಾಳದ 'ಮಾಳರ್' ಎಂಬ ಜನಾಂಗದವರು ನಾಯಿಗೆ ಔತಣವನ್ನು ನೀಡುತ್ತಾರೆ. ಬೇಟೆಯ ನಾಯಿಯನ್ನು ಕೊಂದವನಿಗೆ ದಂಡವನ್ನು ಹಾಕುತ್ತಾರೆ. ನಾಯಿಯ ಬಗ್ಗೆ ಇನ್ನಷ್ಟು ವಿಶ್ವಾಸ ತೋರಲು ಮುಖ್ಯ ಕಾರಣವೆಂದರೆ ನಾಯಿ ತನ್ನ ಒಡೆಯನ ಬಗ್ಗೆ ತೋರುವ ನಿಷ್ಠೆ. ಇದನ್ನು ಅರಿತ ರಾಕ್ಷಸರು ಮತ್ತು ದೆವ್ವಗಳು ಜನರನ್ನು ಮೋಸಮಾಡಲು ಅವರಿಗೆ ಪ್ರಿಯವಾದ ನಾಯಿಯ ರೂಪದಲ್ಲಿ ಬರುತ್ತಾರೆಂದು ಕೆಲವಾರು ಕಡೆ ನಂಬಿಕೆಯಿದೆ.

ಪಂಜಾಬ್ ರಾಜ್ಯದ ಲಾಹೋರಿನಲ್ಲಿ ಒಂದು ವೀರನಾಯಿಯ ಗೋರಿ ಇದೆ. ನಾಯಿ ಯಾವಸ್ಥಳದಲ್ಲಿ ಮೃತಪಟ್ಟಿತೋ ಅದೇ ಸ್ಥಳದಲ್ಲಿ ಅದರ ಸಮಾಧಿ ಇದೆ. ಈಗ ಅದು ಒಂದು ಪೂಜಾರ್ಹವಾದ ಸ್ಥಳವೇ ಆಗಿದೆ. ಬುಲಂದ್‌ಷಾರ್‌ನಲ್ಲಿ ಮೂವರು ಸಂತರ ಸಮಾಧಿಗಳಿವೆ. ಅವುಗಳ ಬಳಿಯೇ ಅವರಿಗೆ ಪ್ರೀತಿಪಾತ್ರವಾಗಿದ್ದ ನಾಯಿಯೊಂದರ ಸಮಾಧಿಯೂ ಇದೆ. ಸಂತರ ಸಮಾಧಿಗಳನ್ನು ಕಂಡಷ್ಟೇ ಗೌರವದಿಂದ

ನಾಯಿಯ ಸಮಾಧಿಯನ್ನೂ ಕಾಣುತ್ತಾರೆ. ಮಧ್ಯಭಾರತದ ಕೆಲವು ಹಳ್ಳಿಗಳಲ್ಲಿ ಮತ್ತು ಕಾಥೇವಾಡದಲ್ಲಿ ನಾಯಿಗಳಿಗಾಗಿಯೇ ಕಟ್ಟಿಸಿರುವ ದೇವಾಲಯಗಳಿವೆ. ಕರ್ನಾಟಕದಲ್ಲಿ ನಾಯಿಗಳಿಗಾಗಿ ಹಾಕಿರುವ ಸ್ಮಾರಕ ಶಿಲೆಗಳನ್ನು ಮಂಡ್ಯ ಜಿಲ್ಲೆಯ ಆತಕೂರು, ಬೆಂಗಳೂರು ಜಿಲ್ಲೆಯ ಯಲಹಂಕ, ಕೋಲಾರ ಜಿಲ್ಲೆಯ ಮೇಲಾಗಾಣಿ.

ಆತ್ಮಬಲಿದಾನ : ಕರ್ನಾಟಕದಲ್ಲಿ ಪ್ರಚಲಿತವಿದ್ದ, ಪ್ರಿಯವ್ಯಕ್ತಿಯ ಸಂಪ್ರೀತಿಗಾಗಿ ಆತ್ಮಬಲಿದಾನ ನೀಡುವ ಒಂದು ಸಂಪ್ರದಾಯ. ರಾಜಕಾರಣಿಯರ ಅಂಗರಕ್ಷಕರು ರಾಜನ ಮರಣವಾದಲ್ಲಿ ತಮ್ಮ ಜೀವನವನ್ನು ತ್ಯಜಿಸುತ್ತಿದ್ದುದುಂಟು. ಈ ಆತ್ಮಬಲಿದಾನ ಪತಿಗಾಗಿ ಪ್ರಿಯಸತಿಯ ಪ್ರಾಣೋತ್ಕ್ರಮಣ, ವ್ಯಕ್ತಿಗಾಗಿ ಪ್ರಿಯವ್ಯಕ್ತಿಯ ಪ್ರಾಣೋತ್ಕ್ರಮಣ (ಇದು ಮುಂದೆ ಒಡೆಯ–ಸೇವಕ ಸಂಬಂಧದಲ್ಲೂ ಬೆಳೆಯಿತು) – ಹೀಗೆ ಎರಡು ಕವಲುಗಳಲ್ಲಿ ಬೆಳೆದುಬಂದಿತು. ಇವುಗಳಲ್ಲಿ ಒಂದರ ಹೆಸರು ಸಹಗಮನ, ಇನ್ನೊಂದರ ಹೆಸರು ಕಿಳ್ಗುಂಟೆ ಪುರುಷನಗಾಗಿ ಪುರುಷ. ಪುರುಷನಗಾಗಿ ಸ್ತ್ರೀ, ಸ್ತ್ರೀಗಾಗಿ ಸ್ತ್ರೀ, ಸ್ತ್ರೀಗಾಗಿ ಪುರುಷ– ಹೀಗೆ ಯಾವುದೇ ಬಗೆಯಲ್ಲಿ ಕೈಕೊಂಡ ಬಲಿದಾನವಾಗಿರಬಹುದು. ಪ್ರಿಯವ್ಯಕ್ತಿ ಜೀವಿಸಿದ್ದ ಪ್ರಸಂಗದಲ್ಲಿ ಶುಭಹಾರೈಸಿ. ಇಲ್ಲವೆ ಅವನು ಮರಣ ಹೊಂದಿದ ಪ್ರಸಂಗದಲ್ಲಿ ಮೋಕ್ಷ ಹಾರಯಸಿ ಇವರು ಆತ್ಮಬಲಿದಾನ ಮಾಡಿಕೊಳ್ಳುತ್ತಿದ್ದರು.

ಕರ್ನಾಟಕದ ಶಾಸನಗಳು ಕಾವ್ಯಗಳನ್ನು ಐತಿಹಾಸಿಕವಾಗಿ ನೋಡಿದರೆ ಈ ಸಂಪ್ರದಾಯ ಕಾಲದಿಂದ ಕಾಲಕ್ಕೆ ಕಿಳ್ಗುಂಟೆ–ವೇಳೆವಾಳಿ–ಲೆಂಕವಾಳಿ ಎಂದು ಹೆಸರುಗಳನ್ನು ಬದಲಿಸುತ್ತ ಬಂದಿದೆಯೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಕಿರ್ಗುಂಟೆ ಗಂಗ–ರಾಷ್ಟ್ರಕೂಟದ ಕಾಲದಲ್ಲಿ, ವೇಳೆವಾಳಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ, ಲೆಂಕವಾಳಿ ಕಲ್ಯಾಣಚಾಳುಕ್ಯ–ಹೊಯ್ಸಳರ ಕಾಲದಲ್ಲಿ ಪ್ರಧಾನವಾಗಿ ಬಳಕೆಗೊಂಡ ಪದಗಳಾಗಿವೆ. ಕಿಳ್ಗುಂಟೆ ಎಂಬುದು ಹೂಳುವ ಸಂಪ್ರದಾಯವನ್ನು, ವೇಳೆವಾಳಿ ಎಂಬುದು ಸುಡುವ ಸಂಪ್ರದಾಯವನ್ನು ಪ್ರತಿನಿಧಿಸಲು ಹುಟ್ಟಿದ ಪದಗಳಾಗಿರಬಹುದು. ಇವೆರಡಲ್ಲಿ ಬಹುಶಃ ಕಿಳ್ಗುಂಟೆ ಹಳೆಯ ಪದ. ವೇಳೆವಾಳಿ ಆಮೇಲೆ ಬೆಳಕಿಗೆ ಬಂದ ಪದವಾಗಿರುವಂತೆ ತೋರುತ್ತದೆ. ಹೀಗೆ ತರುವಾಯ ಬಳಕೆಯಾದ ವೇಳೆವಾಳಿ ಎಂಬುದು ಕಿಳ್ಗುಂಟೆ ಪದವನ್ನು ತಳ್ಳಿ ಎರಡು ಸಂಪ್ರದಾಯಗಳಿಗೆ ಅದೇ ಬಳಕೆಯಾಗುತ್ತಬಂದಿತೆಂದು ತೋರುತ್ತದೆ. ಕಿಳ್ಗುಂಟೆ ಬಹಳ ಹಿಂದೆಯೇ ಕಾಣಿಯಾಗಿ ವೇಳೆವಾಳಿ 12ನೆಯ ಶತಮಾನದವರೆಗೆ ಬಳಕೆಯಲ್ಲಿತ್ತು.

ಜೋಳವಾಳಿ ಎಂಬುದು ವೈರಿಯೊಂದಿಗೆ ಹೋರಾಡಿ ಗೆಲ್ಲುವ ಇಲ್ಲವೆ ಮಡಿಯುವ ವ್ಯಕ್ತಿಯನ್ನು ಸೂಚಿಸಿದರೆ ಈ ವೇಳೆವಾಳಿ ತಾನಾಗಿಯೇ ಜೀವ ತ್ಯಾಗ ಮಾಡಿಕೊಳ್ಳುವ ಇಲ್ಲವೆ ಮಾಡಿಸಿಕೊಳ್ಳುವ ವ್ಯಕ್ತಿಯನ್ನು ಸೂಚಿಸುತ್ತದೆ. ಈ ಜೋಳವಾಳಿ –ವೇಳೆವಾಳಿ ಎಂಬಿವು ಒಂದು ಬಗೆಯ ಜೋಡುಪದಗಳೆಂಬಂತೆ ಕಲ್ಯಾಣ ಚಾಳುಕ್ಯರ ಕಾಲದವರೆಗೂ ಬಳಕೆಗೊಂಡಿವೆ. ಬಸವಣ್ಣನವರ ವಚನಗಳಲ್ಲಿ ವೇಳೆವಾಳಿ–ಜೋಳವಾಳಿ, ಅಂಕ–ಲೆಂಕ ಎರಡೂ ಪ್ರಯೋಗಗಳಿರುವುದರಿಂದ ಕಲಚುರಿ, ಹೊಯ್ಸಳರ ಕಾಲಕ್ಕೆ ಈ ಪದಗಳಿಗೆ ಪರ್ಯಾಯವಾಗಿ ಅಂಕ–ಲೆಂಕ ಪದಗಳು ಬಳಕೆಯಲ್ಲಿ ಬರತೊಡಗಿದ್ದವು.

ಪ್ರಾಚೀನ ಕಾಲದಲ್ಲಿ ಕೆಲವು ವೃತ್ತಿಯವರು ತಮ್ಮ ವೃತ್ತಿಸಂಘಗಳನ್ನು ಅಸ್ತಿತ್ವಕ್ಕೆ ತಂದಿದ್ದರು. ಉದಾ: ಉಗುರು ಮುನ್ನೂರ್ವರು, ಅಯ್ಯಾವೊಳೆ ಐನೂರ್ವರು ಇತ್ಯಾದಿ. ಈ ಮಾದರಿಯಲ್ಲಿ ಲೆಂಕವಾಳಿಗಳೂ ಲೆಂಕಸಾಸಿರ್ವರು ಎಂಬ ಸಂಘವನ್ನು ಅಸ್ತಿತ್ವಕ್ಕೆ ತಂದ ವಿಷಯ ಶಾಸನಗಳಲ್ಲಿ ಬರುತ್ತವೆ. ಬಹುಶಃ ಯಾವುದೋ ಊರಿನಲ್ಲಿ ಮೂಲತಃ ಸಾವಿರ ಜನ ಲೆಂಕರ ಸಂಸ್ಥೆಯಿದ್ದು. ಕಾಲಕ್ರಮದಲ್ಲಿ ಯಾವುದೇ ಊರಿನಲ್ಲಿ ಎಷ್ಟೇ ಜನ ಲೆಂಕರಿದ್ದರೂ ಆ ಸಂಘಕ್ಕೆ (ಸಮೂಹಕ್ಕೆ ಲೆಂಕಸಾಸಿರ್ವರು ಎಂದು ಕರೆಯುವುದು ರೂಢಿಯಾಗಿರಬೇಕು.

ಲೆಂಕ ಇಲ್ಲವೆ ಲೆಂಕವಾಳಿ ಎಂಬ ಪದ ವೇಳೆವಾಳಿ ಎಂಬುದರ ಚಲಾವಣೆಯನ್ನು ಕಡಿಮೆ ಮಾಡಿ, ಹೊಯ್ಸಳರ ಕಾಲದಲ್ಲಿ ಹೆಚ್ಚು ಬಳಕೆಗೊಂಡಿತು. ಹೀಗಿರುವಾಗ ಈ ಆತ್ಮ ಬಲಿದಾನ ಸಂಪ್ರದಾಯದ ವ್ಯಕ್ತಿಗಳಿಗೆ ಹೊಯ್ಸಳರ ಕಾಲದಲ್ಲಿ ಗರುಡ ಎಂದೂ ಕರೆಯುತ್ತಿದ್ದರೆಂದು ವಿದ್ವಾಂಸರು ಹೇಳುವುದಕ್ಕೆ ಆಧಾರವಿದ್ದಂತೆ ಕಾಣುವುದಿಲ್ಲ. ಗರುಡ ಎಂದಾಕ್ಷಣ ನಮಗೆ ನೆನಪಾಗುವುದೆಂದರೆ ಕುವರಲಕ್ಷ್ಮನನ್ನು ಕುರಿತ ಬೇಲೂರು ಶಾಸನ. ಆದರೆ ಈ ಶಾಸನದಲ್ಲಿ ಕುವರಲಕ್ಷ್ಮನಿಗಾಗಿ ಪೊರೆದ ಮಗಂ, ಪ್ರಿಯಪುತ್ರಂ, ವೇಳ, ಲೆಂಕ, ಎಂಬ ಪದಗಳು ಬಳಕೆಯಾಗಿದ್ದು, ಇವು ಸಮಾನಾರ್ಥವನ್ನು ಕೊಡುತ್ತವೆ. ಇದರಿಂದ ಕುವರಲಕ್ಷ್ಮನನ್ನು ಬೇಲೂರು ಶಾಸನ ವೇಳೆವಾಳಿ ಅಥವಾ ಲೆಂಕವಾಳಿ ಎಂಬ ಪದದಿಂದ ಕರೆದಿದೆಯೇ ಹೊರತು ಅವನಗಾಗಿ ಗರುಡ ಎಂಬ ಪದವನ್ನು ಬಳಸಿಲ್ಲವೆನಿಸುತ್ತದೆ. ವೇಳೆವಾಳಿ ಸ್ಮಾರಕ ಕಂಬದ ಮೇಲೆ ಗರುಡನ ಮತ್ತು ವೇಳೆವಾಳಿ ವ್ಯಕ್ತಿಯ ವಿಗ್ರಹಗಳನ್ನು ಕೆತ್ತುವುದು ಸಂಪ್ರದಾಯ. ಶಾಸನ ಪದ್ಯದಲ್ಲಿ ಗರುಡ ಮತ್ತು ಲಕ್ಷ್ಮ– ಇವರ ವಿಗ್ರಹಗಳಣ್ನು ಕೆತ್ತಿದುದನ್ನು ಸೂಚಿಸಲಾಗಿದೆ; ಮತ್ತು ಗರುಡನನ್ನು ಲಕ್ಷ್ಮನಗೆ ಉಪಮಾನವಾಗಿ ಬಳಸಲಾಗಿದೆ. ಹೀಗಾಗಿ ಗರುಡ ಎಂಬುದು ಆತ್ಮಬಲಿದಾನ ಮಾಡಿಕೊಳ್ಳುವವರಿಗೆ ಬಳಸುತ್ತಲಿದ್ದ ಪಾರಿಭಾಷಿಕ ಪದವೆಂದು ಶಾಸನದಲ್ಲಿ ಎಲ್ಲೂ ಸೂಚಿತವಾದಂತೆ ಕಾಣುವುದಿಲ್ಲ.

ಸ್ಮಾರಕ ಶಾಸನಗಳು : ಬಾಗಲಕೋಟೆ ಜಿಲ್ಲೆಯ ವಾಸ್ತುಶಿಲ್ಪದ ದೃಷ್ಟಿಯಿಂದ ವಿಶ್ವದಲ್ಲೇ ಪ್ರಸಿದ್ಧಿಯನ್ನು ಪಡೆದ ಅಮೂಲ್ಯ ಶಾಸನಗಳನ್ನು ಹೊಂದಿದೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಯಾದವರು, ವಿಜಯನಗರದ ಅರಸರು, ಆದಿಲ್‌ಶಾಹಿ ಅರಸರು ಮತ್ತು ಬ್ರಿಟಿಷರ ಶಾಸನಗಳು ಇಲ್ಲಿ ದೊರಕಿವೆ. ಪ್ರಮುಖ ರಾಜವಂಶಗಳು ಈ ಜಿಲ್ಲೆಯಲ್ಲಿ ಆಡಳಿತ ನಡೆಸಿದ್ದರೂ ಶಾಸನಗಳ ಸಂಖ್ಯೆಯ ದೃಷ್ಟಿಯಿಂದ ನಿರಾಸೆಯಾಗುತ್ತದೆ. ಒಟ್ಟಾರೆಯಾಗಿ 670ಕ್ಕೂ ಹೆಚ್ಚು ಶಾಸನಗಳು ದೊರಕಿದ್ದರೂ 365ಕ್ಕೂ ಅಧಿಕ ಶಾಶ್ವತವಾಗಿ ಕೇವಲ ಹೆಸರುಗಳನ್ನು ಮತ್ತು ಒಂದು ಅಥವಾ ಎರಡು ಸಾಲುಗಳನ್ನು ಹೊಂದಿದ ಶಾಸನಗಳಾಗಿವೆ. ಶಾಸನಗಳೂ ದಾನ, ಧರ್ಮ ಮತ್ತು ದೇವಾಲಯ ನಿರ್ಮಾಣದ ವಿಷಯವನ್ನು ತಿಳಿಸುತ್ತವೆ. ಇವುಗಳ ಸ್ಮಾರಕ ಶಾಸನಗಳಿಗೆ ಅಂದರೆ ವೀರಗಲ್ಲು, ಮಾಸ್ತಿಕಲ್ಲು, ನಿಸಿಧಿಕಲ್ಲು, ಆತ್ಮಬಲಿ ಕಲ್ಲುಗಳ ಸಂಖ್ಯೆ ಬೆರಳೆಣಿಕೆಯಷ್ಟು ಶಾಸನರಹಿತ ಸ್ಮಾರಕ ಶಿಲ್ಪಗಳಿಗೂ ಈ ಜಿಲ್ಲೆಯಲ್ಲಿ ದೊಡ್ಡ ಬರವಿದೆ. ಕೆಲವೇ ಕೆಲವು ವೀರಗಲ್ಲುಗಳು. ವೀರಗಲ್ಲುಗಳು, ಗೋಸಾಸಕಲ್ಲುಗಳು, ನಿಸಿಧಿ ಸ್ಮಾರಕಗಳು ದೊರಕಿವೆ. ಅವುಗಳನ್ನೇ ಇಲ್ಲಿ ಸೂಕ್ಷ್ಮವಾಗಿ ಅವಲೋಕಿಸಲಾಗಿದೆ. ಇಡೀ ಜಿಲ್ಲೆಯಲ್ಲಿ ಇದುವರೆಗೂ 16 ವೀರಗಲ್ಲು ಶಾಸನ 1 ನಿಸಿಧಿ ಶಾಸನ ಬೆಳಕಿಗೆ ಬಂದಿದೆ. ಮಹಾಸತಿ ಅಥವಾ ಆತ್ಮಬಲಿಯ ಶಾಸನಗಳು ಯಾವುವೂ ದೊರಕಿಲ್ಲ.

ಕಾಲದ ದೃಷ್ಟಿಯಿಂದ ಪ್ರಾಚೀನವಾದ ವೀರಗಲ್ಲೆಂದರೆ ಬಾದಾಮಿ ವಸ್ತುಸಂಗ್ರಹಾಲಯದಲ್ಲಿನ ಕ್ರಿ.ಶ. 6 ಶತಮಾನದ ವೀರಗಲ್ಲು ಕಾಲದ ಉಲ್ಲೇಖವಿಲ್ಲ. ಲಿಪಿಯ ಆಧಾರದಿಂದ ಇದನ್ನು ರಾಷ್ಟ್ರಕೂಟರ ಕಾಲಕ್ಕೆ ಸೇರಿಸಬಹುದು. ಮೂರು ಸಾಲು ಶಾಸನವಿರುವ ವಾತಾಪಿ ಸ್ಥಳದ ಚತುರ್ವೇದ ಸಮುದಾಯದ ಎರಡಸಾವಿರ ಸಮಯದ ತಳವಾರನಾದ ಗಗೆರೆ ರಾಯಂಣ್ಣ ಹೋರಾಟದಲ್ಲಿ ಮಡಿದ ವಿಷಯವಿದೆ. ಹೋರಾಟದ ಕಾರಣ ತಿಳಿಯುವುದಿಲ್ಲ. ತಳವಾರ ಉದ್ಯೋಗವಾದ್ದರಿಂದ ಊರ ಉಳಿವಿಗಾಗಿ ಸತ್ತಿರಬಹುದು. ಇದರಲ್ಲಿ ಉಲ್ಲೇಖವಾಗಿರುವ ನಾಲ್ಕು ವೇದಗಳ 2000 ಸಮುದಾಯ' ಯಾವುದೆಂದು ತಿಳಿದುಬರುವುದಿಲ್ಲ. ಬಾದಾಮಿಯಲ್ಲಿದ್ದಿರಬಹುದಾದ ಮಹಾಜನರ ಗುಂಪನ್ನು ಅಥವಾ ಬ್ರಾಹ್ಮಣ ಸಮುದಾಯದ ಒಂದು ಶಾಖೆಯನ್ನು ಇದು ಸೂಚಿಸುತ್ತಿರಬಹುದು.

ಕ್ರಿ.ಶ. 9ನೇ ಶತಮಾನಕ್ಕೆ ಸೇರಿಸಬಹುದಾದ ರಾಷ್ಟ್ರಕೂಟರ ಕೊನೆಯ ಕಾಲಮಾನದ ಮೂರು ವೀರಗಲ್ಲುಗಳು ಐಹೊಳೆಯ ಹುಚ್ಚಮಲ್ಲಿಗುಡಿ ಸಮೀಪದ ಬಾವಿಯ ಬಳಿಯಿದೆ. ಒಂದು ವೀರಗಲ್ಲಿನಲ್ಲಿ 'ವಹಮಾನ ಬಗುದೇವಪ್ಪ ಬೆಸಗೆ ಇಳಿದೊರ್' ಎಂದಿದ್ದು ಬಗುದೇವಪ್ಪ ಹೇಳಿದೆನೆಂದೋ ಅಥವಾ ಬಗುದೇವಪ್ಪ ಮಡಿದನೆಂದೋ ಹೇಳಬಹುದು. ಇಲ್ಲಿನ ಪಾಠವನ್ನು 'ಬೆಸಗೆ ಇಳಿದೊರ್' ಎಂದಿದ್ದು

ಬಗುದೇವಪ್ಪ ಹೇಳಿದನೆಂದೋ ಅಥವಾ ಬಗುದೇವಪ್ಪ ಮಡಿದನೆಂದೋ ಹೇಳಬಹುದು. ಇಲ್ಲಿನ ಪಾಠವನ್ನು 'ಬೆಸುಗೆ ಇಳಿದೊರ್' ಎಂಬುದನ್ನು 'ಬೆಸುಗೆಯಿದೊನ್' ಎಂದು ಊಹಿಸಬಹುದು.

ಸಮಾಧಿ ಬರಹಗಳು

ಕಲಾದಗಿರಿಯಲ್ಲಿ ಬ್ರಿಟಿಷರ ಸಮಾಧಿಗಳ ಮೇಲೆ ಕ್ರಿ.ಶ. 1820ರಿಂದ 1879ರ ಅವಧಿಯೊಳಗಿನ 16 ಇಂಗ್ಲೀಷ್ ಶಾಸನಗಳು ದೊರಕಿವೆ. ಮಕ್ಕಳು, ಸೈನಿಕರು, ಸೈನ್ಯ ಅಧಿಕಾರಿಗಳು ಮತ್ತು ಅವರ ಹೆಂಡತಿಯರ ನೆನಪಿಗೆ ಹಾಕಿಸಿದ ಶಾಸನಗಳಾಗಿವೆ. ಇವುಗಳನ್ನು ನಿರ್ಮಿಸಿದ ರೀತಿ ಸುಂದರವಾಗಿದೆ. ಎಲ್ಲವೂ ಬಿಳಿ ಅಮೃತ ಶಿಲೆಯಲ್ಲಿ ಕೆತ್ತಲಾಗಿದ್ದು, ಶಿಲೆಯ ಅಂಚಿನಲ್ಲಿ ಹೂವಿನ ಚಿತ್ರ, ಅಂಚುಗಳನ್ನು ಕಲಾತ್ಮಕವಾಗಿ ಕೆತ್ತಲಾಗಿದೆ. ಬಹುತೇಕ ಶಿಲೆಗಳು ಒಡೆದಿದ್ದು, ನಿಧಿಗಳ್ಳರ ಆಸೆಗೆ ಬಲಿಯಾಗಿವೆ. ಸಮಾಧಿಗಳು ಸುಂದರವಾಗಿದ್ದು ಅನೇಕ ಸಮಾಧಿಗಳು ಸ್ತೂಪಗಳಂತೆ, ಮಂಟಪಗಳಂತೆ, ಕೆಲವು ಆಯತ, ಚೌಕ ಕಂಬಗಳಂತೆ ಗಾರೆಯಲ್ಲಿ ನಿರ್ಮಿಸಲಾಗಿದ್ದು, ಬಹಳಷ್ಟು ಹಾಳಾಗಿವೆ.

ವೀರಗಲ್ಲುಗಳ ಶಿಲ ಬಾಗಲಕೋಟೆ

ಈ ಜಿಲ್ಲೆಯ ಬಹುತೇಕ ವೀರಗಲ್ಲುಗಳು ತ್ರುಟಿತವಾಗಿದ್ದು ಶಿಲ್ಪಗಳು ಸವೆದಿವೆ. ಕೆಲವು ಒಡೆದುಹೋಗಿವೆ. ದೊರಕಿರುವ ಶಿಲ್ಪಗಳೂ ಸಹ ಸಾಧಾರಣ ಶೈಲಿಯಲ್ಲಿವೆ. ಬಹಳಷ್ಟು ವೀರಗಲ್ಲುಗಳ ತಳಭಾಗದ ಹೋರಾಟದ ಹಂತಗಳು ಮುಕ್ಕಾಗಿವೆ.

ಐಹೊಳೆ ಶಾಸನಗಳು

ಐಹೊಳೆ ವಸ್ತುಸಂಗ್ರಹಾಲಯದಲ್ಲಿನ ವೀರಗಲ್ಲುಗಳು ಆಕರ್ಷಕವಾಗಿದ್ದು ಇವುಗಳಲ್ಲಿ ಎರಡು ತುರುಗೊಳ್ ಒಂದರಲ್ಲಿ ಮೂರು ಹಂತಗಳಿದ್ದು ಕೆಳಹಂತದಲ್ಲಿ 11ನೇ ಶತಮಾನದ ವೀರಗಲ್ಲಾಗಿದ್ದು ಇದರ ಹಿಂಬದಿಯಲ್ಲಿಯೇ ಮತ್ತೊಂದು 12ನೇ ಶತಮಾನದ ಸುಂದರವಾದ ವೀರಗಲ್ಲಿದೆ. ಇದು ಮೂರು ಕ್ಷೇತ್ರಗಳಲ್ಲಿದ್ದು ಕೆಳಹಂತದಲ್ಲಿ ವೀರನು ಅನೇಕ ಶತ್ರುಗಳ ಜೊತೆ ಬಿಲ್ಲು-ಬಾಣ, ಈಟಿಗಳೊಂದಿಗೆ ಹೋರಾಡುತ್ತಿರುವನು. ಅನೇಕರು ಮರಣಹೊಂದಿದ್ದಾರೆ.ಲ ಎರಡನೆ ಹಂತದಲ್ಲಿ ಇಬ್ಬರು ವ್ಯಕ್ತಿಗಳು ವಿಮಾನವನ್ನು ಹತ್ತಿರುವಂತೆಯೂ ಅಕ್ಕ-ಪಕ್ಕ ಅಪ್ಸರೆಯರು ನಂತಂತೆಯೂ ಚಿತ್ರಿಸಲಾಗಿದೆ. ಇವರ ಮೇಲೆ ಎರಡೂ ಬದಿಯಲ್ಲಿ 3 ಜನ ವಾದ್ಯಕಾರರು ವಿವಿಧ ವಾದ್ಯಗಳನ್ನು ನುಡಿಸುತ್ತಿದ್ದಾರೆ. ಮೇಲಿನ

ಸ್ವರ್ಗ ಪ್ರಾಪ್ತಿ ಹಂತದಲ್ಲಿ ವೀರನು ಪಿತವಾದ ವೇದಿಕೆಯ ಮೇಲೆ ಕುಳಿತಿದ್ದು ಯತಿಯೊಬ್ಬನು ಶಿವಲಿಂಗವನ್ನು ಪೂಜಿಸುತ್ತಿದ್ದಾನೆ. ಲಿಂಗಕ್ಕೆ ಕೃತಿಯನ್ನು ಚಿತ್ರಿಸಲಾಗಿದೆ. ಶಿವಲಿಂಗದ ಮುಂದೆ ನಂದಿ ಕುಳಿತಿದೆ. ವೀರಗಲ್ಲಿನ ಲಲಾಟ ಭಾಗವನ್ನು ಮೂರು ಕ್ಷೇತ್ರದಲ್ಲಿ ದೇವಾಲಯದ ಶಿಖರದಂತೆ ನಿರ್ಮಿಸಲಾಗಿದೆ. ಇದರ ಶಾಸನ ಪಾಠವೂ ಪೂರ್ತಿ ಸವೆದಿದೆ.

ಇದರ ಬಲಪಕ್ಕದಲ್ಲಿ ಮತ್ತೊಂದು ವೀರಗಲ್ಲಿದ್ದು ಬಹಳ ಮುಕ್ಕಾಗಿದೆ. ಕೆಳಹಂತದಲ್ಲಿ ವೀರನನ್ನು ಬಹಳ ದೊಡ್ಡದಾಗಿ ಚಿತ್ರಿಸಿದೆ. ಶತ್ರುಗಳು ಹೋರಾಡುತ್ತಿದ್ದು ಕೆಲವರು ಹೆದರಿ ಓಡುತ್ತಿದ್ದಾರೆ. ಎರಡನೆ ಹಂತದಲ್ಲಿ ಸ್ವರ್ಗ ಪ್ರಾಪ್ತಿ ಇದೆ. ಇಲ್ಲಿನ ಆಕೃತಿಗಳು ಪ್ರಮಾಣಬದ್ಧವಾಗಿಲ್ಲ. ವೀರನ ಕೈಗಳನ್ನು ಕಾಲುಗಳಿಗಿಂತ ದಪ್ಪನಾಗಿ ಚಿತ್ರಿಸಿದ್ದು, ಅಸಹಜವಾಗಿದೆ. ಈ ಕಾರಣದಿಂದ ಇದು 17–18 ನೇ ಶತಮಾನದ ವೀರಗಲ್ಲಾಗಿರಬಹುದೆಂದು ಊಹಿಸಬಹುದು. ವೀರನು ಬಿಲ್ಲು–ಬಾಣಗಳನ್ನು ಹಿಡಿದು ಹೋರಾಡುತ್ತಿದ್ದಾನೆ. ಇವನ ಹಿಂದೆ ಅನೇಕ ದನಗಳು ಹಿಂತಿರುಗಿ ಹೊರಟಿವೆ. ಒಂದು ದನ ವೀರನ ಹೋರಾಟವನ್ನು ಹಿಂತಿರುಗಿ ನೋಡುತ್ತಿದೆ. ಎರಡನೆ ಹಂತದಲ್ಲಿ ವೀರನು ಇಬ್ಬರು ಅಪ್ಸರೆಯರೊಡನೆ ಸ್ವರ್ಗಕ್ಕೆ ಹೊರಟಿದ್ದಾನೆ. ಮೇಲೆ ದೊಡ್ಡ ಶಿವಲಿಂಗದ ಮುಂದೆ ವೀರನು ಕೈಮುಗಿದು ಕುಳಿತಿದ್ದಾನೆ. ಮತ್ತೊಂದು ಭಾಗದಲ್ಲಿ ಯತಿಯೊಬ್ಬನು ಧ್ಯಾನದಲ್ಲಿ ಕುಳಿತಿದ್ದಾನೆ. ವೀರನ ತಲೆಗೂದಲ ಗಂಟು, ಕಿವಿಯ ಕುಂಡಲಗಳು, ಎದೆಹಾರ, ತೋಳಬಂದಿ, ಉಡುಪು, ಅಪ್ಸರೆಯರ ಕೇಶಶೃಂಗಾರ ಮತ್ತು ಆಭರಣಗಳು ಆಕರ್ಷಕವಾಗಿವೆ. ಶೈಲಿಯ ದೃಷ್ಟಿಯಿಂದ ಈ ವೀರಗಲ್ಲನ್ನು ರಾಷ್ಟ್ರಕೂಟರ ಕಾಲಕ್ಕೆ ಅಂದರೆ 9ನೇ ಶತಮಾನದ ಮಧ್ಯಭಾಗಕ್ಕೆ ಸೇರಿಸಬಹುದಾಗಿದೆ.

ಇದರ ಪಕ್ಷವೇ ಮತ್ತೊಂದು ವೀರಗಲ್ಲಿದ್ದು ಇದು ನಾಲ್ಕು ಹಂತಗಳಿಂದ ಕೂಡಿದೆ. ಮೊದಲ ಹಂತದಲ್ಲಿ ವೀರನು ತನಗಿಂತಲೂ ಎತ್ತರವಾದ ಬಿಲ್ಲನ್ನು ಹಿಡಿದಿರುವನು. ಇವನ ಎದುರು ಶತ್ರುವು ಕುದುರೆಯ ಮೇಲೆ ಕುಳಿತಿದ್ದು ತನ್ನ ಕೈಯಲ್ಲಿನ ಭರ್ಜಿಯಿಂದ ವೀರನಗೆ ತಿವಿಯುತ್ತಿದ್ದಾನೆ. ಶತ್ರುವಿನ ಉಡುಪು, ಆಭರಣ, ಅವನ ಕುದುರೆಯ ಅಲಂಕಾರಗಳನ್ನು ಗಮನಿಸಿದರೆ ಅವನೊಬ್ಬ ಉನ್ನತ ಅಧಿಕಾರಿಯೆಂದು ಊಹಿಸಬಹುದು. ಎರಡನೆ ಹಂತದಲ್ಲಿ ವೀರನು ಶತ್ರುಗಳೊಂದಿಗೆ ಹೋರಾಡುತ್ತಿದ್ದು ಅವನ ಹಿಂಬದಿಯಲ್ಲಿ ದನಗಳನ್ನು ಚಿತ್ರಿಸಿದೆ. ಇದು ಕೂಡ ತುರುಗಾಳಗದ ವೀರಗಲ್ಲಾಗಿದೆ. ಮೂರನೇ ಹಂತದಲ್ಲಿ ನಾಲ್ಕು ಜನ ಅಪ್ಸರೆಯರೊಂದಿಗೆ ವೀರನು ಮಂಟಪದಲ್ಲಿ (ವಿಮಾನ) ಕುಳಿತು ಸ್ವರ್ಗಕ್ಕೆ ಹೊರಟಿದ್ದಾನೆ. ಮೇಲುಭಾಗದಲ್ಲಿ ವೀರನು ಶಿವಲಿಂಗದ ಮುಂದೆ ಕುಳಿತಿದ್ದು, ಶಿವಲಿಂಗವನ್ನು ಯತಿಯು

ಪೂಜಿಸುತ್ತಿರುವಂತೆ ಚಿತ್ರಿಸಿದೆ. ಕಟಗೇರಿ ಪ್ರೌಢಶಾಲೆಯ ಬಳಿಯ ವೀರಗಲ್ಲು ಮೂರು ಹಂತದಲ್ಲಿದ್ದು ಆಕೃತಿಗಳನ್ನು ಸಣ್ಣದಾಗಿ ಚಿತ್ರಿಸಲಾಗಿದೆ. ವೀರನು ಸಾಧಾರಣ ಉಡುಪನ್ನು ಧರಿಸಿದ್ದು, ಮುಡಿಯನ್ನು ಮೇಲೆತ್ತಿ ಕಟ್ಟಿದ್ದಾನೆ. ಶಿಲ್ಪಶೈಲಿಯಿಂದ ಇದು ಸಾಧಾರಣ ವೀರಗಲ್ಲಾಗಿದೆ.


ಅಧ್ಯಾಯ-5

ಬೌದ್ಧಸ್ತೂಪಗಳು

ಸ್ತೂಪಗಳೆಂದರೆ ಬುದ್ಧನ ಅಥವಾ ಇನ್ನಾರದ್ದೋ ಬೌದ್ಧ ಸನ್ಯಾಸಿಯ ಭಗ್ನಾವಶೇಷಗಳನ್ನು ತುಂಬಿಡಲು ಇಟ್ಟಿಗೆ ಅಥವಾ ಕಲ್ಲಿನಿಂದ ನಿರ್ಮಿಸಿದ ಗುಮ್ಮಟಾಕಾರದ ಕಟ್ಟಡಗಳಾಗಿವೆ. ಈ ಸ್ತೂಪಗಳು ಒಂದಕ್ಕಿಂತ ಹೆಚ್ಚು ದ್ವಾರಗಳನ್ನು ಹೊಂದಿವೆ. ಸ್ತೂಪದ ಗುಮ್ಮಟಾಕಾರದ ಹೊರಮೈ ಮೇಲೆ ಬಳ್ಳಿಯಾಕಾರದ ಅಲಂಕಾರಿಕ ಚಿತ್ರಗಳಿರುತ್ತವೆ. ಪ್ರತಿಯೊಂದು ಸ್ತೂಪವು ಅತ್ಯುತ್ತಮವಾಗಿ ಪರಿಸ್ಕರಿಸಿದ ವಿಧಾನದಿಂದ ಕೂಡಿದ್ದು ಚಿತ್ರಶಿಲ್ಪಕಲೆಯಿಂದ ಅಲಂಕರಿಸಿದೆ. ಅಶೋಕನ ಕಾಲದಲ್ಲಿ ತನ್ನ ಸಾಮ್ರಾಜ್ಯದಲ್ಲಿ ವಿವಿಧ ಮೂಲೆಗಳಲ್ಲಿ 84 ಸಾವಿರ ಸ್ತೂಪಗಳನ್ನು ನಿರ್ಮಿಸಿದರೆಂದು ಹೇಳಲಾಗಿದೆ. ವಿದೇಶಗಳಲ್ಲಿ ಅನೇಕ ಸ್ತೂಪಗಳನ್ನು ನಿರ್ಮಿಸಿದ್ದನು. ಹ್ಯೂಯೆನ್‌ಸ್ತಾಂಗನು ಇಂತಹ ಅನೇಕ ಸ್ತೂಪಗಳನ್ನು ನೋಡಿರುವುದಾಗಿ ತಿಳಿಸಿದ್ದಾನೆ. ಆದರೆ ಅವುಗಳು ಸಂಪೂರ್ಣವಾಗಿ ಹಾಳಾಗಿವೆ. ಅಶೋಕನು ನಿರ್ಮಿಸಿದ ಸ್ತೂಪಗಳಲ್ಲಿ ಉಳಿದಿರುವ ಸ್ತೂಪಗಳೆಂದರೆ ಭೂಪಾಲ್‌ನ ಹತ್ತಿರವಿರುವ ಸಾಂಚಿಸ್ತೂಪ ಪ್ರಮುಖವಾದುದು. ಇದೇ ರೀತಿ ಸಿಕಂದ್ರದಲ್ಲಿ ಉತ್ತಮವಾದ ವಾಸ್ತುಶಿಲ್ಪದಿಂದ ಕೂಡಿದ ಅಕ್ಬರ್ ಸಮಾಧಿಯನ್ನು ಕಾಣಬಹುದು. ಹೀಗೆ ಹಲವಾರು ರೀತಿಯ ಬದಲಾವಣೆಗಳಿಂದ ಕೂಡಿದ ಸಮಾಧಿಯ ಬೆಳವಣಿಗೆಗಳು ಮುಂದೆ 160ರಿಂದ ಮೌರ್ಯರ ನಂತರ ಮೊಗಲ್ ಸಾಮ್ರಾಜ್ಯ ಪ್ರಾಬಲ್ಯಗೊಂಡಿತು.

ಹಸರ್ ಗುಂಡಿಗಿ : ಗುಲ್ಬರ್ಗ ಜಿಲ್ಲೆಯಲ್ಲಿ ಸನ್ನತಿಗೆ ಸಮೀಪದಲ್ಲಿರುವ ಆದಿಚಾರಿತ್ರಿಕ ಕಾಲದ ಸ್ತೂಪನೆಲೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಕೆ.ಪಿ. ಪೂಣಚ್ಚ ಅವರ ತಂಡ ಇಲ್ಲಿ 1993-94ರಲ್ಲಿ ಉತ್ಖನನ ನಡೆಸಿತು. 625ಚ.ಮೀ ಜಾಗದಲ್ಲಿ ಸ್ತೂಪದ ಭಗ್ನಾವಶೇಷಗಳು ಹರಡಿದ್ದವು. ಈ ನೆಲೆಯಲ್ಲಿ ವೃತ್ತಾಕಾರದ(13.7ಮೀ ವ್ಯಾಸ) ತಳವಿನ್ಯಾಸದ ವೇದಿಕೆಯ ಮೇಲೆ ಸುಟ್ಟ ಇಟ್ಟಿಗೆಗಳಿಂದ ಅರೆಗೋಲಾಕಾರದ ಸ್ತೂಪವನ್ನು ನಿರ್ಮಿಸಲಾಗಿತ್ತು. ತಳಪಾಯದಲ್ಲಿ ಕರಿಮಣ್ಣು ಮತ್ತು ಆಯತಾಕಾರದ

ಸುಣ್ಣಕಲ್ಲು ಚಪ್ಪಡಿಗಳನ್ನು ಹಾಸಲಾಗಿತ್ತು. ಹಾಸಲಾಗಿತ್ತು. ಸ್ತೂಪದ ಗೋಡೆಯ ಒಳ ಮೈಗೆ ಮಣ್ಣಿನ ಲೇಪನವೂ ಹೊರ ಮೈಗೆ ಸುಣ್ಣದ ಲೇಪನವೂ ಇದ್ದಿತ್ತು. ಸ್ತೂಪದ ಸುತ್ತಲೂ ವೇದಿಕೆಯ ಮೇಲೆ



ಸಾಂಚಿ ಸ್ತೂಪದ ರೇಖಾಚಿತ್ರ

2.85ಮೀ ಅಗಲದ ಪ್ರದಕ್ಷಿಣಾಪಥ ಇತ್ತು. ನಾಲ್ಕೂ ದಿಕ್ಕಿನಲ್ಲಿ ಸ್ತೂಪಕ್ಕೆ ಹೊಂದಿದಂತೆ ಆಯಕ ವೇದಿಕೆಯಿತ್ತು. ವೇದಿಕೆಯ ಸುತ್ತಲೂ ಸ್ವಲ್ಪ ಅಂತರದಲ್ಲಿ ಸುಣ್ಣಕಲ್ಲಿನ ಭವ್ಯ ಕಟಕಟೆಯೂ ಇದ್ದಿತ್ತು. ನಿರ್ದಿಷ್ಟ ಅಂತರದಲ್ಲಿ ಕಟಕಟೆಯಲ್ಲಿ ಆಯಕ ವೇದಿಕೆಗೆ ಎದುರಾಗಿ ಕಮಲದ ಫಲಕಗಳಿಂದ ಅಲಂಕರಿಸಲಾದ ತೋರಣಗಳಿದ್ದವು. ಆನೆ, ಗೂಳಿ, ಕರಡಿ, ಹುಲಿ, ಕುದುರೆ, ಜಿಂಕೆ ಮುಂತಾದ ಪ್ರಾಣಿಗಳ ಉಬ್ಬುಕೆತ್ತನೆಗಳಿರುವ ಬಿಡಿ ಫಲಕಗಳು ಇಲ್ಲಿ ದೊರೆತಿದ್ದು ಇವು ಮೂಲತಃ ಸ್ತೂಪವನ್ನು ಅಲಂಕರಿಸಿದ್ದ ಭಾಗಗಳಾಗಿರಬಹುದು.


ಸಾಂಚಿ ಸ್ತೂಪದ

ಸ್ತೂಪದ ಪಶ್ಚಿಮದಲ್ಲಿ ಅಗೆದ ಸಣ್ಣ ಪರೀಕ್ಷೆಗುಂಡಿಯಲ್ಲಿ ಸೀಸ ಮತ್ತು ತವರದ ನಾಣ್ಯಗಳು, ಸುಡಾವೆಮಣ್ಣಿನ ಸವೆದ ಗೊಂಬೆಗಳು, ಶಂಖದ ಬಳೆಗಳು, ನೂರಾರು ಹೆಂಚಿನ ಚೂರುಗಳು ಸಿಕ್ಕವು, ಕೆಲವು ನಾಣ್ಯಗಳ ಒಂದು ಮುಖದ ಮೇಲೆ ಸಾತವಾಹನರದಾದ ಉಜ್ಜಯಿನಿ ಚಿಹ್ನೆಯಿದ್ದುದು ಸ್ತೂಪ ಸಾತವಾಹನರ ಕಾಲದ್ದೆಂಬುದನ್ನು ದೃಢಪಡಿಸುತ್ತದೆ. ಇದಕ್ಕೆ ಪೂರಕವಾಗಿ ಇಲ್ಲಿನ ಅವಶೇಷಗಳು ಸನ್ನತಿ ಪ್ರದೇಶದ ಇತರೆಡೆಗಳಲ್ಲಿ ಕಂಡುಬಂದಿರುವ ಆದಿಚಾರಿತ್ರಿಕ ಕಾಲದ ಅವಶೇಷಗಳನ್ನು ಹೋಲುತ್ತವೆ.



ಸಾಂಚಿ: ಮಧ್ಯಪ್ರದೇಶ ರಾಜ್ಯದ ರಾಯ್ ಸೇನ್ ಜಿಲ್ಲೆಯ ಐತಿಹಾಸಿಕ ಸ್ಥಳ, ಭೂಪಾಲ್ ನಿಂದ 68ಕಿ.ಮೀ ದೂರದಲ್ಲಿದೆ. ಇಲ್ಲಿಯ ಬೌದ್ಧಸ್ತೂಪದಿಂದ ಈ ಸ್ಥಳ ಪ್ರಸಿದ್ಧವಾಗಿದೆ. ಪ್ರ.ಶ.ಪೂ.3ನೆಯ ಶತಮಾನದಿಂದ 12ನೆಯ ಶತಮಾನದವರೆಗಿನ ಬೌದ್ಧ ಅವಶೇಷಗಳು ಇಲ್ಲಿ ಲಭಿಸಿವೆ. ಇಲ್ಲಿನ ವಿವಿಧ ಪ್ರದೇಶಗಳನ್ನು ವಿದಿಶಾಗಿರಿ, ಸರಯೆಗಿರಿ, ಬೌತ್ತಸ್ತ್ರಪರ್ವತಗಳೆಂದು ಕರೆಯಲಾಗಿದೆ. ಇಲ್ಲಿಯ ಬೆಟ್ಟದ



ಸನ್ನತಿಯಲ್ಲಿನ ಸ್ತೂಪಾವಶೇಷ

ಮೇಲಿರುವ ಸ್ತೂಪವನ್ನು ಪ್ರ.ಶ.ಪೂ.3ನೆಯ ಶತಮಾನದಲ್ಲಿ ಅಶೋಕ ಕಟ್ಟಿಸಿದ. ಇವನ ಪತ್ನಿ ದೇವಿ ಸಾಂಚಿಯ ಸಮೀಪ ವಿದಿಶಾನಗರದ ವರ್ತಕನೊಬ್ಬನ ಮಗಳು. ಇವಳು ವೆದಿಸಗಿರಿ ಅಥವಾ ಚೇತಿಯಗಿರಿ ವಿವಾಹವನ್ನು ಕಟ್ಟಿಸಿದ್ದಾಳೆ. ಈ ಸ್ತೂಪದ ಸಮೀಪ ಅಶೋಕ ಏಕಶಿಲಾ ಸ್ತಂಭವೊಂನ್ನು ನೆಡಿಸಿದ್ದಾನೆ. ಅದರಲ್ಲಿ ನಾಲ್ಕು ಮುಖಗಳುಳ್ಳ ಶಿರವಿದೆ. ಇಲ್ಲಿ ಬುದ್ಧನ ಶರೀರದ ಅವಶೇಷಗಳನ್ನು(ಮೂಳೆ, ಭಸ್ಮ, ಕೂದಲು, ಹಲ್ಲು ಇತ್ಯಾದಿ) ಹುದುಗಿಡಲಾಗಿದೆಯೆಂದು ಹೇಳಲಾಗಿದೆ. ಆದರೆ ಈ ಯಾವುದೂ ಇದುವರೆವಿಗೂ ಪತ್ತೆಯಾಗಿಲ್ಲ. ಇಲ್ಲಿ ಪ್ರ.ಶ.ಪೂ2ನೆಯ ಶತಮಾನಕ್ಕೆ ಸೇರಿದ ಬ್ರಾಹ್ಮಿ ಲಿಪಿಯ ಶಾಸನಗಳಿವೆ. ಪ್ರ.ಶ.ಪೂ. 1ನೆಯಶತಮಾನದಲ್ಲಿ ನಿರ್ಮಿತವಾದ ಮಹಾದ್ವಾರದ ಮೇಲೆ ಬುದ್ಧನ ಜೀವನದಕ್ಕೆ ಸಂಬಂಧಿಸಿದ ದೃಶ್ಯಗಳಿವೆ. ಇವು ಭಾರತದ ಪ್ರಾಚೀನ ಶಿಲ್ಪಕಲೆಗೆ ಮಾದರಿಯಾಗಿವೆ. ಒಟ್ಟು ಇಲ್ಲಿ ವಿವಿಧ ಕಾಲಗಳ ಮೂರು ಸ್ತೂಪಗಳಿವೆ. ಭಾರತೀಯ ಬೌದ್ಧ ವಾಸ್ತುಶಿಲ್ಪಗಳ ಉಗಮ, ವಿಕಾಸ ಹಾಗೂ ಅವನತಿಯ ಇತಿಹಾಸವನ್ನು ಇವುಗಳಿಂದ ಅಧ್ಯಯನ ಮಾಡಬಹುದು. ಇಲ್ಲಿಯ ದೇವಾಲಯಗಳು ಮತ್ತು ವಿಹಾರಗಳು.

ಸಾರನಾಥ:

ಗೌತಮ ಬುದ್ಧ ತನ್ನ ಮೊದಲ ಧರ್ಮಪ್ರವಚನ ನೀಡಿದ ಸ್ಥಳ, ಮಹತ್ವ್ತದ ಬೌದ್ಧ ನೆಲೆಯಾಗಿರುವ ಇದು ಉತ್ತರ ಪ್ರದೇಶ ರಾಜ್ಯದ ವಾರಾಣಸಿ ಜಿಲ್ಲೆಯಲ್ಲಿ, ವಾರಾಣಸಿಯಿಂದ 5ಕಿ.ಮೀದೂರದಲ್ಲಿದೆ. ಬೌದ್ಧರ ನಾಲ್ಕು ಪ್ರತಿಷ್ಠಿತ ಸ್ಥಳಗಳಲ್ಲಿ ಒಂದು ಇತಿಹಾಸ ಕಾಲದಲ್ಲಿ ಇಲ್ಲಿ ಸದ್ಧರ್ಮ ಚಕ್ರವೆಂಬ ಮಹಾವಿಹಾರವಿತ್ತು. ಇಲ್ಲಿ ಅಶೋಕನ ಕಾಲದಿಂದ 12ನೆಯ ಶತಮಾನದವರೆಗಿನ ಪ್ರಾಕ್ತನ ವಸ್ತುಗಳು ದೊರೆತಿವೆ. ಅಶೋಕ ಕಟ್ಟಿಸಿದ ಅನೇಕ ಸ್ತೂಪಗಳಲ್ಲಿ ಇಲ್ಲಿಯ ಧರ್ಮರಾಜಿಕ ಸ್ತೂಪ ಒಂದು. ನಾಲ್ಕು ದಿಕ್ಕಿಗೆ ಮುಖಮಾಡಿ ಕುಳಿತ ನಾಲ್ಕು ಸಿಂಹಗಳ ಸ್ತಂಭವನ್ನು ಸ್ಥಾಪಿಸಿ, ಶಾಸನವನ್ನು ಬರೆಯಿಸಿದ್ದಾನೆ. ಅಶೋಕ ಕಟ್ಟಿಸಿದ ಧರ್ಮರಾಜಿಕ ಸ್ತೂಪ ಸ್ಥಳೀಯರಿಂದ ಹಾನಿಗೊಳಗಾಗಿತ್ತು (1794) ಈ ನಿವೇಶನದಲ್ಲಿ ಅಗೆಯುವಾಗ ಕಂಡುಬಂದ ಅನೇಕ ಅಮೃತ ಶಿಲೆಯ ರಚನೆಗಳು ಮತ್ತು ವಿಗ್ರಹಗಳಿಗಾಗಿ ಜನರು ಇದನ್ನು ಮತ್ತಷ್ಟು ಹಾನಗೊಳಿಸಿದರು. ಭಾರತೀಯ ಪುರತತ್ತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರಾಗಿದ್ದ ಕನ್ನಿಂಗ್ ಹ್ಯಾಮ್ ಇಲ್ಲಿ ಉತ್ಖನನ ನಡೆಸಿ ಅನೇಕ ಸ್ತೂಪಗಳನ್ನು ಗುರುತಿಸಿದ. ಮುಂದೆ ಎಂ.ಕಿಟ್ಟೊ ಹಾಗೂ ಎಸ್.ಸಿ.ಓರಟ್ ಅವರು ಈ ಪ್ರದೇಶದಲ್ಲಿ ವಿಹಾರ, ಸ್ತೂಪ, ಶಾಸನ ಹಾಗೂ ಶಿಲ್ಪಗಳನ್ನು ಉತ್ಖನನ ಮಾಡಿ ತೆಗೆದರು(1904–07). 1907 ರಿಂದ ಜಾನ್ ಮಾರ್ಷಲ್ ಮತ್ತು ಇತರರು ಉತ್ಖನನಗಳನ್ನು ಮುಂದುವರೆಸಿದರು. ಇಲ್ಲಿಯ ಧರ್ಮರಾಜಿಕ ಸ್ತೂಪ 12ನೆಯ ಶತಮಾನದವರೆಗೂ ವಿವಿಧ ವಿಸ್ತರಣೆಗಳಿಗಾಗಿದ್ದನ್ನು ಗುರುತಿಸಲಾಯಿತು.ಜೊತೆಗೆ ಇಟ್ಟಿಗೆಗಳಿಂದ ಕೂಡಿದ

ದೇವಾಲಯವನ್ನು ಪತ್ತೆ ಮಾಡಲಾಯಿತು. ಇದು ಬಹುಶಃ ಭಗ್ನವಾದ ಮುಖ್ಯ ದೇವಾಲಯದ 60 ಮೀ ಎತ್ತರದ ಮೂಲ-ಗಂಧಕುಟಿ ಇರಬಹುದೆಂದೂ ಬುದ್ಧ ಈ ಜಾಗದಲ್ಲಿ ವಾಸಿಸುತ್ತಿದ್ದನೆಂಬುದನ್ನೂ ಚೀನ ಪ್ರವಾಸಿಗ ಯುವಾನ್ ಚಾಂಗ್ ಬರೆವಣಿಗೆಯಲ್ಲಿ ಕಾಣಿಸಿದ್ದಾನೆ. ಮುಂದುವರೆದು ಹೀನಯಾನದ ಸಂಮಿತೀಯ ಶಾಖೆಯ 1500 ಭಿಕ್ಷುಗಳು ವಾಸಿಸುತ್ತಿದ್ದರೆಂದು ಮತ್ತು ಒಂದು ಮುಖ್ಯ ದೇವಾಲಯದಲ್ಲಿ ಧರ್ಮಚಕ್ರ ಪ್ರವರ್ತನ ಮುದ್ರೆಯಲ್ಲಿರುವ ಬುದ್ಧನ ಲೋಹಮೂರ್ತಿ ಇತ್ತೆಂದೂ ಹೇಳಿದ್ದಾನೆ.

ಸನ್ನತಿ:

ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೋಕಿನಲ್ಲಿರುವ ಕರ್ನಾಟಕದಲ್ಲಿ ಅತ್ಯಂತ ವಿಸ್ತೃತವೂ ಕುತೂಹಲಕರವೂ ಆದ ಬೌದ್ಧ ನವೇಶನ ಕೃಷ್ಣೆಯ ಉಪನದಿ ಭೀಮಾನದಿಯ ಎಡದಂಡೆ ಮೇಲಿದೆ. ಯಾದಗಿರ್ ನಿಂದ ಸು 50 ಕಿ.ಮೀ. ದೂರದಲ್ಲಿ ಹಾಗೂ ನಾಲ್ವಾರ್ ರೈಲ್ವೆ ನಲ್ಧಾಣದಿಂದ ಮಧ್ಯ-ದಕ್ಷಿಣ ರೈಲ್ವೆ 19ಕಿ.ಮೀ ದೂರದಲ್ಲಿದೆ. ಶಾಕ್ತ ಪಂಥದ ದೇವಿಯರಲ್ಲಿ ಒಬ್ಬಳಾದ ಚಂದ್ರಲಾಂಭೆಯ ದೇವಾಲಯವಿರುವುದರಿಂದ ಇದು ಅನೇಕ ಭಕ್ತರನ್ನು ಆಕರ್ಷಿಸುವ ಯಾತ್ರಾಸ್ಥಳವೂ ಅಗಿದೆ. ಈ ದೇವಿಯನ್ನು ಚಂಡಲಾ(ಚಂಡಾಲಾ ಚಂದ್ರಲಾ) ಪರಮೇಶ್ವರಿ ಎಂದೂ ಕರೆಯಲಾಗುತ್ತದೆ. ಸ್ಥಳಪುರಾಣ ಮತ್ತು ವಿಶಿಷ್ಟದಂಕೆ ಪುರಾಣ ಪ್ರಸಿದ್ಧರಾದ ರಾಮ, ಸೀತೆಯರು, ನಾರಾಯಣ, ಚಂದ್ರವದನೆಯರಾಗಿ ಅವತರಿಸಿದ್ದಾಗ ಈ ಪ್ರದೇಶವನ್ನು ಆಳುತ್ತಿದ್ದ ಸೇತು(ಶ್ವೇತರಾಜ) ಎಂಬ ದೊರೆ ಚಂದ್ರವದನೆಯನ್ನು ಬಲಾತ್ಕರಿಸಿ ಆಕೆಯಿಂದ ಶಾಪ ಪಡೆದನೆಂದೂ ಮುಂದೆ ಈಕೆಯೇ ಚಂದ್ರಲಾ ಪರಮೇಶ್ವರಿ ಎಂಬ ಹೆಸರಿನಿಂದ ಪೂಜಿಸಲ್ಪಡುತ್ತಿರುವಳೆಂದೂ ತಿಳಿದುಬರುತ್ತದೆ. ಸನ್ನತಿಯ ಬಳಿ ಇರುವ ಕೋಟೆಯನ್ನು ಈ ಹಿನ್ನಲೆಯಲ್ಲಿ ಸೇತುರಾಜನಕಟ್ಟೆ ಎಂಬ ಸ್ಥಳೀಯ ಹೆಸರಿನಿಂದ ಗುರುತಿಸುತ್ತಿರುವುದು ಗಮನಾರ್ಹ. ಕೆ.ವಿ.ರಮೇಶ್ ಅವರು ಅಭಿಪ್ರಾಯ ಪಟ್ಟಿರುವಂತೆ ಈ ಸೇತುರಾಜನಕಟ್ಟೆ ಶಾತವಾಹನರ ಕೋಟೆ ಎನ್ನುವುದರ ಅಪಭ್ರಂಶ ರೂಪವಾಗಿದ್ದಿರಬೇಕು.

ಪುರಾತತ್ತ್ವ ಶೋಧನೆಗಳು:

ಈ ನಿವೇಶನವನ್ನು ಪತ್ತೆಮಾಡಿ ಇದರ ಮಹತ್ತ್ವವನ್ನು ಮೊದಲ ಬಾರಿಗೆ ಪ್ರಸ್ತಾಪಿಸದವರು ಕಪಟರಾಳು ಕೃಷ್ಣರಾಯ. ಮೈಸೂರು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದ ಎಂ. ಶೇಷಾದ್ರಿಯವರು ಈ ಸ್ಥಳದಲ್ಲಿ ಹೆಚ್ಚಿನ ಪರಿಶೋಧನೆ ನಡೆಸಿ(1964-65) ಇಲ್ಲಿನ ಶಿಲ್ಪ, ಶಾಸನಗಳನ್ನು ಕುರಿತಂತೆ ಸವಿವರ ಲೇಖನ ಬರೆದಿದ್ದಾರೆ. ಅನಂತರ ಕರ್ನಾಟಕ ವಿಶ್ವವಿದ್ಯಾನಿಲಯ ಪಿ.ಬಿ. ದೇಸಾಯಿಯವರು ಮತ್ತೊಮ್ಮೆ ಸನ್ನತಿಯಲ್ಲಿ ಸ್ಥಳ ಪರಿಶೋಧನೆ ಮಾಡಿ(ಫೆಬ್ರವರಿ, 1966) ಇದು ಕರ್ನಾಟಕ ಅತ್ಯಂತ ~~ಮಹತ್ತ್ವಪೂರ್ಣ ಹಾಗೂ ಅತಿದೊಡ್ಡ ಬೌದ್ಧ ನಿವೇಶನ ಎಂದು ಅಭಿಪ್ರಾಯಪಟ್ಟಿದ್ದಾರೆ. ಸನ್ನತಿಯಿಂದ~~

ಕನಗನಹಳ್ಳಿಯವರೆಗಿನ ಸು. 5–6 ಚ.ಕಿ.ಮೀ ಪ್ರದೇಶದಲ್ಲಿ ಸಾತವಾಹನ ಹಾಗೂ ಅದಕ್ಕೂ ಹಿಂದಿನ ಕಾಲದ ಸಾಂಸ್ಕೃತಿಕ ಹಾಗೂ ವಾಸ್ತು ನಿರ್ಮಿತಿಗಳ ಬೃಹತ್ ಅವಶೇಷಗಳು, ಶಿಲ್ಪ ಫಲಕಗಳು, ಪುರಾತನ ಕಾಲದ ಹೆಂಚು, ಇಟ್ಟಿಗೆ, ಆಟಿಕೆ ಮುಂತಾದ ಮಣ್ಮೂರ್ತಿ, ಬೌದ್ಧಾಲಯಗಳ ಶಿಲ್ಪಾಲಂಕೃತ ವಸ್ತು ಭಾಗಗಳು ಆಂದ್ರ ಸಾತವಾಹನ ಕಾಲದ ಹೊಳಪುಳ್ಳ ಕಪು–ಕೆಂಪು ಮಣ್ಪಾತ್ರೆ, ಸ್ಫಟಿಕ, ಕಾರ್ನೇಲಿಯನ್ ಮುಂತಾದ ಆದಿ ಇತಿಹಾಸಯುಗದ ಜನವಸತಿಯ ಕುರುಹುಗಳು ಕಂಡುಬಂದಿವೆ. ಈ ಫಲಕಗಳ ಮೇಲೆ ಬುದ್ಧನ ಜೀನವದ ಕೆಲವು ರಸಮಯ ಸನ್ನಿವೇಶಗಳ ಮನೋಜ್ಞಾ ಚಿತ್ರಣವನ್ನು ಕಾಣಬಹುದು. ಇದುವರೆಗೆ ಸನ್ನತಿಯಲ್ಲಿ 250ಕ್ಕೂ ಹೆಚ್ಚು ಕಿರುಶಾಸನಗಳು ದೊರೆತಿವೆ. ಅವುಳಗಳಲ್ಲಿ 241 ಬ್ರಾಹ್ಮಿಲಿಪಿಯಲ್ಲಿರುವ (ದಾನದ ಉಲ್ಲೇಖವಿರುವ) ತುಂಡು ಶಾಸನಗಳೂ ಉಳಿದವು ಬಾದಾಮಿ ಚಳುಕ್ಯ ರಾಷ್ಟ್ರಕೂಟ ಕಾಲದವೂ ಆಗಿವೆ. ಲಿಪಿ.ಭಾಷೆ ಮತ್ತು ಶಿಲ್ಪ ಶೈಲಿ, ವಸ್ತು ಹಾಗೂ ತಂತ್ರವನ್ನೊಳಗೊಂಡಂತೆ ಈ ಶಿಲ್ಪಶಾಸನಗಳು ಪ್ರ.ಶ.ಪೂ.1ನೆಯ ಶತಮಾನದಿಂದ ಪ್ರ.ಶ.3ನೆಯ ಶತಮಾನದವರೆಗಿನ, ಅಮರಾವತಿಯ ಇಂಥದೇ ಶಿಲ್ಪಶಾಸನಗಳನ್ನು ಹೋಲುತ್ತದೆ.

ಸ್ತೂಪದಿಬ್ಬಗಳು:

ಎರಡು ದಿಬ್ಬಗಳು ಗಮನಾರ್ಹವಾಗಿವೆ. ಇವುಗಳಲ್ಲಿ ಒಂದು ಚಂದ್ರಲಾ ಪರಮೇಶ್ವರಿ ದೇವಾಲಯದ ಸಮೀಪದಲ್ಲಿದ್ದು ಸಾಕಷ್ಟು ಸುಸ್ಥಿತಿಯಲ್ಲಿದೆ. ಈ ದಿಬ್ಬದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಹೈದರಾಬಾದ್ ವಲಯ ದಕ್ಷಣ ಏಷ್ಯ ಅಧ್ಯಯನ ಸಂಸ್ಥೆಯ ಜೇಮ್ಸ್ ಹೊವೆಲ್ಲರ ಸಹಯೋಗದೊಂದಿಗೆ ವೈಜ್ಞಾನಿಕವಾಗಿ ಉತ್ಖನನ ಕೈಗೊಂಡಿದೆ. ಇದಲ್ಲದೆ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ನಿರ್ದೇಶನಾಲಯ ಸನ್ನತಿಯ ಕೋಟೆಯ ಬಳಿ ಉತ್ಕನನ ಕೈಗೊಂಡು ಸಾತವಾಹನ ಹಾಗೂ ತತ್ಪೂರ್ವಕಾಲದ ಜನವಸತಿ ಅವರ ಸಮೃದ್ಧ ಸಾಂಸ್ಕೃತಿಕ ಜೀವನ ಅವರ ಪದ್ಧತಿ ಇವುಗಳ ಬ್ಗೆ ಹೆಚ್ಚಿನ ಬೆಳಕು ಚೆಲ್ಲಬಲ್ಲಂತಹ ಅನೇಕ ಮಾಹಿತಿಗಳನ್ನು ಒದಗಿಸಿತು. ಸು.80 ಹೆಕ್ಟೇರ್ ಪ್ರದೇಶವನ್ನು ಸುತ್ತುವರೆದ 4ಮೀ. ಎತ್ತರ, 3ಮೀ ಅಗಲದ ಕೋಟೆಯ ಗೋಡೆಯನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದೆ ಈ ಕೋಟೆಯ ಪ್ರದೇಶದಲ್ಲಿ ರಾಜ ಪ್ರಮುಖರ ಹಾಗೂ ಜನಸಾಮಾನ್ಯರ ಎರಡು ಪ್ರತ್ಯೇಕ ವಸತಿ ನೆಲೆಗಳನ್ನು ಗುರುತಿಸಲಾಗಿದೆ. ದೇವಿಯ ಮಂದಿರ ಚ್ದ್ರಲಾಪರಮೇಶ್ವರಿ ಬಹುಶಃ ಬೌದ್ಧಧರ್ಮದ ಪ್ರಭಾವ ಕ್ಷೀಣಿಸಿದ ಮೇಲೆ ಬಾದಾಮಿ ಚಾಳುಕ್ಯ, ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದಂತೆ ಕಂಡುಬರುತ್ತದೆ. ಮುಂದೆ ಅನೇಕ ಬಾರಿ

ಪುನರ್ನಿರ್ಮಾಣಗೊಂಡಿದ್ದರೂ ಮೂಲ ಗರ್ಭಗೃಹದ ದ್ವಾರಬಂಧ ಮುಂತಾದ ಕೆಲವಾದರೂ ವಾಸ್ತು ಭಾಗಗಳಲ್ಲಿ ರಾಷ್ಟ್ರಕೂಟ ಶೈಲಿಯ ಕೆಲವು ಲಕ್ಷಣಗಳನ್ನು ಗುರುತಿಸಬಹುದು.



ಶಾಸನಗಳು:

ಅಶೋಕನ ಶಾಸನ ಮತ್ತು ಕನಗನಹಳ್ಳಿಯ ಮಹಾಸ್ತೂಪದ ಶಾಸನಗಳೂ ಸೇರಿದಂತೆ ಇದುವರೆಗೆ ಸು.350ಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿವೆ. ಇತರ ಸ್ತೂಪ ಮತ್ತು ವಿಹಾರ ನಿವೇಶನಗಳಲ್ಲಿ ಉತ್ಖನನ ನಡೆದರೆ ಇನ್ನಷ್ಟು ಶಾಸನಗಳು ದೊರೆಯುವ ಸಾಧ್ಯತೆಯೂ ಇದೆ. ಈಗಾಗಲೇ ಈ ಪ್ರದೇಶದಲ್ಲಿ 1995ರ ವರೆಗೆ ದೊರಕಿದ್ದ ಅಶೋಕ, ಸಾತವಾಹನ ದೊರೆಗಳು ಹಾಗೂ ಇತರರ ಸು.85 ಶಾಸನಗಳನ್ನು ಐ.ಕೆ.ಶರ್ಮ ಪ್ರಕಟಿಸಿದ್ದಾರೆ. ಸ್ತೂಪದ ಉತ್ಖನನ ವರದಿಯಲ್ಲಿಯೂ ಸು.250 ಶಾಸನಗಳು ಪ್ರಕಟವಾಗುವ ನಿರೀಕ್ಷೆಯಿದೆ. ಕಂದು ಬಣ್ಣದ ಕಣಶಿಲೆಯ (ಗ್ರಾನೈಟ್) ಈ ಶಿಲಾಖಂಡ ಸು.30ಸೆಂಮೀ ದಪ್ಪವಾಗಿದ್ದು ಆಯತಾಕಾರದಲ್ಲಿದ್ದೆ. ಪಾರ್ಶ್ವಗಳನ್ನು ಒರಟಾಗಿ ಕತ್ತರಿಸಿ, ಮಧ್ಯದಲ್ಲಿ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲು ಅನುವಾಗುವಂತೆ ಆಯತಾಕಾರದ ದಂಧ್ರವನ್ನು ಕೊರೆದಿದ್ದಾರೆ. ಈ ಫಲಕ ಬಂಡೆಯೊಂದರ ಭಾಗವಾಗಿರದೆ ಎರಡೂ ಮುಖಗಳಲ್ಲಿ ಆಶೋಕನ ಶಾನವಿರುವ ಆಯತಾಕಾರದ ಫಲಕವಾಗಿದೆ. ಈ ಪ್ರಕಾರದ ಅಶೋಕನ ಶಿಲಾಶಾಸನ ಇಡೀ ಭಾರತದಲ್ಲಿಯೇ ಮೊದಲಬಾರಿಗೆ ಸನ್ನತಿಯಲ್ಲಿ ಕಂಡುಬಂದಿದೆ. ಮುಂಭಾಗದ

೧ನೆಯ ಪಂಕ್ತಿಯಲ್ಲಿ ಇಯಂ ಧರ್ಮದ ಉಲ್ಲೇಕವಿರುವುದರಿಂದ ಇವು ಅಶೋಕನ ಶಾಸನಗಳೆಂದು ಸುಸ್ಪಷ್ಟವಾಗುತ್ತದೆ.

ಹೊಸದಾಗಿ ದೊರೆತಿರುವ ಶಾಸನಗಳ ಪಾಮುಖ್ಯ ಈ ಫಲಕದಲ್ಲಿಯ 12 ಮತ್ತು 4ನೆಯ ಮುಖ್ಯ ಶಿಲಾಶಾಸನಗಳ ಆಧಾರದ ಮೇಲೆ ಭೀಮಾನದಿಯ ದಡದಲ್ಲಿರುವ ಗುಲ್ಬರ್ಗ ಜಿಲ್ಲೆಯ ಪ್ರದೇಶಗಳು ಅಶೋಕನ ಸಾಮ್ರಾಜ್ಯದ ಒಂದು ಭಾಗವಾಗಿತ್ತೆಂದೂ ಈ ಭಾಗದ ಆಡಳಿತಾಧಿಕಾರಿಯಾಗಿ ಮಹಾಮಾತ್ರನೊಬ್ಬನು ನಿಯುಕ್ತನಾಗಿದ್ದನೆಂದು ಹೇಳಬಹುದು.

ಹೆಚ್ಚಿನ ತುಂಡು ಶಾಸನಗಳು ಛಾಯಾಪ್ರತಿಮೆಗಳ ಸ್ಥಾಪನೆಯ ಬಗೆಗೆ ಮಾಹಿತಿ ನೀಡುತ್ತವೆ. ಸ್ತೂಪದಲ್ಲಿ ಕೊರೆತಿರುವ ಶಾಸನಗಳನ್ನು ಕಟಾಂಜನದ ಕಂಬ, ಆಯಕ ಕಂಬ, ಆಯಕ ಮತ್ತು ವೇದಿಕೆಯ ಆಲಂಕೃತ ಹೊದಿಕೆಗಳು, ಬುದ್ಧಪಾದ, ಬುದ್ದಶಿಲ್ಪದ ಪೀಠ, ಪುಷ್ಪಗ್ರಹಣಿ, ಅಂಡಕ್ಕೆ ಹೊದಿಸಿದ ಅಲಂಕೃತ ಫಲಕಗಳು, ಹಾಸುಗಲ್ಲು, ಅಂಡವನ್ನು ಕಟ್ಟಲು ಉಪಯೋಗಿಸಿದ ಕಲ್ಲು, ಸ್ತೂಪದ ಪರಿಸರದಲ್ಲಿ ಸ್ಥಾಪಿಸಿದ ಧರ್ಮಸ್ತಂಭ ಮುಂತಾದ ಸ್ತೂಪದ ವಾಸ್ತು ಅಂಗಗಳ ಮೇಲೆ ಮತ್ತು ಉದ್ದೇಶಿತ ಕಿರುಸ್ತೂಪದ ವೇದಿಕೆ ಮುಂತಾದವುಗಳ ಮೇಲೆ ಬರೆಯಲಾಗಿದೆ.

ಇವುಗಳಲ್ಲಿ ಶಾತವಾಹನ ಅರಸರ ಆಳಿಕೆಯಲ್ಲಿ ಅವರ ಆಮಾತ್ಯರು, ಅಧಿಕಾರಿಗಳು, ಗೃಹಪತಿ, ಗೃಹಪತ್ನಿ, ಬೌದ್ಧ ಸಂಘಗಳ ಥೇರ, ಆಚಾರ್ಯ, ಭಿಕ್ಷು, ಭಿಕ್ಷುಣಿ, ಶ್ರಮಣ, ಅಂತೇವಾಸಿ ಅಂತೇವಾಸಿನಿ, ನವಕರ್ಮಿ, ಶ್ರೀಮಂತ ವಣಿಜರು ಮುಂತಾದ ಜನಸಾಮಾನ್ಯರು ನೀಡಿದ ದಾನಗಳನ್ನು ಇವು ದಾಖಲಿಸಿವೆ. ಕೆಲವು ಶಾಸನಗಳಲ್ಲಿ ಬುದ್ಧನ ಜೀವನದ ಘಟನೆಗಳು, ಆತನ ನಿಕಟ ಸಂಪರ್ಕವಿದ್ದ ಸ್ಥಳ, ವಿಹಾರ, ಬೌದ್ಧ ಧರ್ಮದ ಪ್ರಸರಣಕ್ಕೆ ಸಂಬಂಧಿಸಿದ ಘಟನಾವಳಿ, ಜಾತಕ ಕಥೆ ಮುಂತಾದ ವಿವರಗಳಿರುವ ಫಲಕಗಳಿವೆ.

ಕನಗನಹಳ್ಳಿಯ ಮಹಾಸ್ತೂಪ : ಚಂದ್ರಲಾಪರಮೇಶ್ವರಿ ದೇವಾಲಯ ನೇರ ಪೂರ್ವಕ್ಕೆ ಸು.1ಕಿ.ಮೀ ದೂರದಲ್ಲಿ,, ಭೀಮಾನದಿಯ ಎಡದಂಡೆಯಿಂದ ಸು.300ಮೀ ಉತ್ತರದಲ್ಲಿ ಸು.3ಮೀ. ಎತ್ತರವಿದ್ದ ದಿಬ್ಬವೊಂದಿತ್ತು. ಶೇಷಾದ್ರಿಯವರು ಈ ಸ್ಥಳದಲ್ಲಿ ವೃತ್ತಾಕಾರದ ಇಟ್ಟಿಗೆ ಕಟ್ಟಡವೊಂದರ ಭಾಗವನ್ನು ಕಂಡು ಸ್ತೂಪದ ಮೇಧಿ ಇದ್ದಿರಬಹುದು ಊಹಿಸಿದ್ದರು. ಈ ನಿವೇಶನದಿಂದ ಬಹುಶಃ 1960ರ ಸುಮಾರಿಗೆ ಅಷ್ಟಭುಜಾಕೃತಿಯ ಎತ್ತರದ ಸ್ತಂಭವೂ ಸೇರಿದಂತೆ ಅನೇಕ ಶಾಸನಸಹಿತ ಶಿಲ್ಪಿತ

ವಾಸ್ತುಭಾಗಗಳನ್ನು ಗುಲ್ಬರ್ಗದ ರಾಜ್ಯವಸ್ತು ಸಂಗ್ರಹಾಲಯಕ್ಕೆ ಸಾಗಿಸಿದಂತೆ ಕಂಡುಬರುತ್ತದೆ. ಜೇಮ್ಸ್ ಹೊವೆಲ್ ಈ ದಿಬ್ಬದ ಬಗೆಗಿನ ಇನ್ನಷ್ಟು ವಿವರಗಳನ್ನು ನೀಡಿದ್ದಾರೆ. ಈ ಸ್ತೂಪದಿಬ್ಬದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ 1994-95ರಲ್ಲಿ ಅಲ್ಪ ಪ್ರಮಾಣದಲ್ಲಿ, ಅನಂತರ 1995-96ರಿಂದ 2000-2001 ರವರೆಗೆ ತೀವ್ರ ರೀತಿಯ ವಿಸ್ತೃತ ಉತ್ಖನನ ನಡೆಸಿತ್ತು. ಇಡೀ ಭಾರತದಲ್ಲಿಯೇ ಅಪೂರ್ವವೆನಿಸುವ ಶಿಲ್ಪಫಲಕ, ಶಾಸನ ಬುದ್ಧ ಶಿಲ್ಪಗಳಿಂದ ಅಲಂಕೃತವಾದ ಮಹಾಸ್ತೂಪ ಸಮುಚ್ಛಯವೊಂದು ಅನಾವರಣಗೊಂಡಿದೆ.

ಈ ಸ್ತೂಪ ನಾಲ್ಕು ಬದಿಗಳಲ್ಲಿ ಆಯಕವೇದಿಕೆಗಳಿರುವ ಸು.1.25ಮೀ ವೃತ್ತ. ಎತ್ತರದ ವೇದಿಕೆ. ಅದರ ಮೇಲೆ ಸು.21/2 ಮೀ ಎತ್ತರದ ಅಂಡಭಾಗ, ಇದರ ಸುತ್ತು ಸು.31/2 ಮೀ ಅಗಲವಾದ ಹಾಸುಗಲ್ಲಿನ ಪ್ರದಕ್ಷಿಣಾಪಥ, ಇವೆಲ್ಲವನ್ನೂ ಒಳಗೊಂಡಂತೆ ನಾಲ್ಕು ಸೂಚಿಗಳಿಂದ ಕೂಡಿದ ಬೇಲಿಯನ್ನು ಹೊಂದಿದೆ. ಪೂರ್ಣ ರೂಪದಲ್ಲಿದ್ದಾಗ ಸ್ತೂಪ ಸು.30ಥ30 ಮೀ ವರ್ಗದೊಳಗೆ ನಿರ್ಮಿತವಾಗಿದ್ದು, ಸು.18 ಮೀ ಎತ್ತರವಿದ್ದಂತೆ ಕಾಣುತ್ತದೆ. ಸ್ತೂಪದ ಸುತ್ತಲೂ ಸು.10-12 ಇಟ್ಟಿಗೆಯ ಕಟ್ಟಡಗಳಿದ್ದು, ಅವುಗಳಲ್ಲಿ ಗಜಪೃಷ್ಠಾಕೃತಿಯ ದೇವಾಲಯ ಚೌಕಾಕಾರದ, ಬುದ್ಧಪಾದವನ್ನು ಪೂಜಿಲು ಕಟ್ಟಿದ್ದ ವೇದಿಕೆಗಳು, ಧರ್ಮಸ್ತಂಭಗಳ ವೇದಿಕೆ ಹಾಗೂ ವೃತ್ತಾಕಾರದ ಔದ್ದೇಶಿಕ ಸ್ತೂಪಸಮುಚ್ಛಯದ ಉತ್ತರದಲ್ಲಿ ಆಯತಾಕಾರದ ವಿಸ್ತಾರವಾದ ವಿಹಾರ ಕಟ್ಟಡದ ಕೆಲಭಾಗಗಳೂ ಬೆಳಕಿಗೆ ಬಂದಿದೆ.

ಸ್ತೂಪದ ಮುಖ್ಯಭಾಗವಾದ ಮೇಧಿ ಸು.16ಮೀ ವ್ಯಾಸವಿದ್ದು ಸು.3ಮೀ ಎತ್ತರವಿದೆ. ಇದರ ಸುತ್ತ ಸು.75-80ಸೆಂ.ಮೀ ಅಗಲದ ಕಿರು ಪ್ರದಕ್ಷಣಾಪಥವಿದ್ದು ಕೆಳಗೆ 1.25ಮೀ ಎತ್ತರದ ವೇದಿಕೆಯಿದೆ. ಮೂಲಸ್ತೂಪ ಕಲ್ಲುಗುಂಡು. ಮಣ್ಣು ಸುಣ್ಣಕಲ್ಲಿನ ಸಣ್ಣ ದೊಡ್ಡ ತುಂಡುಗಳನ್ನು ಕ್ರಮವಾಗಿ ಪೇರಿಸಿದ ದಿಬ್ಬವಾಗಿದ್ದು ಅದರ ಸುತ್ತ ಸುಣ್ಣಕಲ್ಲಿನ, ನಯಗೊಳಿಸಿದ ಬೆಣೆಯಾಕಾರದ ಕಲ್ಲುಗಳನ್ನು ಜೋಡಿಸಿ ಅರ್ಧಗೋಲಾಕೃತಿಯ ಅಂಡವನ್ನು ವಿನ್ಯಾಸಗೊಳಿಸಿದಂತೆ ಕಾಣುತ್ತದೆ. ಇದೇ ರೀತಿಯ ಸುಣ್ಣಕಲ್ಲಿನಿಂದ ವೇದಿಕೆಯನ್ನು ಕಟ್ಟಿ, ಅದರ ಸುತ್ತ ಇಟ್ಟಿಗೆಯ ಗೋಡೆಯೆಬ್ಬಿಸಿ ವೇದಿಕೆಯನ್ನು 1.25ಮೀ ಅಗಲವಾಗಿಸಿದೆ. ಸ್ತೂಪದ ನಾಲ್ಕು ದಿಕ್ಕುಗಳಲ್ಲಿ ಆಯತಾಕಾರದ ಅಯಕ ವೇದಿಕೆಗಳಿದ್ದು ಇವುಗಳ ಮೇಲೆ ಆಯಕ ಕಂಬಗಳಿದ್ದಿರಬಹುದು. ಪೀಠಸಹಿತವಾದ, ಮನುಷ್ಯ ಗಾತ್ರಕ್ಕಿಂತ ದೊಡ್ಡದಾದ (ಸು.2.5ಮೀ ಎತ್ತರದ)ಸ್ಥಾನಕ ಬುದ್ಧ ಶಿಲ್ಪಗಳನ್ನು ದಕ್ಷಿಣ ಹಾಗೂ ಪಶ್ಚಿಮದ ಅಯಕ ವೇದಿಕೆಗಳ ಮೇಲೆ ಸ್ಥಾಪಿಸಲಾಗಿತ್ತು. ಪಶ್ಚಿಮದ ಆಯತ ವೇದಿಕೆ ಹಾಗೂ ಪಶ್ಚಿಮದ ಅಯಕ ವೇದಿಕೆಗಳ ಮೇಲೆ ಸ್ಥಾಪಿಸಲಾಗಿತ್ತು. ಪಶ್ಚಿಮದ ಆಯತ

ವೇದಿಕೆ ಹಾಗೂ ದ್ವಾರ ನದಿಯ ಕಡೆಯಿಂದ ಬರುವ ಭಕ್ತರಿಗಾಗಿ ಮತ್ತು ಪಶ್ಚಿಮ ದ್ವಾರ ಸನ್ನತಿಯ ರಣಮಂಡಲ ಕೋಟೆಯಿಂದ, ಚಂದ್ರಲಾ ಪರಮೇಶ್ವರಿ ದೇವಾಲಯದ ಮೂಲಕ ಹಾದು ಬರುವವರಿಗಾಗಿ ಮಾಡಿದ್ದಏರ್ಪಾಡು. ಈ ಎರಡು ಕಡೆಯಿಂದಲೂ ಸ್ತೂಪದ ಹಿನ್ನೆಲೆಯಲ್ಲಿ ಎತ್ತರವಾಗಿ ನಿಂತ ಗಂಭೀರ ಬುದ್ಧ ವಿಗ್ರಹಗಳು ವೀಕ್ಷಕರನ್ನು ಬಹುದೂರದಿಂದಲೇ ಅನುಗ್ರಹ ಪೂರ್ವಕವಾಗಿ ಆಕರ್ಷಿಸುವ ಭವ್ಯವಾದ ನೋಟ ಒದಗಿಸುತ್ತವೆ. ನಿಂತಿರುವ ಈ ಬುದ್ಧ ವಿಗ್ರಹಗಳಲ್ಲದೆ ವಿವಿಧ ಆಸನಗಳಲ್ಲಿ ಕುಳಿತ ಮತ್ತು ಅಲ್ಪ ಸ್ವಲ್ಪ ಭಿನ್ನವಾಗಿರುವ ಸು.9 ಕುಳಿತ ಬುದ್ಧ ಮಿಗ್ರಹಗಳೂ ದೊರಕಿವೆ. ಶೈಲಿಯ ವಿವರಗಳಲ್ಲಿ ಈ ಶಿಲ್ಪಗಳು ಕೃಷ್ಣಾಕಣಿವೆಯ ಅಮರಾವತಿ, ನಾಗಾರ್ಜುನ ಕೊಂಡದ ಶಿಲ್ಪಗಳಿಗಿಂತ ದಖನಿನ ವಾಕಾಟಕ ಶಿಲ್ಪಗಳನ್ನು ಹೆಚ್ಚು ಹೋಲುತ್ತವೆ.

ಕುಳಿತಿರುವ ಬುದ್ದವಿಗ್ರಹಗಳನ್ನು ಬಹುಶಃ ಪ್ರದಕ್ಷಿಣಾಪಥದ ಹಾಸುಗಳಲ್ಲಿನ ಮೇಲೆ, ವೇದಿಕೆಯ ಶಿಲ್ಪರಹಿತ ವೇದಿಕಾ–ಫಲಕಗಳ ಹಿನ್ನೆಲೆಯಲ್ಲಿ ಎಂಟು ದಿಕ್ಕುಗಳಲ್ಲಿ ಒಂದೊಂದರಂತೆ ಪ್ರತಿಷ್ಠಾಪಿಸಲಾಗಿತ್ತು. ಈಶಿಲ್ಪಗಳು ಅಷ್ಟಮಾನುಷೀ ಬುದ್ಧರ ಶಿಲ್ಪಗಳಾಗಿದ್ದು ಬಹುಶಃ ಇಡೀ ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ಎಂಟು ದಿಕ್ಕುಗಳಲ್ಲಿ ಪ್ರತ್ಯೇಕ ಮಾನುಷೀ ಬುದ್ಧ ಶಿಲ್ಪಗಳನ್ನು ಸ್ಥಾಪಿಸುವ ಮಹಾಯಾನ ಪಂಥದ ಸಂಪ್ರದಾಯ ಕನಗನಹಳ್ಳಿಯಲ್ಲಿಯೇ ಉಗಮಿಸಿತೆಂದು ತೋರುತ್ತದೆ. ವಿವಿಧ ರೀತಿಯ ಅಯಕ ಸಿಕ್ಕಿವೆ. ಕೆಲವದರ ಚೌಕಾಕಾರದ ಕೆಳಭಾಗದಲ್ಲಿ ಸಿಹಾಸನ ಸಹಿತವಾದ ಭೋಧಿವೃಕ್ಷ, ಧರ್ಮಚಕ್ರ, ಸ್ತೂಪ ಮುಂತಾದ ಚಿತ್ರಣಗಳೂ ಶಾಸನಗಳೂ ಇವೆ. ಇವುಗಳನ್ನು ಬಹುಶಃ ಆಯಕ ವೇದಿಕೆಯ ಮೇಲೆ ಅಥವಾ ಪ್ರತ್ಯೇಕವಾದ ಕಟಾಂಜನ ಸಹಿತವಾದ ವೇದಿಕೆಗಳ ಮೇಲೆ ಸ್ಥಾಪಿಸಲಾಗಿತ್ತು. ಸ್ತೂಪದ ನೈರುತ್ಯಕ್ಕೆ ಇದ್ದ ಇಂತಹ ಒಂದು ಕಂಬದ ಮೇಲೆ ಕುಳಿತ ಭಂಗಿಯಲ್ಲಿರುವ, ಸೂಕ್ಷ್ಮಕಣಗಳ ಮರಳುಗಲ್ಲಿನಿಂದ ರೂಪಿಸಿದ ಸಿಂಹದ ಶಿಲ್ಪ ದೊರಕಿರುವುದು ಗಮನಾರ್ಹ.

ವೇದಿಕೆಯ ಸುತ್ತ ಸು.3 ಮೀ ಅಗಲದ ಪ್ರದಕ್ಷಿಣಾಪಥದಲ್ಲಿ ನಯಗೊಳಿಸಿದ ಸುಣ್ಣಕಲ್ಲಿನ ಇದರ ಸುತ್ತ ಪ್ರತಿ ಜೋಡಿ ಕಂಬದ ನಡುವೆ ನಾಲ್ಕು ಸೂಚಿಗಳಿರುವ, ಸು3ಮೀಎತ್ತರದ ಕಟಾಂಜನವಿದ್ದಿತ್ತು. ಇದನ್ನು ಮೂಲಸ್ಥಾನದಲ್ಲಿ ಅಳಿದುಳಿದ ಪದ್ಮ ಚಿತ್ರಗಳಿಂದ, ಅಲಂಕೃತ ಕಂಬಗಳು ಹಾಗೂ ಅಸಂಖ್ಯಾತ ಸೂಚಿಗಳಿಂದ ತಿಳಿಯಬಹುದಾಗಿದೆ. ಇವುಗಳ ಒಳಮೈಯಲ್ಲಿ 2–4 ಸಾಲಿನ ದಾನಶಾಸನಗಳನ್ನು ಅಡ್ಡಡ್ಡವಾಗಿ ಬರೆಯಲಾಗಿದೆ. ಬಾರ್ಹುತ್, ಸಾಂಚಿ, ಅಮರಾವತಿ, ನಾಗಾರ್ಜುನಕೊಂಡಗಳ ಕಟಾಂಜನದ ಉಷ್ಣೀಷವನ್ನು ದೊಡ್ಡ ದೊಡ್ಡ ಆಯತಕಾರದ ಕಲ್ಲುಗಳಿಂದ ತಯಾರಿಸಲಾಗಿದ್ದು, ಹೊರಮೈಯಲ್ಲಿ ಗಂಟೆ ಹಾಗೂ

ದೀರ್ಘವೃತ್ತಾಕೃತಿಗಳ ಸಾಲುಗಳ ನಡುವೆ ಸಹಜ ಹಾಗೂ ಪೌರಾಣಿಕ ರೀತಿಯ ಪ್ರಾಣಿಗಳಿಗೆ ಗಿಳಿಮೂಗು ಮತ್ತು ರೆಕ್ಕೆಗಳನ್ನು ಮೂಡಿಸಿದೆ. ನವರಸವುಕ್ಕಿಸುವಂತಹ ಮುಖಭಾವ, ಅದಕ್ಕೊಪ್ಪುವ ವಿಶಿಷ್ಟ ಭಂಗಿಗಳಿಂದ ಕೂಡಿರುವ ಈ ರೀತಿಯ ಪ್ರಾಣಿಯ ಶಿಲ್ಪಗಳು ಸನ್ನತಿಯ ಕಲಾವಿದರ ಅಪೂರ್ವ ನೈಪುಣ್ಯಕ್ಕೆ ಸಾಕ್ಷಿಯೆನಿಸಿವೆ.

ಬುದ್ದಪಾದ ಫಲಕಗಳು : ಮಹಾಸ್ತೂಪದ ಉತ್ಖನದಲ್ಲಿ 8 ಪೂರ್ಣರೂಪದ ಬುದ್ಧಪಾದ ಫಲಕಗಳು ಮತ್ತು ಸು.12 ರಷ್ಟು ಫಲಕಗಳ ಭಗ್ನಭಾಗಗಳು ಸಿಕ್ಕಿವೆ. ಈ ಮೊದಲು ಸನ್ನತಿಯ ಪರಿಸರದ ಉಳಿದ ಯಾವ ನಿವೇಶನದ ಸ್ಥಳಪರಿಶೋಧನೆ ಅಥವಾ ಉತ್ಖನನದಲ್ಲಿ ಬುದ್ಧಪಾದ ಫಲಕಗಳು ದೊರಕದಿರುವ ಕಾರಣ, ಇಂತಹ ಫಲಕಗಳು ಮಹಾಸ್ತೂಪ ನವೇಶನದ ವಿಶೇಷ ಲಕ್ಷಣಗಳಲಿ ಒಂದೆಂದು ಭಾವಿಸಬಹುದು. ಬುದ್ದಪಾದ ಅಂಗಾಲಿನ ಮಧ್ಯದಲ್ಲಿ ಮಹಾಪುರುಷಲಕ್ಷಣವಾದ ಧರ್ಮಚಕ್ರ, ಹಿಮ್ಮಡಿಯಲ್ಲಿ ಅಲಂಕೃತ ರತ್ನ, ಅಕ್ಕಪಕ್ಕಗಳಲ್ಲಿ ಹಾಗೂ ಕೆಲವೊಮ್ಮೆ ಚಾಮರ ಮತ್ತು ಬೆರಳುಗಳಲ್ಲಿ ಅಷ್ಟ ಮಂಗಲ ಚಿಹ್ನೆಗಳಾದ ನಂದಿಪಾದ, ತ್ರಿರತ್ನ, ಶ್ರೀವತ್ಸ, ಸ್ವಸ್ತಿಕ ಭದ್ರಾಸನ, ಶಕ್ತಿಧ್ವಜ, ಶೀಲಯುಗದ ಅಂಕುಶ, ಘೀಠಸಹಿತವಾದ ಕನ್ನಡಿ ಮುಂತಾದ ಚಿಹ್ನೆಗಳಲ್ಲಿ ಕೆಲವು ಕಂಡುಬರುತ್ತವೆ. ಅಲಂಕೃತ ಫಲಕಗಳಲ್ಲಿ ನಾಲ್ಕು ಕಮಲನಾಳದ ಬೇರುಗಳನ್ನು ಫಲಕದ ಮೇಲೆ, ಪಾದಗಳ ಸುತ್ತ ಕಮಲದೆಲೆ, ದಳಗಳನ್ನು ಬಿಡಿಸಿ ಪಾದ ಕಮಲಗಳೆಂದು ಸಾಂಕೇತಿಕವಾಗಿ ಸೂಚಿಸಲಾಗಿದೆ.

ಅಮರಾವತಿ : ಆಂದ್ರಪ್ರದೇಶ ರಾಜ್ಯದ ಗುಂಟೂರು ಜಿಲ್ಲೆಯ ಸತ್ತೇನಪಲ್ಲಿ ತಾಲ್ಲೂಕಿಗೆ ಸೇರಿದಂತೆ ಕೃಷ್ಣಾ ನದಯ ದಂಡೆಯ ಮೇಲಿರುವ ಐತಿಹಾಸಿಕ ಸ್ಥಳ. ಧಾನ್ಯಕಟಕ ಇದರ ಹಳೆಯ ಹೆಸರು. ಹಿಂದೆ ಇದು ಸಾತವಾಹನರ ರಾಜಧಾನಯಾಗಿತ್ತು. 10ನೆಯ ಶತಮಾನದ ಸುಮಾರಿಗೆ ಇಲ್ಲಿನ ಅಮರೇಶ್ವರ ದೇವಾಲಯ ಪ್ರಸಿದ್ಧವಾಗಿತ್ತು. ಇಲ್ಲಿ ನಡೆಯುವ ಶಿವರಾತ್ರಿ ಉತ್ಸವ ಬಹಳ ವೈಭವಪೂರಿತವಾಗಿರುತ್ತದೆ. ಬೌದ್ಧಸ್ತೂಪದ ಕಲಾಕುಶಲತೆ ಈ ಸ್ಥಳ ಪ್ರಸಿದ್ದಿಗೆ ಕಾರಣವಾಗಿದೆ. ಪ್ರ.ಶ.ಪೂ. ಕೆಲವು ದಶಕಗಳಲ್ಲೇ ಆರಂಭಾಗಿ ಪ್ರ.ಶ.4ನೆಯ ಶತಮಾನದವರೆಗೂ ಇಲ್ಲಿನ ವಿಹಾರಗಳ ಸ್ತೂಪದ ನರ್ಮಾಣ ನಡೆಯಿತು. ಆಂಧ್ರ ಸಾತವಾಹನ ರಾಜರು ಮಹಾಯಾನ ಬೌದ್ಧಧರ್ಮವನ್ನು ಪ್ರೋತ್ಸಾಹಿಸಿ ಇಲ್ಲಿ ಚೈತ್ಯಗಳನ್ನೂ ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟಿಸಿದರು. ಇಲ್ಲಿಯ ಸ್ತೂಪಶಿಲ್ಪಗಳು ಪ್ರಪಂಚಖ್ಯಾತವಾಗಿವೆ: ಬುದ್ಧನ ಜಾತಕಕಥೆಗಳಿಂದಲೂ ಜೀವಿತ ವೃತ್ತಾಂತಗಳಿಂದಲೂ ವಿವರಗಳನ್ನು ಆಯ್ದುಕೊಂಡು ಶಿಲ್ಪಿಗಳು ಇಲ್ಲಿ ರಮಣೀಯವಾದ ಶಿಲ್ಪಗಳನ್ನು ಕಡೆದಿದ್ದಾರೆ.

ಕರ್ನಲ್ ಮೆಕೆನ್ಸ್ ಅಮರಾವತಿ ವಾಸ್ತುಶಿಲ್ಪವನ್ನು ಬೆಳಕಿಗೆ ತಂದ (1898). ಇದು ಭಾರತೀಯ ವಾಸ್ತುಶಿಲ್ಪ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿತು. ಶಿಲ್ಪಕಲಾಕೃತಿ ಬಹುಭಾಗ ಈಗ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ಚೆನ್ನೈನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲೂ ಸಾಕಷ್ಟು ಕಲಾಕೃತಿಗಳಿವೆ.

ಇಲ್ಲಿನ ಮುಖ್ಯ ವಾಸ್ತುಕೃತಿಯೆಂದರೆ ಮಹಾಸ್ತೂಪ.ಇಲ್ಲಿನ ಸ್ತೂಪಗಳು ಸಾಂಚಿ ಮತ್ತು ಬಾರ್ಹುತ್ ನಲ್ಲಿರುವ ಸ್ತೂಪಗಳಿಂಗಿಂತ ಕೆಲವು ವಿಷಯಗಳಲ್ಲಿ ಭಿನ್ನವಾಗಿದ್ದು, ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿದ್ದವು. ಇಲ್ಲಿನ ಸ್ತೂಪವು ಕ್ರಿಸ್ತ ಪೂರ್ವ ಒಂದನೇ ಶತಮಾನದ ಆರಂಭದಿಂದ 3ನೆಯ ಶತಮಾನದವರೆಗೆ ನಾಲ್ಕು ಹಂತಗಳಲ್ಲಿ ಬೆಳೆಯಿತೆಂದು ಹೇಳಬಹುದು. ಈ ಶತಮಾನಕ್ಕೆ ಅಲಂಕಾರದಿಂದ ಭೂಷಿತವಾಗಿ ಭಾರತದ ಅತ್ಯುತ್ತಮ ಸ್ತೂಪಗಳಲ್ಲಿ ಒಂದೆನಿಸಿಕೊಂಡಿತ್ತು. ನಶಿಸಿಹೋಗಿದ್ದರೂ ಇದರ ಭವ್ಯತೆಯನ್ನು ಈಗಲೂ ಊಹಿಸಬಹುದು. ಇದರ ವ್ಯಾಸ 48.50 ಕಿ.ಮೀ.ಎತ್ತರ ಸು.36. ಮೀ. ಈ ಬೃಹತ್ ಸ್ತೂಪ ಬಿಳಿಯ ಸುಣ್ಣಶಿಲೆಯ ಶಿಲ್ಪಫಲಕಗಳಿಂದ ಆಚ್ಛಾದಿತವಾಗಿತ್ತು. ನಾಲ್ಕು ದಿಕ್ಕುಗಳಲ್ಲೂ 5 ಆಯಕ ಸ್ತಂಭಗಳಿದ್ದು ಇವು ಇದರ ವಿಶಿಷ್ಟ ಲಕ್ಷಣವಾಗಿತ್ತು. ಅಂಡದ ಮೇಲೆ ಚೌಕ ಹರ್ಮಿಕೆಯೂ ಅದರ ಮೇಲೆ ಛತ್ರಿಯೂ ಇದ್ದುವು.

ಈ ಸ್ತೂಪವನ್ನು ಅಲಂಕರಿಸಿದ್ದ ಶಿಲ್ಪಫಲಕಗಳೇ ಪ್ರಾಚೀನ ಆಂಧ್ರ ಕಲಾಕಾರರ ಮಹಾಕೃತಿಗಳು. ಈ ಶಿಲ್ಪಫಲಕಗಳಲ್ಲಿ ಜಾತಕ ಮತ್ತು ಅವದಾನದ ಕಥೆಗಳು ಮತ್ತು ಬುದ್ಧನ ಜೀವನಕ್ಕೆ ಸಂಬಂಧಿಸಿದ ಘಟನೆಗಳು ಕೆತ್ತಲ್ಪಟ್ಟಿವೆ. ಇಲ್ಲಿ ದೊರಕಿರುವಷ್ಟು ಕೆಲವು ಜಾತಕ ಕಥಾಶಿಲ್ಪಗಳೂ ಮತ್ತೆಲ್ಲೂ ದೊರಕಿಲ್ಲವೆಂದೇ ಹೇಲಬಹುದು. ಇವುಗಳಲ್ಲಿ ಷಡ್ದಂತ, ಹಂಸ, ವಿಧುರಪಂಡಿತ, ಮಾಂದಾತ ಮುಂತಾದ ಜಾತಕಗಳು ಗಮನಾರ್ಹವಾದುವು. ಇಲ್ಲಿಯ ಶಿಲ್ಪಗಳು ಸ್ತ್ರೀಸೌಂದರ್ಯವನ್ನು ನಯನವಮನೋಹರವಾಗಿ ತೋರಿಸುತ್ತವೆ. ನಾಲ್ಕು ಸ್ತ್ರೀಯರ ಬುದ್ಧಪಾದವನ್ನು ಪೂಜಿಸುತ್ತಿರುವ ಶಿಲ್ಪಫಲಕದಲ್ಲಿ ಸುಂದರ ಸ್ತ್ರೀಯರ ನಯವಾದ ಮತ್ತು ಸಹಜವಾದ ಅಂಗವಿನ್ಯಾಸಗಳು ಬಹು ಚೆನ್ನಾಗಿ ರೂಪುಪಗೊಂಡಿವೆ.ಇಲ್ಲಿ ಸ್ತ್ರೀಯರ ಅಂಗಸೌಷ್ಟವ ಆಕರ್ಷಕವಾದರೂ ಶೃಂಗಾರಕ್ಕೆಡೆಗೊಡುವಂತಿಲ್ಲ. ಅವರೆಲ್ಲರೂ ಬೌದ್ಧಧರ್ಮದಿಂದ ಚೇತನಗೊಂಡ ವ್ಯಕ್ತಿಗಳಾಗಿ ಕಂಗೊಳಿಸುತ್ತಿದ್ದಾರೆ. ಪ್ರಾಣಿಶಿಲ್ಪಗಳು ಸಹಜವಾಗಿ ಬಂದಿರುವುದು ಇಲ್ಲಿಯ ಶಿಲ್ಪದ ಮತ್ತೊಂದು ವೈಶಿಷ್ಟ್ಯ. ನಳಗಿರಿ ಎಂಬ ಆನೆ ಕೋಪಾವಿಷ್ಟವಾಗಿ ಜನರಲ್ಲಿ ಭೀತಿಯನ್ನುಂಟುಮಾಡಿ, ಬುದ್ದನ ದರ್ಶನವಾದಕೂಡಲೇ ಸೌಮ್ಯವಾಗಿ, ಬುದ್ಧನ ಪಾದದಡಿಯಲ್ಲಿ ಮುದುರಿಕೊಂಡು ನಿಂತಿರುವ ಘಟನೆ

ಒಂದು ಮಹಾಕೃತಿ. ಅಮರಾವತಿಯಲ್ಲಿ ಮೊದಲು ಹೀನಯಾನಧರ್ಮದ ಪ್ರಕಾರ ಬುದ್ಧನ ಪಾದ, ಭೋಧಿವೃಕ್ಷ, ಸಿಂಹಾಸನ ಮುಂತಾದ ಸಂಕೇತಗಳೇ ಬುದ್ದನನ್ನು ಸೂಚಿಸುತ್ತಿದ್ದುವು. 2ನೆಯ ಶತಮಾನದ ಅನಂತರ ಗಾಂದಾರ ಮತ್ತು ಮಥುರಾಶಿಲ್ಪಗಳಿದಂದ ಪ್ರಭಾವಿತಗೊಂಡು ಅಮರಾವತಿಯಲ್ಲೂ ಬುದ್ದವಿಗ್ರಹಗಳು ನಿರ್ಮಾಣವಾದವು ಸಾಂಪ್ರದಾಯಕವಾದ ಮತ್ತು ಮಾಹಾಪುರಷ ಲಕ್ಷಣಗಳನ್ನು ಒಳಗೊಂಡ ಬುದ್ದ ವಿಗ್ರಹಗಳು ಅಮರಾವತಿಯ ಶಿಲ್ಪಗಳಿಂದಲೆ ಸ್ಪಷ್ಟಗೊಂಡವೆಂದು ಕೆಲವು ವಿದ್ವಾಂಸರ ಅಭಿಪ್ರಾಯ ಅಪರೂಪವಾಗಿ 3–4 ನೇ ಶತಮಾನದ ವೈಷ್ಣವ ಶಿಲ್ಪಗಳು ಇಲ್ಲಿ ದೊರೆತಿವೆ. ಈ ಪ್ರದೇಶದ ಬುದ್ಧನ ಭಾವ ಭಂಗಿಗಳು ಕೆತ್ತನೆ ತಂತ್ರ ಗಾಂಧಾರ ಶಿಲ್ಪಶೈಲಿಗಳಿಗಿಂತ ಸ್ಪಷ್ಟವಾಗಿ ಭಿನ್ನವಾಗಿವೆ

ಈ ಮಹಾಸ್ತೂಪದ ನೆಲೆಯಲ್ಲಿ ಭಾರತೀಯ ಪುರಾತತ್ವ ನೆಲೆಯಲ್ಲಿ ಭಾರತಿಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ (ಹೈದರಾಬಾದ್ ವೃತ್ತ) ಉತ್ಖನನವನ್ನು ನಡೆಸಿ ಈ ಮಾಹಾಸ್ತೂಪದ ಮೂಲ ನಿರ್ಮಾಣ ಆಶೋಕನ ಕಾಲದಲ್ಲಿಯೇ ಆಯಿತೆಂದು ಇದರ ಸಮೀಪದಲ್ಲಿ ಆತನ ಆಶೋಕ ಸ್ಥಂಭದ ಭಗ್ನಾವಾಶೇಷವಿದೆ ಎಂದು ತಿಳಿದುಬಂದಿದೆ. ಅಮರಾವತಿಯ ಸಮೀಪದಲ್ಲಿರುವ ಘಂಟಸಾಲ, ಗೋಲಿ, ಭಟ್ಟಪ್ರೋಲು, ಜಗ್ಗಯ್ಯಪೇಟ ಗುಡಿವಾಡ ಮುಂತಾದ ಕಡೆಕಡೆಗಳಲ್ಲಿರುವ ಶಿಲ್ಪಗಳು ಅಮರಾವತಿಯ ಮಾದರಿಯಲ್ಲಿಯೇ ಇರುವುದರಿಂದ ಇವೆಲ್ಲವು ಆ ಕಲಾ ಶೈಲಿಗೆ ಸೇರಿದವೆಂದು ಹೇಳಬಹುದು. ಇಷ್ಟೇಯಲ್ಲದೆ ಅಮರಾವತಿ ಶಿಲ್ಪಗಳು, ಭಾರತದ ಗಡಿಯನ್ನು ದಾಟಿ ಆಗ್ನೇಯ ಏಷ್ಯದ ರಾಜ್ಯಗಳಲ್ಲಿಯೂ ದೊರೆಕಿವೆ. ಚಂಪಾರಾಜ್ಯದ ಡಾಂಗ್ ಡುವಾಂಗ್, ಸುಮಾತ್ರದ್ವೀಪದ ಪ್ಯಾಲೆಂಬಂಗ ಮತ್ತು ಸೆಲಿಬೆಸನ್ ಸೆಂಪಗ ಎಂಬ ಸ್ಥಳಗಳಲ್ಲಿ ಅಮರಾವತಿ ಶಿಲ್ಪಶೈಲಿಗೆ ಸೇರಿದ ಬುದ್ಧ ವಿಗ್ರಹಗಳು ದೊರೆಕಿವೆ. ಇವು ಅಮರಾವತಿಯ ಶಿಲ್ಪದ ಪ್ರಾಮುಖ್ಯ ಮತ್ತು ಜನಾನುರಾಗದ ಕುರುಹುಗಳನ್ನು ಕಾಣಬಹುದು.

ಅಧ್ಯಾಯ - 6

ನಿಸಿಧಿಗಳು

ಕರ್ನಾಟಕ ಸಂಸ್ಕೃತಿಯು ಜೈನ ಸಮುದಾಯದ ಜೈನಾಗಮಗಳಲ್ಲಿ ಮುಖ್ಯ ಹೊಳಹುಗಳನ್ನು ಹೊಂದಿದೆಯಷ್ಟೆ. ಇದು ಕ್ರಿ.ಶ. 1–2ನೆಯ ಶತಮಾನದಿಂದ ನಿರ್ದಿಷ್ಟವಾಗಿ ಆರಂಭಗೊಂಡು ಕ್ರಿ.ಶ. 15–16ನೇ ಶತಮಾನದವರೆಗೆ ವ್ಯಾಪಕವಾಗಿ ಕಂಡುಬರುತ್ತದೆ. ಅಮೇಲೂ ಈ ಜೈನ ಸಮಾಜವು ಇತರ ಸಮಾಜದ ಜತೆ ಇಟ್ಟುಕೊಂಡ ಕೊಳು–ಕೊಡುಗೆಗಳನ್ನೂ ಒಳ–ಸಂಬಂಧಾಂತರಗಳನ್ನೂ ಹಲವು ಬಗೆಗಳಲ್ಲಿ ನೋಡುವ ಅಗತ್ಯವಿದೆ. ಕರ್ನಾಟಕ ಜೈನ ಸಮಾಜ–ಸಂಸ್ಕೃತಿಯ ಅಭ್ಯಾಸದ ಮುಖ್ಯ ಕೇಂದ್ರವೆಂದರೆ, ಶ್ರವಣಬೆಳ್ಗೊಳವೇ ಈ ಕೇಂದ್ರವು ಎರಡು ಸಾವಿರ ವರ್ಷಗಳ ಕಾಲ ತನ್ನ ಸ್ಮೃತಿಗರ್ಭದಲ್ಲಿ ಹಲವಾರು ಸಾಂಸ್ಕೃತಿಕ ಎಳೆಗಳನ್ನೂ ತಾತ್ವಿಕ ನೆಲೆಗಳನ್ನೂ ಇಟ್ಟುಕೊಂಡಿದೆ. ಶಿಲ್ಪ–ವಾಸ್ತು, ಲಲಿತಕಲೆ, ಆಚಾರ–ವಿಚಾರ, ಸಂಸ್ಕೃತಿ–ಭಾಷೆ– ಇವೇ ಮುಂತಾದವು ಹಾಸು ಹೊಕ್ಕಾಗಿ ನೆಲೆಸಿದೆ. ಈ ಹಾಸು ಹೊಕ್ಕುಗಳ ವಿವಿಧ ಬಗೆಗಳನ್ನು ನಾವೀಗ ತಿಳಿಯುವ ಅಗತ್ಯವಿದೆ. ಈ ಸಾಂಸ್ಕೃತಿಕ ಕೇಂದ್ರದ ವಿಶೇಷ ವ್ಯಾಸಂಗವನ್ನು ಪ್ರೊ.ಪ.ಶೆಟ್ಟರ್ ಅವರು Inviting Death ಮತ್ತು Pursuing Death ಈ ಎರಡೂ ಕೃತಿಗಳ ಮೂಲಕ ಅನ್ವೇಷಿಸಿದ್ದಾರೆ; ವ್ಯಾಖ್ಯಾನಿಸಿದ್ದಾರೆ; ವಿಶ್ಲೇಷಿಸಿದ್ದಾರೆ;



ಜೈನಧರ್ಮದಲ್ಲಿ ಸನ್ಯಸನ ವಿಧಿಯಿಂದ ಮಡಿದವರ ಸ್ಮಾರಕವಾಗಿ ವೀರರಿಗೆ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದಂತೆ ಕೆಲವು ಸ್ಮಾರಕಗಳನ್ನು ನಲ್ಲಿಸುತ್ತಿದ್ದರು. ಇವುಗಳನ್ನು "ನಿಸಿಧಿಗಲ್ಲು" ಎಂದು ಕರೆಯುತ್ತಾರೆ.

ಸಂಸ್ಕೃತದಲ್ಲಿ ನಿಷೀಧಿಕಾ, ಪ್ರಾಕೃತದಲ್ಲಿ 'ನಿಸೀಹಿಯಾ' ಎಂಬ ರೂಪಗಳುಂಟು. (ಈಗಲೂ ಉತ್ತರ ಕರ್ನಾಟಕದಲ್ಲಿ ನಸಿದ್ಧಿ ಎಂದು ಕರೆಯುತ್ತಾರೆ.) ಇವುಗಳು ಬಸದಿಗಳ ಮುಂದಿನ ಪ್ರತ್ಯೇಕ ಶಿಲಾಫಲಗಳಲ್ಲಿ, ಬಸದಿಯ ಕಂಬಗಳ ಮೇಲೆ, ಊರ ಹೊರಗಿನ ಹೊಲಗಳಲ್ಲಿ ನಟ್ಟ ಕಲ್ಲುಗಳಲ್ಲಿ, ಬಂಡೆಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಸನ್ಯಸನದ ವಿಷಯವನ್ನು ಮಾತ್ರ ಹೇಳಿರಬಹುದು, ಅಥವಾ ಅದರ ಜೊತೆಗೆ ಸನ್ಯಸನವನ್ನು ಸ್ವೀಕರಿಸಿದ ವ್ಯಕ್ತಿಯ ಚಿತ್ರವೂ ಇರಬಹುದು. ಸ್ತ್ರೀಯರಿಬ್ಬರು ಹೀಗೆ ಮಡಿದ ವಿಷಯವನ್ನು ತಿಳಿಸುವ ಶಾಸನವೊಂದರಲ್ಲಿ ಮೂರು ಹಂತಗಳಿವೆ. ಕೆಳಗಿನ ಅಂತಸ್ತಿನಲ್ಲಿ ಆ ಇಬ್ಬರು ಸ್ತ್ರೀಯರ ಚಿತ್ರವೂ, ಮಧ್ಯದ ಹಂತದಲ್ಲಿ ಅವರನ್ನು ವಿಮಾನದಲ್ಲಿ ಕರೆದೊಯ್ಯುತ್ತಿರುವ ಚಿತ್ರವೂ, ಮೇಲಿನ ಹಂತದಲ್ಲಿ ಜಿನಸಾನ್ನಿಧ್ಯ ಜಿನನ, ಗುರುವಿನ ಮುಂದೆ ಸನ್ಯಸನ ವ್ರತಧಾರಿಯಾಗಿರುವ ವ್ಯಕ್ತಿಯ ಚಿತ್ರಗಳಿರುತ್ತವೆ. ಸನ್ಯಸನ ವ್ರತವನ್ನು ಬಸದಿಯಲ್ಲಾದರೂ ಸರಿಯೆ ಅಥವಾ ಬೆಟ್ಟದ ವೇಲೆಂಯೋ ಊರ ಹೊರಗೋಆಚರಿಸಬಹುದಾಗಿದ್ದಿತು. 'ನಿಶಿಧಿಯಂ ನಿರುಸಿ', ನಶಿಧಿಯಂ ಮಾಡಿಸಿ', 'ನಿಶೀಧಿಕಾ ಕೃತಾ', 'ನಿಸಿಧಿಗೆಯ ನಿಲಿಸಿ' ಮುಂತಾದ ಮಾತುಗಳು ಬರುವುದರಿಂದಲೂ, ನಿಶಿದಿಗೆ ಎಂದು ಹೇಳಿರುವ ಸ್ಥಳದಲ್ಲಿ ಯಾವ ರೀತಿಯ ಕಟ್ಟಡವೂ ಅನವಾರ್ಯವಾಗಿ ಇರಲೇಬೇಕಾಗಿಲ್ಲವಾದುದರಿಂದಲೂ, ಫ್ಲೀಟ್ ಅವರು ಭಾವಿಸಿರುವಂತೆ ಅದು ಸನ್ಯಸನ ವಿಧಿಯಿಂದ ಸತ್ತವರ ಅವಶೇಷಗಳ ಮೇಲೆ ಕಟ್ಟಿದ ಗೋರಿ ಅಲ್ಲ. ಫ್ಲೀಟ್ ಅವರು ಮತ್ತೊಂದು ಕಡೆ ಡಾ॥ ಭಾವುದಾಜಿ ಅವರು ಸೂಚಿಸಿದ "a house of rest" ಎಂಬ ಅರ್ಥವನ್ನು ಒಪ್ಪಿಕೊಂಡಿದ್ದಾರೆ.



ತ್ಯಾಗ ಕಂಬ, ಶ್ರವಣ ಬೆಳಗುಳ

ಇವೆಲ್ಲ ಅರ್ಥಗಳನ್ನೂ ಒಟ್ಟಿಗೆ ಸೇರಿಸಿ ಪಿ.ಕೆ. ಆಚಾರ್ಯರು ನಿಸಿದಿಯನ್ನು a house for rest, a tomb, a monument" ಎಂಬರ್ಥಗಳನ್ನು ಕೊಟ್ಟಿದ್ದಾರೆ.



ನಿಸಿಧಿ ಮಂಟಪ

ಮೇಲೆ ಹೇಳಿದಂತೆ ಹೊಲದಲ್ಲಿನ ಕಲ್ಲುಗಳ ಮೇಲೆ, ಕೆಲವು ಸಾರಿ ಬಂಡೆಯ ಮೇಲೆ ಇರುವ ನಿಸಿಧಿಗಳನ್ನು ವಿಶ್ರಾಂತಿ ಸ್ಥಳ ಗೋರಿ ಎಂದು ಹೇಗೆ ಭಾವಿಸುವುದು? ಸನ್ಯಾಸಿಗಳ ದೇಹಗಳನ್ನು ಸುಟ್ಟ ಸ್ಥಳಗಳು ಎಂದು ಭಾವಿಸುವುದೂ ಕಷ್ಟ. ಬಸದಿಗಳಲ್ಲಿ ದೇಹಗಳನ್ನು ಸುಡುತ್ತಿದ್ದನೆಂಬುದನ್ನು ಊಹಿಸಿಕೊಳ್ಳುವುದು ಅಸಾಧ್ಯ ಪದದ ನಿಷ್ಪತ್ತಿಯಲ್ಲಂತೂ ಇದಕ್ಕೆ ಅವಕಾಶವೇ ಇಲ್ಲ. ಬಸದಿಯ ಒಂದು ಭಾಗವನ್ನೋ ಕಂಬವನ್ನೋ ಮಂಟಪವನ್ನೋ ಸತ್ತವರ ಸ್ಮಾರಕವಾಗಿ ಬಿಟ್ಟ ಸ್ಥಳವೇ ನಿಸಿಧಿ ಎಂದು ಡಾ॥ ದೇಸಾಯಿಯವರು ಅರ್ಥೈಸುತ್ತಾರೆ. ನಿಸಿಧಿ ಸತ್ತವರಿಗಾಗಿ ಕಟ್ಟಿದ ಸ್ಮಾರಕವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ವೀರಗಲ್ಲು, ಮಾಸ್ತಿಗಲ್ಲುಗಳಿಗೂ ನಿಸಿಧಿಗಲ್ಲುಗಳಿಗೂ ಹತ್ತಿರದ ಸಾಮ್ಯವಿದೆ ಎಂಬುದನ್ನು ಹಿಂದೆಯೇ ನೋಡಿದೆವು. ವೀರಗಲ್ಲುಗಳು ಸ್ಮಾರಕ ಮಂದಿರಗಳಲ್ಲವೇ ಅಲ್ಲ ಎನ್ನುವುದು ಸ್ಪಷ್ಟ. ವೀರಗಲ್ಲುಗಳಂತೆಯೇ ಇವುಗಳನ್ನೂ 'ಪರೋಕ್ಷವಿನಯ'ಕ್ಕಾಗಿ ನಿಲ್ಲಿಸುತ್ತಿದ್ದರು. 'ನಿಷೀಧಿಕಾ' ಎಂಬ ಮಾತನ್ನು ಕೇಳಿದೊಡನೆಯೇ ಸಹಜವಾಗಿ 'ಉಪನಿಷತ್' ಎಂಬ ಮಾತು ನೆನಪಿಗೆ ಬರುತ್ತದೆ. 'ಉಪನಿಷತ್' ಎಂದರೆ (ಗುರುವಿನ) ಸಮೀಪದಲ್ಲಿ ಕುಳಿತುಕೊಳ್ಳುವುದು ಎಂದರ್ಥ. ನಿಸಿಧಿಗಲ್ಲುಗಳ ಮೇಲೆ ಜಿನಸ್ತೋತ್ರವನ್ನು

ಹೇಳುತ್ತಿರುವ ಗುರು, ಗುರುವಿನ ಮುಂದೆ ಪುಸ್ತಕವಿರುವ ವ್ಯಾಸಪೀಠ (ಅಥವಾ ಠವಣೆ ಕೋಲು. ಇದಕ್ಕೆ ಗೊಂಡೆಗಳೂ ಇರುವುದುಮಟು) ವ್ಯಾಸಪೀಠದ ಇನ್ನೊಂದು ಕಡೆ ವ್ರತಧಾರಿಯಾಗಿ ಜಿನಸ್ತೋತ್ರವನ್ನು ಕೇಳುತ್ತಿರುವ ವ್ಯಕ್ತಿ–ಈ ಚಿತ್ರಗಳಿರುತ್ತವೆ. ಗುರುವಿನ ಹತ್ತಿರ ಕುಳಿತು ಪ್ರಾಣ ತ್ಯಜಿಸಿದ ಸ್ಥಳಕ್ಕೆ, ಆ ಸ್ಥಳವನ್ನು ಮುಂದಿನವರ ನೆನಪಿನಲ್ಲಿ ಉಳಿಸುವುದಕ್ಕಾಗಿ ಕೆತ್ತಿದ್ದ ಬರಹಕ್ಕೆ "ನಿಷಿದಿಕಾ" ಎಂದು ಹೆಸರು. 'ಸದ್' ಎಂಬ ಧಾತುವಿನಿಂದ ಹೊರಟ ನಿಷಿತ್ತಿ ಎಂಬ ಪದಕ್ಕೆ sitting, resting ಎಂದೂ, ನಿಷಾದಿನ್ ಎಂಬ ಪದಕ್ಕೆ itting down ಅಥವಾ lying ಎಂದೂ ಅರ್ಥಗಳಿವೆ. ಬಂಡೆಗಳ ಮೇಲೆ ಇಂತಹ ಬರಹಗಳಿದ್ದರೆ ಆ ಬಂಡೆಯ ತುದಿಯಲ್ಲಿ (ಅಥವಾ ಕೆಳಗಡೆ) ಮಳೆ ಬಿಸಿಲುಗಳನ್ನು ಸಹಿಸಿ ವ್ರತವನ್ನು ಆ ವ್ಯಕ್ತಿಯು ಪೂರೈಸಿದನು ಎಂದು ತಿಳಿಯಬೇಕು.

'ನಿಷೀದಿಕಾ' ಎಂಬ ರೂಪವು ಸರಿ. ಆದರೆ ನಿಸಿಧಿ, ನಿಶೀದಿಕಾ ಮುಂತಾದ ಕಡೆ ಮಹಾಪ್ರಾಣವಿದೆಯಲ್ಲ? ಎಂದರೆ, ಅದನ್ನು ಹೀಗೆ ಡಾ॥ ಉಪಾಧ್ಯೆಯವರು ವಿವರಿಸುತ್ತಾರೆ– "ಸಂಸ್ಕೃತದ 'ನಿಷೀದಿಕಾ'ಕ್ಕೆ ಪ್ರಾಕೃತದ 'ನಿಷೀಹಿಯಾ' ಸಮಾನ. ಸಾಮಾನ್ಯವಾಗಿ ಪ್ರಾಕೃತಕ 'ಹ' ಸಂಸ್ಕೃತದ 'ಧ'ಕ್ಕೆ ಸಮಾನ. ಉದಾಹರಣೆಗೆ, ಕಕುಹ–ಕಕುಧ. ಪ್ರಾಕೃತವನ್ನು ಚೆನ್ನಾಗಿ ಅಭ್ಯಸಿಸಿದ್ದ ಕನ್ನಡ ಕವಿಗಳಿಗೆ 'ನಸೀಹಿಯಾ' ಎಂಬ ರೂಪವೇ ಮನಸ್ಸಿನಲ್ಲುಳಿದು ಅದನ್ನು ಸಂಸ್ಕೃತಕ್ಕೆ ತಿರುಗಿಸುವಾಗ 'ನಿಷೀಧಿಕಾ' ಎಂದು ಮಾಡಿಬಿಟ್ಟರು. ಕ್ರಿ.ಪೂ. 2ನೇ ಶತಮಾನದ ಖಾರವೇಲನ ಶಾಸನದಲ್ಲಿ 'ನಸೀದಿಯಾ' ಎಂಬ ಅಲ್ಪಪ್ರಾಣ ಸಹಿತವಾದ ಪದವಿದೆ.

ನಿಸಿಧಿಗಳ ಹಂಚಿಕೆ :

ಬೆಳ್ಗೊಳದ ಬಹುತೇಕ ನಿಸಿಧಿಗಳು ಚಿಕ್ಕಬೆಟ್ಟದ ಮೇಲಿವೆ. ಇಲ್ಲಿ 13 ಶಾಸನ–ಸ್ಮಾರಕಗಳು ದೊರಕಿದ್ದರೆ, ದೊಡ್ಡಬೆಟ್ಟದ ಮೇಲೆ, ಜಿನನಾಥಪುರದಲ್ಲಿ ಮತ್ತು ಬೆಳ್ಗೊಳ ಪಟ್ಟಣದಲ್ಲಿ ಕಂಡುಬಂದಿದೆ. 13ನೆಯ ಶತಮಾನಕ್ಕಿಂತಮುಂಚಿನ ನಿಸಿಧಿಗಳೆಲ್ಲವೂ ಚಿಕ್ಕಬೆಟ್ಟದ ಮೇಲಿದ್ದರೆ, ಸಂದೇಹಾಸ್ಪದವಾದ ಎರಡು ನಿದರ್ಶನಗಳನ್ನು ಬಿಟ್ಟು, ದೊಡ್ಡಬೆಟ್ಟದ ಮೇಲಿನ ಎಲ್ಲ ನಿಸಿಧಿಗಳೂ 14ನೆಯ ಶತಮಾನದವುಗಳಾಗಿವೆ.

ನಿಸಿಧಿ ಪ್ರಭೇದಗಳು : ಬಂಡೆಗಲ್ಲು ಹಾಗೂ ಗುಂಡುಗಲ್ಲುಗಳ ಮೇಲೆ ನಸಿಧಿ ಶಾಸನಗಳನ್ನು ಕೆತ್ತುವುದು ಅತಿಹೆಚ್ಚು ರೂಢಿಯಲ್ಲಿತ್ತು. ನಸಿಧಿ ಶಿಲಾಫಲಕಗಳ ನಿರ್ಮಾಣ 12ನೆಯ ಶತಮಾನದಲ್ಲಿ

ಹೆಚ್ಚು ಪ್ರಸಾರಕ್ಕೆ ಬಂದರೂ ಅದು ಪ್ರಾರಂಭಗೊಂಡಿದ್ದು 10ನೆಯ ಶತಮಾನದಲ್ಲಿ ವಿಗ್ರಹ, ಶಿಲಾಕೂಟ, ಮುಂತಾದ ಪ್ರಭೇದಗಳು ಅಪವಾದವಾಗಿ ಮಾತ್ರ ಆನಂತರದ ಕಾಲಾವಧಿಯಲ್ಲಿ ಕಾಣಿಸಿಕೊಳ್ಳುವುವು.

ವ್ರತಗಳ ಅರ್ಥ ಮತ್ತು ಮಹತ್ವ :

ರೂಢಿಯಲ್ಲಿದ್ದ ಬೇರೆ ಬೇರೆ ಆಚಾರ ಪದಗಳ ಬಗ್ಗೆ ಈಗಾಗಲೇ ನೋಡಲಾಗಿದೆ. ಈ ಪದಗಳನ್ನು ಬಿಡಿ ಬಿಡಿಯಾಗಿಯೇ ಬಳಸಿರಲಿ, ಇಲ್ಲವೆ

ಜನಪ್ರಿಯ ಪ್ರಯೋಗಗಳು 'ನಿಸಿಧಿ' ಯ ನಂತರ 'ಸನ್ಯಸನ' ಪದವು ಈ ಕೇಂದ್ರದಲ್ಲಿ ವ್ಯಾಪಕ ಬಳಕೆಯಲ್ಲಿದ್ದಂತೆ ತೋರುವುದು. 7ನೆಯ ಶತಮಾನದಲ್ಲಿ ಪ್ರಾರಂಭಗೊಂಡು 12ನೆಯ ಶತಮಾನದಲ್ಲಿ ಅದು ಹೆಚ್ಚು ಜನಪ್ರಿಯತೆ ಪಡೆದುಕೊಂಡಿತು. ಶ್ರವಣಬೆಳ್ಗೊಳ ಶಾಸನಗಳಿಂದ ಈ ಪದದ ಬಳಕೆಗಳ ಬಗ್ಗೆ ಕೆಳಕಂಡ ಸ್ಥೂಲ ಕಲ್ಪನೆಯನ್ನು ಪಡೆದುಕೊಳ್ಳಬಹುದು.

(ಅ) ಸ್ಮಾರಕಗಳ ನಿರ್ಮಾಣ ಕಾರ್ಯವು ಸುಮಾರು 600ರಲ್ಲಿ ರೂಢಿಗೆ ಬಂದು ಒಂದು ಶತಮಾನದ ನಂತರ ಅದು ಕ್ರಮೇಣ ಕ್ಷೀಣಿಸಿದರೂ, 12ನೆಯ ಶತಮಾನದಲ್ಲಿ ಅದನ್ನು ಪುನರುತ್ಥಾನಗೊಳಿಸುವ ಪ್ರಯತ್ನ ಮಾಡಲಾಯಿತು. 14ನೆ ಶತಮಾನದ ನಂತರ ಈ ಆಚರಣೆ ಬಹುತೇಕ ನಿಂತುಹೋಯಿತು.

(ಆ) 1400ಕಿಂತ ಮುಂಚೆ ನಿರ್ಮಿಸಿದ ಸ್ಮಾರಕಗಳನ್ನೆಲ್ಲ ವಿಶಿಷ್ಟ ಅಥವಾ ವಿಶೇಷ ಪದಗಳಿಂದ ಗುರುತಿಸಲಾಗಿಲ್ಲ. ಆರಂಭಿಕ ಹಂತದಲ್ಲಿ ಈ ವ್ರತಾಚರಣೆಯನ್ನು 'ಆರಾಧನಾ' ಅಥವಾ 'ಸನ್ಯಸನ' ಅಥವಾ 'ಸಮಾಧಿ' ಎಂದು ಗುರುತಿಸಿದರೆ, ಸ್ಮಾರಕಗಳನ್ನೆಲ್ಲ ಸಾಮಾನ್ಯವಾಗಿ 'ನಿಸಿಧಿ' ಎಂದು ಗುರುತಿಸಲಾಗಿದೆ. 'ಸಲ್ಲೇಖನಾ' ಮತ್ತು 'ಪಂಡಿತಮರಣ' ಎಂದು ಪದಗಳು 12ನೇ ಶತಮಾನದಲ್ಲಿ ಇಲ್ಲಿಯ ಶಾಸನಗಳನ್ನು ಪ್ರವೇಶಿಸಿದವು.

(ಇ) 'ಆರಾಧನಾ' ಪದವನ್ನು 7ನೆಯ ಶತಮಾನದ ನಂತರ ಕ್ವಚಿತ್ತಾಗಿ ಬಳಸಿದರೆ 12ನೇ ಶತಮಾನದ ನಂತರ ಇದನ್ನು ಒಮ್ಮೆಯೂ ಬಳಸಿಲ್ಲ. 'ಸನ್ಯಸನ' ಪದವು 7ನೆಯ ಮತ್ತು 12ನೆಯ ಶತಮಾನಗಳ ಕಾಲಾವಧಿಯಲ್ಲಿ ಸಾಕಷ್ಟು ಪ್ರಸಾರದಲ್ಲಿದ್ದರೂ 14ನೆಯ ಶತಮಾನದ ನಂತರ ಬಹುಮಟ್ಟಿಗೆ ಅದು ಜನಮನದಿಂದ ಕರಗಿಹೋಯಿತು. 'ಸಮಾಧಿ' ಮತ್ತು 'ನಿಸಿಧಿ'

ಪದಗಳ ಬಳಕೆಯೂ ಸರಿಸುಮಾರಾಗಿ 'ಸನ್ಯಸನ' ಪದದ ಇತಿಹಾಸವನ್ನೇ ಹೋಲುವುದು. 12ನೇ ಶತಮಾನದಲ್ಲಿ ಮೇಲಿಂದ ಮೇಲೆ ದೊರೆಯುವ 'ಪಂಚಪದ'ವೂ 14ನೆಯ ಶತಮಾನದ ನಂತರ ಅದೃಶ್ಯವಾಗುವುದು.

ಈ ಕೇಂದ್ರದ 66 ಸ್ಮಾರಕ ಶಾಸನಗಳಲ್ಲಿ 107 ಬಾರಿ ಈ ಪದಗಳನ್ನು ಬಳಸಲಾಗಿದೆ. ಇವುಗಳ ಸಂಖ್ಯೆ ಹಂಚಿಕೆ ಇಂತಿವೆ : ಆರಾಧನಾ–8; ಸಲ್ಲೇಖನ–5; ಸಮಾಧಿ–18; ಸನ್ಯಸನ–28; ಪಂಚಪದ–7; ಪೌಗ್ಗಮಣ–1; ಪಂಡಿತಮರಣ–1 ಮತ್ತು ನಿಸಿಧಿ–39. ಇದರಲ್ಲಿ ಕೆಲವರ ಮರಣಗಳನ್ನು ಮತ್ತು ಸ್ಮಾರಕಗಳನ್ನು ಒಂದಕ್ಕೂ ಹೆಚ್ಚು ಪದಗಳಿಂದ ಗುರುತಿಸಲಾಗಿವೆ.

(ಈ) ಶ್ರವಣಬೆಳ್ಗೊಳದಲ್ಲಿ ವ್ಯಕ್ತಿಗಳ ಗೌರವಾರ್ಥ ನಿಲ್ಲಿಸಿದ ಸ್ಮಾರಕ ಶಾಸನಗಳಲ್ಲಿ ಕೇವಲ 66 ಮರಣಗಳನ್ನು ಒಂದಿಲ್ಲೊಂದು ವಿಶಿಷ್ಟ ಪದದಿಂದ ಗುರುತಿಸಲಾಗಿದೆ. ಇಲ್ಲಿ ಗೌರವಿಸಲಾದ ಇತರ ವ್ಯಕ್ತಿಗಳು ಕೈಗೊಂಡ ಮರಣ ಸ್ವರೂಪದ ಬಗ್ಗೆ ಸಂದೇಹ ಮೂಡಿ, ಅವರು ಬಿ ಸಮಾಧಿ ವ್ರತವನ್ನಾಚರಿಸಿ ತೀರಿಕೊಂಡರೋ ಇಲ್ಲವೋ, (ಆ) ಬೆಳ್ಗೊಳದಲ್ಲಿ ತೀರಿಕೊಂಡರೋ ಇಲ್ಲವೋ, ಎಂಬ ಪ್ರಶ್ನೆಗಳು ಉದ್ಭವಿಸುವುವು.

(ಉ) 12ನೆಯ ಶತಮಾನದ ನಂತರ ಇಚ್ಛಾಮರಣ ವಿರಳವಾಗುವುದರಿಂದ 'ಸನ್ಯಸನ', 'ಸಮಾಧಿ' 'ಸಲ್ಲೇಖನಾ', ಮುಂತಾದ ಪದಗಳು ಜನಪ್ರಿಯತೆಯನ್ನು ಕಳೆದುಕೊಳ್ಳುವುವು. 'ಆರಾಧನಾ' ಪದವು 12ನೇ ಶತಮಾನದ ನಂತರದ ಶಾಸನಗಳಲ್ಲಿ ಒಮ್ಮೆಯೂ ಬರುವುದಿಲ್ಲ.

ವ್ರತಾಚರಣೆಯ ಉನ್ನತಿ ಮತ್ತು ಅವನತಿ :

ಮೇಲೆ ಲಕ್ಷಿಸಿದಂತೆ ಬಿ ಶ್ರವಣಬೆಳ್ಗೊಳದ ಎಲ್ಲಾ ಸ್ಮಾರಕಗಳನ್ನು 'ನಿಸಿಧಿ' ಎಂದು ಕರೆಯಲಾಗಿಲ್ಲ; (ಅ)ಇಲ್ಲಿ ಸಾವನ್ನಪ್ಪಿದವರೆಲ್ಲ ಸಮಾಧಿ ವ್ರತವನ್ನಾಚರಿಸಲಿಲ್ಲ; (ಇ) ಸ್ಮಾರಕಗಳನ್ನು ಪಡೆದವರೆಲ್ಲ ಬೆಳ್ಗೊಳದಲ್ಲಿಯೇ ತೀರಿಕೊಂಡರೆಂದು ಭಾವಿಸುವಂತಿಲ್ಲ. ಅತಿ ಪೂರ್ವಕಾಲದಲ್ಲಿ ಇಲ್ಲಿಯ ಸ್ಮಾರಕಗಳನ್ನು (7–9ನೇ ಶತಮಾನ) ವ್ರತವನ್ನಾಚರಿಸಿ ಮಡಿದವರಿಗೆ ಮಾತ್ರ ಚಿಕ್ಕಬೆಟ್ಟದ ತಳಬಂಡೆಯ ಮೇಲೆ ಕೊರೆಯಲಾಗುತ್ತಿತ್ತು; ಆದರೆ ಅವೆಲ್ಲವನ್ನೂ 'ನಿಸಿಧಿ' ಎಂದು ಗುರುತಿಸಲಾಗಿಲ್ಲ. ಮೊದಮೊದಲಿಗೆ

ಶ್ರವಣ–ಕಂತಿಯರಲ್ಲಿ ಜನಪ್ರಿಯವಾಗಿದ್ದ ಈ ವ್ರತಾಚರಣೆಯು ಕಾಲಾನಂತರ ಗುಡ್ಡ–ಗುಡ್ಡಿಯರಲ್ಲೂ ಜನಪ್ರಿಯಗೊಂಡಿತು.

ಜೈನಧರ್ಮ ತನ್ನ ವೈಭವ ಶಿಖರವನ್ನು ಈ ಕೇಂದ್ರದಲ್ಲಿ ತಲುಪಿದ 9–11ನೆಯ ಶತಮಾನಗಳಲ್ಲಿಯ ಈ ಆಚರಣೆ ಅವಸಾನಗೊಂಡುದೊಂದು ಆಶ್ಚರ್ಯಕರವಾದ ವಿಷಯ. 800–1000 ಕಾಲಾವಧಿಯಲ್ಲಿ ಒಬ್ಬ ಕಂತಿಯ, ಐವರು ಗುಡ್ಡರ ಮತ್ತು ಒಬ್ಬ ಗುಡ್ಡಿಯ ಗೌರವಾರ್ಥ ಕೊರೆಸಿದ ಕೇವಲ ಆರು ಸ್ಮಾರಕ ಶಾಸನ ದೊರೆತಿದ್ದು, ಸಮಾಧಿ ಮರಣವು, ಶ್ರವಣ–ಕಂತಿಯರಲ್ಲಿ ಜನಪ್ರಿಯತೆ ಕಳೆದುಕೊಂಡುದನ್ನು ಇದು ಸೂಚಿಸುವುದು.

(ಅ) **ಮುನಿಗಳು :** ಇಚ್ಚಾಮರಣದ ಅವನತಿಯ ಪ್ರಕ್ರಿಯೆ 10ನೆಯ ಶತಮಾನದಲ್ಲಿ ಆರಂಭಗೊಂಡು, 14ನೆಯ ಶತಮಾನದ ನಂತರ ಅದು ಬಹುಮಟ್ಟಿಗೆ ಅಂತ್ಯಗೊಂಡಿತೆಂದು ಹೇಳಬಹುದು. 10–11ನೆಯ ಶತಮಾನಗಳಲ್ಲಿ ಯಾವ ಮುನಿಯೂ ಇಲ್ಲಿ ಇಚ್ಚಾಮರಣ ಸ್ವೀಕರಿಸಲಿಲ್ಲ. ಆರು ನಿದರ್ಶನಗಳುಳ್ಳ 12ನೆಯ ಶತಮಾನದಲ್ಲಿ ಈ ಆಚರಣೆ ಪುನರುಜ್ಜೀವನಗೊಂಡಿತೆಂದರೂ, 13ನೆಯ ಶತಮಾನದಲ್ಲಿ ಅದು ಎರಡೇ ಎರಡು ನಿದರ್ಶನಗಳಿಗಿಳಿಯಿತು. 13ನೇ ಶತಮಾನದ ನಂತರದ ಆರು ನಿದರ್ಶನಗಳಿಂದ ಇದು ಮತ್ತೊಮ್ಮೆ ಚೇತರಿಸಿಕೊಂಡಿತೆಂದು ಕಂಡುಬರುವುದು.

7–8ನೆಯ ಶತಮಾನಗಳ ಅಪರೂಪದ 48 ನಿದರ್ಶನಗಳಿಗೆ ಹೋಲಿಸಿ ನೋಡಿದರೆ ಮುಂದಿನ ಶತಮಾನಗಳಲ್ಲಿ ಬರುವ ಅಲ್ಪ ಸಂಖ್ಯೆಯ ಉಲ್ಲೇಖಗಳು ಈ ಆಚರಣೆಯಲ್ಲಿ ಆದ ಸ್ಥಿತ್ಯಂತರದ ನಿಜಸ್ವರೂಪವನ್ನು ಸೂಚಿಸುವುವು. 600–800 ಕಾಲಾವಧಿಯಲ್ಲಿ ಬಹು ಸಾಮಾನ್ಯವಾಗಿದ್ದ ಈ ಆಚರಣೆ 900 ರ ನಂತರ ತುಂಬಾ ವಿರಳವಾಯಿತು. 12ನೆಯ ಶತಮಾನದಲ್ಲಿ ಪುನರುಜ್ಜೀವನಗೊಂಡರೂ ಆನಂತರದ ಕಾಲಾವಧಿಯಲ್ಲಿ ಇದು ಅಪವಾದವೆನ್ನುವಷ್ಟು ವಿರಳವಾಯಿತೆಂಬುದನ್ನು ದಾಖಲೆಗಳು ಸ್ಪಷ್ಟಪಡಿಸುವುವು.

(ಆ) **ಕಂತಿಯರು :** ಕಂತಿಯರ ಇಚ್ಛಾಮರಣದ ಬಗೆಗೂ ಸ್ವಲ್ಪ ಹೆಚ್ಚೂಕಡಿಮೆ ಇಂತಹದೇ ಚಿತ್ರವಿದೆ. ಶಾಸನ ತಜ್ಞರು ಸೂಚಿಸಿದ ದಿನಾಂಕಗಳನ್ನು ಒಪ್ಪುವುದಾದರೆ, 1100ಕ್ಕೆ ಮುಂಚೆ 12 ಕಂತಿಯರು ಇಚ್ಛಾಮರಣ ಸ್ವೀಕರಿಸಿದರೆಂದು ತೀರ್ಮಾನಿಸಬೇಕಾಗುವುದು. ಇವುಗಳ ಪೈಕಿ 7ನೆಯ ಶತಮಾನದಲ್ಲಿ ಎಂಟು, 8ನೆಯ ಶತಮಾನದಲ್ಲಿ ಒಂದು, 10ನೇ ಶತಮಾನದಲ್ಲಿ ಒಂದು,

11ನೇ ಶತಮಾನದಲ್ಲಿ ಒಂದು ಮತ್ತು 12ನೆಯ ಶತಮಾನದಲ್ಲಿ ಒಂದು ಮಾತ್ರ ಮರಣ ನಿದರ್ಶನಗಳು ದೊರೆಯುವುವು. 7ನೆಯ ಶತಮಾನದ ನಂತರ ಅಪರೂಪವಾಗಿ ಕಂತಿಯರು ಸಮಾಧಿಕರಣ ಸ್ವೀಕರಿಸಿದುದನ್ನು ಇದು ಸ್ಪಷ್ಟಪಡಿಸುವುದು.

(ಇ) **ಗುಡ್ಡರು** : ಗುಡ್ಡರಿಗೆ ಒಟ್ಟು 21 ನಸಿಧಿಗಳನ್ನು ಈ ಕ್ಷೇತ್ರದಲ್ಲಿ ನಿರ್ಮಿಸಲಾಗಿದೆ. 700–900ರ ಕಾಲಾವಧಿಯಲ್ಲಿ ಒಬ್ಬ ಗುಡ್ಡನೂ ಈ ಗೌರವಕ್ಕೆ ಪಾತ್ರನಾಗಲಿಲ್ಲವೆಂದು ತೋರುವುದು. ಮಿಕ್ಕವುಗಳಲ್ಲಿ ಐದು ನದರ್ಶನಗಳು 10ನೆಯ ಶತಮಾನದವೆಂದು ಗುರುತಿಸಲಾಗಿದ್ದರೆ, 11ನೆಯ ಶತಮಾನದಲ್ಲಿ ಮಡಿದವರ ಹೆಸರು ಮತ್ತು ಊರು ಸಂದೇಹಾಸ್ಪದವಾಗಿಯೇ ಉಳಿದಿದೆ. ಗುಡ್ಡರ ಇಚ್ಛಾಮರಣದ ಇತಿಹಾಸವು 15ನೆಯ ಶತಮಾನದ ಏಕೈಕ ನಿದರ್ಶನದಿಂದ ಮುಕ್ತಾಯಗೊಳ್ಳುತ್ತದೆ. 7–9ನೆಯ ಶತಮಾನಗಳ ಕಾಲದ ಸುಮಾರು 21 ಸ್ಮಾರಕಗಳಲ್ಲಿ ಎರಡು ನಿದರ್ಶನಗಳು ವಿಶಿಷ್ಟವಾಗಿವೆ; ಆ ಎರಡರಲ್ಲೊಂದು 17ನೇ ಶತಮಾನದ ಸೋಮನಾಥಪುರದ ಅಗ್ರಹಾರದ ಬ್ರಾಹ್ಮಣನ ಮರಣಕ್ಕೆ ಸಂಬಂಧಿಸಿದ್ದಾದರೆ, ಇನ್ನೊಂದು ಮೈಸೂರು ಒಡೆಯರ ಅಧಿಕಾರಿಯೊಬ್ಬನ ಆಕಸ್ಮಿಕ ಮರಣಕ್ಕೆ ಸಂಬಂಧಿಸಿದೆ. ಇದರಿಂದ ಸ್ಪಷ್ಟಗೊಳ್ಳುವುದೇನೆಂದರೆ, ಗುಡ್ಡರಿಗೆ ನಿಸಿಧಿ ನಿರ್ಮಿಸುವುದು. 10ನೆಯ ಶತಮಾನದಲ್ಲಿ ಸಾಕಷ್ಟು ಜನಪ್ರಿಯವಾಗಿ, 12ನೆಯ ಶತಮಾನದ ಅಂತ್ಯದವರೆಗೆ ಅದು ಮುಂದುವರೆಯಿತು. ಆ ನಂತರ ಅದು ಬಹುಮಟ್ಟಿಗೆ ಮಾಯವಾಯಿತು.

ಹೀಗೆ ಮಡಿದವರಲ್ಲಿ ಇಬ್ಬರು ಮಾತ್ರ ಆಳುವ ಮನೆತನದವರಾಗಿದ್ದರು. ಇವರಲ್ಲೊಬ್ಬ ರಾಷ್ಟ್ರಕೂಟ ಅರಸ ನಾಲ್ವಡಿ ಇಂದ್ರ; ಇನ್ನೊಬ್ಬ, ಗಂಗ ಮಾರಸಿಂಹ. ವಿಜಯನಗರ ವಂಶದವರೆಂದು ಭಾವಿಸಲಾಗಿರುವ ಹರಿಹರ ಮತ್ತು ದೇವರಾಯ ಎಂಬುವರ ಮರಣದ ಉಲ್ಲೇಖಗಳು ಸಂದೇಹಾಸ್ಪದವಾಗಿವೆ. ಅವರ ಸಮಾಧಿ ಮರಣದ ಸ್ವರೂಪವಾಗಲಿ, ಅವರ ನಿಸಿಧಿಗಳ ನಿಶ್ಚಿತತೆಯಾಗಲಿ, ಅವರ ರಾಜಮಾನ್ಯತೆಯಾಗಲಿ, ಈ ದಾಖಲೆಗಳಲ್ಲಿ ಸ್ಪಷ್ಟಗೊಂಡಿಲ್ಲ.

ನಿಸಿದಿ (ಗೆ)

ಸನ್ಯಸನ ವಿಧಿಯಿಂದ ಮಡಿದವರ ಸ್ಮಾರಕವಾಗಿ ವೀರರಿಗೆ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದಂತೆ ಕೆಲವು ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು. ಇವುಗಳನ್ನು 'ನಿಸಿದಿಗಲ್ಲು'ಗಳೆಂದು ಕರೆಯುತ್ತಾರೆ.

ನಿಸಿಧಿ ಮಂಟಪಗಳು : ಪ್ರತ್ಯೇಕ ಮಂಟಪಗಳನ್ನು ಕಟ್ಟಿ ಅಲ್ಲಿ ನಿಸಿಧಿಗಳನ್ನು ಪ್ರತಿಷ್ಠಾಪಿಸುವ ಪದ್ಧತಿಯನ್ನು ಹತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟರು ರೂಢಿಗೆ ತಂದರೆಂದು ತೋರುವುದು. ಇಲ್ಲಿಯವರೆಗೂ ದೊರೆತ ಇಂತಹ ಮಂಟಪಗಳಲ್ಲಿ ನಾಲ್ವಡಿ ಇಂದ್ರನ ನಿಸಿಧಿ ಮಂಟಪವೇ ಅತ್ಯಂತ ಪುರಾತನವಾಗಿದೆ. ಚಿಕ್ಕಬೆಟ್ಟದ ಉತ್ತರ ಪೂರ್ವ ಮೂಲೆಯಲ್ಲಿ ಸವತಿಗಂಧವಾರಣ ಮತ್ತು ತೇರಿನ ಬಸದಿಗಳ ನಡುವೆ ಈ ಮಂಟಪವಿದೆ. ಇಲ್ಲಿಂದ ಮಹಾನವಮಿ ಮಂಟಪಗಳವರೆಗಿನ ಹಾಸುಗಲ್ಲನ್ನು ಹಂಚಿಕೊಂಡು ಇಂತಹ ಐದು ನಿಸಿಧಿ ಮಂಟಪಗಳು ನಿಂತಿವೆ. ಇವುಗಳಲ್ಲಿ ಕೆಲವು ಒಂಟಿಯಾಗಿದ್ದರೆ, ಇನ್ನು ಕೆಲವು ಜೋಡಿ ಮಂಟಪಗಳಾಗಿವೆ.

ಇವುಗಳ ವಿವರ ಹೀಗಿವೆ :

(ಅ) 'ಮಹಾನವಮಿ ಮಂಟಪ'ವೆಂದು ಈಗ ಪ್ರಚಾರದಲ್ಲಿರುವ ಅವಳಿ ಮಂಟಪಗಳು ಪಾರ್ಶ್ವನಾಥ ಬಸದಿಯ ಬಲ ಹಿಂಬದಿಗೆ ಹಾಗೂ ಶಾಂತಿನಾಥ ಬಸದಿಯ ಎಡಕ್ಕೆ ಇವೆ. ಅಂದರೆ, ಚಿಕ್ಕಬೆಟ್ಟದ ಬಸದಿಗಳ ಅಂಗಳವನ್ನು ಪ್ರವೇಶಿಸಿದೊಡನೆ, ನಮ್ಮ ಎಡಕ್ಕೆ ಕಾಣುವ ಈ ಪಂಟಪಗಳು ತಮ್ಮ ವಿಶೇಷ ಸೊಬಗಿನಿಂದ ಗಮನವನ್ನು ಸೆಳೆಯುವುವು. ಈ ಎರಡು ಮಂಟಪಗಳಲ್ಲಿ ಒಟ್ಟು ಮೂರು ನಿಸಿಧಿ ಸ್ತಂಭಗಳಿವೆ. ದಕ್ಷಿಣ ಮಂಟಪದಲ್ಲಿ 1163 ಮತ್ತು 1313ರಲ್ಲಿ ಪ್ರತಿಷ್ಠಾಪಿಸಿದ ಎರಡು ಸ್ತಂಭಗಳಿದ್ದರೆ, ಉತ್ತರ ಮಂಟಪದಲ್ಲಿ 1176ರಲ್ಲಿ ಸ್ತಾಪಿಸಿದ ಒಂದು ಸ್ತಂಭವಿದೆ.

(ಆ) ಚಾವುಂಡರಾಯ ಬಸದಿಯ ದಕ್ಷಿಣಕ್ಕಿರುವ ಮತ್ತೊಂದು ಮಂಟಪದಲ್ಲಿ 1120 ಮತ್ತು 1223ರಲ್ಲಿ ನಿಲ್ಲಿಸಿದ ಎರಡು ನಸಿಧಿಗಂಬಗಳಿವೆ. ಮೊದಲ ಶಾಸನದ ಆಧಾರದ ಮೇಲೆ ಇದನ್ನು **'ಪೋಚಿಕಬ್ಬೆಯ ಮಂಟಪ'** ವೆಂದು ಕರೆಯಬಹುದು.

(ಇ) ಎರಡುಕಟ್ಟೆ ಬಸದಿಯ ಪೂರ್ವಕ್ಕಿರುವ ಇನ್ನೊಂದು ಮಂಟಪದಲ್ಲಿ ನಾಲ್ಕು ನಸಿಧಿ ಕಂಬಗಳಿವೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಪಂಟಪಗಳಲ್ಲಿಯೆ ಇದು ಅತ್ಯಂತ ಪುರಾತನವಾದದ್ದು. ಇಲ್ಲಿ ಗೌರವಿಸಲಾಗಿರುವ ಗಂಗರಾಜನ ಮಡದಿಯ ಹೆಸರನ್ನಾಧರಿಸಿ ಇದನ್ನು 'ಲಕ್ಷ್ಮಿಮತಿ ಮಂಟಪ' ವೆಂದು ಕರೆಯಬಹುದು.

(ಈ) ಲಕ್ಷ್ಮೀಮತಿ ಮಂಟಪದಿಂದ ಸ್ವಲ್ಪ ದೂರ ಸವತಿ ಗಂಧವಾರಣ ಬಸದಿಯ ಉತ್ತರ–ಪೂರ್ವಕ್ಕೆ ಜೋಡು ಮಂಟಪಗಳಿವೆ. ಇವುಗಳಲ್ಲಿ ದಕ್ಷಿಣ ದಿಕ್ಕಿನ ಮಂಟಪದಲ್ಲಿ ಒಂದು, ಉತ್ತರ ದಿಕ್ಕಿನ

ಮಂಟಪದಲ್ಲಿ ಮೂರು ನಿಸಿಧಿಗಳಿದ್ದು ಅವುಗಳನಗನ್ನುಒಂದೇ ಕುಟುಂಬ ವರ್ಗಕ್ಕೆ ಸೇರಿದ ಈ ನಿಸಿಧಿ ಗೌರವಕ್ಕೆ ಪಾತ್ರಳಾದ ಅಗ್ರಮಾನ್ಯ ವ್ಯಕ್ತಿಯಾದ ಮಾಚಿಕಬ್ಬೆಯ ಹೆಸರಿನಿಂದ ಇವನ್ನು ಗುರುತಿಸಿ 'ಮಾಚಿಕಬ್ಬೆ ಮಂಟಪ' ಎಂದು ಕರೆಯಬಹುದು.

(ಉ) ಸವತಿಗಂಧವಾರಣ ಬಸದಿಯ ಉತ್ತರ–ಪೂರ್ವಕ್ಕೆ ಮತ್ತು ತೇರಿನ ಬಸದಿಯ ಉತ್ತರ–ಪಶ್ಚಿಮಕ್ಕಿರುವ ಮಂಟಪವೇ 'ರಾಷ್ಟ್ರಕೂಟ ನಾಲ್ವಡಿ ಇಂದ್ರನ ಮಂಟಪ.'

ನಿಸಿಧಿ ಮಂಟಪಗಳು ಚಿಕ್ಕಬೆಟ್ಟದ ವೈಶಿಷ್ಟ್ಯಗಳಾಗಿವೆ. ಏಕೆಂದರೆ, ಇಂತಹ ಕಟ್ಟಡಗಳು ದೊಡ್ಡಬೆಟ್ಟದ ಮೇಲಾಗಲಿ, ಪಟ್ಟಣ ಪರಿಸರದಲ್ಲಾಗಲಿ, ಕಂಡುಬರುವುದಿಲ್ಲ.

ಮಂಟಪಗಳ ಪ್ರಧಾನ ಲಕ್ಷಣಗಳು : ಇವೆಲ್ಲವೂ ತೆರೆದ ಮಂಟಪಗಳಾಗಿದ್ದು ವೇದಿಕೆ, ಕಂಬ ಹಾಗೂ ಚಾವಣಿಯನ್ನು ಹೊಂದಿವೆ. ಗಾತ್ರ ಮತ್ತು ಆಕಾರದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯನ್ನು ಹೊಂದಿರುವ ಈ ಮಂಟಪಗಳೆಲ್ಲ ತಮ್ಮ ತಮ್ಮ ಕಾಲದ ವಾಸ್ತು ವಿನ್ಯಾಸವನ್ನು ಪ್ರತಿಬಿಂಬಿಸುವ ಕಟ್ಟಡಗಳಾಗಿವೆ.

ಸ್ತಂಭ ಕೂಟ : ಒಂದು ಮಂಟಪದಲ್ಲಿ ಒಂದೇ ನಸಿಧಿಯನ್ನು ಪ್ರತಿಷ್ಠಾಪಿಸುವ ಪರಿಪಾಠವು ಮೊದಮೊದಲ ಹಂತದಲ್ಲಿ ಪ್ರಸಾರದಲ್ಲಿದ್ದು, ಕಾಲಕ್ರಮದಲ್ಲಿ ಇದು ಬದಲಾವಣೆಗೊಂಡಿತು. ಮೊದಲಿದ್ದ ಮಂಟಪದಲ್ಲಿ ರಕ್ತ ಸಂಬಂಧಿಗಳ ಮತ್ತು ಒಮ್ಮೊಮ್ಮೆ ಮನೆತನದ ಗುರುವಿನ ನಸಿಧಿ ಸ್ತಂಭಗಳನ್ನು ಸೇರಿಸುವುದು, ಕೆಲವೊಮ್ಮೆ ಈ ಸ್ತಂಭಗಳನ್ನು ಮರುಹೊಂದಾಣಿಕೆ ಮಾಡುವುದು ರೂಢಿಗೆ ಬಂತು. 12ನೆಯ ಶತಮಾನದಲ್ಲಿ ಆರಂಭವಾದ ಈ ಪದ್ಧತಿಯು ಸುಮಾರು 15–16ನೇ ಶತಮಾನಗಳವರೆಗೂ ಮಂದುವರೆಯಿತು. ನಸಿಧಿ ಸ್ತಂಭಗಳನ್ನು ಮರುಹೊಂದಾಣಿಕೆ ಮಾಡುವಾಗ ಒಮ್ಮೊಮ್ಮೆ ಮಂಟಪದ ಸಮಪ್ರಮಾಣತೆಗೆ ಚ್ಯುತಿ ಉಂಟಾದುದನ್ನು ನಾವು ಕಾಣುವೆವು. ಇದಕ್ಕೆ ಕಾರಣ ಅವಸರದಲ್ಲಿ ಅವನ್ನು ಸೇರಿಸಿದ್ದಾಗಿರಬಹುದು: ಇಲ್ಲವೆ ನಿಸಿಧಿ ಕಾರ್ಯದಲ್ಲಿ ಪಾಲ್ಗೊಂಡವರ ಅಚಾತುರ್ಯದಿಂದಾಗಿರಲೂಬಹುದು. ನಸಿಧಿ ಸ್ತಂಭಗಳ ಕಾಲಮಾನದಲ್ಲಿ ಅಷ್ಟೊಂದು ದೀರ್ಘ ಅಂತರವಿಲ್ಲದಿದ್ದಾಗ ಸಮಪ್ರಮಾಣತೆ ಹಾಗೂ ಸಾಮರಸ್ಯವನ್ನು ಹೆಚ್ಚು ಸಮರ್ಥವಾಗಿ ಕಾಪಾಡಿಕೊಳ್ಳಲು ಸಾಧ್ಯವಾದಂತೆ ಕಂಡುಬರುವುದು. ಇದಕ್ಕೆ ಮಹಾನವಮಿ ಮಂಟಪ ಹಾಗೂ ಮಾಚಿಕಬ್ಬೆಯ ನಿಸಿಧಿ ಮಂಟಪಗಳು ಸಾಕ್ಷಿ.

ರಕ್ತ ಸಂಬಂಧಿಗಳ ಸಾಮೂಹಿಕ ನಿಸಿಧಿಗಳು : ಒಂದೇ ಕುಟುಂಬದ ಸದಸ್ಯರಿಗೆ, ವಿಶೇಷತಃ ರಕ್ತ ಸಂಬಂಧಿಗಳಿಗೆ ಒಂದೇ ಮಂಟಪದಲ್ಲಿ ನಿಸಿಧಿ ಸ್ತಂಭ ನಿಲ್ಲಿಸುತ್ತಿದ್ದುದನ್ನು 12ನೆಯ ಶತಮಾನದ ಕೆಲವು ನಿದರ್ಶನಗಳಿಂದ ತಿಳಿದುಕೊಳ್ಳಬಹುದು. ಕೆಲವೊಮ್ಮೆ ಈ ಮಂಟಪಗಳಲ್ಲಿ ಕುಟುಂಬದ ಗುರುವಿನ ನಿಸಿಧಿಗೂ ಅನುವುಮಾಡಿಕೊಡಲಾಗುತ್ತಿತ್ತು. ಆದರೆ ಗಂಡನ ರಕ್ತಸಂಬಂಧಿಗಳ ನಿಸಿಧಿಯನ್ನು ಹೆಂಡತಿಯ ರಕ್ತಸಂಬಂಧಿಗಳ ನಸಿಧಿಗಳೊಡನೆ, ಅಥವಾ ಹೆಂಡತಿಯ ರಕ್ತಸಂಬಂಧಿಗಳ ನಿಸಿಧಿಯನ್ನು ಗಂಡನ ರಕ್ತಸಂಬಂಧಿಗಳ ನಸಿಧಿಗಳೊಡನೆ ಮಿಶ್ರಮಾಡಿ ಒಂದೇ ಮಂಟಪದಲ್ಲಿ ನಿಲ್ಲಿಸುವುದು ಆಚರಣೆಗೆ ವಿರೋಧವಾಗಿತ್ತೆಂದು ಕಾಣುವುದು. ಉದಾಹರಣೆಗೆ ಗಂಗರಾಜ ನಿರ್ಮಾಣಮಾಡಿದ ಎರಡು ನಿಸಿಧಿ ಮಂಟಪಗಳನ್ನು ಇಲ್ಲಿ ನಿದರ್ಶಿಸಬಹುದು. ಅವನ ಹೆಂಡತಿಯ ಗೌರವಾರ್ಥ ಕಟ್ಟಿಸಿದ ಮಂಟಪದಲ್ಲಿ, ಅವಳ ತವರುಮನೆಯ ರಕ್ತಸಂಬಂಧಿಗಳ ನಿಸಿಧಿಗಳನ್ನು ಮಾತ್ರ ಸೇರಿಸಿ, ತನ್ನ ತಾಯಿಯ ನಿಸಿಧಿಯನ್ನು ಪ್ರತ್ಯೇಕ ಮಂಟಪದಲ್ಲಿ ಅವನು ನಿಲ್ಲಿಸಿದನು.

ನಿಸಿಧಿಗಳು ಮರಣತಾಣದಲ್ಲಿರಬೇಕೆಂಬ ಕಡ್ಡಾಯವಿರಲಿಲ್ಲ : ಕಟವಪ್ರವು ಸಮಾಧಿ ಮರಣವನ್ನಾಚರಿಸುವ ಬೆಟ್ಟವಾಗಿದ್ದರೂ, ವ್ರತಾಚರಣೆ ಕೈಕೊಂಡ, ಇಲ್ಲವೆ ಸಾವನ್ನಪ್ಪಿದ, ಸ್ಥಳದಲ್ಲಿಯೆ ನಿಸಿಧಿ ಶಾಸನಗಳನ್ನಾಗಲಿ, ಸ್ತಂಭಗಳನ್ನಾಗಲಿ, ನಿಲ್ಲಿಸಬೇಕೆಂಬ ಕಡ್ಡಾಯವಿರಲಿಲ್ಲವೆಂದು ತೋರುವುದು. ಅಲ್ಲದೆ, ದೇಹಾವಶೇಷಗಳ ಮೇಲೆ ನಿರ್ಮಾಣಗೊಳ್ಳುತ್ತಿದ್ದ ಆರಂಭಕಾಲದ ಆಚರಣೆಯು ಕಾಲಕ್ರಮದಲ್ಲಿ ಸಡಿಲಗೊಂಡು, ಅಂಥವರನ್ನು ಸಾಂಕೇತಿಕವಾಗಿ ಗೌರವಿಸುವುದು ಸರ್ವಸಮ್ಮತಿಯ ಹಂತವನ್ನು ಗಳಿಸಿಕೊಂಡಿತೆಂದು ಕಾಣುವುದು. ಚಿಕ್ಕಬೆಟ್ಟದಲ್ಲಿ ಮರಣಹೊಂದಿದವರಿಗೆ ಮಾತ್ರ ಬೆಟ್ಟದ ನೆತ್ತಿಯ ಹಾಸುಗಲ್ಲಿನ ಮೇಲೆ ನಸಿಧಿ ಶಾಸನಗಳನ್ನು ಕೊರೆದು ಗೌರವಿಸುವುದು ಆರಂಭಕಾಲದಲ್ಲಿ (ಸುಮಾರು 600ರಿಂದ 900) ಸಾರ್ವತ್ರಿಕ ಸಂಪ್ರದಾಯವಾಗಿತ್ತು; ಆದರೆ ಕಾಲಾನಂತರ (ಸುಮಾರು 900ರ ನಂತರ) ಅದು ಬದಲಾಗಿ ಶ್ರವಣಬೆಳ್ಗೊಳದ ಸುತ್ತಮುತ್ತಲ ಪ್ರದೇಶದಲ್ಲಲ್ಲದೆ, ದೂರದ ಯಾವುದೇ ಗ್ರಾಮ–ಪಟ್ಟಣಗಳಲ್ಲಿ (ಉದಾ: ಬಂಕಾಪುರ, ಮೋರಿಂಗೆರೆ, ಮುಂತಾದವು) ಮಡಿದವರಿಗೂ ಇಲ್ಲಿ ನಿಸಿಧಿ ನಿಲ್ಲಿಸಿ, ಸಾಂಕೇತಿಕವಾಗಿ ಈ ಪವಿತ್ರ ಕ್ಷೇತ್ರದೊಳಕ್ಕೆ ಅವರನ್ನು ತೆಗೆದುಕೊಳ್ಳುವುದು ಸರ್ವಸಮ್ಮತಿ ಗಳಿಸಿಕೊಂಡಿತು. ಅಲ್ಲದೆ, ಮೊದಮೊದಲು ಕಠೋರ ವ್ರತಾಚರಣೆಯ ಮೂಲಕ ಕಾಯಕ್ಲೇಶವನ್ನು ಪೂರೈಸಿ, ನಿಯಮಬದ್ಧವಾಗಿ ಸಾವನ್ನಪ್ಪಿದವರಿಗೆ ಮಾತ್ರ ಸೀಮಿತವಾಗಿದ್ದ ಸ್ಮಾರಕ ಪ್ರಕ್ರಿಯೆಯು ಕಾಲಕ್ರಮದಲ್ಲಿ ಹೊಂದಾಣಿಕೆಗಳಿಗೊಳಗಾಗಿ, ಯಾವುದೇ ಬಗೆಯಲ್ಲಿ ಮರಣ ಹೊಂದಿದ ಸಾಮಾಜಿಕ, ಧಾರ್ಮಿಕ ಅಗ್ರಗಣ್ಯರಿಗೂ ಸಲ್ಲತೊಡಗಿತು.

ಸ್ಮಾರಕಗಳ ಪವಿತ್ರೀಕರಣ : ಆರಂಭ ಕಾಲದಲ್ಲಿ (ಸುಮಾರುನ 600-900) ನಿಸಿಧಿಗಳನ್ನು ಕೊರೆದ ಬಂಡೆಗಲ್ಲನ್ನು ವಿಶಿಷ್ಟ ಬಗೆಯಲ್ಲಿ ಪವಿತ್ರೀಕರಿಸಿದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಅಂದರೆ ಅಂತಹ ಸ್ಥಳಗಳು ಅನಾದರಕ್ಕೊಳಗಾಗುತ್ತಿದ್ದವೆಂದಲ್ಲ-ಅವುಗಳಿಗೆ ಪ್ರತಿನಿತ್ಯ ಪೂಜೆ ಪುನಸ್ಕಾರಗಳು ಸಲ್ಲುತ್ತಿರಲಿಲ್ಲವೆಂದು ಮಾತ್ರ. ಸುಮಾರು 12ನೆಯ ಶತಮಾನದ ನಂತರ, ನಿಸಿಧಿಗಳನ್ನು ದೇವಾಲಯದಲ್ಲಿ ನಿಲ್ಲಿಸುವುದು ಇಲ್ಲವೇ ಅವುಗಳಿಗಾಗಿ ಮಂಟಪವನ್ನು ನಿರ್ಮಾಣ ಮಾಡುವುದು, ಹೆಚ್ಚು ಹೆಚ್ಚು ಪ್ರಚಾರಕ್ಕೆ ಬಂತು. ದೇವಾಲಯದಂತೆ ಇವೂ 'ಚಂದ್ರ, ಸೂರ್ಯ, ನಕ್ಷತ್ರ ಹಾಗೂ ಮೇರು' ವಿನ ಶಾಶ್ವತತೆಯನ್ನು ಪಡೆದುಕೊಳ್ಳಲರ್ಹವಾದವುಗಳೆಂಬ ಭಾವನೆ ಬೆಳೆಯಿತು. ನಿಷ್ಕಳಂಕ ಚರಿತರು ಪರಲೋಕಕ್ಕೆ ತೆರಳಿದ ತಾಣಕ್ಕೆ ಗೌರವ ತೋರಿಸುವುದೆಂದರೆ, ಅವರಿಗೆ ಗೌರವ ತೋರಿದಂತೆ', ಎಂಬುದನ್ನು ಒಂದು ಶಾಸನದಲ್ಲಿ ಒತ್ತಿ ಹೇಳಲಾಗಿದೆ.

ನಿಸಿಧಿ ಸ್ಮಾರಕಗಳೊಡನೆ ಸ್ಥಳ ಹಂಚಿಕೊಂಡ ವೀರಗಲ್ಲುಗಳು : 10ನೆಯ ಶತಮಾನದ ನಂತರ ಬೆಟ್ಟದಲ್ಲಿ ಅನೇಕ ಬದಲಾವಣೆಗಳಾದವು. ಅಲ್ಲಿಯವರೆಗೂ ಏಕಾಂತತೆಯನ್ನು ಗಂಭೀರ ಗೌರವತೆಯನ್ನು ಕಾಪಾಡಿಕೊಂಡು ಮರಣಾರ್ಥಿಗಳಿಗೆ ಮಾತ್ರ ಮೀಸಲಾಗಿದೆ. ಈ ಬೆಟ್ಟವು ಯಾತ್ರಾರ್ಥಿಗಳ ಆಗಮನದಿಂದಾಗಿ ಜನನಿಬಿಡ ಪ್ರದೇಶವಾಗತೊಡಗಿತು. ಕಾಯಕ್ಲೇಶ ವ್ರತ ಸ್ವೀಕರಿಸಿ, ಸಮಾಧಿ ವಿಧಿಯನ್ನು ಆಚರಿಸಿ, ಪಾವನಗೊಳಿಸಲಾಗಿದ್ದ ಶಿಲಾಶೈಲವನ್ನು ಕಾಣಲು ಭಕ್ತಿಪೂರ್ವಕವಾಗಿ ಬರುತ್ತಿದ್ದ ಯಾತ್ರಿಕರು ಕ್ರಮೇಣ ತಮ್ಮ ತೀರ್ಥಯಾತ್ರೆಯನ್ನು ಅಮರಗೊಳಿಸಲೆಂಬಂತೆ ತಮ್ಮ ತಮ್ಮ ಹೆಸರುಗಳನ್ನು, ತಾವಿತ್ತ ಅಲ್ಪಸ್ವಲ್ಪ ದಾನದತ್ತಿಗಳನ್ನು ಶಾಶ್ವತಗೊಳಿಸಲು ಶಾಸನಗಳನ್ನು ಕೆತ್ತಿಸಿ, ಅವುಗಳನ್ನು ನಿಸಿಧಿ ಶಾಸನಗಳೊಡನೆ ಬೆರೆಸತೊಡಗಿದರು. ಅವರ ಆಡಂಬರಪೂರ್ಣ ಸಂದರ್ಶನಗಳು, ಅದ್ದೂರಿಯ ಭಕ್ತಿಪ್ರದರ್ಶನ, ಶಬ್ದಾಡಂಬರದಿಂದೊಡಗೂಡಿದ ಅರ್ಚನಾ ವಿಧಾನ, ಕಟವಪ್ರದ ಪ್ರಾಕೃತಿಕ ಪರಿಸರಕ್ಕೆ ಧಕ್ಕೆ ತಂದವು. ಈ ಗದ್ದಲಕ್ಕಂಜಿದ ಏಕೋವಿಹಾರಿಗಳು ತಮ್ಮ ಸಾಧನೆಗೆ ಅಡ್ಡ ಬಂದ ಆತಂಕವನ್ನು ಮನಗಂಡು ಇಲ್ಲಿಂದ ಕಾಲ್ತೆಗೆಯತೊಡಗಿದರು.

10ನೆಯ ಶತಮಾನದ ನಂತರ ಇಲ್ಲಿಯ ಕವಿಗಳಿಗೆ, ರೂವಾರಿಗಳಿಗೆ, ಕಲ್ಕುಟಿಗರಿಗೆ, ಯಾತ್ರಾರ್ಥಿಗಳು ಪ್ರಧಾನ ಪೋಷಕರಾದರು. ಅವರ ಹೆಸರನ್ನು ಶೈಲಶಿಲೆಯ ಮೇಲೆ ಕೊರೆದು ಅಜರಾಮರ ಮಾಡುವುದು, ಅವರಿತ್ತ ದಾನ ದತ್ತಿಗಳನ್ನು ಶಾಸನಗಳಲ್ಲಿ ದಾಖಲಿಸುವುದು, ಅವರ ವೈಯಕ್ತಿಕ ಲೌಕಿಕ ಸಾಧನೆಗಳನ್ನು ಸ್ಮರಿಸುವುದು, ಅವರು ಹಮ್ಮಿಕೊಂಡ ಮಂದಿರ ಮಂಟಪಗಳನ್ನು ನಿರ್ಮಾಣ ಮಾಡುವುದು, ಈ

ರೂವಾರಿಗಳ ಪ್ರಮುಖ ಉದ್ಯೋಗಗಳಾದವು. ಇದರಿಂದಾಗಿ ಸ್ತಬ್ಧ ತಪೋಯುಗವು ಮುಕ್ತಾಯಗೊಂಡು ಆಡಂಬರದ ಭಕ್ತಿಯುಗವು ಆರಂಭವಾಗಿ, ಆಧ್ಯಾತ್ಮಿಕ ಹಾಗೂ ಲೌಕಿಕತೆಯ ಮಧ್ಯೆ ಅಂತರವನ್ನು ಆಕ್ರಮಿಸತೊಡಗಿತು. ಅಲ್ಲದೆ ಲೌಕಿಕದಲ್ಲಿ ಪ್ರಾಧಾನ್ಯತೆ ಪಡೆದ ಪ್ರತಿಷ್ಠಿತ ವ್ಯಕ್ತಿಗಳ ವೀರ ಹಾಗೂ ಸತೀ ಕಂಬಗಳು ಮಂದಿರ-ಮಂಟಪಗಳ ಸ್ಥಾನ ಪಡೆದುಕೊಂಡು, ನಿಸಿಧಿ ಮಂಟಪಗಳಿಗೆ ಸಾಟಿ ಎನ್ನುವಂತೆ ತಲೆ ಎತ್ತತೊಡಗಿದವು.

ಅಧ್ಯಾಯ –7

ಇಸ್ಲಾಮಿ ವಾಸ್ತುಶಿಲ್ಪ ಮತ್ತು ಕಲೆ

ಕ್ರಿ.ಶ. 7 ಶತಮಾನದಲ್ಲಿ ಇಸ್ಲಾಮಿ ಕಲೆ ಹುಟ್ಟುವುದಕ್ಕೆ ಮುಂಚೆ, ಅಕ್ಕಪಕ್ಕದಲ್ಲಿದ್ದ, ಸಿರಿಯ, ಮೆಸೂಪೊಟೇಮಿಯ ಮತ್ತು ಇತರ ಪಾಶ್ಚಾತ್ಯ ದೇಶಗಳಲ್ಲಿ ವಾಸ್ತುಶಿಲ್ಪ, ಚಿತ್ರರಚನೆ, ಮುಂತಾದ ಕಲೆಗಳು ಒಂದು ರೀತಿಯ ಮೇಲ್ಮಟ್ಟವನ್ನು ಆಗಲೇ ಸಾಧಿಸಿದ್ದುವು. ಇಸ್ಲಾಂ ಧರ್ಮದಲ್ಲಿ ವಿಗ್ರಹರಚನೆ, ಅದರ ಆರಾಧನೆ ಮತ್ತು ಚಿತ್ರಕಲೆಯಲ್ಲಿ ಮನುಷ್ಯ, ಪಶು, ಪಕ್ಷಿ ಮುಂತಾದ ಜೀವಿಗಳ ನಿರೂಪಣೆ ನಿಷಿದ್ಧ. ದೇವರ ವಿನಾ ಮತ್ತೊಬ್ಬರಿಗೆ ಆಕೃತಿಗಳನ್ನು ಸೃಷ್ಟಿಸುವ ಅಧಿಕಾರವಿಲ್ಲವೆಂದು ಅವರು ಭಾವಿಸಿದ್ದರು. ಷಟ್ ದಿಕ್ಕುಗಳನ್ನು ಸೂಚಿಸುವುದು, ಪಂಚೇಂದ್ರಿಯಗಳಿಗೆ ಪರಿಣಾಮವನ್ನುಂಟುಮಾಡುವಂತೆ ಚಿತ್ರರಚನೆ ಮಾಡುವುದು – ಅಚಿದರೆ ಮುಖ್ಯವಾಗಿ ಉದ್ದ, ಅಗಲ, ಎತ್ತರ ಮತ್ತು ಜೀವಂತವಾದ ಆಕೃತಿಗಳ ರಚನೆ\–ಘೋರ ಪಾಪವೆಮದು ಹನಾಫೀಯರು ಭಾವಿಸಿದ್ದರು. ಆದ್ದರಿಂದ ಇಸ್ಲಾಮೀ ಕಲೆಯ ಪ್ರಾರಂಭದಲ್ಲಿ ಮಾನವ ಪಶು ಪ್ರಾಣಿಗಳ ಆಕೃತಿಗಳು ಕಾಣವು. ರೇಖಾಗಣಿತದ ಚತುರಶ್ರ, ಮತ್ತು ವಿವಿಧ ಭಂಗಿಗಳ ಸುರಳೀ ರೂಪಗಳು ಕುರಾನ್ ವಚನಗಳನ್ನೊಳಗೊಂಡಂತೆ ಮಾತ್ರ ರಚಿತವಾದವು. ಈ ನಿರೂಪಣೆಯಲ್ಲಿನ ಪುಷ್ಪಲತಾ ವಿನ್ಯಾಸದ ಕಲ್ಪನಾಶಕ್ತಿ ಗಮನೀಯ. ಉದಾರ ಮನಸ್ಸಿನವರಾದ ಷಿಯ ಪಂಗಡದವರು ಈ ನಿಯಮವನ್ನು ಪಾಲಿಸಲಿಲ್ಲ.

ರಮ್ಯವಾದ ಇಸ್ಲಾಂ ಶಿಲ್ಪಾಕೃತಿಗಳು ಮತ್ತು ಚಿತ್ರಗಳು ಮೂಖ್ಯವಾಗಿ ಸ್ಪೇನ್, ಸಿಸಿಲಿ, ಪರ್ಷಿಯ, ತುರ್ಕಿ,ಈಜಿಪ್ಟ್,ಭಾರತ, ಪಾಕಿಸ್ತಾನ ಮುಂತಾದ ದೇಶಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಭಾರತ, ಚೀನ, ಬೈಜಾಂಟಿಯನ್ ಗಳ ಪ್ರಾಚೀನ ಧರ್ಮಮತ್ತು ಸಂಸ್ಕೃತಿಗಳ ಪ್ರಭಾವಗಳು ಕಂಡುಬಂದರೂ ಇಸ್ಲಾಮೀ ಕಲೆಯ ಪ್ರತ್ಯೇಕತೆ ಗಮನಾರ್ಹವಾಗಿ ಉಳಿದುಬಂದಿದೆ. ದಂತಹ ಕೆತ್ತನೆ ಮತ್ತು ಕುಂದಣದ ಕೆಲಸ, ನೇಯ್ಗೆಯ ಕೆಲಸ, ಲೋಹ, ಗಾಜು, ಮಡಕೆ, ವಾಸ್ತುಶಿಲ್ಪ ಮುಂತಾದವುಗಳ ಅಲಂಕಾರವಿಧಾನದಲ್ಲಿ

ಮುಸಲ್ಮಾನರ ಶೈಲಿ ಪಾಶ್ಚಾತ್ಯ ಕಲೆಗಳ ಮೇಲೆ ಪರಿಣಾಮವನ್ನುಂಟುಮಾಡಿತು. ಮಿನಾಯಿ(ಎನಾಮ್ಲ) ಹಾಕುವುದರಲ್ಲಿ ಇಸ್ಲಾಮೀ ಕಲೆ ಮೇಲ್ಪಟ್ಟವನ್ನು ಸಾಧಿಸಲಿಲ್ಲ. ಇದಕ್ಕೆ ವೆಲೆನ್ಷಯ ಕೇಂದ್ರವಾಗಿತ್ತು. ಇಲ್ಲಿಂದ ಆಮದು ಮಾಡಿದ ಮಡಕೆಗಳು ಪಾಯಿಷರ್ಸ್ ಮಡಕೆ ಕಲೆಗೆ ತಳಹದಿ ಹಾಕಿದುವು. ಸ್ಪೇನ್ ದೇಶದಿಂದ ಇಟಲಿಗೂ ಹಾಲೆಂಡಿಗೂ ಇಸ್ಲಾಮೀ ಕಲೆಯ ಪ್ರಭಾವ ಹಬ್ಬಿತು. ಸ್ಪೇನ್, ಸಿರಿಯ ದೇಶಗಳಿಂದ ಗಾಜಿಗೆ ಬಣ್ಣ ಹಾಕುವ ಶೈಲಿ ಬಂತು. ಮಡಕೆ ನಿರ್ಮಾಣದಲ್ಲಿ, ನಾನಾ ವರ್ಣಪ್ರಸ್ತರಗಳನ್ನು ಅಳವಡಿಸುವಲ್ಲಿ, ಹೊಳಪು ಕೊಡುವುದರಲ್ಲಿ ಸ್ಪೇನ್ ಮತ್ತು ಪೋರ್ಚುಗಲ್ಲಿನವರು ಇಸ್ಲಾಮಿಯರಿಗೆ ಚಿರಋಣಿಗಳು. ಆದರೆ ಹೊಳೆಯುವ ಮುಡೇಗಾರ್ ಕಲಾತ್ಮಕ ಮಡಕೆಗಳು ಚೀನೀಯರ ಮಡಕೆಗಳನ್ನು ಮೀರಿಸಲಾರವು. ಮಧ್ಯಯುದ ರತ್ನಗಂಬಳಿ ಮುಂತಾದವುಗಳ ನೇಯ್ಗೆ ಯ ಕೆಲಸದಲ್ಲಿ ಅರಬ್ಬರು ಪ್ರಖ್ಯಾತಿ.ಹೊಂದಿದ್ದರೂ ಅವರು ಅಲಂಕಾರ ರಚನೆಯಲಲಿ ಪರ್ಷೀಯನ್ನರಿಗಿಂತ ಮಿಗಿಲೆನಿಸಲಾರರು. ಆಲ್-ಮೌಸಿಲ್ ಪ್ರದೇಶದಿಂದ ಇಟಲಿಗೆ ಆಮದು ಮಾಡಿದ ನಿರ್ಮಲವಾದ ಅತಿ ಪಾರದರ್ಶಕ ಬಟ್ಟೆ, ರೇಶ್ಮೆಯ ಚಪ್ಪರ ಇವು ಮತ್ತೆರಡು ಉದಾಹರಣೆಗಲಾಗಿವೆ.ಅರ್ಥವಿಲ್ಲದ ಬರಹದ ಅಲಂಕಾರ ಮತ್ತು ಅರಬೆಸ್ಕುಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ 12ನೆಯ ಶತಮಾನದಿಂದ (ಲೋಹ, ಗಾಜು, ಮಡಕೆ, ವಾಸ್ತುಶಿಲ್ಪ, ಅಲಂಕಾರರಚನೆ ಚಿತ್ರಣ ಮುಂತಾದವುಗಳಲ್ಲಿ) ಇಸ್ಲಾಮೀ ಕಲೆಯನ್ನು ಅನುಕರಿಸಲಾಯಿತು. ಇಂದಿಗೂ ಸ್ಪೇನ್, ಸಿಸಿಲಿ ಮುಂತಾದ ದೇಶಗಳಲ್ಲಿ ಪೂರ್ವ ಪ್ರದೇಶದ ಕಸಬುಗಾರರು ಅಲ್ಲಿಯೇ ಉಳಿದುಕೊಂಡು ತಮ್ಮ ಕಲಾಕೃತಿಗಳಿಗೆ ಇಸ್ಲಾಮೀ ಪಾರಿಭಾಷಿಕ ಪದಗಳನ್ನು ಉಪಯೋಗಿಸುತ್ತಾರೆ.

ಸ್ಪೇನ್ ದೇಶದಲ್ಲಿ ಇಸ್ಲಾಂ ಸಂಪ್ರದಾಯದ ವಾಸ್ತುಶಿಲ್ಪದ ಅವಶೇಷಗಳು ಕಾರ್ಡೋೀವದಲ್ಲಿ ಗ್ರಾನಡ ಪ್ರಾಂತ್ಯದ ಅಲ್-ಹಮ್-ಬ್ರಾ ನಲ್ಲಿ ನೋಡಬಹುದು. ಜೆರೂಸಲೆಂ ಮತ್ತು ಮೆಕ್ಕಗಳಲ್ಲಿಯ ಮಸೀದಿಗಳೀಗೆ ಅವು ಪ್ರಕೃತಿಗಳಾಗಿವೆ. ಅಲ್-ಹಮ್-ಬ್ರಾ ಕಟ್ಟಡ ಪ್ರ.ಶ. 786 ರಲ್ಲಿ ಅಬ್-ಅಲ್ ರಾಜನಿಂದ ಪ್ರಾರಂಭಗೊಂಡು ಅವನ ವಂಶಿಕರಿಂದ ಪೂರ್ಣಗೊಂಡಿತು. ಇದು ಪಾಶ್ಚಾತ್ಯ ಕಬಾಷ್ ಎಂದು ಪ್ರಖ್ಯಾತಿ ಪಡೆಯಿತು. ಘನವಾದ 1,203 ಸ್ತಂಭಗಳನ್ನೊಳಗೊಂಡ ಅರಣ್ಯದಂತೆ ಕಾಣುವ ಈ ಮಸೀದಿಯಲ್ಲಿ ಕ್ರೈಸ್ತರ ಹಿತ್ತಾಳೆ ಗಂಟೆಗಳಿಂದ ರಚಿಸಲಾದ ಒಂದು ಸಾವಿರ ಜ್ಯೋತಿಗಳನ್ನೊಳಗೊಂಡ ಒಂದು ಗುಚ್ಛವಿದೆ. ಉಮಾಯಾದ್ ಮಸೀದಿಗಳನ್ನು ಕಟ್ಟಿದ ಬೈಜಾಂಟೀಯನ್ ಕಲೆಗಾರರು ಇದನ್ನು ಅಲಂಕರಿಸಿದ್ದಾರೆ. ಗ್ರೀಕರ ಕಲೆ ಸಂಸ್ಕೃತಿಗಳ ಪ್ರಭಾವ ಇದರ ಗುಂಡಾದ ಕಂಬಗಳ ಮೇಲಿನ ಅಕ್ಯಾಂತಸ್ ಶೃಂಗಾರವನ್ನೊಳಗೊಂಡ ಚತುರರ್ಶರ ಬೋದಿಗೆಗಳಿಂದ ಸ್ಪಷ್ಟವಾಗುತ್ತದೆ. ಬಿಳಿ ಮತ್ತು ಕಪ್ಪು ಬಣ್ಣದ

ಕಲ್ಲುಗಳಿಂದ ರೂಪಿಸಿದ ಅರ್ಧಚಂದ್ರಾಕಾರದ ಕಮಾನುಗಳನ್ನು ಈ ಬೋಧಿಗೆಗಳು ಧರಿಸಿವೆ. ಕಂಬಗಳಿಗೆ ಪಾದಗಳಿಲ್ಲ.

ಸತ್ತವರನ್ನು ಪೆಲೆರ್ಮೊ ದೇವಾಲಯದ ನೆಲಮಾಳಿಗೆಯಲ್ಲಿ ಸಮಾಧಿ ಮಾಡುತ್ತಿದ್ದರು. ಇದು ಗ್ರೀಕರ ಅಲಂಕಾರಯುತವಾದ ಸ್ಥೂಲ ಸ್ಥಂಭಗಳ ಮೇಲೆ ನಡುನಡುವೆ ಹಾಯುವ ಕಮಾನುಗಳನ್ನೊಳಗೊಂಡ ಗಂಭೀರವಾದ ಕಟ್ಟಡ. ಒಳಗೆ ಹೋದಲ್ಲಿ ಇಲ್ಲಿಯ ಚಿನ್ನ ಮತ್ತು ಮೊಸಾಯಿಕ್ ಕಲೆಗಳಿಂದ ಅಲಂಕರಿಸಿದ ಗೋಡೆ ಮುಂತಾದವು ವಿಸ್ಮಯಕಾರವಾಗಿವೆ. ಇಲ್ಲಿ ಕೂಡ ಮೇಲ್ಕಂಡ ಸಂಕೀರ್ಣ ಜಾತಿಯ ಕಲೆ ಕಂಡುಬರುತ್ತದೆ. ಇದರ ಮಠದಲ್ಲಿ (ಕ್ಲಾಯಿಸ್ಟರ್) ಕೂಡ ಸಂಕೀರ್ಣ ಜಾತಿಯ ವಾಸ್ತುಶಿಲ್ಪವಿದೆ. ಇಲ್ಲಿಯ ಸ್ಥಂಭಗಳು ಒಂದನ್ನು ಮತ್ತೊಂದು ರೂಪದಲ್ಲಾಗಲಿ ಅಥವಾ ಶ್ರಮಗಾರದಲ್ಲಾಗಲಿ ಹೋಲುವುದಿಲ್ಲ. ಅತ್ಯಂತ ಕುಶಲತೆಯಿಂದ ಸಾಧಿಸಿದ ಇಲ್ಲಿಯ ಲಲಿತಾಲಂಕಾರ ಆಶ್ಚರ್ಯವನ್ನುಂಟುಮಾಡುತ್ತದೆ. ಒಂದು ಕಡೆ ಭಾರತ ಸಂಪ್ರದಾಯದ, ಅಮೃತಶಿಲೆಯಲ್ಲಿ ಕೊರೆದ ಅರಳುವ ಪದ್ಮ, ಅದರ ಮಧ್ಯದಲ್ಲಿ ನಾರ್ಮನ್ ಶೈಲಿಯಲ್ಲಿ ಕೆತ್ತಿರುವ ಮಕ್ರಾಲಂಕಾರ ಸ್ತಂಭೀಯುತ ಗರ್ಭ ಕೇಸರ, ಅದರ ಮೇಲಿನ ಇಸ್ಲಾಂ ರೀತಯ ಗುಂಡಾಕಾರದ ತುದಿ, ಮತ್ತೊಂದು ಕಡೆ ಚಿತ್ರವಿಚಿತ್ರವಾದ ಶೃಂಗಾರದಲ್ಲಿ ಒಂದನ್ನು ಮತ್ತೊಂದು ಹೋಲದೇ ಇರುವ ಬೋದಿಗೆಗಳು–ಇವೆಲ್ಲವೂ ಇಸ್ಲಾಂ ಸಂಕೀರ್ಣ ಜಾತಿಯ ಕಲಾ ವೈಶಿಷ್ಟ್ಯಕ್ಕೆ, ಕೌಶಲಕ್ಕೆ ಉನ್ನತಮಟ್ಟದ ನದರ್ಶನಗಳು.

ವಾಸ್ತು ಶಿಲ್ಪದಲ್ಲಿ ಪರ್ಷಿಯ ಅಂಥ ಘನತೆಯನ್ನು ಸಾಧಿಸಲಿಲ್ಲವಾದರೂ ಚಿತ್ರ ಕಲೆಯಲ್ಲಿ ಮಾತ್ರ ಉನ್ನತಮಟ್ಟದ ಸೊಬಗನ್ನು ಗಳಿಸಿತು. ಪಾರಸಿಕರಲ್ಲಿ ಅಸ್ಸೀರಯ ಮತ್ತು ಬ್ಯಾಬಿಲೋನಿಯ ಸಂಸ್ಕೃತಿಗಳ ಸಂಯೋಗ ಕಾಣುತ್ತದೆ. ಇಲಲಿಯ ಇಸ್ಲಾಮೀ ಕಲೆಯ ಚರಿತ್ರೆ ಎರಡನೆಯ ಸಸೇನಿಯನ್ನರ ಆಡಳಿತದಿಂದ (226–652) ಪ್ರಾರಮಭವಾಯಿತು. ಇದು ವೀರರ ಯುಗ, ಆದಕಾರಣ ಅರ್ತಷೀರ್, ಪಾಪೂರ್, ಬಹ್ರಾಮ್ ಗೂರ್ ಮುಂತಾದ ವೀರರ ಚರಿತ್ರೆಗಳನ್ನೂಳಗೊಂಡ ಚಿತ್ರರಂಜನೆ ಇದೆ. ಯುದ್ಧದ ಸಂಘಟನೆಯಗಳು, ಬೇಟೆಯ ದೃಶ್ಯಗಳು, ಮತ್ತು ವನ ನಿರ್ಮಾಣಗಳು ಇಲ್ಲಿ ವರ್ಣಿತವಾಗಿವೆ. ಸಸ್ಸಾನಿಯನ್ನರ ಆಡಳಿತದಲ್ಲಿ ರೂಪರಚನೆ ಕಟುವಾಗಿಯೂ ಬಲಯುತವಾಗಿಯೂ ಇತ್ತು. ಮುಖ ಚಿತ್ರಣ ಸುಧಾರಿಸಿದ್ದರೂ ಶೈಲಿ ಪ್ರಾಚೀನವೇ ಸಸೇನಯನ್ನರ ಕಾಲದಲ್ಲಿ ಮೆನಕಿಯನ್ಸ್ ಎಂಬ ಹೆಸರಿನ ಒಂದು ಮತ ಹುಟ್ಟಿತು. ಇದು ಕ್ರೈಸ್ತ ಬೌದ್ಧ ಪಾರಸಿಕ ಧರ್ಮಗಳ ಸಂಯೋಗ, ಈ ಮತ ಪಷಿಯದ ಚಿತ್ರ ಕಲೆಯ ಮೇಲೆ ಗಮನಾರ್ಹವಾದ ಪರಿಣಾಮವನ್ನುಂಟುಮಾಡಿತು. ಫಿರ್ದೌಸಿ ನುಡಿದಮತೆ

ಮಣಿ ಉತ್ತಮ ದರ್ಜೆಯ ಚಿತ್ರಕಾರ, ಇವನ ಪಂಥದವರ ಪ್ರಖ್ಯಾತ ಕಳ ಸೂತ್ರಗಳು ಮುಂದಿನ ಇಸ್ಲಾಮೀ ಕಲೆಯ ಮೇಲೆ ಹೆಚ್ಚಿನ ಪ್ರಭಾವ ಬೀರಿದುವು. ಸಸೇನಿಯನ್ನತ ಹಿಂಸೆಯಿಂದ ಚೀನಕ್ಕೆ ವಲಸೆ ಹೋದ ಕೆಲವರು 271ರಲ್ಲಿ ಪ್ರಸಿದ್ಧವಾದ ಹಸ್ತಲಿಖಿತ ಪುಸ್ತಕದ ಸೂಕ್ಷ್ಮ ಚಿತ್ರಗಳನ್ನು ರಚಿಸಿದರು.

ಪರ್ಷಿಯದ ಇಸ್ಲಾಮೀ ಕಲೆಯ ಚರಿತ್ರೆಯಲ್ಲಿ ಎರಡು ಮುಖ್ಯ ಯುಗಗಳನ್ನು ಗುರುತಿಸಬಹುದು. 1 ಉಮಾಯದ್ ಸುಲ್ತಾನರ ಯುಗ(661–750) ಅಬ್ಬಾಸಿದ್ ಸುಲ್ತಾನರ ಯುಗ(750–1258) ಮೊದಲ ಯುಗದಲ್ಲಿ ಮಹಮ್ಮದ್ ಪ್ರಚಾರ ಮಾಡಿದ ನಿರ್ಬಂಧಗಳನ್ನು ಕಲೆಯಲ್ಲಿ ಅನುಸಿರಿಸಲಾಯಿತು. ಆದಕಾರಣ ಕೇವಲ ಕಲ್ಪನಾರೂಪದ (ಅಬ್ ಸ್ಟ್ಯಾಕ್ಟ್) ಅಲಂಕಾರ ಶೈಲಿ ಮಾತ್ರ ಕಂಡುಬರುತ್ತದೆ. ಸೂಕ್ಷ್ಮ ಚಿತ್ರಗಳನ್ನೊಳಗೊಂಡ ಹಸ್ತಲಿಖಿತ ಪುಸ್ತಕಾಲಂಗಕಾರಕ್ಕೆ ಹೆಚ್ಚು ಮನ್ನಣೆ ಇತ್ತು. ಪ್ರಾರಂಭದಲ್ಲಿ ಲಿಪಿ ಸಂಬಂದವಾದ ವಿಧಾನದಲ್ಲಿ ರೂಪ ರಚನೆ ಸಾಗಿತು. ಕೆಲವು ಕಾಲಾನಂತರ ಮನುಷ್ಯ ಪಶು ಪಕ್ಷಿ ರೂಪಗಳನ್ನೂ ಸೇರಿಸಲಾಯಿತು ರೆಕ್ಕೆಗಳುಳ್ಳ ಕುದುರೆಯ ಮೇಲೆ ಮಹಮ್ಮದ್ ಸ್ವರ್ಗಕ್ಕೆ ಹಾರುತ್ತಿರುವ ಚಿತ್ರ ರಚಿತವಾಯಿತು. ನಯಗಾರೆಯ ಮೇಲಿನ ಚಿತ್ರಣ(ಪ್ರೇಸ್ಕೋ) ಮೊಸಾಯಿಕ್ ರಚನೆಗಳು ಉಮಾಯದ್ ಆಡಳಿದಲ್ಲಿ(8ನೆಯ ಶತಮಾನ) ಟ್ರಾನ್ಸ–ಜೋರ್ಡನ್, ಜೆರುಸಲೇಮ್, ಪ್ಯಾಲಸ್ತೀನ್ ಪ್ರದೇಶಗಳಲ್ಲಿ ವಿಪುಲವಾಗಿ ಹುಟ್ಟಿದುವು. ಆದರೆ ಚಿತ್ರಕಲೆ ಷಿಯ ಪಂಗಡಕ್ಕೆ ಸೇರಿದ ಅಬ್ಬಾಸಿದ್ ಕಾಲದಲ್ಲಿ ಮಾತ್ರ ಔನ್ನತ್ಯ ಪಡೆಯಿತು. ಈ ಶೈಲಿಯನ್ನು ಮಸಪಟೋಮಿಯ ಸಂಪ್ರದಾಯವೆಂದು ಕರೆಯುತ್ತಾರೆ.

ಅನಂತರ ಬಂದ ತೈಮೂರ್‌ರ ಕಾಲದಲ್ಲಿ(1309–1509) ಈ ರೂಪಚಿತ್ರಣ ಲಿಪಿ ಸಂಬಂಧವಾದ ಅಲಂಕಾರದ ಹಿನ್ನಲೆಯಿಂದ ಪ್ರತ್ಯೇಕಿಸಲ್ಪಟ್ಟು ಎರಡನೆಯ ಮಂಗೋಲರ ದಾಳಿಯ(1381–1392) ಕಾಲದಲ್ಲಿ ಹೊಸ ಮಾಧುರ್ಯ ಪಡೆಯಿತು. ಬರಹದ ಹಿನ್ನೆಲೆ ಕೊನೆಗೊಂಡು ಪ್ರಕೃತಿ ಚಿತ್ರಣದ ಹಿನ್ನೆಲೆಯಲ್ಲಿ ರೂಪಚಿತ್ರಣ ಹೊಸ ಸೂಕ್ಷ್ಮತೆಯನ್ನೂ ರಮ್ಯತೆಯನ್ನೂ, ಹೊಂದಿ ಬೆಳೆಯಿತು. ಪ್ರಕೃತಿ ಸೌಂದರ್ಯ ಚಿತ್ರಣಕ್ಕೆ ಮಾನ್ಯತೆ ದೊರೆತದ್ದು ಈಗಲೇ ಈ ಚಿತ್ರಗಳಲ್ಲಿ ವೈವಿಧ್ಯವಿತ್ತು. ಸೂಕ್ಷ್ಮ ವಿವರಣೆಯಿತ್ತು. ಲಾಲಿತ್ಯವಿತ್ತು. ಚೀನಿಯರ ಮಿಂಗ್ ಕಾಲಾನಂತರ ಪರ್ಷಿಯನ್ನರು ತಮ್ಮ ಸಹಜ ಸೌಂದರ್ಯ ಪ್ರಜ್ಞೆಯನ್ನು ಮತ್ತೊಮ್ಮೆ ಪಡೆದ ತಮ್ಮ ಉದ್ದೇಶಗಳಿಗೆ ಅನುಗುಣವಾದ ಮೇಲ್ಮಟ್ಟದ ಅಲಂಕಾರಕ್ಕೆ ಮರಳಿ, ಚೀನಿಕಲೆಯ ಆಧ್ಯಾತ್ಮಿಕ ದೃಷ್ಟಿಯಿಂದ ಪಾರಾದರು. ತೈಮೂರ್ ಒಂದು ಅಚ್ಚು ಕಟ್ಟಿನಲ್ಲಿ ಮಾತ್ರ ಸ್ವೇಚ್ಛೆಯನ್ನು ಪ್ರೋತ್ಸಾಹಿಸಿದರೆ, ಅವನ ಮಗನಾದ ಷಾ–ರುಖ್(1404–47)ತಂದೆಯ ನಿರ್ಬಂಧಗಳನ್ನು ಸಡಿಲಿಸಿದ ಇವನ ಕಾಲದಲ್ಲಿಯ ಅತ್ಯುತ್ತಮವಾದ ಹಸ್ತಲಿಖಿತ ಸೂಕ್ಷ್ಮಚಿತ್ರಗಳು ಮಸ್ತಕಗಳು ಎಂದರೆ ಚೆಂಗೀಷ್ ಖಾನನ ದಿಗ್ವಿಜವನ್ನು


(1167–1277) ಚಿತ್ರಿಸುವ ಕಾವ್ಯಸಂಗ್ರಹ, ಕಾರ್ಮಾನ್–ಖಾಜು ಕವಿಯ 43 ಕವನಗಳ ಸಂಗ್ರಹ(1281–1350). ಈ ಎರಡರಲ್ಲಿ ವಿನಿಯೋಗಿಸಿದ ಬಣ್ಣಗಳಲ್ಲಿ ಚಿನ್ನದ ನೀರು ಮತ್ತು ಟರ್ಕ್ವಯಿಸ್ ಪ್ರಧಾನ್ಯ ಹೊಂದಿದೆ. ತೈಮೂರ್ ಸುಲ್ತಾನನ ಮೊಮ್ಮಗನಾದ ಸುಲ್ತಾನ್ ಇಸ್ಕಾನ್ ಸಂಗ್ರಹಿಸಿದ ಕವನಗಳ ಹಸ್ತಲಿಪಿಗಳಲ್ಲಿ ಲೈಲಾ–ಮಜನೂ ಪ್ರೇಮದ ಘಟ್ಟವೂ ಮಂಗೋಲರ ಚರಿತ್ರೆಯೂ ಇವೆ.

ಸಫವಿದ್ ಯುಗದಲ್ಲಿ (1502–1756) ಸೂಕ್ಷ್ಮ ಚಿತ್ರರಚನೆ ಮತ್ತಷ್ಟು ಮೇಲ್ಮಟ್ಟಕ್ಕೇರಿತು. ಬಿಜ್ಜದ್ ಶೈಲಿ ಹರಡಿತು. ಮೂಲಪುರಷನಾದ ಇಸ್ಮಾಯಿಲ್ ನ ರಾಜಧಾನಿಯಾದ ಟೈಬ್ರಿಜ್‌ನಲ್ಲಿ ಅಸಂಖ್ಯಾತ ಬರೆಹಗಾರರೂ, ಕಲೆಗರರೂ ರಾಜ ಪೋಷಣೆಯಲ್ಲಿ ಪಾಲ್ಗೊಂಡರು. ಇವರಲ್ಲಿ ಮಿರಾಕ್, ಕಾಸಿಂ ಆಲಿ, ಸುಲ್ತಾನ್ ಮಹಮ್ಮದ್ ಮುಂತಾದವರಿದ್ದರು. ಇವರಲ್ಲಿ ಅಗ್ರಸ್ಥಾನ ಪಡೆದಿದ್ದ ಸುಲ್ತಾನ್ ಮಹಮ್ಮದ್ ಸೂಕ್ಷ್ಮ ಚಿತ್ರರಚನೆಯಲ್ಲಿ ಹಸ್ತಲಿಖಿತ ಪುಸ್ತಕಾಲಂ ಕಾರದಲ್ಲೂ ಹಳೆಯ ಸಂಪ್ರದಾಯವನ್ನೇ ಅನುಸರಿಸಿದ ಆತ ಮೀರ್ ಸೈಯದ್ ಆಲಿ ನೈಜಜಾಮಿಯ ಕವನಗಳನ್ನು ಸುಂದರವಾಗಿ ಚಿತ್ರಿಸಿದ್ದಾನೆ. ಸಹ–ಇಡ್ರ ಕಾಲದಲ್ಲಿ ಭಾವಚಿತ್ರಗಳಿಗೆ ಹೆಚ್ಚಾದ ಪ್ರಾಧಾನ್ಯ ದೊರಕಿತು ಸ್ಪಷ್ಟವಾದ ರೇಖಾ ವಿನ್ಯಾಸದ ಆವರಣದಲ್ಲಿ ಬಣ್ಣ ತುಂಬಿದ ರೂಪಗಳು ಪ್ರಚಾರಕ್ಕೆ ಬಂದುವು. ಈ ಯುಗದಲ್ಲಿ ಅಸಂಪೂರ್ಣ ಸೂಕ್ಷ್ಮಚಿತ್ರಣ, ಮುಖ್ಯಾಂಶಗಳನ್ನು ಮಾತ್ರ ಎತ್ತಿ ತೋರುವ ಉದ್ದೇಶದಿಂದ ಮೊದಲನೆಯ ಬಾರಿ ಚಿತ್ರಿತವಾದವು. ರಿಜಾ–ಅಬ್ಬಾಸಿ ಉತ್ತಮ ದರ್ಜೆಯ ಭಾವಚಿತ್ರಗಳನ್ನೂ ಸಾಮಾನ್ಯ ಜೀವನದ ದೃಶ್ಯಗಳನ್ನೂ ಚಿತ್ರಿಸಿದ, ಖುಸ್ರಾ ಮತ್ತು ಷರಿನ ಹಸ್ತಲಿಖಿತ ಪ್ರತಿಯನ್ನು ಕೂಡ(16–17) ಬಣ್ಣಿಸಿದ್ದಾನೆ. ಇವನ ಅನಂತರ ಸೂಕ್ಷ್ಮ ಚಿತ್ರಣ ಯುರೋಪಿಯನ್ನರ ಪ್ರಭಾವದಿಂಧ ಕ್ಷೀಣಿಸಿತು. ಆದರೆ, ಸುಸಂಸ್ಕೃತಿ ಹೊಂದಿದ ಪಾರಸೀ ಕಲಾವಿದರು ಪಾಶ್ಚಾತ್ಯ ಆವರಣವನ್ನು ಮಾತ್ರ ಅನುಕರಿಸಿ ಕೊಂಡು ತಮ್ಮ ರೂಪಚಿತ್ರಣದಲ್ಲಿ ಹಿಂದಿನ ಸಂಪ್ರದಾಯವನ್ನೇ ಮೂಂದೂ ಹರಡಿದರು. ಸಾಮಾನ್ಯರು ಕಾಂಚನಕಾಂಕ್ಷೆಯಿಂಧ ಅಧಮ ದರ್ಜೆಯ ಕಲಾಕೃತಿಗಳ ರಚನೆಯಲ್ಲಿ ಲೀನವಾದರ. ಇದಕ್ಕೆ ಮೀರ್–ಅಫ್ಜಲ್ ಚಿತ್ರಗಳು ಉದಾಹರಣೆಗಳಾಗಿವೆ. 19ನೆಯ ಶತಮಾನದಲ್ಲಿ ಮರುಗೆಣ್ಣೆ(ಲ್ಯಾಕರ್) ಚಿತ್ರಗಳು ಮುಂದುವರಿದುವು. ಪರಿಣಾಮವಾಗಿ ಪುಸ್ತಕಗಳ ಹೊದಿಕೆಯ ಅಲಂಕಾರ, ಪೆಟ್ಟಿಗೆ ಸಂಪುಟ ಮತ್ತು ಗೃಹೋಪಗರಣಗಳ ಶೃಂಗಾರ ಹೆಚ್ಚಿತು. ಭಾರತ ಕಲಾ ಸಂಸ್ಕೃತಿಯ ಸಂಪರ್ಕದಿಂದ ಪರಿಣಮಿಸಿದ ಇಸ್ಲಾಂ ಕಲೆ ಮತ್ತಷ್ಟು ವೈಶಿಷ್ಟ್ಯಗಳಿಸಿತು.

15ನೆಯ ಶತಮಾನದ ಉತ್ತರಾರ್ಧದಲ್ಲಿ 2ನೆಯ ಮಹಮ್ಮದನ ಆಡಳಿತದಲ್ಲಿ (1451–81) ಪಾಶ್ಚಾತ್ಯ ಕಲೆಗಾರರ ಸಂಪರ್ಕದ, ಪರಿಣಾಮವಾಗಿ ಶಾಸ್ತ್ರೀಯ ಇಸ್ಲಾಂ ಕಲೆ ಅಧೋಮುಖವಾಯಿತು.

ಭಾವಚಿತ್ರಣ, ಬರೆಹ, ಅಲಂಕಾರ ಮುಂತಾದವು ಕ್ಷೀಣಿಸಿದುವು. ಹಿಂದೀಬೇ ಸ್ಥಾಪಿಸಿದ ಅಕಾಡೆಮಿ ಆಫ್ ಆರ್ಟ್ಸ್(1883) ಬುರಾನ್-ಟ್ರೋಪಕ್ ಸ್ಥಪಿಸಿದ ಯೂನಿಯನ್ ಸೊಸೈಟಿ ಆಪ್ ಇನಡಿಪೆಂಡೆಂಟ್ಸ್ ಮೊದಲಾದ ಸಂಸ್ಥೆಗಳ ಮೇಲೆ ಪ್ರಾನ್ಸಿನ ಪರಿಣಾಮ ವಿಧಾನ(ಇಂಪ್ರೆಷನಿಸಂ) ಮತ್ತು ಅತಿ ವಾಸ್ತವ್ಯ ವಾದಗಳ (ಸರ್‍ರಿಯಲಿಸಂ) ಪ್ರಭಾವ ಹೆಚ್ಚದಂತೆಲ್ಲ ಇಸ್ಲಾಂ ಕಲೆ ತನ್ನ ವೈಶಿಷ್ಟ್ಯವನ್ನು ಕಳೆದು ಕೊಂಡಿತು.

ಭಾರತ ಇಸ್ಲಾಮೀ ಕಲೆಯಲ್ಲಿ ವಾಸ್ತುಶಿಲ್ಪಕ್ಕೂ ಚಿತ್ರಲೇಖನಕ್ಕೂ ಪ್ರಾಧಾನ್ಯ ದೊರಕಿತು. ಪ್ರಾರಂಭದಲ್ಲಿ ಪರ್ಷಿಯನ್ನರ ಕಲೆಯ ಅಭಾವ ಹೆಚ್ಚಾಗಿ ತೋರಿಬಂದರೂ ಭಾರತೀಯ ಕಲಾ ಸಂಪ್ರದಾಯಗಳು, ಮುಖ್ಯಾವಾಗಿಅಕ್ಬರನ ಕಾಲದಲ್ಲಿ ಕಂಡುಬರುತ್ತದೆ. ಸಂಪ್ರದಾಯದ ಗಿಡ, ಹೂವು, ಕಲಶ ಮೂತಾದುವುಗಳಿಂದ ರಚಿಸಿದ ಚಿತ್ರಾಲಂಕಾರವನ್ನು ಭಾರತೀಯರಿಂಥ ಬೌದ್ಧರೂ ಬೌದ್ಧರಿಂದ ಚೀಣಿಯರೂ ಅನುಸರಿಸಿದ್ದನ್ನು ಮೆಚ್ಚದ ಪರ್ಷಿಯನ್ನರು ತಮ್ಮ ಕಲೆಯಲ್ಲಿ ಅದನ್ನು ತಂದಿದ್ದಾರೆ. ವಾಸ್ತುಶಿಲ್ಪದಲ್ಲಿ ಅರ್ಧಚಂದ್ರಾಕಾರದ ಗೋಪುರಗಳು ಕಮಾನುಗಳು, ಕುದುರೆಲಾಳದ ರೂಪವನ್ನು ತಾಳಿದ ಕಮಾನುಗಳು ಕೊಠಡಿಗಾಳಾಗಿ ಕೊರೆದ ಪರದೆ ಮಾದರಿಯ ಕಿಟಿಕಿಗಳೂಕ, ಮರೆ ಮಾಡುವ ಅಡ್ಡ ಪಟ್ಟಿಗಳು, ನೀಪ, ಮಲ್ಲಿಕಾ, ಕಮಲ, ಕಲ್ಪಪುಷ್ಪಗಳನ್ನೊಳಗೊಂಡ ಲತಾ ಸುರುಳಿಗಳು, ಕಮಲದಳಪಾದಗಳ ಮೇಲೆ ಕುಂಭಾ ಕೃತಿಗಳಲ್ಲಿ ಕಡೆದ ಸ್ತಂಭಗಳು, ಅವುಗಳ ಮೇಲೆ ಕಲಶರೂಪದಲ್ಲಿ ರಚಿಸಿದ ಬೋದಿಗೆ ಗಳಿಂದ ನೇತಾಡುವ ಬಾಳೆ



ತಾಜ್‌ಮಹಲ್‌ನ ಒಳನೋಟ

ಅಥವಾ ಕಮಲ ಮೊಗ್ಗುಗಳ ಪದಕಗಳೂ, ಕಟ್ಟಡದ ಮುಂಭಾಗದಲ್ಲಿಯ ಕಮಾನಿನ ಉಭಯ ಪಾರ್ಶ್ವಗಳಲ್ಲಿ ಕಮಾಲಾಕಾರದಂತೆ ಕೆತ್ತಿದ ಅಥವಾ ಕೊರೆದ ಪದಕಗಳು–ಮುಂತಾದವು ಭಾರತ ಸಂಪ್ರಾದಾಯದವು.

ಮೊಗಲರ ವಾಸ್ತುಕಲೆಯ ಚರಿತ್ರೆಯನ್ನು 3 ಯುಗಗಳಾಗಿ ವಿಭಜಿಸಬಹುದು,. ಮೊದಲನೆಯದು ಪ್ರಾಚೀನವಾದದ್ದು. 1199–1411ರ ವರೆಗಿನದು. ಮಧ್ಯಮ ಕಾಲದ್ದು 1414–1510ರ ವರೆಗಿನದು, ಈಚಿನದು



ತಾಜ್‌ಮಹಲ್

1560–1658ರ ವರೆಗಿನದು, ಕುನಾಕ್–ಉಲ್–ಇಸ್ಲಾಂ ಮಸೀದಿ,ಅದಕ್ಕೆ ಪೂರ್ವದಲ್ಲಿದ್ದ ಭಾರತೀಯರ ದೇವಾಲಯದ ರೂಪಾಂತರ(1199). ಇದರ ಮುಂದಿನ ಹೆಬ್ಬಾಗಿಲ ದಾರಿ ಅಮಲಕ ಅಕಾರವುಳ್ಳ ಕಮಾನುಗಳಿಂದ ಕಟ್ಟಲಾಗಿ, ಪುಷ್ಕಳವಾದ ಸುರುಳಿಗಳಿಂದ ಅಲಂಕೃತವಾಗಿದೆ. ಮಸೀದಿಯಲಿಯ ಪ್ರಾರ್ಥನೆ ಗೂಡು ಮತ್ತು ಅದರ ಸುತ್ತ ಇರುವ ಗೋಡೆಗಳು ಅತಿ ನಾಜೂಕಾದ ಸುರಳಿ, ನಕ್ಷತ್ರಗಳಿಂದ ತುಂಬಿದೆ, ಕುಂಬಿಪೀಠಗಳ ಮೇಲಿನ ಅರ್ಧಸ್ತಂಭ ಚಿತ್ರಣ ಭಾರತೀಯ ಮಾದರಿಯಲ್ಲಿದ್ದು ಅತ್ಯಂತ ರಂಣೀಯವಾಗಿದೆ. ಇದೇ ಕಾಲದ ಕುತುಬ್ ಮಿನಾರಿನ(1200) ಶೃಂಗಾರದಲ್ಲಿ ಕೂಡ ಭಾರತ ಸಂಪ್ರದಾಯಗಳು ಕಂಡುಬರುತ್ತವೆ. ಇಲ್ಲಿ ರೇಖಾಗಣಿತ ನಕ್ಷೆಗಳ ಅಲಂಕಾರ, ಬರೆಹಾಲಂಕರದ ಸುತ್ತ ಹೆಚ್ಚಾಗಿದೆ. ಇಲ್–ಕಾತ್ ಮೀರ್ (1235) ಗೋರಿಯ ಅಂತರದಲ್ಲಿ ಇವುರ ಗೋಡೆಗಳು, ಕಮಾನುಗಳು, ಕುಂಭಾಕೃತಿಯ ಕಂಬಗಳು

ಮುಂತಾದವುಗಳು ಮೇಲೆ ಬರಹಾಲಂಕಾರ ಪುಷ್ಪಭರಿತ ಲತಾವಿಧಾನ, ಮೂಲೆ ಮೂಲೆಗಳಿಂದ ನೇತಾಡುವ ಕಮಲ ಮೊಗ್ಗುಗಳು, ಕೊಠಡಿಗಳಾಗಿ ಕೊರೆದ ಅಡ್ಡಪಟ್ಟಿಗಳ ನಮೂನೆಗಳು–ಇವೆಲ್ಲವೂ ಇನ್ನೂ ಮುಂದೆ ಬರುವ ಅಲಂಕಾರ ವಿಧಾನವನ್ನು ಸೂಚಿಸುತ್ತವೆ. ಇಲ್ಲಿ ಭಾರತ, ಇಸ್ಲಾಂ ಅಲಂಕಾರ ಶೈಲಿಗಳ ಸಂಯೋಗವನ್ನು ಕಾಣಬಹುದು. (ಷೇಕ್ ಯೂಸುಫ್ ಕಾಟಿಲ್ ನ ಗೋರಿ, ಫತೇಪುರ್ ಸಿಕ್ರಿ,ಕಿಲಾಕನಃ ಮಸೀದಿಯ ಪ್ರಾರ್ಥನೆ ಗೂಡು, ಷೇಕ್ ಇಮಾಮ್ ಸಲೀಮ್ ಛಿಸಿಟಿಯ ಗೋರಿ, ತುರ್ಕಿ ಸುಲ್ತಾನನ ಅಂತಃಪುರ, ದಿವಾನ್–ಇ–ಖಾಸಿಗೆ ಸೇರಿದ ಸಿಹಾಸನದ ಗೌಸಣಿಕೆ; ಸಿಕಂದರದಲ್ಲಿಯ ಅಕ್ಬರನ ಗೋರಿ; ಶೀಷ್ ಮಹಲ್)

ಹುಮಾಯೂನನ ಅಜ್ಞಾತವಾಸದಲ್ಲಿ ಷೇರ್ ಷಾ ತನ್ನ ಉಪಯೋಗಕ್ಕೆ ಕಟ್ಟಿಸಿದ ಖಿಲಾ–ಈ–ಕುನಾಃ ಮಶೀದಿಯ ಅಲಂಕಾರ(1545) ಮತ್ತಷ್ಟು ಕಲಾಕೌಶಲ್ಯವನ್ನು ಪಡೆದು ಮುಂದಿನ ಅಲಂಕಾರದ ಪಕ್ವತೆಗೆ ದಾರಿ ಮಾಡಿತು. ಷೇರ್ ಷಾನ ಗೋರಿಯಲ್ಲಿ ಬಣ್ಣ ಬಣ್ಣದ ಕ್ಲಲುಗಳಿಂದಲೂ ಅಮೃತಶಿಲೆಯಿಂದಲೂ ಗೋಡೆಗಳ ಮೇಲೆ ಭಾರತದಲ್ಲಿ ಮೊದಲನೆಯ ಬಾರಿ ಮಾಡಿದ ಕುಂದಣದ ಕೆಲಸ ಸುಂದರವಾಗಿದೆ. ಅಕ್ಬರ್ ಕಾಳದ ವಾಸ್ತುಶಿಲ್ಪದ ಪ್ರಾರಂಭದಿಂದ(1560)ಷಾಹಜಹಾನ್ ಮರಣದವರೆಗೂ (1658) ಮೊಗಲದ ಕಟ್ಟಡದ ಕಲಾಪ್ರೌಢಮೆಯನ್ನೂ ಇವುಗಳಲ್ಲಿಯ ಅಲಂಕಾರ ವೈಶಿಷ್ಟ್ಯವನ್ನೂ ಕುಶಲತೆಯನ್ನೂ ತೋರಲು ಇಂದಿಗೂ ದೆಹಲಿ, ಲಾಹೋರ್ ಪ್ರಾಂತಗಳಲ್ಲಿ ಉಳೀದುಕೊಂಡಿರುವ ಕಲಾಕೃತಿಗಳನ್ನು ಮಾತ್ರ ಇಲ್ಲಿ ವರ್ಣಿಸಲಾಗಿದೆ. ಅಕ್ಬರ್ ತನ್ನ ಕಾಲದಲ್ಲಿ ಸಾದಿಸಿದ ಮತಸಂಯೋಗವನ್ನು ವಾಸ್ತುಶಿಲ್ಪದಲ್ಲೂ ಚಿತ್ರರಚನೆಯಲ್ಲೂ ಸ್ಪಷ್ಟವಾಗಿ ಕಾಣಬಹುದು. ಇದು ಜಹಾಂಗೀರನ ಕಾಲದಲ್ಲಿ ಇನ್ನೂ ಮುಂದುವರಿಯಿತು. ಆದರೆ ಷಾಹಜಹಾನನ ಕಾಲದಲ್ಲಿ ಪರ್ಷಿಯನ್ ಶೈಲಿಯ ಪ್ರಭಾವ ಹೆಚ್ಚಿತೆನ್ನಬಹುದು. ಇದಲ್ಲದೆ ಅಲಖಾರದ ಉಪಕರಣಗಳು ಕೂಡ ಬದಲಾದುವು. ಇವುಗಳ ಶೇಖರಣೆ ಕಷ್ಟವಾಗಿರಬಹುದು. ಆದಕಾರಣ ಗುರ್ಝರ ಪ್ರಧೇಶಗಳಲ್ಲಿ ಮುಸಲ್ಮಾನರಾಡಳಿತ ಕಾಳದಲ್ಲಿ ಪ್ರಚುರವಾಗಿದ್ದ ಮರದ ಮನಿದನಕೈಗಳು, ತೋರಣಗಳು ಮುಂತಾದವನ್ನು ಅಕ್ಬರ್ ತನ್ನ ಕಟ್ಟಡಗಳಲ್ಲಿ ಅಷ್ಟಾಗಿ ಬಳಸಲಿಲ್ಲ. ಇದರಿಂದ ಹೈಂದವ ಶಿಲ್ಪದ ಸಮಪ್ರದಾಯದ ಅಂಶ ಇಸ್ಲಾಂ ಕಲೆಯಲ್ಲಿ ಹೆಚ್ಚಾಗಿ ಬೆರೆಸಬೇಕಾಗಿ ಬಂತು. ಇದು ಊರ್ಜಿತಕ್ಕೆ ಬಂತು. ದೆಹಲಿಯ ಉತ್ತರದಲ್ಲಿ ಹೇರಳವಾಗಿರುವ ಕೆಂಪು ಬಣ್ಣದ ಪದರಕಲ್ಲು (ಸ್ಯಂಡ್ ಸ್ಟೋನ್) ದೊಡ್ಡ ದೊಡ್ಡ ಮೂಲಗಳಿಗೂ ಹಾಸಿಗೆಯ ಕಲ್ಲುಗಳಿಗೂ ಅನುಕೂಲವಾದದ್ದು, ಇವುಗಳ ಮೇಲಿನ ಕೆತ್ತನೆಯ ಅಲಂಕಾರ ವಿಸ್ತಾರವಾಯಿತು. ಅಕ್ಬರನ ಕಾಲದಲ್ಲಿ ಅಮೃತಶಿಲೆಯನ್ನು ಹೆಚ್ಚಾಗಿ ಉಪಯೋಗಿಸಲಿಲ್ಲ. ಬಾಹ್ಯಾ ಲಂಕಾರದಲ್ಲಿ ಮುಖ್ಯ ಸ್ಥಳಗಳಲ್ಲಿ ಮಾತ್ರ ಅದನ್ನು ಉಪಯೋಗಿಸಿದರು. ಆದರೆ ಜಹಂಗೀರನ

ಕಾಲದಲ್ಲಿ ಕುಂದಣದ ಅಲಂಕಾರವನ್ನು ಹೊರಗಿನ ಗೋಡೆಗಳ ಮೇಲೆ ಶೋಭಾಯಮಾನವಾಗಿ ಮಾಡಲಾಯಿತು. ಆದರೂ ಗೋರಿಗಳ ನಕ್ಷೆಗಳು, ಅವುಳ ವಿಧಾನಗಳು ಇಸ್ಲಂ ತೈಮೂರ್ ಕಾಳದವಾಗಿಯೇ ಉಳೀದುಕೊಂಡವು. ಅಕ್ಬರ್, ಇತ್ಮ-ದೌಲಾ, ಹುಮಾಯೂನ ಇವರ ಕಾಳದ ಶಿಲ್ಪ ತೈಮೂರ್ ರ ಮಾದರಿಯವು ಎನ್ನಬಹುದು.

ತಾಜ್‌ಮಹಲ್ (1635) ಸ್ಥಲವಾಗಿ ಹುಮಾಯೂನನ ಗೋರಿ ನಕ್ಷೆಯನ್ನು ಹೊಲುತ್ತದೆ. ಇದರ ಗುಮ್ಮಟ ಅರ್ಧಗೋಲಾಕೃತಿಯಲ್ಲಿದ್ದರೆ ಹುಮಾಯೂನ್ ಗೋರಿಯ ಗುಮ್ಮಟ ಮೊನಚಾಗಿ ಅಮಲಕದಂತಿದೆ. ತಾಜಮಹಲಿನ ಅಮೃತಶಿಲೆಯ ತೇಜಸ್ಸು ಅತ್ಯಂತ ಅಕರ್ಷಣೀಯವಾಆಗಿದ್ದು ಈ ಭವನಕ್ಕೆ ಅಮೃತಶಿಲೆಯಲ್ಲಿಯ ಕನಸು ಎಂಬ ಪ್ರಶಸ್ತಿಯನ್ನು ತಂದಿದೆ. ಇಲ್ಲಿಯ ಕುಂದಣಗೆಲಸ, ಅಮೃತಶಿಲೆಯಲ್ಲಿ ಕುಶಲತೆಯಿಂದ ಕೊರೆದ ವಿವಿಧಾಲಂಕಾರ-ಇವು ಅದ್ಭುತದಾಗಿದೆ. ವಾಸ್ತುಶಿಲ್ಪದ ಬಿಡಿ ಬಿಡಿ ಭಾಗಗಳ ಮಧುರ ಸಂಯೋಜನೆ ಇಲ್ಲಿ ವಿಸ್ಮಯಗೊಳಿಸುತ್ತದೆ. ಅಕ್ಬರನ ಔದಾರ್ಯದಲ್ಲಿ ಹಿಂದೂ ಮುಸಲ್ಮಾನ್ ವಾಸ್ತುಶಿಲ್ಪ ಔನ್ನತ್ಯವನ್ನು ಹೊಂದಿತೋ ಅಥವಾ ಷಾಹಜಹಾನ್ ಕಾಲದ ವಿಶಿಷಾಲಂಕಾರ ಸೊಂಪಿನಿಂದ ಮೇಲ್ಮಟ್ಟವನ್ನು ಗಳಿಸಿತೋ ಹೇಳುವುದು ಕಷ್ಟ ನಜವಾಗಿ, ಅಲಂಕಾರ ರಚನೆಯಲ್ಲಿ ಇವೆರಡೂ ಸಮನಾಗಿವೆ. ಅದರೆ ಷಾಹಜಹಾನನ ಕಾಳದಲ್ಲಿ ಅಮೃತಶಿಲೆಯ ಚಪ್ಪಡಿಗಳಲ್ಲಿ ಯಥೋಚಿತವಾಗಿ ಕೂಡಿಸಿದ ಬಣ್ಣಬಣ್ಣದ ನವರತ್ನಗಳ ಕುಂದಣದ ಕೆಲಸ ಮಾತ್ರ ಅಸದೃಶ್ಯ ಇದೆ ಮಾದರಿಯಲ್ಲಿ ಇಶ್ಮ-ಉದ್-ದೌಲಾನ ಗೋರಿ ಅಲಂಕೃತವಾಗಿದೆ. ತುರ್ಕಿ ಸುಲ್ತಾನ್ ಮನೆಯ ಅಲಂಕಾರ ಹೂವು ಹೆಣ್ಣುಗಳಿಂದ ಕೂಡಿದ ಗಿಡಗಳ ವಿವಿಧ ರೂಪವನ್ನೋಳಗೊಂಡ ಅಕ್ಬರ್ ಗೋರಿಯ ಅಲಂಕರಣವನ್ನು ಹೋಲುತ್ತದೆ.

ಇದೇ ಕಾಲದ ಹೆಂಚುಗಳಿಂದ ನಾನಾ ರೂಪಗಳಲ್ಲಿ ಅಲಂಕೃತವಾದ, ಲಾಗೋರಿನ ವಜೀರ್ ಖಾನ್ ಗೋರಿ, ಅಗ್ರದ ಚೀನೀತಾಜ್, ಲಾಹೋರ್ ಕೋಟೆಗಳ ಅಲಂಕಾರ ಹೆಚ್ಚಿನ ಮನ್ನಣೆ ಪಡೆದಿದೆ. ಇವುಗಳ ಸೌಂದರ್ಯ ಅದ್ವೀತಿಯವಾದ್ದು, ಇಲ್ಲಿಯ ಮೊಸಾಯಿಕ್ ಚಿತ್ರಗಳು ಸಾಧಾರಣಾ ಜೀವನಕೂ ರಾಜರ ಅಡಂಬರಕ್ಕೂ ಸಾದೃಶ್ಯವಾಗಿದೆ. ಚೀನೀ ಕಾತಾಂಜಾದಲ್ಲಿ ರಾಜರ ಮತ್ತು ಶ್ರೀಮಂತರ ಭಾವಚಿತ್ರಗಳು ಮಿಶ್ರಿತವಾಗಿವೆ. ಇಲ್ಲಿಯ ಚಿತ್ರಗಳಲ್ಲಿ ರಾಜರು ಪೋಲೋ ಆಡುವುದು ಸವಾರರು ಆನೆ ಒಂಟೆ ಕುದುರೆಗಳನ್ನು ಮುಂದೆ ಒಯ್ಯುತ್ತಿರುವುದು ಆನೆ, ಒಂಟೆ, ಕುದುರೆಗಳ ಮೇಲೆ ಕುಳಿತು ಯುದ್ದಮಾಡುವುದು ಹೋರಿ, ಅನೆ ಒಂಟೆಗಳ ಗುದ್ದಾಟಗಳು ಅಮತಃಪುರದ ಮಧುಪಾನ ಮತ್ತು ನೃತ್ಯ ಮುಂತಾದ ಕ್ರೀಡೆಗಳು ಚಿರತೆಗಳು ಸಹಿತ ರಾಜರು ಬೇಟೆ ಆಡುವುದು.ಭೂಮಿಯನ್ನು ಉಳುವುದು ಬಾತು ಕೊಕ್ಕರೆ ಗಿಡುಗ

ಹಮ್ಮಿಂಗ್ ಪಕ್ಷಿಗಳ ಹಾರಾಟ ಮುಂತಾದವುರಮಣೀಯವಾಗಿವೆ. ಆಡುಗಳನ್ನು ಕೊಂದ ಅನಂತರ ಕೈತೊಳೆಯುವ ಮತ್ತು ಮಧುವನ್ನು ಹಂಚುವ ರೀತಿ ಶ್ರೀಮಂತರ ಉದ್ಯಾನವನದ ಕ್ರೀಡೆಗಳು ಆಕರ್ಷಿಣೀಯವಾಗಿವೆ ಈ ನಿರ್ಮಿತಿಗಳಲ್ಲಿ ಹೆಂಚುಗಳ ಶೃಂಗಾರ ಜಹಾಂಗೀರ್ ಕಾಳದಲ್ಲಿ ಪ್ರಾರಂಭವಾಗಿ ಷಾಹಜಹಾನ್ ಕಾಲದಲ್ಲಿ ಉನ್ನತ ಮಟ್ಟಕೇರಿತು. ಈ ಶೃಂಗಾರದಲ್ಲಿ ಅಸಂಖ್ಯಾತ ಬಣ್ಣಬಣ್ಣದ ಕಲ್ಲಿನ ಫಲಕಗಳನ್ನೂ ಉಪಯೋಗಿಸಲಾಗಿದೆ. ಹೆಂಚಿನ ಅಲಂಕಾರ ಲಾಗೋರ್ ಕೋಟೆಯಲ್ಲಿ ಕೇಂದ್ರೀಕೃತವಾಯಿತು. ಅದು ಷಾಹಜಹನ್ ಆಡಳಿತದಲ್ಲಿ ವೈಭವದ ಶ್ರೇಷ್ಟತೆಯನ್ನು (1628–58) ಸಾಧಿಸಿತು. ಲಾಗೋರಿನ ಅಲಂಕಾರ ಚತುರಶ್ರದಲ್ಲಿ ನಿರ್ಮಿತವಾದ ಮೊಸಾಯಕ್ ಗಳಿಂದ ಕೂಡಿದೆ ಒಂದೊಂದು ಸಲ ಚತುರಶ್ರ ಬಿಲ್ಲೆಗಳ ಮಧ್ಯಭಾಗ ಕಂಪು ಗಾರೆಯಿಂದ ತುಂಬಿಸಲ್ಪಟ್ಟು ಇಟ್ಟಿಗೆಗಳಿಂದ ಕಟ್ಟಲಾಗಿದೆಯೋ ಎನ್ನು ಭಾವನೆಯನ್ನು ಕೊಡುತ್ತದೆ(ಉದಾ: ವಜೀರ್ ಖಾನನ ಮಸೀದಿ) ಹೆಂಚುಗಳಿಂದ ಹೊದ್ದಿಸಿದ ಬಿಲ್ಲೆಗಳ ಮೇಲೆ ರೇಖಾಗಣಿತದ ನಕ್ಷೆಗಳ ಮಧ್ಯೆ ಪುಷ್ಪಭರಿತ ಲತಾ ಸುರುಳಿಗಳ ಅಲಂಕಾರ ಮಾಡಲಾಗಿದೆ. ಫಲಭರಿತ ತಟ್ಟೆಗಳಲ್ಲಿ ಕರಬೂಜ, ಕಲ್ಲಂಗಡಿ, ದಾಳಿಂಬೆ ಹಣ್ಣುಗಳು ನೈಜ ಬಣ್ಣಗಳಿಂಥ ಚಿತ್ರಿತವಾಗಿವೆ ಪುಷ್ಪಗಳ ಪೈಕಿ ಟ್ಯೂಲಿಪ್, ನರ್ಸಿಸ ಸ್ ಮುಂತಾದವು ತಟ್ಟೆಗಳಲ್ಲಿ ಹೊಳೆಯುತ್ತಿವೆ. ಕೆಲವು ಬಳ್ಳಿಗಳ ಮೇಲೆ ಪರ್ಷಿಯನ್ನರ ಪುಸ್ತಕಗಳಿಂಥ ಸಂಗ್ರಹಿಸಿದ ವಾಕ್ಯಗಳ ಶಾಸನಗಳೀವೆ ಒಳಗಿನ ಗಾರೆಯ ಮೇಲಿನ ಚಿತ್ರಗಲಿಗೂ ಈ ನಕಾಶೆಗಳಿಗೂ ಪರಸ್ಪರ ಸಂಬಧವಿದ ಕಂಆನುಗಳ ಎರಡು ಪಾರ್ಶ್ವಗಳಲಿಯ ಪುಷ್ಪಲತಾ ಸುರುಳಿಗಳ ಅಲಂಕಾರ, ಜೀರಂಗಡಿಗಳ ಉದ್ದಕ್ಕೂ ಅವುಗಳ ಸುತ್ತಲೂ ಇರುವ ರೇಖಾವಿಲಾಸ. ಮಸೀದಿ ಮತ್ತು ಗೋಡೆಗಲ ಮೇಲೆ ಹೊಳೆಯುವ ಬಣ್ಣಬಣ್ಣದ ಹೆಂಚುಗಳ ಹೊದ್ದಿಗೆ, ಇವೆಲ್ಲವೂ ರಮಣೀಯವಾಗಿವೆ. (ಉದಾ: ಶಾಹಿ ಮಸೀದಿಯ ಷಾ–ಬುರಾನನ ಗೋರಿ, ಆಲಿ–ಮರ್ದಾನ್–ಖಾನನ ಧಕ್ಕೈಶರಾಯ್ 1640, ಚೀನೀವಾಲೇ ಮಶೀದಿ 1565–66,ಅಬ್ದುಲ್ ವಾಹದ್ ಮಸೀದಿ)

ಮುಸಲ್ಮಾನರು ಭಾರತಕ್ಕೆ ಬಂದ ಪ್ರಾರಂಭದಲ್ಲಿ ಮಿತವಾಗಿ ಉಪಯೋಗಿಸಿದ ಹೆಂಚಿನ ಅಲಂಕಾರ ಮೊಗಲರ ಕಾಲದಲ್ಲಿ ಪ್ರಾಮುಖ್ಯತೆ ಪಡೆಯಿತು. ರಕ್ನದ್ದೀನ್ (1320–24) ಗೋರಿಯ ಹೊರಬಾಗ ಹೊಳೆಯುವ ನೀಲಿ, ಊದಾ ಮತ್ತು ಬಿಳಿ ಹೆಂಚುಗಳಿಂದ ಬಿಲ್ಲೆ ಬಿಲ್ಲೆಗಳಾಗಿ ವಿಭಾಗಗೊಂಡಿದೆ ಪಂಜಾಬಿನಲ್ಲಿ ಲೋದಿ ಸುಲ್ತಾನನ ಕಾಲದಲ್ಲಿ ಈ ಬಣ್ಣಗಳಿಗೆ ಹಳದಿ ಬಣ್ಣದ ಹೆಂಚುಗಳು ಸೇರಿದುವು ಸಿಕಂದರ್ ಲೋದಿ (1517) ಗೋರಿಯ ಉಭಯ ಪಾರ್ಶ್ವಗಳಲ್ಲಿಯ ಅಲಂಕಾರದಲ್ಲಿ ರೋಜಾ ರೂಪದ ಆಕಾಶ ಬಣ್ಣದ ಪದಕಗಳನ್ನು ರೇಖಾಗಣಿತ ನಮೂನೆಗಳ ಅಂತರದಲ್ಲಿ ಲತಾವಿನ್ಯಾಸ ಸಹಿತ ಸೇರಿಸಲಾಗಿದೆ.

ಮುಸ್ಲಿಂ ಸ್ಮಾರಕಗಳ ಮುಖ್ಯ ಲಕ್ಷಣಗಳು

ಮುಸ್ಲಿಂ ಧಾರ್ಮಿಕ ಸ್ಮಾರಕಗಳು ಆದಿಲಾಶಾಹಿ ಕಾಲದ ಸ್ಮಾರಕಗಳ ಲಕ್ಷಣಗಳನ್ನು ಹೋಲುತ್ತವೆ.

1. ಪೋಷಕರು: ಮುಸ್ಲಿಂ ಸ್ಮಾರಕಗಳನ್ನು ಹೆಚ್ಚಾಗಿ ಆಡಳಿತ ಅಧಿಕಾರಿಗಳು ಮತ್ತು ಸರದಾರರು ನಿರ್ಮಿಸಲು ಪ್ರೋತ್ಸಾಹಿಸಿದ್ದರೆ.

2. ಈ ಸ್ಮಾರಕಗಳನ್ನು ರಚಿಸಲು ಜಾಸ್ತಿಯಾಗಿ ಕಪ್ಪು ಬೆಣಚುಕಲ್ಲುಗಳನ್ನು ಉಪಯೋಗಿಸಿದ್ದಾರೆ, ಕೆಲವು ಕಡೆ ಕೆಂಪು ಉಸುಕಲ್ಲನ್ನು ಕಟ್ಟಲು ಬಳಸಿದ್ದಾರೆ. ವಿಶೇಷವಾಗಿ ಗೋಲವನ್ನು ಕಟ್ಟುವಾಗ ಇಟ್ಟಿಗೆ, ಗಾರೆಗಚ್ಚನ್ನು ಉಪಯೋಗಿಸಿಕೊಂಡಿದ್ದಾರೆ.

3. ಕೆಲವು ಸ್ಮಾರಕಗಳು ಜಗಲಿಯ ಮೇಲೆ ರೂಪಿತಕೊಂಡಿರುತ್ತವೆ.

4. ವಿವಿಧ ರೀತಿಯ ಕಮಾನುಗಳನ್ನು ಕಟ್ಟುವಂತಹ ಪದ್ಧತಿಯನ್ನು ಸ್ಮಾರಕಗಳಲ್ಲಿ ನಾವು ಕಾಣಬಹುದು.

5. ಮಸೀದಿಗಳು ಆಯಾತಾಕಾರದಲ್ಲಿ ಹಾಗೂ ಗೋರಿ ಮತ್ತು ದರ್ಗಾಗಳನ್ನು ಚೌಕಾಕಾರದಲ್ಲಿ ಕಟ್ಟಲಾಗಿಚದೆ.

6. ಹೆಚ್ಚಾಗಿ ಗೋರಿಗಳ ಹೊರಗೋಡೆಯು ಅಲಂಕಾರರಹಿತವಾಗಿರುತ್ತವೆ. ಆದರೆ ಗೋಕಾಕದಲಿವುರ ಹೊರಗೋಡೆಯನ್ನು ಇಬ್ಭಾಗ ಮಾಡಿ ಎರಡೂಭಾಗಗಳಲ್ಲಿಯೂ ಕಮಾನುಗಳನ್ನು ಕೆತ್ತಿದ್ದಾರೆ(ಇಂತಹ ರಚನೆ ಮೊತ್ತಮೊದಲು ಕರ್ನಾಟಕದಲ್ಲಿ ಕಾಣುವುದು. ಗುಲ್ಬರ್ಗದಲ್ಲಿರುವ ಬಹಮನಿ ರಾಜನಾದ ಫಿರೋಜ್ ಶಹಾ ಬಹಮನಯ ಗೋರಿಯಲ್ಲಿ)

7. ದರ್ಗಾಗಳ ಪ್ರವೇಶ ದ್ವಾರಗಳು ಚಿಕ್ಕದಾಗಿರುತ್ತವೆ. ಮತ್ತು ಮಸೀದಿಗಳ ಪ್ರವೇಶ ದ್ವಾರಗಳು ತೆರೆದಿರುತ್ತವೆ.

8. ಈ ಸ್ಮಾರಕಗಳಲ್ಲಿ ಕುರಾನಿನ ಮುಖ್ಯ ಸೂತ್ರವಾದ 'ಲಾ ಹಿಲಾಹಿ' ಮಹಮ್ಮದ್ ರಸೂಲಲ್ಲಾ' (ಎಲ್ಲವು ಅಲ್ಲಾನಗೆ ಸೇರುತ್ತದೆ ಎಂದರ್ಥ)

9. ಮಿನಾರುಗಳನ್ನು (ಸ್ತಂಭಗೋಪುರಗಳನ್ನು) ಮಸೀದಿಗಳಲ್ಲಿ ಅಳವಡಿಸಿಕೊಂಡಿದ್ದಾರೆ.

10. ಗುಲ್ ದಸ್ತಾ(ಹೂವಿನ ಗೊಂಚಲಿನ ರಚನೆ) ವನ್ನು ಗೊರಿಯ ನಾಲ್ಕೂ ಮೂಲೆಗಳಲ್ಲಿ ನಿರ್ಮಿಸಿದ್ದಾರೆ.

11. ಚಜ್ಜಾ(ಮುನ್ಚಾಚು) ವನ್ನು ಮಸೀದಿ ಮತ್ತು ಗೋರಿಗಳಲ್ಲಿ ಕಾಣುತೇವೆ.

12. ಗೋರಿಯ ಕೈಪಿಡಿಗೋಡೆಯಲ್ಲಿ ಮೂರು ಕೋನಗಳಿದ್ದಹಾಗೂ ಚಿಕ್ಕ ಕಮಾನುಗಳನ್ನು ಕಾಣುತ್ತೇವೆ.

13. ಗೋಲಾಕೃತಿಯ ರಚನೆ: ಬೆಳಗಾವಿಯಲ್ಲಿಯ ಮಸೀದಿ, ಗೋರಿ ಮತ್ತು ದರ್ಗಾಗಲ್ಲಲಿ ಒಂದೇ ಒಂದು ಗೋಲವನ್ನು ಕಟ್ಟಿದ್ದಾರೆ. ರಾಯಬಾಗನಲ್ಲಿದ್ದ ಶಾಹಿ ಮಸೀದಿಯ ಗೋವು ಬಿಜಾಪುರದ ಮೋತಿ ಮಸೀದಿಯ ಹೋಲಿಕೆಯನ್ನು ಹೋಲುತ್ತದೆ. ಅದರ ಕೆಳಗೆ ಕಮಲದ ಹೂವಿನ ದಳಗಳನ್ನು ರಚಿಸಿದ್ದಾರೆ.

14. ಚಂದ್ರಾಕೃತಿಯ ಗುರುತು ಈ ಚಿಹ್ನೆಯನ್ನು ಮುಸ್ಲಂ ಅರಸುರ ತಮ್ಮ ಸ್ಮಾರಕಗಳಲ್ಲಿ ಅಳವಡಿಸಿದಕೊಂಡಿದ್ದಾರೆ. ಮೊತ್ತ ಮೊದಲಿಗೆ ಒಟ್ಟೋಮನ್ ಟರ್ಕರು, ಬೈಜಾಟಿಯಂ ದೇಶವನ್ನು ಸೋಲಿಸಿ ಅದರ ಸ್ಮಾರಣಾರ್ಥವಾಗಿ ಬೆಳಗಾವಿ ಜಿಲ್ಲೇಯ ಮುಸ್ಲಿಂ ಸ್ಮಾರಕಗಳು


ಚಂದ್ರಾಕೃತಿಯ ಚಿಹ್ನೆಯನ್ನು ಬಳಸಿಕೊಂಡಿದ್ದಾರೆ. ಆದಿಲ್ ಶಾಹಿಯವರು ಟರ್ಕಿದೇಶದವಾರಾಗಿದ್ದರಿಂದ ಆ ಚಿಹ್ನೆಯನ್ನು ತಮ್ಮ ಸ್ಮಾರಕಗಳಲ್ಲಿ ಬಳಸಿಕೊಂಡಿದ್ದಾರೆ.

15. ಹಿಂದೂ ಮತ್ತು ಮುಸ್ಲಿಂ ಶೈಲಿಯಲ್ಲಿರುವ ಗೋರಿ: ಅಪ್ಪಾಚಿವಾಡಿಯ ಚಿಕ್ಕೋಡಿ ತಲೊಕಿನಲ್ಲಿದ್ದು ಕುರ್ಲಿಯಿಂದ 2 ಕಿ.ಮೀ ದೂರ ಮತ್ತು ನಪ್ಪಾಣಿಯಿಂದ 16 ಕಿ.ಮಿ ದೂರದಲ್ಲಿದೆ. ನಾಥಪಂಥದ ಸಂತರಾದ ಹಾಲಸಿದ್ದನಾಥರ ಸಮಾದಿ ಇಲ್ಲಿ ಇದೆ. ಈ ಸಮಾಧಿಯನ್ನು ಹಿಂದೂ ಮತ್ತು ಮುಸ್ಲಿಂ ಶೈಲಿಯಲ್ಲಿ ಕಟ್ಟದ್ದಾರೆ. ಸಮಾಧಿಯ ಮೇಲೆ ಕಟ್ಟಲಾದ ಗೋಲಾಕೃತಿಯ ರಚನೆ ಮತ್ತು ಎರಡು ಚಿಕ್ಕ ಗೋಲಗಳು ಮತ್ತು ಸಮಾಧಿ ಕಟ್ಟಡದ ಮುಂಭಾಗದಲ್ಲಿ ಮಿನಾರ್(ಸ್ತಂಭಗೋಪುರ) ಗಳಿವೆ.

16. ಹಿಂದೂ ಮತ್ತು ಮುಸ್ಲಿಂ ಶೈಲಿಯಲ್ಲಿರುವ ಮಠ: ಸಾವಳಗಿ, ಗೋಕಾಕ್ ರೋಡೆ ರೈಲ್ವೆಷ್ಟೇಷನ್ನಿನಂದ ಸುಮಾರು ಎರಡು ಮೈಲಿಗಳ ದೂರದಲ್ಲಿದೆ. ಇಲ್ಲಿ ಮಹಾಯೋಗಿಗಳೂ ಪವಾಡಮರಷರೂ ಅದ ಶಿವಲಿಂಗೇಶ್ವರ ಗದ್ದಿಗೆ ಮಠವನ್ನು ಹಿಂದೂ ಮತ್ತು ಮುಸ್ಲಿಂ ಶೈಲಿಯಲ್ಲಿ ಕಟ್ಟಿದ್ದಾರೆ.



ವಮೌನುದ್ದೀನ್ ಚಿಸ್ತಿ



ನಿಜಾಮುದ್ದೀನ್ ದರ್ಗಾ

17. ಹಿಂದೂ ದೇವಾಲಯದಲ್ಲಿ ಮುಸ್ಲಿಂ ಶೈಲಿ: ಅಥಣಿ ಪಟ್ಟಣದಲ್ಲಿ ಸದ್ಧೇಶ್ವರದ ಗುಡಿ ಇದ್ದು ಈ ಗುಡಿಯ ಮೇಳೆ ಗೋಲಾಕೃತಿ ರಚನೆ ಮತ್ತು ಮುಂಭಾಗದಲ್ಲಿ ಕಮಾನುಗಳಿವೆ.

18. ಮುಸ್ಲಿಂ ಸ್ಮಾರಕಗಳಲ್ಲಿ ಬಳಸಿಕೊಂಡಿರತಕ್ಕಂತಹ ಲಕ್ಷಣವಾದ ಕಮಾನುಗಳನ್ನು ಬೆಳಗಾವಿ ಜಿಲ್ಲೆಯನ್ನು ಆಳಿದ ದೇಶಗತ್ ಸಂಸ್ಥಾನಗಳಾದ ತೊರಗಲ್‌ವಾಡೆ, ನಪ್ಪಾಣಿವಾಡೆ, ಅಂಕಲಿವಾಡೆ ಕೋಕಟನೂರವಾಡೆ, ಅಥಣಿವಾಡೆ ಮುಂತಾದ ಅನೇಕ ವಾಡೆಗಳ ಪ್ರವೇಶ ದ್ವಾರ ಮತ್ತು ಕಿಟಕಿಗಳಲ್ಲಿ ಪ್ರಭಾವ ಬೀರಿದ್ದನ್ನು ಕಾಣಬಹುದು.

ಮದ್ಯಕಾಲೀನ ಇಸ್ಲಾಮಿ ವಾಸ್ತುಶಿಲ್ಪ

ಮಧ್ಯಯುಗೀನ ಕಾಲದಲ್ಲಿ ದೆಹಲಿಯ ಸುಲ್ತಾನರ ಕಾಲದಲ್ಲಿ ಭಿನ್ನ ರೀತಿಯ ನೂತನ ವಾಸ್ತುಶಿಲ್ಪ ಪರಂಪರೆ ಬಂದಿತು. ಇವರು ನೂತನ ಶೈಲಿಯ ತಂತ್ರಗಾರಿಕೆ, ಗುಮ್ಮಟ ಮತ್ತು ಮೂಲೆಕಂಬ ಗೋಪುರಗಳನ್ನು ಸುಲ್ತಾನರು ಭಾರತಕ್ಕೆ ಪರಿಚಯಿಸಿದರು. ಕುತುಬ್‌ಮಿನಾರ್ ಮತ್ತು ಕುನ್ವತ್ ಉಲ್–ಇಸ್ಲಾಮ್ ಮಸೀದಿ ಭಾರತದ ವಾಸ್ತು ಶಿಲ್ಪದಲ್ಲಿ ಒಂದು ಹೋಸ ಶಕೆಯನ್ನು ಪ್ರಾರಂಭಿಸಿತು. ದೆಹಲಿಯ ಕುತುಬ್ ಮಿನಾರ್ ಕಸ್ಥಂಭ ಅತ್ಯಂತ ಪ್ರಸಿದ್ಧವಾದುದು. ಇದನ್ನು ಗುಲಾಮಿ ಸಂತತಿಯ ಮೊದಲ ದೊರೆಯ ಹೆಸರಿನಲ್ಲಿ ನಿರ್ಮಿಸಲಾಗಿದೆ.

ತರುವಾಯ ಫಿರೋಜ್ ತುಗಲಕ್(1351–88) ಮತ್ತು ಸಿಕಂದರ್ ಲೋದಿ(1489–1517) ಈ ಕಟ್ಟಡವನ್ನು ಜೀರ್ಣೋದ್ಧಾರ ಮಾಡಿಸಿದರು. ಇದನ್ನು ಕೆಂಪು ಮತ್ತು ಮಾಸಲು ಹಳದಿಬಣ್ಣದ ಕಲ್ಲಿನಿಂದ ನಿರ್ಮಿಸಿದೆ.

ಇದು ತಳದಿಂದ ಮೇಲಕ್ಕೆ ಕ್ರಮೇಣ ವ್ಯಾಸ ಕಡಿಮೆಯಾಗುತ್ತ ಹೋಗುವ ವೃತ್ತಕೃತಿ ಹಾಗೂ ಬಹುಕೋನಾಕೃತಿಗಳಿಂದ ರಚಿತವಾದ ಐದಂತಸ್ತಿನ ಕಟ್ಟಡ. ಮೀನಾರ್ 72.54 ಮೀ ಎತ್ತರ ಮತ್ತು ಕೆಳ ಅಂತಸ್ತಿನ ಅಡಿಪಾಯವು 14.78 ಮೀ ವ್ಯಾಸವಿದೆ. ಪ್ರತಿ. ಅಂತಸ್ತಿನಲ್ಲಿ ಒಂದು ಕೈಸಾಲೆ(ಮೊಗಸಾಲೆ)ಯಿದ್ದು. ಅದರ ಸೂರಿನ ತಳದಲ್ಲಿ ತೂಗಾಡುವ ಪದಕಗಳಂತಹ ಬೋದಿಗೆ ಗಮನಾರ್ಹವಾದದ್ದು. ಕೆಳಗಿನ ಮಹಡಿಯ ಅಂತಸ್ತಿನ ಗೋಡೆ 24 ಬಾಹುಗಳಿಂದ ಮತ್ತು ವರ್ತುಲ ಸುರುಳಿಗಳಿಂದ ಅಲಂಕೃತವಾಗಿದೆ. ಎರಡನೆಯ ಅಂತಸ್ತು ಕೇವಲ ವರ್ತುಲ ಸುರುಳಿಗಳಿಂದ ಮೂರನೆಯ ಮಹಡಿಯನ್ನು ಕೇವಲ ಮೂರು ಮೂಲೆಗಳಿಂದ ಮತ್ತು ನಾಲ್ಕನೆಯ ಮಹಡಿಯನ್ನು ಸರಳ ಕೆಂಪು ಕಲ್ಲುಗಳ ನಡುವೆ ಬಿಳಿಯ ಅಮೃತ ಶಿಲೆಯಿಂದ ಅಲಂಕರಿಸಿದೆ. ಮೂರು ಅಂತಸ್ತಿನಲ್ಲಿಯೂ ಕೊಳವೆಯಾಕಾರದ ರೇಖೆಗಳಿವೆ. ನೆರಳು ಬೆಳಕಿನ ಚೆಲ್ಲಾಟದ ಪರಿಣಾಮ ಅದ್ಭುತವಾಗಿದೆ. ಮೇಲಿನ ಎರಡು ಅಂತಸ್ತುಗಳನ್ನು ಫಿರೋಜ್

ತುಗಲಕ್(1351–88) ನಿರ್ಮಿಸಿದ. ಖುವ್ವತ್-ಉಲ್ ಇಸ್ಲಾಂ ಮಸೀದಿಯಲ್ಲಿ 16.1 ಮೀ ಎತ್ತರ ಮತ್ತು 6.7ಮೀ ಅಗಲದ ಕಮಾನು ಇದೆ. ಆದರೆ ಇದು ನೈಜ ಕಮಾನಲ್ಲ. ಗೋಡೆಯಿಂದ ಹೊರಚಾಚಿದ ಬೋದಿಗೆಯ ಮೇಲಣ ಎಸ್-ಆಕಾರದ್ದು, ಇಂತಹ ಕಮಾನು ಮೊದಲು ಸುಲ್ತಾನ್ ಘಿಯಾಸುದ್ದೀನ್ ಬಲ್ಬನ್(1266–87) ಸಮಾಧಿಯಲ್ಲಿದೆ ಎಂದು ಕಾಣುವುದಾದರೂ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ.



ಖಿಲ್ಜಿಕಾಲ (1290–1320) ಅಲಾಉದ್ದೀನ್ ಖಿಲ್ಜಿ(1296–1316) ನಿರ್ಮಿಸಿದ ಆಲಾಯ್-ದರ್ವಾಜಾ(1311)ಚತುರಸ ವಿನ್ಯಾಸದಲ್ಲಿದೆ. ಇದನ್ನು ಅಷ್ಟೇನೂ ಎತ್ತವಿಲದಲ್ ಗುಮ್ಮಟದಿಂದ ಮುಚ್ಚಿದ್ದು ತುದಿಯಲ್ಲಿ ಅಮೃತ ಶಿಲೆಯ ಅಮಲಕ ಕಳಶವಿದೆ. ಕುದುರೆಯ ಲಾಳಾಕಾರದ ಕಮಾನು ಈ ನಿರ್ಮಾಣದಲ್ಲಿ ಭಾರತದಲ್ಲಿ ಮೊದಲನೆಯದು, ಪ್ರತಿಯೊಂದು ಪಾರ್ಶ್ವದ ಮಧ್ಯದಲ್ಲಿ ಸುಂದರವಾದ ಕಮಾನು, ಆಕರ್ಷಕ ಮೂಲೆದಿಂಡು, ಸಮತಲ ಇಳಿಜಾರಿನಂದ ಮತ್ತು ಕಮಾನನ ಒಳಬಾಗಿನಲ್ಲಿ ಈಟಿಮೊನೆ ಮಾದರಿಯ ಜಾಲರಿಯಿಂದ ಹೊರಭಾಗ ಮತ್ತು ಒಲಭಾಗದಲ್ಲಿಯ ಫಲಕದ ಮೇಲ್ಮೈಯಲ್ಲಿ ರೇಖಾ ನಕ್ಷೆಗಳ ಅಲಂಕರಣ ನಿರ್ಮಿತಿಯು ಹಜರತ್ ನಿಜಾಮುದ್ದೀನ್ ಔಲಿಯ ಸಮಾಧಿಯ ಹತ್ತಿರದಲ್ಲಿರುವ ಜಮುತ್ ಖಾನಾ ಮಸೀದಿಯ ಮೇಲ್ ಕಟ್ಟಡದ ಭಾರವನ್ನು ಹೊರಲು ಮೂಲೆಗಳಲ್ಲಿ ತೂಗು ಪದಕಗಳ ಅಲಂಕದರಣವಿರುವ ತ್ರಿಕೋನಾಕಾರದ ಕಮಾನುಗಳನ್ನು ಬಳಸಲಾಗಿದೆ. ಈ ರೀತಿಯ ನಿರ್ಮಿತಿ ಭಾರತದಲ್ಲಿ ಮೊದಲನೆಯದು.

ತುಗಲಕ್ ಕಾಲ(1320–1412) ಘಿಯಾಸುದ್ದೀನ್ ತುಗಲಕ್ ಷಾ(1320–25) ತುಗಲಕಾಬಾದ್ ಕೋಟೆಯನ್ನು ನಿರ್ಮಿಸಿದ. ಇದನ್ನು ಬೇರೆ ಬೇರೆ ಗಾತ್ರದ ಭಾರೀ ಕಲ್ಲುಗಳಿಂದ ನಿರ್ಮಿಸಿದೆಯಲ್ಲದೆ ಹೊರಬದಿಗೆ ಹೊಂದಿಕೊಂಡಂತೆ ಸಮಾನಾಂತರಗಳಲ್ಲಿ ಅರ್ಧವೃತ್ತಾಕಾರದ ಬೃಹತ ಬುರುಜುಗಳನ್ನು ಅದರ ಮೇಲೆ ತೆನೆಗಳನ್ನು ಜೋಡಿಸಿದೆ. ಕೋಟೆಯೊಳಗೆ ರಸ್ತೆ ಮತ್ತು ಅರಮನೆಗಳ ಭಗ್ನಾವಶೇಷಗಳಿವೆ.

ಸರೋವರದ ನಡುವಿದ್ದ ಘಿಯಾಸುದ್ದೀನ್ ತುಗಲಕ್ ನ ಸಮಾಧಿಯು ಪಂಚ ಭುಜಾಕೃತಿಯ ವಿನ್ಯಾಸದಲ್ಲಿದೆ. ಮೂಲೆಗಳಲ್ಲಿ ಬುಗುರಿ ಆಕಾರದ ಬುರುಜುಗಳಿವೆ. ಈಗ ಸರೋವರ ಒಣಗಿದೆ. ಅಷ್ಟಕೋನಾಕೃತಿಯ ಕೋಣೆಯ ಮೇಲೆ ಅಮೃತ ಶಿಲೆಯ ಗುಮ್ಮಟವಿದ್ದು ಇದಕ್ಕೆ ಸುಂದರವಾದ ಅಮಲಕ ಮತ್ತು ಕಲಶವಿದೆ. ಪ್ರತಿಯೊಂದು ಬದಿಯ ಮಧ್ಯದಲ್ಲಿ ಈಟಿ ಮೊನೆ ಮಾದರಿ ಅಂಚಿನ ಕಮಾನದೆ. ಎರಡು ಬದಿಗಳಲ್ಲಿ ಅಲಂಕೃತ ಅಮೃತಶಿಲೆಯ ಗೂಡುಗಳು, ಇವುಗಳ ಮೇಲ್ಮೈಯ ಸಧಾರಣ ಏಕತಾನತೆಯನ್ನು ಹೋಗಲಾಡಿಸುತ್ತದೆ. ಅದಿಲಬಾದ್, ಕೋಟೆ ಜಹಾನ್ ಪನಾಹ್, ವಿಜಯ್ ಮಂಡಲ್, ಕಬಿರುದ್ದೀನ್ ಔಲಿಯ ಸಮಾಧಿ, ಫಿರೋಜ್ ಷಾ ಕೋಟ್ಲ ಮತ್ತು ಫಿರೋಜ್ ಷಾ ನ ಸಮಾಧಿ ಮುಂತಾದವು ಈ ಕಾಳದ ಇತರ ಮುಖ್ಯ ನಿರ್ಮಾಣಗಳು.

ಈ ಕಾಲದ ಸಾಮಾನ್ಯವಾಸ್ತು ಶಿಲ್ಪ ಲಕ್ಷಣಗಳು: ಇಳಿಜಾರಾದ ಗೋಡೆಯಗಳು, ರಕ್ಷಣಾತೆನೆಗಳ ಸಾಲು ಬಹು ಗುಮ್ಮಟಗಳ ಮೇಲ್ಚಾವಣಿ ಮತ್ತು ಮೀನಾರಿನಂತಿರುವ ಚಿಕ್ಕದಾಗುತ್ತ ಹೋಗುವ ಒತ್ತು ಗೋಡೆಗಳು: ಸಹಜವಾಗಿ ದೊರೆಯುವ ಕಲ್ಲುಗುಂಡುಗಳೇ ಮುಖ್ಯ ನಿರ್ಮಾಣ ಸಾಮಗ್ರಿಯಾಗಿದೆ. ಕಮಾನಿನ ಜೊತೆಗೆ ತೊಲೆ ಮತ್ತು ಜಂತಿಗಳನ್ನು ಉಪಯೋಗಿಸಲಾಗಿದೆ.

ಸಯ್ಯಿದ್ ರ ಕಾಲ: ಸಯ್ಯಿದ್ ಮತ್ತು ಲೋಧಿ ಕಾಲದಲ್ಲಿ ಚತುರಸ ಮತ್ತು ಅಷ್ಟಕೋನಾ ಕೃತಿಯ ವಿನ್ಯಾಸದ ಸಮಾಧಿಗಳನ್ನು ನಿರ್ಮಿಸಲಾಗಿದೆ. ಫಿರೋಜ್ ಷಾನ ಪ್ರಧಾನ ಮಂತ್ರಿ ಖಾನ್–ಐ–ಜಹಾನ್ ತಿಲಂಗನಿಯ ಸಮಾಧಿಯನ್ನು ದೆಹಲಿಯಲ್ಲಿ ಮೊದಲು ಅಷ್ಟಕೋನಾ ಕೃತಿಯಲ್ಲಿ ನಿರ್ಮಿಸಿದರು. ಮುಬಾರಕ್ ಷಾನ ನಿಧನಾನಂತರ(1434) ನಿರ್ಮಿಸಲಾದ ಅಷ್ಟಭುಜಾಕಾರದ ಸಮಾಧಿಯ ಮಧ್ಯದಲ್ಲಿ ದೊಡ್ಡ ಕೊಠಡಿ ಮತ್ತು ಸುತ್ತಲೂ ಮೊಗಸಾಲೆಗಳಿವೆ. ಪ್ರತಿಯೊಂದು ಬದಿಯಲ್ಲೂ ಮೂರು ಪ್ರವೇಶಗಳಿರುವ ಷೋಡಶ ಭುಜಾಕೃತಿಯ ವೇದಿಕೆಯ ಆಧಾರದ ಮೇಲೆ ಗುಮ್ಮಟವಿದೆ. ಪ್ರತಿಯೊಂದು ಮೂಲೆಯಲ್ಲಿ

ಗೋಪುರ ಹಾಗೂ ಗುಮ್ಮಟದ ಮೇಲೆ ಲಾಂಧ್ರದ ಮಾದರಿಯಿದೆ. ಹಾಗೆಯೇ ಎಲ್ಲಾ ಬದಿಯ ಮಧ್ಯದಲ್ಲಿ ಮೇಲುಗಡೆ ಕಂಬಗಳ ಅಷ್ಟಕೋನಾಕೃತಿಯ ಛತ್ರಿಗಳು ಗೋಡೆಯ ಹೊರ ಬದಿಯಲ್ಲಿ ತುಗಲಕ್ ಶೈಲಿಯ ಇಳಿಜಾರು ಒತ್ತು ಗೋಡೆಗಳಿವೆ.

ವಿಸ್ತಾರಕ್ಕೆ ಹೋಲಿಸಿದರೆ ಎತ್ತರ ಕಡಿಮೆಯಾದ ಗುಮ್ಮಟದಿಂದಾಗಿ ಈ ಕಟ್ಟಡ ಕುಬ್ಜವಾಗಿರುವಂತೆ ಕಾಣುತ್ತದೆ. ಆದರೆ ಲೋದಿ ಉದ್ಯಾನದಲ್ಲಿರುವ ಮಹಮ್ಮದ್ ಷಾನ(1444) ಸಮಾಧಿಯಲ್ಲಿ ವೇದಿಕೆ ಛತ್ರಿಗಳ ಎತ್ತರವನ್ನು ಹೆಚ್ಚಿಸಿ ಈ ನ್ಯೂನತೆಯನ್ನು ಸರಿಪಡಿಸಲಾಗಿದೆ.

ಲೋದಿವಂಶ (1451–1526): ಚಿರಾಘ್ ದಿಲ್ಲಿಯಲ್ಲಿರುವ ಬಹ್ಲುಲ್ ಲೋದಿಯ ಸಮಾಧಿ ಪ್ರತಿ ಬದಿಯಲ್ಲಿ ಮೂರು ಕಮಾನುಗಳು ಮತ್ತು ಐದು ಗುಮ್ಮಟಗಳಿಂದ ರೂಪಿಸಿದ ಚಾವಣಿ ಇರುವ ಚೌಕಾಕಾರದ ಕಟ್ಟಡ. ದೆಹಲಿಯ ಸಿಕಂದರ್ ಲೋದಿಯ(1489–1517) ಸಮಾಧಿ ಛತ್ರಿಗಳ ಹೊರತಾಗಿ ಮುಹಮ್ಮದ್ ಷಾನ ಗೋರಿಯ ಎಲ್ಲ ಲಕ್ಷಣಗಳನ್ನೂ ಹೊಂದಿದೆ ಕಟ್ಟಡದ ಮೇಲಿನ ಮೂಲೆಗಳಲ್ಲಿ ಅಷ್ಟಭುಜಾಕಾರದ ಮೀನಾರುಗಳಿವೆ. ದಕ್ಷಿಣದಲ್ಲಿ ಅಲಂಕೃತ ಪ್ರವೇಶದ್ವಾರ ಮತ್ತು ಮಶ್ಚಿಮದಲ್ಲಿ ಸಣ್ಣದೊಂದು ಪ್ರತ್ಯೇಕ ಮಸೀದಿ ಇದೆ. ಇಂತಹ ಪ್ರತೇಕ ಮಸೀದಿ ಮತ್ತು ಉದ್ಯಾನ ಮುಂದೆ ಮೊಗಲ್ ಕಾಲದ ಸಮಾಧಿ ಕಟ್ಟಡಗಳ ವಿಶೇಷ ಲಕ್ಷಣವಾಯಿತು. ಹೀಗೆ ಅಷ್ಠ ಭುಜಾಕಾರದ ಸಮಾಧಿ ಕಟ್ಟಡಗಳ ಬೆಳೆವಣಿಗೆಯ ಕೊನೆಯ ಹಂತವನ್ನು ನಿರ್ದೇಶಿಸುವ ಈ ಕಟ್ಟಡ ಮೊಗಲ್ ಶೈಲಿಯ ಲಕ್ಷಣಗಳನ್ನು ಒಲಗೊಂಡಿರುವುದರಿಂದ ಸುಲ್ತಾನ್ ಕೋಟೆಯಂತರಂಹ ಪ್ರಕಾರದಿಂದ ಕೂಡಿದ ಸಮಾಧಿ ಹಾಗೂ ವಿಸ್ತಾರವಾದ ಉದ್ಯಾನ ಪ್ರತ್ಯೇಕ ಮಸೀದಿ ಕಟ್ಟಡಗಳಿಂಥ ಕೂಡದ ಮಹೊನ್ನತ ಮೊಗಲ್ ಶೈಲಿಯ ಸಮಾಧಿ ಕಟ್ಟಡ ಸಮುಚ್ಚಯಗಳ ನಡುವಣ ಸ್ಥತ್ಯಂತರವನ್ನು ಸುಚಿಸುವ ಪ್ರಮುಖ ಉದಾಹರಣೆಯಾಗಿದೆ.

ಸೂರ್ ವಂಶ(1538–55):

ಸಯ್ಯಿದ್ ಮತ್ತು ಲೋದಿಗಳಿಂದ ಪ್ರಾರಂಭವಧ ಅಷ್ಟಕೊನಾಕೃತಿಯ ಮಾದರಿಯು ಶೇರ್ ಷಾ ಸೂರ್ ನ ಕಾಲದಲ್ಲಿ ಅಚಿತಿಮ ಹಂತವನ್ನು ಮುಟ್ಟಿತು. ಶೇರ್ ಷಾ ನ ತಂದೆ ಹಸನ್ ಖಾನ್ ನ ಸಮಾಧಿಯು ಅಷ್ಟಕೋನಾಕೃತಿಯ ವಿನ್ಯಾಸದಲ್ಲಿ ನಿರ್ಮಾಣವಾಗಿದೆ(1535) ಇದರ ಸುತ್ತಲೂ ಮೊಗಸಾಲೆ, ಪ್ರತಿಯೊಂದು ಬದಿಯಲ್ಲಿಮೂರು ಕಮಾಣು ಮತ್ತು ಮೇಲ್ಭಗದಲ್ಲೂ ಅಗಲ ಮತ್ತು ದೊಡ್ಡದಾದ

ಗುಮ್ಮಟವನ್ನು ಹೊಂದಿದೆ. ಮೇಲ್ಛಾವಣಿಯಲ್ಲಿ ಗೋಡೆಯ ಪ್ರತಿಯೊಂದು ಅಷ್ಟಕೋನದ ಭಾಗದ ಪಕ್ಕದಲ್ಲಿ ಮೂರು ಚಿಕ್ಕ ಗುಮ್ಮಟಗಳಿವೆ. ಹೀಗಿದ್ದರೂ ಹಿಂದಣ ಕಟ್ಟಡಗಳ ಗೋಡೆ ಇಳಿಜಾರಾಗಿಲ್ಲದೆ ನೇರವಾಗಿರುವುದು ಮತ್ತು ಚಾವಣಿಯ ಮೂಲೆಗಳಲ್ಲಿ ಛತ್ರಿಗಳಿಲ್ಲದಿರುವುದು ಗಮನಾರ್ಹ ಅಂಶಗಳು.

ಶೇರ್ ಷಾನ ಸಮಾಧಿ(1540) ದೊಡ್ಡ ಜಲಾಶಯದ ನಡುವೆ ಕಟ್ಟಿದ 425ಚ.ಮೀ ಚೌಕಾಕಾರದ ಮತ್ತು 46ಮೀ ಎತ್ತರವಾದ ಕಟ್ಟಡ. ಇದನ್ನು ತಲುಪಲು ದಂಡೆಯಿಂದ ಸಮಾಧಿ ಸ್ಥಳಕ್ಕೆ ಒಂದು ಎತ್ತರಿಸಿ ಮಾಡಿರುವ ಕಾಲುದಾರಿ ಇದೆ.

ಮೊಗಲರ ಕಾಲ(1526–1707) ಮೊಗಲರು ಭಾರತದಲ್ಲಿ ಆಕಾಲದಲ್ಲಿ ನಡೆಯುತ್ತಿದ್ದ ವಾಸ್ತು ನಿರ್ಮಾಣ ಚಟುವಟಿಕೆಗಳಿಗೆ ತೀವ್ರ ಸಂಚಾಲನೆ ನೀಡಿದರು. ಅವರು ನದೀ ಇಲ್ಲವೇ ನೀರು ಸುಲಭವಾಗಿ ದೊರೆಯುವ ಸ್ಥಳಗಳಲ್ಲಿಯೇ ಕಟ್ಟಡಗಳನ್ನು ಕಟ್ಟಿದರು ಇದರಿಂದ ಕಟ್ಟಡದ ಪರಿಸರದಲ್ಲಿ ಹಚ್ಚ ಹಸುರಿನ ಉದ್ಯಾನ, ಹೂಗಿಡಗಳಿಂದ ತೂಗು ಮೈದಾನ ಕಾರಂಜಿ ಹಾಗೂ ಕೃತಕ ಜಲಪಾತಗಳನ್ನು ರೂಪಿಸಲು ಸಾಧ್ಯವಾಯಿತು ಭೌಗೋಳಿಕ ಪರಿಸರದ ನಿಸರ್ಗದ ಚೆಲುವು ಮತ್ತು ಮಾನವ ನಿರ್ಮಿತ ಕಟ್ಟಡಗಳು ಒಂದಕ್ಕೊಂದು ಪೂರಕವಾಗಿರುವಂತೆ ಸಂಯೋಜಿಸುವ ಕಲ್ಪನೆಯಿಂದ ಅನಂತರ ಕಾಲದ ನಗರ ವಾಸ್ತು ಮತ್ತು ಪೌರ ನಿರ್ಮಾಣಗಳಿಗೆ ಹೊಸ ಆಯಾಮ ಚೆಲುವು ದೊರೆತವು. ಮುಂದಣ ಕಟ್ಟಡಗಳು ಪರಿಸರದಲ್ಲಿ ತೀರ ಭಿನ್ನವಾಗಿ ಉಳಿಯದೆ. ಉದ್ಯಾನ ಹರಿಯುವ ನೀರು, ಕಟ್ಟಡ ಇವೆಲ್ಲ ನಿಸರ್ಗ ಸೌಂದರ್ಯಕ್ಕೆ ಪೂರಕವಗಿ ನಾದ ಮಾಧುರ್ಯದಿಂದ ಶೋಬಿಸುವಂತಾದವು.

ಇದಷ್ಟೇ ಅಲ್ಲದೆ, ನಾಲ್ಕು ಕೇಂದ್ರಗಳುಳ್ಳ ಮೋಹಕ ಎತ್ತರದ ಕಮಾನು ಮತ್ತು ಅರೆಗುಮ್ಮಟದ ಮುಂಚಾಚಿದ ಛಾವಣಿಯ ಪ್ರವೇಶದ್ವಾರವಿರುವ ವಿಶಾಲ ಅಂಗಳ ಛಜ್ಜಾಗಳಿಂದ ಮುಂಚಾಚಿದ ಚಾವಣಿ, ಪರಸ್ಪರ ಛೇದಿಸುವ ಕಮಾನುಗಳಿಂದ ರೂಪಿಸಿದವು ಕಮಾನು ಚಾವಣಿ, ಕಿರುಕತ್ತಿನ ಮೇಲೇರುವ ಗುಡ್ಡೆಯಾಕಾರದ ಗುಮ್ಮಟ, ಕೆಳಮುಖನಾದ ಕಮಲದ ಮೊಗ್ಗಿನ ಕಲಶ, ಅರೆಗಂಬಗಳು, ಕುಂದಣದ ಹಾಗೂ ಸ್ವರ್ಣ ಲೇಪನದ ಅಲಂಕರಣ ಇವು ಮೊಗಲ್ ಶೈಲಿಯ ವಿಶೇಷ ಲಕ್ಷಣಗಳು, ಜೊತೆಗೆ ಲೋದಿ ಅರಸು ಕಾಲದಲ್ಲಿಯೇ ಮೊದಲಾಗಿದ್ದ ಜೋಡಿಗುಮ್ಮಟ (ಒಂದರೊಳಗೊಂದು ಗುಮ್ಮಟಗಳನ್ನು

ರಚಿಸಿ ಕಟ್ಟಡದ ಭಾರವನ್ನು ಕಡಿಮೆ ಮಾಡುವ ವಿಧಾನ)ದ ಬಳಿಕ ಮೊಗಲರ ಕಾಲದಲ್ಲಿ ಸರ್ವವ್ಯಾಪಿಯಾಯಿತು.

ಫತೇಪುರ್ ಸಿಕ್ರಿ : 1574ರಲ್ಲಿ ಅಕ್ಬರ್ ತನ್ನ ರಾಜಧಾನಿಯನ್ನು ದೆಹಲಿಯಿಂದ ಹೊಸದಾಗಿ ಕಟ್ಟಿದ ಫತೇಪುರ್ ಸಿಕ್ರಿಗೆ ಬದಲಾಯಿಸಿ, 1585 ರವರೆಗೂ ಅಲ್ಲಿಂದ ಆಳಿದ 9 ಕಿ.ಮೀ ಚದರಕ್ಕೂ ಹೆಚ್ಚು ವಿಸ್ತಾರವಾದ ಇಲ್ಲಿನ ಕೋಟೆಯ ಆವರಣದಲ್ಲಿ ಅಕ್ಬರ್ ನ ಕಾಲದ ವಿಶಿಷ್ಟ ಶೈಲಿಯ ಹಲವಾರು ಕಟ್ಟಡಗಳಿವೆ.

ಜಹಾಂಗೀರನ ಕಾಲದಲ್ಲಿ ನಿರ್ಮಾಣವಾದ ಇತ್ಮದ್–ಉದ್–ದೌಲಾನ ಗೋರಿ ಭಾರತದಲ್ಲಿ ಪರ್ಷಿಯನ್ ಮಾದರಿಯ ಕುಂದಣ ಕೆಲಸದ ಒಂದು ವಿಶಿಷ್ಟ ವಾಸ್ತುಕಟ್ಟಡ. ಉದ್ಯಾನದ ಮಧ್ಯದಲ್ಲಿ ನಿರ್ಮಿಸಲಾಗಿರುವ ಈ ಸಮಾಧಿ ಸ್ಮಾರಕ ಎತ್ತರವಾದ ವೇದಿಕೆಯ ಮೇಲೆ ಕೆಂಪು ಮರಳುಕಲ್ಲು ಮತ್ತು ಶುದ್ಧವಾದ ಬಿಳಿ ಅಮೃತಶಿಲೆಯಲ್ಲಿ ನಿರ್ಮಾಣವಾಗಿದೆ. ಈ ಕಟ್ಟಡ ಎಲ್ಲಾ ಭಾಗಗಳಲ್ಲಿಯೂ ಅತ್ಯಾಕರ್ಷಕ ಕುಂದಣದ ಕೆತ್ತನೆಯಿಂದ ಅಲಂಕೃತವಾಗಿದೆ. ದ್ರಾಕ್ಷಾರಸದ ಬಟ್ಟಲು ಗುಲಾಬಿ ನೀರಿನ ಪಾತ್ರೆ, ಸೈಪ್ರಸ್ ಮರ ಮುಂತಾದವುಗಳ ಚಿತ್ರದಿಂದ ಅಲಂಕರಿಸಲಾಗಿದೆ. ಬಣ್ಣದ ಕಲ್ಲುಗಳು ಮತ್ತು ಸುಂದರವಾದ ಹೊಳಪಿನ ಹೆಂಚುಗಳನ್ನು ಉಪಯೋಗಿಸಿ ಅಲಂಕರಿಸುವುದರಿಂದ ಇದು ನಯನಮನೋಹರವಾಗಿದೆ.

ನಾದಿರ್ ಷಾ ಇದನ್ನು 1739 ರಲ್ಲಿ ಲೂಟಿ ಮಾಡಿ ಪರ್ಷಿಯಕ್ಕೆ ಸಾಗಿಸಿದ ಪ್ರಸ್ತುತ ಈ ಅಮೂಲ್ಯ ಸಿಂಹಾಸನ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ಪ್ರಪಂಚದಲ್ಲಿಯೇ ಅತ್ಯಂತ ಸುಂದರ ಕೃತಿಗಳಲ್ಲೊಂದು ಎಮದು ಪ್ರಸಿದ್ದವಾಗಿರುವ ತಾಜ್‌ಮಹಲ್ ಆಗ್ರದಲ್ಲಿ ಯಮುನಾ ನದಿಯ ದಡದ ಮೇಲಿದೆ. ಇದನ್ನು ಷಹಜಹಾನ್ 1631–48 ರಲ್ಲಿ ತನ್ನ ಪ್ರೀತಿಯ ಮಡದಿ ಮಮ್ತಾಜಳ ಮಧುರ ನೆನಪಿಗಾಗಿ ಕಟ್ಟಿಸಿದ. ಈ ಭವ್ಯ ಕಟ್ಟಡವನ್ನು ರೂಪಿಸಿದ ಪ್ರಧಾನ ಶಿಲ್ಪಿ ಉಸ್ತಾದ್ ಈಸ್, ನಿರ್ಮಾಣ ಕಾರ್ಯದ ಮೇಲ್ವಿಚಾರಣೆಯನ್ನು ನಡೆಸಿದರು ಮುಕ್ರಾಮೆತ್ ಖಾನ್ ಮತ್ತು ಮೀರ್ ಅಬ್ದುಲ್ ಕರೀಮ್, ಇದರ ಗೋಪುರಕ್ಕೆ ಭವ್ಯವಾದ ಆಕಾರವನ್ನು ಕೊಟ್ಟವನು ಇಸ್ಮೈಲ್ ಖಾನ್, ಆಲಂಕರಣ ಲಿಪಿಯ ವಿನ್ಯಾಸಕ ಅಮಾನತ್ ಖಾನ್ ಕುಂದಣದ ಕೆಲಸ ಮಾಡಿದವರು, ಚಿರಂಜಿಲಾಲ್, ಮುನ್ನೂಲಾಲ್ ಮೊದಲಾದವರು. ದಕ್ಷಿದಲ್ಲಿರುವ ಮುಖ್ಯ ಪ್ರವೇಶ್‌ದ್ವಾರದ ಮಧ್ಯದಲ್ಲಿ ಆಯತಾಕಾರದ ಚೌಕಟ್ಟಿನಲ್ಲಿ

ಅಳವಡಿಸಿದ ಬೃಹತ್ತಾದ ಕಮಾನು ಚಾವಣಿಯಿದೆ. ಪಕ್ಕಗಳಲ್ಲಿ ಚಿಕ್ಕ ಕಮಾನು ಗೂಡುಗಳ ಸಾಲುಗಳು ಎರಡು ಹಂತದಲ್ಲಿದ್ದು ಮೂಲೆಗಳಲ್ಲಿ ಗುಮ್ಮಟ ಸಹಿತವಾದ ಅಷ್ಟಕೋನಾಕಾರದ ಸಣ್ಣ ಗೋಪುರಗಳಿವೆ ದೂರದಿಂದ ನೋಡಿದಾಗ ಇಡೀ ಕಟ್ಟಡ ತೆಳು ಪಾರದರ್ಶಕ ಮುಸುಕು ಹೊದ್ದ ಅಪ್ಸರೆ ಮೋಡಗಳ ಮರೆಯಲ್ಲಿ ತೇಲುತ್ತಿರುವಂತೆ ಮೋಹಕ ಭ್ರಾಂತಿಯನ್ನುಂಟುಮಾಡುತ್ತದೆ.

ದಖನ್(1325–1687) ಬಹಮನಿ ವಂಶದ ಅಲಾಉದ್ದೀನ್ ಬಹಮನ್ ಷಾ (1347–58) ದೌಲತಬಾದ್‌ನಿಂದ 1347 ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿ, ಅನಂತರಕ್ಕೆ ಗುಲ್ಬರ್ಗಕ್ಕೆ ರಾಜಧಾನಿಯನ್ನು ಮರ್ಗಾಯಿಸಿದ. ಮಹಮ್ಮದ್ ಷಾ (1482–1518) ಆಳಿಕೆ ಅನಂತರ ರಾಜ್ಯ ಛಿದ್ರವಾಗಿ ಐದು ಸ್ವತಂತ್ರ ರಾಜ್ಯಗಳಾದವು. ಇವುಗಳ ರಾಜಧಾನ ಬೀದರ್, ಬೆರಾರ್, ಅಹಮದ್ ನಗರ್, ಬಿಜಾಪುರ ಮತ್ತು ಗೋಲ್ಕೊಂಡ ಇವರು ಸ್ವಂತ ಪ್ರಾದೇಶಿಕ ವಾಸ್ತುಶಿಲ್ಪ ಶೈಲಿಯನ್ನು ಅಭಿವೃದ್ಧಿ ಪಡಿಸಿದರು.

ಅಲಾಉದ್ದೀನ್ ಬಹಮನ್ ಷಾ ಮತ್ತು ಎರಡನೆಯ ಮಹಮ್ಮದ್ ಷಾ ಚೌಕಾಕಾರದ ವಿನ್ಯಾಸದಲ್ಲಿದ್ದು ಇದರ ಓರೆಗೋಡೆಗಳುಮ ಮೂಲೆ ಕಮಾನುಗಳ ಸಮತಲ ದೊಡ್ಡ ಗುಮ್ಮಟ, ಕೈಪಿಡಿ ಗೋಡೆಗಳು, ಮೂಲೆ ಬುರುಜುಗಳು ಮೊದಲಾದವುಗಳಿಂದ ತುಗಲಕ್ ವಾಸ್ತು ಮಾದರಿ ಲಕ್ಷಣಗಳನ್ನು ಹೊಂದಿದೆ. ಇದು ಕಡು ನೀಲಿಬಣ್ಣದ ಹಂಚುತ್ತವೆ ಅಲಂಕೃತವಾಗಿದೆ. ಎರಡನೆಯ ಮಹಮ್ಮದ್ ಸಮಾಧಿ ಜಾಮಿ ಮಸೀದಿಯಂತೆ ಎತ್ತರವಾದ ಕಟ್ಟೆಯ ಮೇಲಿದೆ.

ಔರಂಗಬಾದಿನಲ್ಲಿರುವ ರಬಿಯೌದ್–ದೌರನಯ ಸಮಾಧಿಮಂದಿರ ತಾಜಮಹಲಿನ ಅಲ್ಪ ಪ್ರತಿರೂಪದಂತಿದೆ. ಇದಲ್ಲದೆ ಔರಂಗಜೇಬನು ಆಗ್ರದಲ್ಲಿ ನಗೀನಮಸೀದಿ ಮತ್ತು ದೆಹಲಿಯಲ್ಲಿ ಮೋತಿಮಸೀದಿಗಳನ್ನೂ ಕಟ್ಟಿಸಿದ.

ಮಾಳ್ವ: ಮಾಳ್ವ ಶೈಲಿಯ ಕಟ್ಟಡಗಳಿಗೆ ಎತ್ತರದ ಪೀಠ, ಅದಕ್ಕೆ ಮೆಟ್ಟಿಲುಗಳು, ಅನೇಕ ಬಣ್ಣದ ಕಲ್ಲುಗಳು ಮತ್ತು ಹೊಳಪಿನ ಹೆಂಚುಗಳು ಉಪಯೋಗ ಇವು ವಿಶಿಷ್ಟ ಲಕ್ಷಣಗಳು, ಭೋಜಶಾಲೆ ಎಂದೂ ಕರೆಯಲಾಗುವ ಕಮಾಲ್ ಮೌಲ ಮಸೀದಿ (1400) ಮತ್ತು ಲಾಟ್ ಮಸೀದಿಗಳನ್ನು ಹಿಂದು ದೇವಾಲಯಗಳ ವಾಸ್ತುಭಾಗಗಳಿಂದ ಕಟ್ಟಲಾಗಿದೆ ಭೋಜಶಾಲ ಸಭಾಂಗಣದ ಮೂರು ಬದಿಗಳಲ್ಲಿ

ಕಂಬಗಳ ಮೊಗಸಾಲೆ ಮತ್ತು ಪಶ್ಚಿಮ ಗೋಡೆಗೆ ಸೇರಿಕೊಂಡಂತೆ ಪ್ರಾರ್ಥನಾ ಕೋಣೆಯಿದೆ. ಲಾಟ್ ಮಸೀದಿಯನ್ನು ಇದೇ ರೀತಿಯ ವಿನ್ಯಾಸದಲ್ಲಿ 1405ರಲ್ಲಿ ದಿಲ್ವಾರ್ ಖಾನ್ ಕಟ್ಟಿಸಿದ.

ಜಹಾಜ್ ಮಹಲ್ ಮೂರು ಹಜಾರಗಳಾಗಿ ವಿಭಾಗಿಸಲಾದ ದೀರ್ಘ ಚತುರಸ್ತ ನಿರ್ಮಾಣ. ಒಂದನೆಯ ಮಹಮ್ಮದ್ ಕಟ್ಟಿದ ಅರಮನೆಯ ಪ್ರಾಂಗಣದ ಉತ್ತರದಲ್ಲಿ ಅಲಂಕೃತವಾದ ನೀರಿನ ತೊಟ್ಟಿ ಎರಡು ಕೊಳಗಳ ಮಧ್ಯದಲ್ಲಿದೆ.

ಘಿಯಾಸುದ್ದೀನ್(1469–1500) ಕಟ್ಟಿಸಿದ ಹಿಂದೋಲಮಹಲ್ ಇಳಿಜಾರಾದ ನೆಲದಲ್ಲಿ ಕಮಾನುಗಂಬಗಳನ್ನು ಆಧರಿಸಿದ ಹಾಗೂ ಎತ್ತರವಾದ ಕಮಾನುಗಳಿಂದ ಕೂಡಿದ 1 ಆಕಾರದ ದೊಡ್ಡ ಹಜಾರವಾಗಿದೆ.

ಕೊನೆಯ ಹಂತದಲ್ಲಿ ಅರಮನೆಗಳು, ಪ್ರಾಂಗಣಗಳು, ಸ್ನಾನಗೃಹಗಳನ್ನು ತಮ್ಮ ಮನರಂಜನೆಗಾಗಿ ನಿರ್ಮಿಸಲಾಗಿದೆ. ಬಜ್ ಬಹದೂರ್ ಅರಮನೆಯ ಸಭಾಂಗಣ, ಹಜಾರಗಳು, ಅಷ್ಟಕೋನಾಕೃತಿಯ ಪ್ರಾಂಗಣಗಳು, ಜಗತ್ತಿನ ಮೇಲೆ ಬರಾದರಿಗಳು, ಮತ್ತು ರಾಣಿ ರೂಪಮತಿಯ ಅರಮನೆಯ ಭಾಗದ ಇಳಿಜಾರು ಗೋಡೆಗಳಿಂದ ಕೂಡಿದ ಎರಡು ಅಂತಸ್ತಿನ ನಿರ್ಮಾಣ, ಉದ್ದನೆಯ ಹಜಾರದ ಕೊನೆಯಲ್ಲಿ ಕೋಣೆಗಳು, ಚಾವಣಿಯ ಮೇಲಿರುವ ವೇದಿಕೆಯ ಗುಮ್ಮಟ ಅನಂತರದ ಸೇರ್ಪಡೆ,.

ದಖನ್ (1325–1687) : ಬಹಮನಿ ವಂಶದ ಅಲಾಉದ್ದೀನ್ ಬಹಮನ್ ಷಾ (1347–58) ದೌಲತಬಾದ್ ನಂದ 1347 ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿ, ಅನಮತರಕ್ಕೆ ಗುಲ್ಬರ್ಗಕ್ಕೆ ರಾಜದಾನಿಯನ್ನು ವರ್ಗಾಹಿಸಿದ, ಅಹ್ಮದ್ ಷಾ(1422–50) 1425ರಲಲಿ ಬೀದರ್ ಗೆ ವರ್ಗಾಹಿಸಿದ. ಮಹಮ್ಮದ್ ಷಾ(1482–1518) ಆಳಿಕೆ ಅನಂತರ ರಾಜ್ಯ ಛಿದ್ರವಾಗಿ ಐದು ಸ್ವತಂತ್ರ ರಾಜ್ಯಗಳಾದವು. ಇವುಗಳ ರಾಜಧಾನಿ ಬೀದರ್, ಬೆರಾರ್, ಅಹಮದ ನಗರ್, ಬಿಜಾಪುರ ಮತ್ತು ಗೋಲ್ಕೊಂಡ, ಇವರು ಸ್ವಂತ ಪ್ರಾದೇಶಿಕ ವಾಸ್ತುಶಿಲ್ಪ ಶೈಲಿಯನ್ನು ಅಭಿವೃದ್ಧಿ ಪಡಿಸಿದರು. ಇದು ಔರಂಗಜೇಬನು ರಾಜ್ಯವನ್ನು ವಶಪಡಿಸಿ ಕೊಳ್ಳುವವರೆಗೆ ಬಳಕೆಯಲ್ಲಿತ್ತು.

ಅಲ್ಲಾಉದ್ದೀನ್ ಬಹಮನ್ ಷಾ ಮತ್ತು ಎರಡನೆಯ ಮಹಮ್ಮದ್ ಷಾ ಸಮಾಧಿ ಚೌಕಾಕಾರದ ವಿನ್ಯಾಸದಲ್ಲಿದ್ದು ಓರೆಗೋಡೆಗಳು, ಮೂಲೆ ಕಮಾನುಗಳು ಸಮತಟ್ಟಾದ ದೊಡ್ಡ ಗುಮ್ಮಟ, ಕೈಪಿಡಿ ಗೋಡೆಗಳು, ಮೂಲೆ ಬುರುಜುಗಳು ಮೊದಲಾದವುಗಳಿಂದ ತುಗಲಕ್ ವಾಸ್ತು ಮಾದರಿ ಲಕ್ಷಣಗಳನ್ನು ಹೊಂದಿದೆ. ಇದು ಕಡು ನೀಲಿಬಣ್ಣದ ಹೆಂಚುಗಳಿಂದ ಅಲಂಕೃತವಾಗಿದೆ. ಎರಡನೆಯ ಮಹಮ್ಮದ್ ಸಮಾಧಿ ಜಾಮಿ ಮಸೀದಿಯಂತೆ ಎತ್ತರವಾದ ಕಟ್ಟೆಯ ಮೇಲಿದೆ.

ಹಫ್ತ್ ಗುಂಬಜ್ ತುಗಲಕ್ ಶೈಲಿಯಲ್ಲಿದೆ. ಆದರೆ ತಾಜ್-ಉದ್ದೀನ್-ಫಿರೋಜ್ ನ ಸಮಾಧಿ(1322-1422) ಎತ್ತರವಾದ ಮೇಧಿಯ ಮೇಲಿದ್ದು ಇದಕ್ಕೆ ಗಡ್ಡೆಯಾಕಾರದ ಗುಮ್ಮಟಗಳಿವೆ. ಚಾಳುಕ್ಯರ ಕಪ್ಪುಕಲ್ಲಿನ ಬಾಗಿಲುವಾಡ ಮತ್ತು ಚಾಕು ಪೀಠಗಳ ಉಪಯೋಗದಿಂದ ಸ್ಥಳೀಯ ಪ್ರಭಾವ ಗಮನಾರ್ಹ..

ಕುತಬ್ ಶಾಹಿ: ಗೋಲ್ಕೊಂಡದ ಕುತುಬಾ ಶಾಹಿ ಶೈಲಿಯ ಕಟ್ಟಡಗಳು ಬಿಜಾಪುರದ ವಾಸ್ತುಶಿಲ್ಪ ಮಾದರಿಯಂತೆ ತೆಳುವಾದ ಮಿನಾರೆಟ್‌ನಂದ ಕೂಡಿದ ಕೈಸಾಲೆ, ಬೋದಿಗೆಯ ಮೆಕಿಟಕಿಗಳು ಎತ್ತರ ಹಾಗೂ ಮೊನಚಾದ ಕಮಾನುಗಳು ಮತ್ತು ದಳಗಳ ಒಳಗೆ ಮರೆಮಾಚಿದ ತಳಹದಿಯನ್ನುಳ್ಳ ಅಂದವಾದ ಕಂಠ ಹೊಂದಿರುವ ದುಂಡಾದ ಗುಮ್ಮ ಟ ಇವುಗಳಿಂದ ಕೂಡಿರುತ್ತವೆ. ಹಾಗೆಯೇ ಗಾರೆಯ ಅಲಂಕಾರ ಮತ್ತು ಹೆಂಚು ಮುಂತಾದವುಗಳ ಉಪಯೋಗದಿಂದ ಬಿಜಾಪುರದ ವಾಸ್ತುವಿಗಿಂತ ಭಿನ್ನವಾಗಿದೆ. ಹೀಗಿದ್ದರೂ ಹೆಚ್ಚಿನ ಸಂಖ್ಯೆಯ ಚಿಕ್ಕ ಬುರುಜು ಮತ್ತು ಚಿಕ್ಕ ಗುಮ್ಮ ಟಗಳು, ಹಿಂದು ಅಲಂಕರಣ ಪದ್ಧತಿಯ ಅನುಕರಣೆಯಿಂದ ಇದರ ಸೌಂದರ್ಯ ಹೆಚ್ಚಾಗಿದೆ. ಗೋಲ್ಕೊಂಡ ಕೋಟೆಗೂ ಗುಲ್ಬರ್ಗ ಮತ್ತು ಬೀದರ್ ಕೋಟೆಗಳಿಗೂ ಹೆಚ್ಚು ವ್ಯಾತ್ಯಾಸವಿಲ್ಲ. ಮಹಮ್ಮದ್ ಕುಲಿ ಕುತುಬ್ ಷಾನ(1580-1612) ಸಮಾಧಿಯನ್ನು ಎರಡು ಅಂತಸ್ತಿನ ಜಗತಿನ ಮೇಲೆ ನಿರ್ಮಿಸಲಾಗಿದೆ. ಮೇಲೆ ಚಾಚಿಕೊಂಡಿರುವ ಮೂರು ಕೈಸಾಲೆಗಳಿವೆ. ಅಬ್ದುಲ್ ಕುತುಬ್ ಷಾನ(1626-72) ದೊಡ್ಡದಾದ ಸಮಾಧಿ ಎರಡು ಅಂತಸ್ತುಗಳು ಮತ್ತು ಶಿಖರಾಲಂಕಾರಗಳಿಂದಲೂ ವೈಶಿಷ್ಟ್ಯಪೂರ್ಣವಾಗಿದೆ.

ಖಾನ್ ದೇಶ(1388-1601) ಮಿನಾನ್ ಮುಬಾರಕ್ ನ(1441-57) ಸಮಾಧಿ ಹುಷಂಗ್ ಷಾ ಸಮಾಧಿಯ ವಿನ್ಯಾಸದಲ್ಲಿಯೇ ನಿರ್ಮಾಣವಾಗಿದೆ. ಇದರಲ್ಲಿ ಮುಖ್ಯ ಬಾಗಿಲು ಮತ್ತು ಪಕ್ಕದ ಕಿಟಕಿಗಳ ನಡುವೆ ಹೆಚ್ಚಿನ ಅಮತರವಿದೆ. ಅಷ್ಟಕೋನದ ವೇದಿಕೆಯ ಮೇಲೆ ಗುಮ್ಮಟವಿದೆ. ಬುರ್ಹಾನ್ಪುರದಲ್ಲಿ



ಮಹಮ್ಮದ್ ಶಾ



ಫೈಯಜ್ ಶಾ ಹುಮನಿ

ನಿರ್ಮಿತವಾದ ಜಾಮೀ ಮಸೀದಿ(1588) ಹದಿನೈದು ಕಮಾನುಗಳಿರುವ ಆಯತಾಕಾರದ ಕಟ್ಟಡ. ಇದರ ಎರಡೂ ಪಾರ್ಶ್ವಗಳಲ್ಲಿ ಗುಜರಾತ್. ಶೈಲಿಯಲ್ಲಿ ರೂಪಿಸಿದ ಎತ್ತರವಾದ ಮೀನಾರುಗಳಿವೆ. ಬೀಜೀ-ಕೀ-ಮಸೀದಿಗಳಲ್ಲಿ ಕಮಾನಿನ ದ್ವಾರವಿದ್ದು ಪಾರ್ಶ್ವಗಳಲ್ಲಿ ಚೌಕಾಕಾರದ ಮೇಲೆ ಕ್ರಮವಾಗಿ ಅಷ್ಟಕೋನ, ಹದಿನಾರು ಕೋನಗಳ ಮತ್ತು ವೃತ್ತಾಕಾರದ ಮೂರು ಅಂತಸ್ತುಗಳಲ್ಲಿ ಮೇಲೇರುವ ಮೀನಾರುಗಳಿವೆ. ಮೇಲಿನ ಅಂತಸ್ತಿನಲ್ಲಿ ತುಗಲಕ್ ಶೈಲಿಯ ಕಿರು ಶಿಖರಗಳು ಮತ್ತು ಲೋದಿ ಶೈಲಿಯ ಗುಮ್ಮಟಗಳ ಸಂಯೋಜನೆ ಆಕರ್ಷಕ.

ಬಿಜಾಪುರ:

ಬಿಜಾಪುರ ಸ್ವತಂತ್ರವಾದ ಅನಂತರ ಈ ಪ್ರದೇಶವನ್ನು 1490ರಿಂದ ಒಂಬತ್ತು ರಾಜರು ಆಳಿದರು. ಇವರಲ್ಲಿ ಯೂಸುಫ್ ಆದಿಲ್ ಷಾ, ಒಂದನೆಯ ಆದಿಲ್ ಷಾ(1558–80) ಎರಡನೆಯ ಆದಿಲ್ ಷಾ(1580–1626) ಮತ್ತು ಮುಹಮ್ಮದ್ ಷಾ (1626–56) ಮುಂತಾದವರು ಪ್ರಮುಖವಾಗಿ ವಾಸ್ತುಶಿಲ್ಪ ಕ್ಷೇತ್ರದ ಕೊಡುಗೆಗೆ ಹೆಸರುವಾಸಿಯಾಗಿದ್ದಾರೆ.

ಈ ಪ್ರದೇಶದ ಕಟ್ಟಡಗಳ ಗುಮ್ಮಟಗಳು ವೃತ್ತಾಕಾರವಾಗಿದ್ದು ತಳದಲ್ಲಿರುವ ಅರಳಿದ ದಳಗಳ ವೃತ್ತದಿಂದ ಮೇಲೆ ಹೊರಟಂತೆ ಕಾಣುತ್ತೆ. ಕಟ್ಟೆಯ ಮೇಲಿನ ಗೋಡೆಯ ಮಧ್ಯದಲ್ಲಿರುವ ಕಮಾನು ಚಿಕ್ಕ ಮೀನಾರುಗಳು, ಲತಾಸುರಳಿಯ ಬೋದಿಗೆಗಳ ಮೇಲಿನ ಛಜ್ಜಗಳು, ಕಮಾನಿನ ಮೇಲಿನ ಮೂಲೆ ಕಟ್ಟಿನಲ್ಲಿ ಅಲಂಕರಣ ಕಲ್ಲಿನ ಗೋಡೆಯ ಮೇಲಿನ ಕಲ್ಲು ಮತ್ತು ಗಾರೆಯ ಅಲಂಕರಣ, ತೂಗುದೀಪ, ಲತಾವರ್ಣಚಿತ್ರ ಮತ್ತು ಪರಸ್ಪರ ಹೆಣೆದುಕೊಂಡ ಅಕ್ಷರಗಳ ಶಾಸನಗಳು ಇವೇ ಮೊದಲಾದವು ಬಿಜಾಪುರ ಶೈಲಿಯ ವಾಸ್ತು ಲಕ್ಷಣಗಳು.

ಬಿಜಾಪುರದಲ್ಲಿ ದರ್ಗ ಮತ್ತು ರಾಜವಾಡೆಗಳು, ಮಸೀದಿಗಳಿವೆಯಾದರೂ ಸಮಾಧಿ ಮತ್ತು ಮಹಲ್‌ಗಳಿಗೆ ಹೆಚ್ಚುಳು, ಮಸೀದಿಗಳೀವೆಯಾದರೂ ಅಕ್ಷರಗಳ ಶಾಸನಗಳು ಇವೇ ಮೊದಲಾದವು ಬಿಜಾಪುರ ಶೈಲಿಯ ವಾಸ ಪ್ರಸಿದ್ದವಾಗಿದೆ. ಬಿಜಾಪುರವು ಆಲಿ ಆದಿಲ್ ಷಾ(1558–80) ಕಟ್ಟಿಸಿದ ಜಾಮೀ ಮಸೀದಿ ಮತ್ತು ಔರಂಗಜೇಬ್ ಕಟ್ಟಿಸಿದ ದ್ವಾರಗಳು ಅತಿ ಮುಖ್ಯವಾದ ನಿರ್ಮಾಣಗಳು, ಗುಮ್ಮಟ ಅರ್ಧಗೋಳಾಕೃತಿಯ ತುದಿಯಲ್ಲಿ ಅರ್ಧ ಚಂದ್ರಶಿಖರವಿದೆ. ಚೌಕಾದ ಜಾಲಂಧ್ರದ ಕಟಕಟೆಯಿಂದ

ಇದು ಸುತ್ತುವರೆಯಲ್ಪಟ್ಟಿದೆ. ಮೂಲೆಗಳಲ್ಲಿ ತಲೆಕುಚ್ಚು ಇದೆ. ಅನಂತರ ಇದರ ಮಿಹರಾಬ್ ನನ್ನು ಅತ್ಯುತ್ತಮ ವಿನ್ಯಾಸದಲ್ಲಿ ಮೆರುಗಿನ ಬಣ್ಣಗಳಿಂದ ಸಿಂಗರಿಸಲಾಗಿದೆ.

ಗಗನಮಹಲ್ ಅರಮನೆ 1560ರಲ್ಲಿ ನಿರ್ಮಾಣವಾಯಿತು. ಇದು ಆಯಾತಾಕಾರದ ಎರಡು ಅಂತಸ್ತಿನ ಹಜಾರ, ಕೆಳಗಿನ ಹಜಾರ ಸಾರ್ವಜನಕರ ಸಮಾರಂಭಕ್ಕೂ ಮತ್ತು ಮೇಲಿನ ಅಂತಸ್ತು ರಾಜರ ಸ್ವಂತಕ್ಕೆ ಉಪಯೋಗವಾಗುತ್ತಿತ್ತು. ಮಧ್ಯದಲ್ಲಿರುವ ಕಮಾನೊಂದು 18ಮೀ ವಿಸ್ತಾರವಿದೆ. ಇಬ್ರಾಹಿಂ ರೋಜವನ್ನು ಇಬ್ರಾಹಿಂ ಎರಡನೆಯ ಆದಿಲ್ ಷಾ ನಿರ್ಮಿಸಿದನು(1580–1627) ಇದರಲ್ಲಿ ಇವನ ಸಮಾದಿ ಪಕ್ಕದಲ್ಲಿ ಮಸೀದಿ ಸುತ್ತಲೂ ಗೋಡೆಯಿರುವ ಚೌಕಾಕೃತಿಯ ಆವರಣದಲ್ಲಿದೆ. ವೇದಿಕೆಯ ಮೇಲೆ ಎರಡು ಕಟ್ಟಡಗಳು ಮುಖಾಮುಖಿಯಾಗಿದೆ. ಇವುಗಳ ನಡುವೆ ನೀರಿನ ಕೊಳ ಮತ್ತು ಚಿಲುಮೆಯಿದೆ. ಮಸೀದಿಯ ಪ್ರಾರ್ಥನಾ ಕೋಣೆ ಆಯತಾಕಾರವಾಗಿದೆ. ಮುಂಭಾಗದಲ್ಲಿ ಐದು ಕಮಾನುಗಳಿವೆ. ಪ್ರತಿಯಂದು ಮೂಲೆಯಲ್ಲಿ ಮಿನಾರೆಟ್ ಗಳಿವೆ ಮತ್ತು ವೃತ್ತಾಕಾರದ ಗುಮ್ಮಟವಿದೆ.

ಗುಲ್ಬರ್ಗದಲ್ಲಿರುವ ಮುಸ್ಲಿಂ ಸ್ಮಾರಕಗಳು

ಗುಲ್ಬರ್ಗ ನಗರವು ದೆಹಲಿಯ ಸುಲ್ತಾನರುಗಳಾದ ಖಿಲ್ಜಿ ಮತ್ತು ತುಘಲಕ ಆಳ್ವಿಕೆಯ ತರುವಾಯ 1347ರಲ್ಲಿ ಬಹಮನ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಈ ಮೊದಲು ಮಹಮ್ಮದ್ ತುಘಲಕ್‌ನಿಂದ ಗುಲ್ಬರ್ಗವನ್ನು ಜಹಗೀರನ್ನಾಗಿ ಪಡೆದು ಹಸನ್ ಅಲ್ಲಾದ್ದೀನ್ ಬಹಮದ್‌ಷಹನು ಆಳುತ್ತಿದ್ದನು. ಆತನಂದ ಈ ಪ್ರದೇಶವನ್ನು ಗೆದ್ದ ಬಳಿಕ ಡೆಕ್ಕನ್‌ನಲ್ಲಿ ಆದಿಲ್‌ಷಾಹಿಗಳು ಆರು ಸ್ಮಾರಕಗಳನ್ನು ಕಟ್ಟಿಸಿದರು. ಕೋಟೆಯಲ್ಲಿನ ದವಾರ, ಕಮಾನು ಮತ್ತು ಯೂಸೂಫ್ ಆದಿಲ್‌ಶಾಹಿ ಕಾಲದಲ್ಲಿ ಕಟ್ಟಲ್ಪಟ್ಟವು. ಇದಲ್ಲದೇ ಶೇಖ್ ಸಿರಾಜುದ್ದೀನ್ ಜುನೈದಿಯ ಎರಡು ಮಿನರೆಟ್ಸ್‌ಗಳು ಕಟ್ಟಲ್ಪಟ್ಟವು. ಚಾಂದ್‌ಬೀಬಿಯ (ಗೋರಿ ಇಲ್ಲವೆ) ಸ್ಮಾರಕವನ್ನು ಕಟ್ಟಲಾಯಿತು.

ದರ್ಗಾಗಳು

ಒಬ್ಬ ಸೂಫಿಯ, ಪೀರ್, ಶಯ್ನ ಸತ್ತ ಬಳಿಕ ಆತನನ್ನು ಒಂದು ಗೋರಿಯಲ್ಲಿ ಹೂಳುವ ಸ್ಥಳಕ್ಕೆ ದರ್ಗಾ ಎನ್ನುವರು. ಇಲ್ಲಿನ ಬಹುಮನಿಯ ಸುಲ್ತಾನರು ಸೂಫಿ ಸಂತರ ಭಕ್ತರಾಗಿದ್ದರು. ಹೀಗಾಗಿ ಪರ್ಷಿಯಾದಿಂದ ಅನೇಕ ಸೂಫಿ ಸಂತರು ಈ ನಗರಕ್ಕೆ ಬಂದರು. ಈ ನಗರದಲ್ಲಿ ಕನಿಷ್ಠ ಐದು

ನಮೂನೆಯ ದರ್ಗಾಗಳಿವೆ. ಅವು ಗೃಹಸ್ಥ ಯತಿಗಳ, ಬ್ರಹ್ಮಚಾರಿ, ಮಹಿಳೆ, ಮಕ್ಕಳು ಮತ್ತು ಕಳ್ಳರ ದರ್ಗಾಗಳಾಗಿವೆ. ಅವುಗಳಲ್ಲಿ ಬ್ರಹ್ಮಚಾರಿ ಶೇಖ್ ಸಿರಾಜುದ್ದೀನ್ ಜುನೈದಿ ರುಕ್‌ಮುದ್ದೀನ್ ತೊಲ್ ದರ್ಗಾ, ಖ್ವಾಜಾ ಬಂದೇನರಾಜ್ ದರ್ಗಾ, ಅಕ್ಬರ್ ಹುಸೇನಿದರ್ಗಾ, ಮುನ್ನಾವರ ಮತ್ತು ಸೇಲ್ ಎ–ಸುಲ್ತಾನ್ ದರ್ಗಾ ಮತ್ತು ಖಾದರ ಬಾಷಾ ದರ್ಗಾಗಳು ಹಾಗೂ ಮಹಿಳೆಯರಲ್ಲಿ ಹಜರತ್ ಕುಂಜಾವು ಸಾಬಿ ದರ್ಗಾಗಳು ಪ್ರಮುಖವಾದದ್ದಾಗಿವೆ.

ದರ್ಗಾಗಳ ತಳಪಾಯ ಸಾಮಾನ್ಯವಾಗಿ ಚೌಕಾಕಾರದ ವಿಶಾಲ ಕೋಣೆಯಲ್ಲಿ ಒಂದು ಅಥವಾ ಒಂಕ್ಕಿಂತ ಹೆಚ್ಚು ಸಮಾಧಿಗಳಿರುತ್ತವೆ. ಉಳಿದ ಒಂದು ಭಾಗದಲ್ಲಿ ಕಮಾನುಳ್ಳ ಪ್ರವೇಶದ್ವಾರ ದಕ್ಷಿಣ ಅಥವಾ ಉತ್ತರಕ್ಕೆ ಇರುತ್ತದೆ. ಗೋಡೆಗಳಲ್ಲಿ ಒಳ ಮತ್ತು ಹೊರಗಡೆಗೆ ಕಮಾನುಗಳಿರುತ್ತವೆ. ಪಶ್ಚಿಮ ಗೋಡೆಯು ಪ್ರಾರ್ಥನಾ ಭಾಗವಾಗಿದೆ. ಮಧ್ಯಭಾಗದಲ್ಲಿ ಒಳಗಿನ ಗೋರಿಗಳು ತಂದೆ ಮತ್ತು ಮಕ್ಕಳ ಗೋರಿಗಳಿರುತ್ತವೆ. ನಾಲ್ಕು ಗೋಡೆಗಳ ಒಳಗಿನ ಕಮಾನುಗಳ ಮೇಲೆ ನಾಲ್ಕು ಕಮಾನುಗಳನ್ನು ಏರಿಸಿ ಒಟ್ಟು ಎಂಟು ಕಮಾನುಗಳ ತುದಿಗಳಲ್ಲಿ ಅಡ್ಡಪಟ್ಟಿಕೆಗಳಂತೆ ನಿರ್ಮಿಸಿ, ಅದರ ಮೇಲೆ ವೃತ್ತಪಟ್ಟಿಕೆ ಮಾಡಿ ಅದರ ಮೇಲೆ ಭವ್ಯವಾದ ಗೊಮ್ಮಟವನ್ನು ನಿರ್ಮಿಸಲಾಗಿದೆ. ಛತ್ತಿನ ಮೂಲೆಗಳಲ್ಲಿ ನಾಲ್ಕು ಮಿನರೆಟ್ಸ್‌ಗಳಿರುತ್ತವೆ. ತುದಿಗಳಲ್ಲಿ ಚಂದ್ರಾಕಾರದ ಪಟ್ಟಿಕೆಯಿರುತ್ತವೆ. ಈ ಲಕ್ಷಣಗಳನ್ನು ಶೇಖ್‌ರೋಜ್ ಸಿರಾಜುದ್ದೀನ್ ಜಿನ್ನೈಯ್ದಿ (ಶೇಖ್ ಕಾಕಾ) ದರ್ಗಾದಲ್ಲಿ (ಅಂದರೆ ಹಜರತ್ ಬಂದೇನವಾಜ್ ದರ್ಗಾದಲ್ಲಿ) ಕಾಣಬಹುದು. ಇವರಲ್ಲಿ ಮೊದಲಿಗರು ಶೇಖ್ ಶಿರಾಜುದ್ದೀನ್ ಜಿನ್ನೈಯ್ದಿ. (1350) ಈ ದರ್ಗಾ ಆ ಮೂಲದಲ್ಲಿ ಒಂದು ಸಂತನ ಗೋರಿ ಮತ್ತು ಕಿರು ಮಸೀದಿಗಳನ್ನು ಮಾತ್ರ ಒಳಗೊಂಡಿತ್ತು. ತದನಂತರ ಕೆಲವು ಸಮಾಧಿಗಳು ಕೂಡಿಕೊಂಡವು. ನಂತರ ಮಸೀದಿಗಳನ್ನು, ಭದ್ರಗೊಳಿಸಲು ಮಿನರೆಟ್ಸ್‌ಗಳನ್ನು ಬಳಸಲಾಯಿತು.

ಹಸನ್‌ಗಂಗೂ ಮತ್ತು ಆತನ ಮಗ ಮಹಮ್ಮದ್ ಷಹಾ ಬಹಮನಯ ಗುರುಶಾಯ್ನ ಜನ್ನೈಯ್ದಿಯ ದರ್ಗಾವಿದೆ. ಆದರೆ ಗೇಸೂದರಜ್‌ನ ಅಂದರೆ ಹಜರತ್ ಬಂದೇ ನವಾಜ್ ದರ್ಗಾ ಮನೆ ಹೊರಗಡೆಯ ದರ್ಗಾ ಪ್ರವೇಶದ ಮಹಾದ್ವಾರಕ್ಕೆ ಜಿಜಾಪುರ ಆದಿಲ್‌ಷಾಹಿ ಮೊಘಲರ ಕಾಲದ ಬುರ್ಜ್‌ನಂತಹ ಬೃಹತ್ ಮಿನರೆಟ್ಸ್‌ಗಳಿವೆ. ಗೀಸುದರಜ್ ಇದ್ದಾಗ ಸೂಫಿ ಚಳವಳಿ ಪ್ರಬಲವಾಗಿರಲಿಲ್ಲ. ಈ ಕಾಲದಲ್ಲಿ ಕೇವಲ ಖಾನ್ಕಾಗಳೇ ಅವರ ಮುಖ್ಯ ಕೇಂದ್ರಗಳೆನಿಸಿದ್ದವೆಂದು ಕಾಣುತ್ತದೆ.

ಹಜರತ್ ರುಕ್ಮದ್ದೀನ್ ತೋಲ ದರ್ಗಾ

ನಗರದ ಬದಿಯ ಪೀಲಾಪುರದ ಸಮೀಪದ ಎತ್ತರದ ಗುಡ್ಡದ ಮೇಲೆ ಹಜರತ್ ರುಕ್ಮದ್ದೀನ್ ತೋಲ ದರ್ಗಾವಿದೆ. ಅಲ್ಲಿ ಕೇವಲ ಹಜರತ್ ರುಕ್ಕುದ್ದೀನ್ ತೋಲ ಸಂತರ ಬೃಹತ್ ಮಜಾರ (ಗೋರಿ) ತೆರೆದ ಬಯಲಿನಲ್ಲಿದೆ. ಅದನ್ನು ನಯವಾದ ಟ್ರ್ಯಾಪ್ ಶಿಲೆಯಿಂದ ನಿರ್ಮಿಸಲಾಗಿದೆ. ಏಕಶಿಲೆಯಂತಿರುವ ಇದು ಆಯತಾಕಾರದಲ್ಲಿ ಎತ್ತರವಾಗಿದ್ದು, ಮೇಲ್ಭಾಗ ಕಮಾನಿನಾಕಾರದಲ್ಲಿದೆ. ಈ ಮಜಾರದ ಎದುರುಗಡೆಗೆ ಅಂತಹುದೇ ಇನೊಂದು ಬೃಹತ್ ಗೋರಿಯಿದ್ದು ಅದು ಹಜರತ್ ಷಾಹ ಖಾದ್ರಿಯವರದ್ದಾಗಿದೆ. ಈ ಖಾದ್ರಿಯು ಮೂಲತಃ ಬ್ರಾಹ್ಮಣ ಮತ್ತು ರುಕ್ಕುದ್ದೀನ್ ತೋಲ ಸಂತರ ಶಿಷ್ಯ. ಇನ್ನು ಕೆಲವು ಗೋರಿಗಳು ಅಲ್ಲಿವೆ. ಇಲ್ಲಿಯ ಗುರು–ಶಿಷ್ಯರ ಮಜಾರಗಳನ್ನು ಹಿಂದೂ–ಮುಸ್ಲಿಮರು ಗೌರವಾದರಗಳಿಂದ ಹಿಂದೂಗಳಂತೆ ಮಡಿ–ಉಡಿಗಳಿಂದ ಕಾಯಿ, ಕರ್ಪೂರ, ತೆಂಗಿನಕಾಯಿಗಳೊಂದಿಗೆ ಪೂಜಿಸುವರು. ಇವರ ಜೀವನ ಚರಿತ್ರೆಯು ತುಂಬಾ ಕುತೂಹಲದ್ದಾಗಿದೆ. ಈ ದರ್ಗಾವು ಹಜರತ್ ಬಂದೇ ನವಾಜರ ಸಮಕಾಲೀನದ್ದಾಗಿದೆ.

ಹಜತರ್ ಬಂದೇ ನವಾಜ್ ದರ್ಗಾ

ನಗರದ ರೋಜ ಬುರ್ಜ್ ಸಮೀಪದಲ್ಲಿ ಹಜರತ್ ಖ್ವಾಜಾ ಬಂದೇ ನವಾಜ್‌ರ ಬೃಹತ್ ದರ್ಗಾ ಏಷ್ಯಾದಲ್ಲೇ ಪ್ರಸಿದ್ಧವಾಗಿದೆ (1422). ಈ ದರ್ಗಾಕ್ಕೆ ಒಂದು ಚೌಕಾದ ಬೃಹತ್ ಕಟ್ಟಡಕ್ಕೆ ಎತ್ತರದ ಗೊಮ್ಮಟವಿದೆ. ಇದಕ್ಕೆ ಮೂರು ಕಡೆಗಳಲ್ಲಿ ಮೂರು ಕಮಾನುಗಳುಳ್ಳ ಪ್ರವೇಶದ್ವಾರಗಳಿವೆ. ಅದರ ಗೋಡೆಗಳಲ್ಲಿ ಕಮಾನುಗಳು ಎರಡು ಸಾಲುಗಳಲ್ಲಿವೆ. ಇದನ್ನು ನೋಡಲು ಎರಡಂತಸ್ತಿನ ಕಟ್ಟಡದಂತೆ ಕಾಣುತ್ತದೆ. ಒಳಗಡೆಗೆ ಮೂರು ಗೋರಿಗಳಿದ್ದು, ನಡುವಿನದೇ ಹಜರತ್ ಖ್ವಾಜಾ ಬಂದೇ ನವಾಜ್‌ರದ್ದಾಗಿದೆ. ಬದಿಗಿನ ಎರಡು ಗೋರಿಗಳು ಅವರ ಮಕ್ಕಳಾದ ಅಕ್ಬರ್ ಹುಸ್ಸೇನ ಮತ್ತು ಅಸ್ಗರ್ ಹುಸ್ಸೇನಯರದ್ದಾಗಿದೆ. ಈ ಗೋರಿಗಳ ತುದಿ ಭಾಗಗಳೂ ಕಿರಿದಾದ ಕಮಾನುಗಳಿಂದ ಕೂಡಿವೆ. ಈ ಗೋರಿಗಳು ಉತ್ತರ–ದಕ್ಷಿಣಾಭಿಮುಖವಾಗಿದೆ. ಒಳಗಡೆಗೆ ಮೂರು ಕಮಾನುಗಳು ತಲಾ ಒಂದರ ಗೋಡೆಗಳಲ್ಲಿವೆ. ಒಂದಕ್ಕೆ ಕಮಾನುಳ್ಳ ದ್ವಾರವಿದೆ. ಗೋಡೆಯ ಬದಿಯ ಕಮಾನುಗಳ ತೋರಣಗಳ ಬದಿಗಳಲ್ಲಿ ವೃತ್ತಪದಕಗಳ ಅಲಂಕಾರವಿದೆ. ಪಶ್ಚಿಮದ ಗೋಡೆಯಲ್ಲಿನ ಕಮಾನುಗಳಿಗೆ ತಗ್ಗುಳ್ಳ ಕೆತ್ತನೆಯಿದೆ. ಒಂದೇ ನಮೂನೆಯ ಕಮಾನುಗಳು ಒಳಗಡೆಯ ನಾಲ್ಕು ಗೋಡೆಯ ಮೇಲಿವೆ. ಕಮಾನನ ಮೂಲೆಗಳಲ್ಲಿ ಅರ್ಧವೃತ್ತಾಕಾರದ ಕಮಾನುಗಳಿದ್ದು, ಒಟ್ಟು ಎಂಟು ಮುಖಗಳನ್ನಾಗಿ ಪರಿವರ್ತಿಸಿದೆ. ಈ ಮೂಲೆ ಕಮಾನುಗಳನ್ನು ಸ್ಕ್ವಿಂಚಸ್ ಎನ್ನುವರು ಅವುಗಳ ಮಧ್ಯದಲ್ಲಿಯೂ ವೃತ್ತಪಟ್ಟಿಕೆಗಳಿವೆ. ಭವ್ಯವಾದ

ಎತ್ತರವಾದ ಗುಮ್ಮಟವನ್ನು ಅದರ ಮೇಲೆ ಕಟ್ಟಲಾಗಿದೆ. ಪ್ರವೇಶದ್ವಾರದ ಕಮಾನುಗಳ ಬಾಗಿಲು ಫಕಗಳಲ್ಲಿ ಒಂದರ ಮೇಲೆ ಒಂದು ಕುಂಭಗಳ ಅಲಂಕರಣವಿದೆ. ದಕ್ಷಿಣ ದ್ವಾರದ ಮೇಲೆ ಪವಿತ್ರ ಖುರಾನನ್ನು ಪರ್ಷಿಯನ್‌ದಲ್ಲಿ ಬರೆಸಲಾಗಿದೆ. ದಕ್ಷಿಣ ದ್ವಾರಕ್ಕೆ ಶಾಖೆಗಳಿವೆ.

ಖಾದರ್ ಬಾಷಾ ದರ್ಗಾ

ಈ ನಗರದ ಸಮೀಪದ ಸುಲ್ತಾನಪುರ ರಸ್ತೆಯ ಒಂದು ಹೊಲದಲ್ಲಿ ಖಾದರ ಬಾಷಾ ದರ್ಗಾವಿದೆ. ಈ ದರ್ಗಾವನ್ನು ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಆದರೆ ಅದು ದುಃಸ್ಥಿತಿಯಲ್ಲಿದೆ. ದರ್ಗಾದ ಸುತ್ತಲೂ ಪ್ರದಕ್ಷಿಣಾ ಪಥವಿರುವುದು ವಿಶೇಷ. ಈ ಕಟ್ಟಡದಲ್ಲಿ ಎರಡು ಗೋರಿಗಳು ಒಂದೇ ಸಾಲಿನಲ್ಲಿ ಉತ್ತರ-ದಕ್ಷಿಣಾಭಿಮುಖವಾಗಿವೆ. ಇದಕ್ಕೆ ಎತ್ತರದ ಕಮಾನುಳ್ಳ ದ್ವಾರಗಳಿವೆ. ತಲಾ ಒಂದು ದ್ವಾರದ ಅಗಲ 1.50 ಮೀ. ಈ ದ್ವಾರದಲ್ಲಿ ಎರಡು ಹಿಂಚಾಚು ಮುಂಚಾಚುಗಳಿವೆ. ಇಲ್ಲಿಯೂ ಒಳಗಡೆಗೆ ಸ್ಕ್ರಿಂಚಸ್‌ಗಳಿವೆ. ಕಮಾನುಗಳು ಅರೆಗಂಬಗಳ ಮೇಲೆ ಕೂಡಿಸಲಾಗಿದೆ. ಮೇಲ್ಗಡೆಗೆ ಮೂಲೆಗಳಲ್ಲಿ ನಾಲ್ಕು ಆಳವಾದ ಕಮಾನುಗಳಿವೆ. ಮೂರು ಗೋಡೆಗಳಲ್ಲಿಯೂ ಕಮಾನುಗಳಿವೆ, ಆದರೆ ಪಶ್ಚಿಮದ ಗೋಡೆಯ ನಡುಭಾಗದಲ್ಲಿ ಕಮಾನನಾಕಾರದ ಗೂಡಿರುವುದು ವಿಶೇಷ. ಈ ಎಲ್ಲ ಕಮಾನುಗಳು ಒಂದೇ ಎತ್ತರ ಮತ್ತು ನಮೂನೆಗಳಲ್ಲಿವೆ. ಈ ಮಾದರಿಯನ್ನು ಅಲ್ಲಿಯ ಮಹಿಳಾ ದರ್ಗಾದಲ್ಲಿಯೂ ಕಾಣಬಹುದು. ಈ ಎಲ್ಲ ಕಮಾನುಗಳ ತುದಿಯಲ್ಲಿ ವೃತ್ತಾಕಾರದ ಪಟ್ಟಿಕೆಯನ್ನು ರೇಖಾಲಂಕಾರ ಮತ್ತು ಹೂಬಳ್ಳಿಗಳನ್ನು ಅಲಂಕರಣಗೊಳಿಸಿ ಅದರ ಮೇಲೆ ಅರ್ಧವೃತ್ತಾಕಾರದ ಗೊಮ್ಮಟವನ್ನು ಏರಿಸಲಾಗಿದೆ. ಅದರ ಬುಡದಲ್ಲಿ ಚೂಪಾದ ಪಟ್ಟಿಕೆಗಳಿವೆ. ಗೊಮ್ಮಟದ ಪಟ್ಟಿಕೆಯ ಮೇಲೆ ಕಮಾನುಗಳ ಅಲಂಕಾರಗಳಿವೆ. ಗೊಮ್ಮಟದ ನಡುವೆ ಎರಡು ವೃತ್ತಗಳಿವೆ. ಗೊಮ್ಮಟದ ಒಳಭಾಗದಲ್ಲಿದ್ದ ಅರೆಗಂಬಗಳನ್ನು ಕಡಿದುಹಾಕಲಾಗಿದೆ. ತಳಪಾಯ ಚೌಕಾಗಿ ಕಾಣುವುದು. ಆದರೆ ಗೋಡೆಯನ್ನು ಎಂಟು ಮುಖಗಳಲ್ಲಿ ಕಟ್ಟಿರುವುದು ವಿಶೇಷ. ತಲಾ ಒಂದರ ಅಳತೆಯು 4.25ಮೀ. ಮೂಲೆಗಳ ಹೊರ ಗೋಡೆಗಳ ಮೇಲೆ ಕಮಾನುಗಳಿವೆ. ಆಳವಿಲ್ಲದ ಗೂಡು ತಳಪಾಯದಿಂದ 1.20 ಮೀ. ಎತ್ತರದಲ್ಲಿವೆ. ಇದರಿಂದ ಈ ಭಾಗ ಎಂಟು ಮುಖಗಳಲ್ಲಿದೆ. ವೃತ್ತಪಟ್ಟಿಕೆಗಳಲ್ಲಿ ರೇಖಾಲಂಕಾರವನ್ನು ಮೂಲೆ ಕಮಾನುಗಳ ಗೂಡುಗಳ ಮೇಲೆ, ಬಾಗಿಲುಗಳ ಮತ್ತು ಪಶ್ಚಿಮ ಗೋಡೆಗಳಲ್ಲಿ ಕಾಣಬಹುದು. ಪಶ್ಚಿಮ ಗೋಡೆಯ ಕಮಾನನ ಮೇಲೆ ಮತ್ತು ಮೂಲೆ ಗೋಡೆಗಳ ಮೇಲೆ ಇಳಿಜಾರಾದ ಛಜ್ಜಗಳನ್ನು ನಿರ್ಮಿಸಲಾಗಿದೆ. ಅಲ್ಲಿದ್ದ ಅವುಗಳು ಹಾಳಾಗಿವೆ. ಮತ್ತು ಮೇಲೆ ತೆನೆಗಳು ಹಾಗೂ ಮಿನಾರೆಟ್ಸ್‌ಗಳಿವೆ.

ಹಜರತ್ ಕಮಲ್ ಮುಜರ್ರರ್ ದರ್ಗಾ

ನಗರದ ಮದುಲ್ಲಾ ಓಣಿಯಲ್ಲಿನ ಹಜರತ್ ಕಮಲ್ ಮುಜರ್ರರ್ ದರ್ಗಾ ಮತ್ತೊಂದು ಪ್ರಸಿದ್ಧ ಸ್ಥಳ. ಇದನ್ನು ಶಿಲೆಯಿಂದ ಕಟ್ಟಲಾಗಿದೆ. ಗೊಮ್ಮಟ ಚೌಕಾಕಾರದ ಗೋಡೆಗಳಿಗೆ ಗಾರೆಯ ಲೇಪನವಿದೆ. ಗೊಮ್ಮಟ ಕೋಣೆಯನ್ನು ಎತ್ತರವಾದ ಜಗತಿಯ ಮೇಲೆ ಕಟ್ಟಲಾಗಿದೆ. ಇದಕ್ಕೆ ಉತ್ತರ ಮತ್ತು ದಕ್ಷಿಣದ ಗೋಡೆಗಳಲ್ಲಿ ಕಮಾನುಳ್ಳ ಎರಡು ದ್ವಾರಗಳಿವೆ. ಆಳ ಗೂಡುಗಳುಳ್ಳ ಕಮಾನುಗಳಿಗೆ ಆಯತಾಕಾರದ ಬಾಗಿಲಿಗೆ ಚೌಕಟ್ಟಿದೆ. ಅದರ ಮೇಲೆ ಗೋಡೆಯಿಂದ ಮುಚ್ಚಿದ ಕಮಾನದೆ. ನಡುವೆ ಕಿಡಕಿಯಿದೆ. ಈ ಕಮಾನುಗಳು ಶಿಲಾಕಟ್ಟೆಯ ಮೇಲಿನ ಅರೆಗಂಬಗಳ ಮೇಲಿವೆ. ಇನ್ನೆರಡು ಗೋಡೆಗಳಲ್ಲಿ ಕಮಾನುಗಳನ್ನು ತೋರಿಸಲಾಗಿದೆ. ಒಳಗಡೆಗೆ ನಡುವೆ ಕಮಲ್ ಮುಜರ್ರರ್ ಗೋರಿಯಿದೆ. ಒಳಗಡೆಗೆ ನಾಲ್ಕು ಗೋಡೆಗಳಲ್ಲಿ ಎತ್ತರದ ಕಮಾನುಗಳ ತುದಿಗಳಿಗೆ ಸಮಾನವಾಗಿ ಮೂಲೆಗಳುಳ್ಳ ಕಮಾನುಗಳಿವೆ. ಹೀಗಾಗಿ ಇವು ಎಂಟು ಮುಖಗಳುಳ್ಳ ಕಮಾನುಗಳ ತುದಿಗಳಿಗೆ ಸಮಾನವಾಗಿ ಗೊಮ್ಮಟವನ್ನು ಇರಿಸಲಾಗಿದೆ. ಗೋಡೆ ಮತ್ತು ಗೊಮ್ಮಟಗಳಿಗೆ ಸುಣ್ಣವನ್ನು ಲೇಪಿಸಲಾಗಿದೆ. ಇದರಲ್ಲೂ ಇಳಿಜಾರಾದ ಗೋಡೆಗಳಿಗೆ ಚಪ್ಪಟೆ ಗೊಮ್ಮಟದ ಲಕ್ಷಣಗಳಿವೆ. ಇದರ ಮಾಳಿಗೆ ಅಂಚಿನ ಗೋಡೆಯನ್ನು ಜೋರ್ಣೋದ್ಧಾರಗೊಳಿಸಲಾಗಿದೆ. ಹೀಗಾಗಿ ಅದರ ತೆನೆಗಳು ಕಾಣುವುದಿಲ್ಲ.

ಮೌಲಾನಾ ಷಾಹ ಖಾದರ ರಹಿಮತುಲ್ಲಾ ದರ್ಗಾ

ಈ ದರ್ಗಾವು ನಗರ ಬದಿಯ ಸುಲ್ತಾಪುರದಲ್ಲಿದೆ. ತಳಪಾಯವು ಚೌಕಾಕಾರವಾಗಿದೆ. ಒಳಗಡೆ ಮೌಲಾನ ಷಾಹ ಖಾದರ ರಹೆಮತುಲ್ಲಾನ ಗೋರಿಯಿದೆ. ಹೊರಗಡೆಯೂ ಕೆಲವು ಗೋರಿಗಳಿವೆ. (ಕ್ರಿ.ಶ. 14 ನೆಯ ಶತಮಾನ)

ಸಿದ್ದಿ ಅಂಬರ್ ದರ್ಗಾ

ನಗರದ ಹಜರತ್ ಖ್ವಾಜಾ ಬಂದೇ ನವಾಜ್ ದರ್ಗಾದ ಹಿಂದುಗಡೆ ಸಿದ್ದಿ ಅಂಬರ್ ದರ್ಗಾಯಿದೆ. ಚೌಕಾಕಾರದಲ್ಲಿರುವ ಈ ದರ್ಗಾಕ್ಕೆ ದಕ್ಷಿಣದಲ್ಲಿ ಕಮಾನುಳ್ಳ ಪ್ರವೇಶದ್ವಾರವಿದೆ. ಈ ಕಮಾನಿನ ಮೇಲೆ ತೋರಣದ ಅಲಂಕಾರವನ್ನು ಗಾರೆಯಿಂದ ನಿರ್ಮಿಸಲಾಗಿದೆ. ದಕ್ಷಿಣದ ಕಮಾನುದ್ವಾರದ ಫಲಕಗಳಲ್ಲಿ ಸರಳ ಶಾಖೆಗಳಿವೆ. ಅದರ ಮೇಲೆ ಶಕೀರ್ ಅಂಬರ್ ಕ್ಯಾಲಿಗ್ರಾಫಿ ಬರವಣಿಗೆಯಿದೆ. ದ್ವಾರದ ದಕ್ಷಿಣದ ಗೋಡೆಗೆ ಒಂದೇ ಎತ್ತರದ ಎರಡು ಕಮಾನುಗಳಿವೆ. ಅವುಗಳ ಮೇಲೆ ಹೆಚ್ಚು ಅಲಂಕರಣಗಳಿವೆ. ಈ ದರ್ಗಾದ ಒಳಗಡೆ ಸಿದ್ದಿ ಅಂಬರ್ ಮತ್ತು ಅವರ ಕುಟುಂಬದ ನಾಲ್ಕು ಗೋರಿಗಳನ್ನು ಉತ್ತರ–

ದಕ್ಷಿಣವಾಗಿ ಕಟ್ಟಲಾಗಿದೆ. ತಲಾ ಒಂದು ಗೋಡೆಯ ಬದಿಯಲ್ಲಿ ಕಮಾನುಗಳಿವೆ. ತಲಾ ಒಂದು ಬದಿಗಿನ ಗೋಡೆಗಳಲ್ಲಿ ಒಂದೇ ಎತ್ತರದ ಅಲಂಕೃತ ಕಮಾನುಗಳಿವೆ. ಈ ಗೋಡೆಗಳ ಮಾಳಿಗೆಯ ಪ್ಯಾರಾಪೆಟ್ ಮೇಲೆ ಕಮಾನನಾಕಾರದ ತೆನೆಗಳು ಮತ್ತು ಮೂಲೆಗಳ ಮೇಲೆ ಅಲಂಕೃತ ಮಿನಾರೆಟ್ಸ್‌ಗಳಿವೆ. ಇದರಿಂದ ಉಂಟಾದ ಅಷ್ಟಪಟ್ಟಿಕೆಯ ಮೇಲೆ ವೃತ್ತಗೋಡೆಯನ್ನು ಏರಿಸಿ, ಅದರ ಮೇಲ್ಗಡೆ ಗೊಮ್ಮಟವನ್ನು ನಿರ್ಮಿಸಲಾಗಿದೆ. ಈ ದರ್ಗಾದ ಮುಂದುಗಡೆಗೆ ಕೆಲವು ಮಹಿಳೆಯರ, ಜನರ ಮತ್ತು ಮಕ್ಕಳ ಗೋರಿಗಳಿವೆ.

ಖುಂಜಮಾಸಬೀ ದರ್ಗಾ (ಮಹಿಳಾ ದರ್ಗಾ) :

ನಗರ ಸಮೀಪದ ಕಪನೂರಿನಲ್ಲಿ ಖುಂಜಮಾಸಬಿಯೆಂಬ ಮಹಿಳೆಯ ದರ್ಗಾವಿದೆ. ವಿಶೇಷವೆಂದರೆ ನಾಯಿಯಿಂದ ಕಡಿಸಿಕೊಂಡವರು ಅಲ್ಲಿಯ ಬಾದಾಮಿ ನೀರನ್ನು ಮೂರು ಬಾರಿ ಕುಡಿದರೆ, ಅವರು ಗುಣಮುಕ್ತರಾಗುವಂತೆ ನಂಬಿಕೆ. ಆಚರಣೆ ಇಂದಿಗೂ ಉಳಿದಿದೆ. ಈದರ್ಗಾದ ಒಳಗಡೆಗೆ ಹೆಂಗಸರ ಸಮಾಧಿಗಳಿವೆ. ಈ ದರ್ಗಾದ ದಕ್ಷಿಣಕ್ಕೆ ಕೆಲವು ಗೋರಿಗಳಿವೆ. ಈ ಸ್ಮಾರಕವು ಚೌಕಾಗಿದ್ದು (15 ಚ.ಮೀ.) ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಅದರ ಒಳಗಡೆ ಹಜರತ್ ಬೀಬೀಕಮಲ ಸುಲ್ತಾನ ಖುಂಜಮಾಸ ಮತ್ತು ಅವಳ ಮಗ ಸೈಯದ್ ಖ್ವಾಜ ಕರೀಮುಲ್ಲಾ ಹುಸ್ಸೇನಯ ಗೋರಿಗಳಿವೆ. ಬೀಬಿ ಕಮಲ ಗೋರಿಯು ಎತ್ತರವಾಗಿದೆ. ಮಜಾರ ಮೇಲ್ಭಾಗ ಸಮತಟ್ಟಾಗಿದೆ. ಈಕೆಯ ಸುಲ್ತಾನ ಮಹಮ್ಮದ್ ಬಹಮನಿಯ ಮಗಳು ಹಾಗೂ ಮಹಾರಾಷ್ಟ್ರದ ಮೀರಜನ ಸಲ್ಮಾನ ಹುಸ್ಸೇನಯ ಹೆಂಡತಿ. ಈಕೆ ಕ್ರಿ.ಶ. 1414ರಲ್ಲಿ ಮಡಿದಳು. ಈಕೆಯ ಮಗನ ಗೋರಿಯ ಮೇಲ್ಭಾಗ ಕಮಾನಿನಂತಿದೆ. ಈ ದರ್ಗಾಕ್ಕೆ ಮೂರು ಕಮಾನುಗಳುಳ್ಳ ದ್ವಾರಗಳಿವೆ. ಈ ಕಮಾನುಗಳ ಮೇನೆ ಜಲ್ಲಿಗಳನ್ನು ಕೂಡಿಸಲಾಗಿದೆ. ನಾಲ್ಕು ಗೋಡೆಗಳಲ್ಲಿ ನಾಲ್ಕು ಮೂಲೆಗಳಲ್ಲೂ ನಾಲ್ಕು ಕಮಾನುಗಳಿವೆ. ಒಟ್ಟಾರೆ ಇಲ್ಲೂ ಎಂಟು ಮುಖಗಳಿವೆ. ಅಷ್ಟ ಪಟ್ಟಿಯ ಮೇಲೆ ಗೋಡೆ ಅದರ ಮೇಲ್ಗಡೆ ಗೊಮ್ಮಟವನ್ನು ಏರಿಸಲಾಗಿದೆ. ಗೊಮ್ಮಟದ ಮೇಲೆ ಕಳಸವಿದೆ. ಪ್ಯಾರಾಪೆಟ್‌ನಲ್ಲಿ ಕಮಾನು ತೆನೆಗಳು, ಮೂಲೆಗಳಲ್ಲಿ ಮಿನಾರೆಟ್ಸ್‌ಗಳಿವೆ. ಹೊರ ಸುತ್ತಲಿನ ಭಾಗವು ಪ್ರದಕ್ಷಿಣಾ ಪಥವನ್ನು ನೆನಪಿಸುತ್ತದೆ.

ಸುಲ್ತಾನರ ಸ್ಮಾರಕಗಳು

ಬೋಡ್ಕೆ ಗೋರಿ ಗುಮ್ಮಜ್ : ಆಳಂದ ರಸ್ತೆಯಲ್ಲಿ ಷಾಹಬಜಾರ್ ನಾಕಾದ ಸಮೀಪದಲ್ಲಿ ಭವ್ಯವಾದ ಎತ್ತರದ ಬೋಡ್ಕೆ ಗುಮ್ಮಜ್‌ಯಿದೆ. ಇದನ್ನು ಎತ್ತರದ ಜಗತಿಯ ಮೇಲೆ ಕಟ್ಟಲಾಗಿದ್ದು,

ಮೂರು ಕಮಾನಿನಾಕಾರದ ದ್ವಾರಗಳಿವೆ. ಒಳಗಡೆಗೆ ಮಧ್ಯದಲ್ಲಿ ಆಯತಾಕಾರದ ಜಗತಿಯ ಮೇಲೆ ಒಂದು ಗೋರಿಯಿದೆ. ಕೋಣೆಯ ಹೊರ ಮತ್ತು ಒಳ ಗೋಡೆಗಳ ಮೇಲೂ ಒಂದೇ ರೀತಿಯ ಮತ್ತು ಎತ್ತರದ ಕಮಾನುಗಳಿವೆ. ಇಲ್ಲಿಯೂ ಅಷ್ಟಪಟ್ಟಿಕೆಯ ಕಮಾನುಗಳ ಕೋಣೆಯ ಹೊರ ಮತ್ತು ಒಳ ಗೋಡೆಗಳ ಮೇಲೂ ಒಂದೇ ರೀತಿಯ ಮತ್ತು ಎತ್ತರದ ಕಮಾನುಗಳಿವೆ. ಇಲ್ಲಿಯೂ ಅಷ್ಟಪಟ್ಟಿಕೆಯ ಕಮಾನುಗಳ ಮೇಲೆ ಎತ್ತರದ ವೃತ್ತಾಕಾರದ ಗೋಡೆಯನ್ನು ಕಟ್ಟಲಾಗಿದೆ. ಮೇಲ್ಗಡೆ ಗೊಮ್ಮಟವನ್ನು ಕಟ್ಟಿಲ್ಲದಿರುವುದು ವಿಶೇವಾಗಿದೆ. ಹೀಗಾಗಿ ಈ ಭವ್ಯ ಸ್ಮಾರಕವನ್ನು ಗೊಮ್ಮಟವಿಲ್ಲದ ಸ್ಮಾರಕ ಅಂದರೆ ಬೋಡ್ಕೆ ಗುಮ್ಮಜ್ ಎನ್ನುವರು. (ಕ್ರಿ.ಶ. 14ನೆಯ ಶತಮಾನ). ಈ ಕಮಾನುಗಳ ಮೇಲೆ ಸ್ಕಿಂಚಸ್‌ಗಳಲ್ಲಿ ಉಬ್ಬಿದ ಸಣ್ಣ ಪಟ್ಟಿಗಳನ್ನು ಇಡಲಾಗಿದೆ. ಬಹುಶಃ ಇದೊಂದು ಮಹತ್ವದ ವ್ಯಕ್ತಿ ಸುಲ್ತಾನ ಸಮಾಧಿಯುಳ್ಳ ಸ್ಮಾರಕವಾಗಿದೆ.

ಗೋರಿ ಕಟ್ಟಡಗಳು : ಗುಲ್ಬರ್ಗಾದಲ್ಲಿ ಆರಂಭಿಕ ಎಲ್ಲ ಸುಲ್ತಾನರ ಸ್ಮಾರಕ ಕಟ್ಟಡಗಳು ಭವ್ಯವಾಗಿವೆ. ಪರಿವರ್ತನೆಯ ಹಂತಗಳೂ ಇವೆ. ಅನೇಕ ಸುಲ್ತಾನರ ಸ್ಮಾರಕ ಗೋರಿಗಳ ಹಜರತ್ ಬಂದೇ ನವಾಜ್ ದರ್ಗಾದ ದಕ್ಷಿಣಕ್ಕಿದೆ. ಕಿಟಕಿಯನ್ನು ಪ್ರವೇಶ (ದಕ್ಷಿಣ) ದ್ವಾರದ ಮೇಲೆ ಕಟ್ಟಲಾಗಿದೆ. ಫಿರೋಜ್ ಷಾಹ ಬಹಮನಿಯ ಗೋರಿಗಳನ್ನು ಜೋಡಿಸುವ ಕಮಾನು ದಾರಿಗಳಿವೆ.

ಗುಲ್ಬರ್ಗಾದ ಒಂದು ಸ್ಮಾರಕ ಕಟ್ಟಡಕ್ಕೆ ಮಾತ್ರ ಗೊಮ್ಮಟವಿರುವುದಿಲ್ಲ. ಇಂತಹ ಕೆಲವು ಸ್ಮಾರಕಗಳು ಬಿಜಾಪುರದಲ್ಲಿಯೂ ಇವೆ. ಇವು ಸುಮಾರು ಕ್ರಿ.ಶ.16ರಿಂದ 17ನೆಯ ಶತಮಾನದ್ದಾಗಿದೆ. ಫಿರೋಜ್‌ಷಹನ ಗೋರಿಯ ಮುಖ್ಯದ್ವಾರದ ಬದಿಗೆ ಶಿಲಾ ಅರೆಗಂಬಗಳನ್ನು ಅಳವಡಿಸಲಾಗಿದೆ. ಅದರ ಗೋಡೆಗಳಲ್ಲಿ ತೆರೆದ ಕಮಾನುಗಳಿವೆ. ಅಲ್ಲಿ ಶಿಲಾ ಪರದೆಯನ್ನು ಹೊಂದಿಸಲಾಗಿದೆ. ಇಂತಹದು ಬೀದರನ ಮಹಮ್ಮದ ಗವಾನನ ಮದರಸಾದಲ್ಲಿದೆ.

ಅನೇಕ ಗೋರಿ ಸ್ಮಾರಕ ಕಟ್ಟಡಗಳಿಗೆ ಗಾರೆಯನ್ನು ಬಳಸಲಾಗಿದೆ. ಈ ಗೋರಿಯ ದಕ್ಷಿಣ ಮತ್ತು ಮಧ್ಯದ ಪ್ರವೇಶದ್ವಾರಗಳ ಕಮಾನುಗಳ ಮೇಲೆ ಗಾರೆಯ ಅಲಂಕರಣವಿದೆ. ಇಲ್ಲಿಯ ಅನೇಕ ಗೋರಿ ಸ್ಮಾರಕಗಳ ದ್ವಾರಗಳಿಗೆ ಇಟ್ಟಿಗೆಯನ್ನು ಬಳಸಲಾಗಿದೆ. ಇಮ್ಮಡಿ ಅಹಮ್ಮದ್ ಷಾಹ ಬಹಮನಿಯ ಗೋರಿ ಸ್ಮಾರಕಕ್ಕೆ ಒಂದು ಮಿಹರಬ್‌ಯಿದೆ. ಇದಕ್ಕೆರಡು ಹಿಂಚಾಚು ಮುಂಚಾಚುಳ್ಳ ಕಮಾನದೆ.

ಅಲ್ಲಾವುದ್ದೀನ್ ಹಸನ್‌ಗಂಗೂ ಬಹಮನಿಯ ಗೋರಿ ಗೊಮ್ಮಟ : ಹಸನ್‌ಗಂಗೂ 1358ರಲ್ಲಿ ಮಡಿಯುಬ ಪೂರ್ವದಲ್ಲಿ ತಯಾರಿಸಿದ ಈ ಗೊಮ್ಮಟದಲ್ಲೇ ಆತನನ್ನು ಹೂಳಲಾಗಿದೆ. ಈ ಸ್ಮಾರಕವು ಕೋಟೆಯ ದಕ್ಷಿಣ ದ್ವಾರಕ ಸಮೀಪ ಮತ್ತು ಇಲ್ಲಿಯ ಷಾಹಬಜಾರ್‌ನಲ್ಲಿದೆ. ಬಹಮನ ಸಾಮ್ರಾಜ್ಯದ ಮೊದಲ ಸುಲ್ತಾನ ಅಲ್ಲಾವುದ್ದೀನ್ ಹಸನ್ ಗಂಗುನ ಸ್ಮಾರಕವಿದಾಗಿದೆ. ಚೌಕಾಕಾರದ ದೊಡ್ಡ ಕೋಣೆಯನ್ನು ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಇದಕ್ಕೆ ಮೂರು ಕಡೆಗಳಲ್ಲಿಯ ಗೋಡೆಗಳಲ್ಲಿ ತೆರೆದ ಕಮಾನುಗಳುಳ್ಳ ಪ್ರವೇಶ ದ್ವಾರಗಳಿವೆ. ಪಶ್ಚಿಮ ಗೋಡೆಯಲ್ಲಿ ಮಾತ್ರ ಪ್ರವೇಶದ್ವಾರವಿಲ್ಲ. ಆದರೆ ಅದೇ ನಮೂನೆಯ ಅಷ್ಟೇ ಎತ್ತರದ ಕಮಾನದೆ. ಅರೆಗಂಬಗಳಲ್ಲಿ ಒಂದರ ಮೇಲೆ ಒಂದು ಕುಂಬಗಳಿವೆ. ದಪ್ಪ ಎತ್ತರದ ಗೋಡೆಗಳು ಮೇಲಿನಿಂದ ಕೆಳಕ್ಕೆ ಇಳಿಜಾರಾಗಿ ಕಟ್ಟಲ್ಪಟ್ಟಿವೆ. ಇದು ಈ ಕಾಲದ ವಿಶಿಷ್ಟ ಲಕ್ಷಣವೂ ಹೌದು. ಈ ಗೋಡೆಗಳು ಸುಮಾರು 6 ಮೀಟರ್ ಎತ್ತರದಲ್ಲಿವೆ. ಒಳಗಿನ ಗೋಡೆಗಳ ಕಮಾನುಗಳ ಮೇಲೆ ನಡುವೆ ಸ್ಪ್ರಂಚಸ್ ಇರುವುದು ಕೂಡ ಸಾಮಾನ್ಯ ಲಕ್ಷಣ. ಈ ಕಮಾನುಗಳ ಮೇಲ್ಭಾಗದಲ್ಲಿ ಅಷ್ಟಮುಖ ಪಟ್ಟಿಕೆಯ ಮೇಲೆ ಎತ್ತರವಾದ ಚಪ್ಪಟೆಯಾಕಾರಾದ ಗೊಮ್ಮಟವಿದೆ. ಮೂಲೆಗಳಲ್ಲಿ ಕಳಸಗಳಿವೆ. ಗೋಡೆಗಳ ಮೇಲೆ ನೀಲಿ ಹಂಚುಗಳ ಪಟ್ಟಿಕೆಯನ್ನು ಕೂಡಿಸಲಾಗಿದೆ.

ಈ ಸ್ಮಾರಕದ ಒಳಗಡೆಗೆ ಮಧ್ಯದಲ್ಲಿ ಕ್ರಿ.ಶ.1357ರಲ್ಲಿ ಮಡಿದ ಹಸನ್‌ಗಂಗೂ ಮತ್ತು ಕ್ರಿ.ಶ.1361ರಲ್ಲಿ ಮಡಿದ ಆತನ ರಾಣಿ ಬೇಗಂ ಮಾಲಿಕ್‌ಜಹಾನ್‌ರ ಶಿಲೆಯ ಬೃಹತ್ ಗೋರಿಗಳಿವೆ. ಹಸನ್‌ನ ಗೋರಿಯ ಮೇಲ್ಭಾಗ ಕಮಾನನಾಕಾರದ್ದಾಗಿದ್ದರೆ ಆತನ ರಾಣಿಯ ಗೋರಿಯು ಮೇಲ್ಭಾಗದಲ್ಲಿ ಸಮತಟ್ಟಾಗಿದೆ. ಇದು ಮುಸ್ಲಿಮರ ಗಂಡು-ಹೆಂಗಸರ ಗೋರಿಗಳ ಸಾಮಾನ್ಯ ಲಕ್ಷಣಗಳಾಗಿವೆ.

ಪ್ಯಾರಾಪೆಟ್‌ನ ಮೇಲೆ ಕಮಾನನಾಕಾರದ ತೆನೆಗಳು ಮೂಲೆಗಳಲ್ಲಿ ಮಿನರೆಟ್ಸ್‌ಗಳಿವೆ. ಇದರ ಲಕ್ಷಣಗಳು ದೆಹಲಿಯ ತುಘಲಕ್‌ನ ಸ್ಮಾರಕದಂತಿದೆ.

ಮೊದಲ ಮಹಮ್ಮದ್ ಷಾಹನ ಗೊಮ್ಮಟ : ಈ ಗೋರಿ ಸ್ಮಾರಕವು ನಗರದ ಷಾಹಬಜಾರಿನಲ್ಲಿ ಪಾನ್‌ಬಜಾರ್‌ನ ಸಮೀಪದಲ್ಲಿದೆ. ಚೌಕಾದ ದೊಡ್ಡ ವಿಶಾಲವಾದ ಕೋಣೆಯನ್ನು ಎತ್ತರದ ಚೌಕಾದ ಜಗತಿಯ ಮೇಲೆ ಕಟ್ಟಲಾಗಿದೆ. ಇಲ್ಲೂ ಅದರ ಮೇಲೆ ಮೂರು ಕಡೆಗಳಲ್ಲಿ ಸರಳ ಇಳಿಜಾರು ಗೋಡೆಗಳಿವೆ. ಅಲ್ಲಿ ಪ್ರವೇಶಕ್ಕೆ ಭವ್ಯವಾದ ತೆರೆದ ಕಮಾನುಗಳಿವೆ. ಪಶ್ಚಿಮ ಗೋಡೆ ಇಲ್ಲಿಯೂ ಮುಚ್ಚಿದೆ. ಒಳಗಿನ ಗೋಡೆಗಳ ಕಮಾನುಗಳನ್ನು ಮೇಲೆ ಏರಿಸಿ ಚಪ್ಪಟೆ ಗೊಮ್ಮಟವನ್ನು ಕಟ್ಟಲಾಗಿದೆ. ಮೂಲೆಗಳಲ್ಲಿ ಒಳಗಡೆ ಬಹಮನ ಸುಲ್ತಾನ್ ಮೊದಲನೆಯ ಮಹಮ್ಮದನ ಗೋರಿಯಿದೆ. (1375)

ಮುಜಾಯಿದಷಾಹ ಗೋರಿ ಗುಮ್ಮಟ : ಬಂದೇ ನವಾಜ್ ದರ್ಗಾದ ಪೂರ್ವಕ್ಕೆ ಮತ್ತು ಈ ನಗರದ ಹಾತಗುಮ್ಮಜ್‌ಗಳ ಪಶ್ಚಿಮದ ಮೊದಲನೇ ಗುಮ್ಮಜ್ ತದನಂತರವು ಬಹಮನಿ ಸುಲ್ತಾನ ಮುಜಾಯಿದ್ ಷಾಹನ ಗೋರಿ ಸ್ಮಾರಕವಾಗಿದೆ. (1375–1378). ಇದರ ಕಟ್ಟಡವು ಅಳತೆ ಮತ್ತು ನಮೂನೆಯಲ್ಲಿ ಮೊದಲಿನ ಸ್ಮಾರಕಗಳಿಗಿಂತ ಸ್ವಲ್ಪ ಬದಲಾವಣೆಯನ್ನು ಹೊಂದಿದೆ. ಪೂರ್ವ–ಪಶ್ಚಿಮವಾಗಿ ಏಕಸಾಲಿನಲ್ಲಿ ಏಳು ಗುಂಬಜ್‌ಗಳಿವೆ. ಐದು ಗುಂಬಜ್‌ಗಳು ದೊಡ್ಡ ಎತ್ತರದ 25 ಅಡಿ ಉದ್ದವಾದ ಜಗತಿಯ ಮೇಲೆ ಕಟ್ಟಿದರೆ, ಉಳಿದೆರಡು ಸಮಾಂತರವಾಗಿ ಬದಿಗೆ ಕಟ್ಟಲಾಗಿದೆ. ಅಲ್ಲಿಯ ಗೊಮ್ಮಟಗಳಲ್ಲಿಯೇ ಇದು ಅತ್ಯಂತ ದೊಡ್ಡದು. ಈ ಗೋರಿ ಸ್ಮಾರಕದ ಒಳಗಡೆ ಐದು ಗೋರಿಗಳಿದ್ದು, ಎರಡು ಮಾತ್ರ ದೊಡ್ಡದಾಗಿವೆ. ಮೂರು ಮಾತ್ರ ಒಂದೇ ನಮೂನೆಯಲ್ಲಿದ್ದರೆ ಇನ್ನೊಂದು ಚಿಕ್ಕದಾಗಿದೆ. ಮೂರು ಗೋರಿಗಳ ಮೇಲ್ಭಾಗ ಕಮಾನನಾಕಾರವಿದ್ದರೆ, ಇನ್ನತರ ಎರಡು ಗೋರಿಗಳ ಮೇಲ್ಭಾಗವು ಸಮತಟ್ಟಾಗಿದೆ. ಹೀಗಾಗಿ ಕಮಾನುಳ್ಳವು ಸುಲ್ತಾನರ, ಸಮತಟ್ಟುಳ್ಳವು ರಾಣಿಯರ ಗೋರಿಗಳೆಮದು ಗುರ್ತಿಸಬಹುದು. ದೊಡ್ಡ ಎರಡು ಗೋರಿಗಳು ಬಹಮನ ಸುಲ್ತಾನ ಮುಜಾಯಿದ್‌ನ ಮತ್ತು ಆತನ ಮಾವ ಇಸ್ಮಾಯಿಲ್ ಮಗನದ್ದಾಗಿವೆ. ಚಿಕ್ಕ ಗೋರಿ ಸುಲ್ತಾನನ ಮಗನದ್ದು. ಬದಿಗಿನ ಉಳಿದೆರಡು ಸುಲ್ತಾನನ ರಾಣಿ ಮತ್ತು ಸಹೋದರಿಯರದ್ದಾಗಿದೆ.

ಈ ಸ್ಮಾರಕವೂ ಚೌಕಾಕಾರ ಮತ್ತು ಗೋಡೆಗಳಲ್ಲಿ ಮೂರು ಕಮಾನುಳ್ಳ ಪ್ರವೇಶದ್ವಾರಗಳನ್ನು ಹೊಂದಿದೆ. ವಿಶೇಷವೆಂದರೆ ಒಳಗಡೆ ನಡುವಿನ ಗೋಡೆಯಲ್ಲಿ ದ್ವಾರವಿದೆ. ಉತ್ತರ ಕಮಾನನ ಕೆಳಗಡೆ ದ್ವಾರದ ಬಾಗಿಲನ್ನು ಕೂಡಿಸಲಾಗಿದೆ. ಉಳಿದೆರಡು ದ್ವಾರಗಳ ಕಮಾನುಗಳಿಗೆ ಗೋಡೆಗಳ ಮೇಲೆ ಗ್ರಿಲ್‌ಗಳನ್ನು ಕೂಡಿಸಲಾಗಿದೆ. ಈ ಗೋಡೆಗಳಲ್ಲಿ ಆಯತಾಕಾರದ ಗೂಡುಗಳಿವೆ. ಒಳಗಡೆ ಮಶ್ಚಿಮ ಗೋಡೆಯ ಕಮಾನಿನ ಸುತ್ತಲೂ ವೃತ್ತಪಟ್ಟಿಕೆಗಳ ಅಲಂಕಾರವಿದೆ. ಇಲ್ಲಿಯೂ ಒಳಗೋಡೆಗಳಲ್ಲಿ ಅಷ್ಟ ಕಮಾನುಗಳ ಮೇಲೆ ಗುಮ್ಮಟವನ್ನು ಕಟ್ಟಲಾಗಿದೆ. ಗಾರೆಯ ಈ ವೃತ್ತಫಲಕಗಳು ಎಲ್ಲ ಒಳಗಿನ ಎಂಟು ಮತ್ತು ಹೊರಗಿನ ನಾಲ್ಕು ಕಮಾನುಗಳ ಮೇಲೆ ಬದಿಯಲ್ಲಿ ಚಿತ್ರಿಸಲಾಗಿದೆ. ಗುಮ್ಮಟದ ಬುಡದಲ್ಲಿ ಶಿಲೆಯ ಅಲಂಕೃತ ಪಟ್ಟಿಕೆಯಿದ್ದರೆ, ಉಳಿದ ಭಾಗದಲ್ಲಿ ಗಾರೆಯ ಹೊದಿಕೆಯಿದೆ.

ಗೋರೆಗಳಲ್ಲಿ ಪ್ರಮುಖವಾಗಿ ಎರಡು ಆಯತಾಕಾರದಲ್ಲಿವೆ. ಶಿಲೆಯ ಆಯತಾಕಾರದ ಎತ್ತರ ಪಟ್ಟಿಕೆಯ ಮೇಲ್ಭಾಗ ಕಮಾನನಾಕಾರದಲ್ಲಿ ನಿರ್ಮಿಸಲಾಗಿದೆ. ನಡುವಿನ ಭಾಗದಲ್ಲಿ ಗೂಡುಗಳ ಅಥವಾ ರೇಖಾ ಅಥವಾ ಗಾರೆ ಕೆಲಸದ ಹೂಬಳ್ಳಿಗಳಿಂದ ಅಲಂಕರಣವಿದೆ. ಎಲ್ಲಾ ಗೋಡೆಗಳ ಉತ್ತರ ಮುಖಗಳಲ್ಲಿ

ಕಿರು ಗೂಡುಗಳಿವೆ. ಇದೇ ರೀತಿ ಇನ್ನುಳಿದ ಗೋರಿಗಳಿವೆ. ಬಲಗಡೆಯ ಗೋರಿಗಳು ಚಿಕ್ಕದಾಗಿದೆ. ಕಮಾನುಗೋರಿಗಳ ಮೇಲೆ ಉತ್ತರ ಮುಖದಲ್ಲಿ ಕಿರುದಾದ ಗೂಡು ತಲಾ ಒಂದಕ್ಕಿವೆ. ಪಶ್ಚಿಮ ಮತ್ತು ಪೂರ್ವದ ಬದಿಗಳಲ್ಲಿರುವ ಗೋರಿಗಳು ಭಿನ್ನವಾಗಿವೆ. ಅವುಗಳು ಆಯತಾಕಾರದಲ್ಲಿವೆ. ಮೇಲ್ಭಾಗ ಚಪ್ಪಟೆಯಾಗಿವೆ (ಸ್ತ್ರೀಯರ ಗೋರಿಗಳು). ಇದರಿಂದ ಈ ಗೋರಿಗಳು ಸುಲ್ತಾನ, ಆತನ ಮಗ, ಮಾವ ಮತ್ತು ಚಪ್ಪಟೆಯಾಕಾರದ ಗೋರಿಗಳು ಅವನ ರಾಣಿ ಮತ್ತು ಸಹೋದರಿಯಾಗದ್ದಾಗಿವೆ. ಹೊರಗೋಡೆಗಳು ಸರಳವಾಗಿವೆ ಮತ್ತು ಇಳಿಜಾರಾಗಿವೆ. ದಕ್ಷಿಣದ ಈ ಗೋರಿಯ ದಕ್ಷಿಣ ಗೋರಿಯಲ್ಲಿ ಎರಡು ಕಮಾನನಾಕಾರದ ಕಿರುಗೋಡೂಗಳಿವೆ. ಇಲ್ಲಿಯೂ ಪ್ಯಾರಾಪೆಟ್‌ನ ಮೇಲೆ ಕಮಾನನ ತೆನೆಗಳು ಮತ್ತು ಮೂಲೆಗಳಲ್ಲಿ ಮಿನಾರೆಟ್ಸ್‌ಗಳಿವೆ.

ದಾವೂದ್ ಷಾಹ ಗೋರಿ ಗೊಮ್ಮಟ : ಈ ಗೋರಿ ಸ್ಮಾರಕವು ಮುಜಾಹಿದ್‌ಷಾಹನ ಗೋರಿಯ ಪೂರ್ವಕ್ಕಿದೆ. ಇದೊಂದು ಉತ್ತರಾಭಿಮುಖವಾಗಿರುವ ಒಂದು ಜೋಡು ಗೊಮ್ಮಟವಾಗಿದೆ. ಜೋಡು ಗುಮ್ಮಟಗಳೆರಡು ಚೌಕಾದ

ಮೊದಲ ಸಂಸುದ್ದೀನ್‌ನ ಗೋರಿ ಗೊಮ್ಮಟ : ಈ ಗೋರಿ ಗುಮ್ಮದ್‌ಷಾಹ ದಾವುದ್‌ಷಾಹ ಮತ್ತು ಮುಜ್ರಾಹಿದ್‌ಷಾಹ ಗೋರಿಯಂತಿದೆ. ಆದರೆ ಈ ಗೋರಿ ಗುಮ್ಮದ್‌ನ್ನು ಹಾಫ್ತ ಗುಮ್ಮಜ್ ವೇದಿಕೆಯ ಕೆಳಗಡೆಗೆ ಕಟ್ಟಲಾಗಿದೆ. ಇದರ ಶಿಲಾಗೋಡೆಗಳಿಗೆ ಗಾರೆ ಲೇಪನವಿಲ್ಲ. ಆದರೆ ಗುಮ್ಮದ್‌ಗೆ ಇದೆ.

ಘಿಯಾಸುದ್ದೀನ್‌ನ ಗೋರಿ ಗುಮ್ಮಟ : ಇದು ಹಫ್ತ್ ಗುಂಬಜ್ ಸಂಕೀರ್ಣದಲ್ಲಿದೆ. ಹೆಸರಿಲ್ಲದ ಗೋರಿ ಗುಮ್ಮದ್‌ದ ಪಶ್ಚಿಮಕ್ಕಿದೆ (14ನೆಯ ಶತಮಾನ). ಚೌಕಾಕಾರದ ಗೋಡೆಗಳುಳ್ಳ ಈ ಗೋರಿ ಗುಮ್ಮದ್‌ನ್ನು ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಇದಕ್ಕೆ ಮೂರು ದ್ವಾರಬಾಗಿಲುಗಳು ಮೂರು ಕಡೆಗೆ ಗೋಡೆಗಳಲ್ಲಿವೆ. ಇದರ ಒಳಗಡೆಗೆ ಸುಲ್ತಾನ ಘಿಯಾಸುದ್ದೀನ್‌ನ ಗಓರಿ ಇರುವುದು. ಈ ಗೋರಿಯ ಪೆಟ್ಟಿಗೆಯೂ ಸಹ ಏಕಶಿಲೆಯಲ್ಲಿ ನಿರ್ಮಿತವಾಗಿದೆ. ಎರಡೂ ಆಯತ ಪಟ್ಟಿಕೆಗಳ ಮೇಲಿನ ಭಾಗ ಕಮಾನನ ಮಾದರಿಯಲ್ಲಿದೆ.

ತಾಜುದ್ದೀನ್ ಫಿರೋಜ್‌ಷಾಹ ಬಹುಮನಿ ಗೋರಿ ಗೊಮ್ಮಟ : ಹಾಫ್ತ್‌ಗುಮ್ಮಜ್ ಸಂಕೀರ್ಣದಲ್ಲಿ ದಾವೂದ್ ಗೋರಿ ಮೊಮ್ಮಟ ಪೂರ್ವಕ್ಕೆ ಫಿರೋಜ್‌ಷಾಹ ಬಹುಮನಯ ಗೋರಿ ಗೊಮ್ಮಟವಿದೆ.

(1422). ಈ ಸ್ಮಾರಕ ನಂತರದ ಕಾಲದ್ದಾಗಿದೆ. ಇದರಲ್ಲಿ ಮೊಟ್ಟಮೊದಲ ಎರಡಂತಸ್ತಿನ ಹೊರಗೋಡೆಯನ್ನು ಕಾಣಬಹುದು. ಹೊರಗೋಡೆಗಳಲ್ಲಿ ಎರಡು ಸಾಲುಗಳುಳ್ಳ ಕಮಾನುಗಳಿವೆ. ಈ ಎರಡು ಸಾಲುಗಳ ನಡುವೆ ಸರಳ ಅಡ್ಡ ಪಟ್ಟಿಯಿದೆ. ಕೆಳ ಸಾಲಿನಲ್ಲಿ ತಲಾ ಒಂದು ಕೋಣೆಯ ಪ್ರವೇಶದ್ವರದ ಬದಿಗಳಲ್ಲಿ ಎರಡೆರಡು ಕಮಾನುಗಳಿವೆ. ತಲಾ ಒಂದಕ್ಕೆ ಪ್ರವೇಶದ್ವಾರದ ಬದಿಯಲ್ಲಿ ಕಿಜು ಕಿಂಡಿಗಳಿವೆ. ಮೇಲಿನ ಸಾಲಿನಲ್ಲೂ ಒಂದೊಂದು ಕೋಣೆಯ ಒಂದೊಂದು ಮುಖದಲ್ಲಿ ಕಮಾನುಗಳಿವೆ. ನಡುವಿನ ಕಮಾನಿನ ಬುಡಪಟ್ಟಿಗೆ ಮಾತ್ರ ಮುಂಚಾಚಿದ ಕಪೋತವಿದೆ. ಈ ಬುಡಪಟ್ಟಿಯು ಸ್ವಲ್ಪ ಎತ್ತರದಲ್ಲಿದ್ದುದರಿಂದ ಇದರ ಮೇಲಿನ ಭಾಗವೂ ಬದಿಗಿನ ಕಮಾನುಗಳಿಗೆ ಕಮಾನಿನಾಕಾರದ ಶಿಲಾ ಜಾಲಿ (ಕಿಡಕಿ)ಗಳನ್ನು ಕೂಡಿಸಿರುವುದು ಗಮನೀಯ. ಇದು ಡೆಕ್ಕನನ್ನಲ್ಲಿ ಸಾಮಾನ್ಯ. ಈ ಮೇಲಿನ ಕಮಾನುಗಳ ಮೇಲೆ ಅಡ್ಡಲಾಗಿ ಸುತ್ತಲೂ ಏಕ ಪಟ್ಟಿಕೆಯಲ್ಲಿ ಸಮಾನಾಂತರವಾಗಿ ವಕ್ರ ನಳಿಕೆಗಳಿವೆ. ಮಾಳಿಗೆ ನೀರನ್ನು ಈ ನಳಿಕೆಗಳ ಮೂಲಕ ಹೊರ ಹಾಕಲು ನಿರ್ಮಿಸಿರಬೇಕು. ಈ ಎಲ್ಲ ಕಮಾನುಗಳನ್ನು ಎತ್ತರದ ಅರೆಗಂಬಗಳು ಎತ್ತಿ ಹಿಡಿದಿವೆ. ಹಾಗೂ ಇವುಗಳಿಗೆ ಎರಡು ಹಿಂಚಾಚು ಮುಂಚಾಚು ಬುಡದಿಂದ ತುದಿಯವರೆಗಿವೆ. ಆದರೆ ನಡುವಿನ ದ್ವಾರದ ಕಮಾನುಗಳಿಗೆ ಶಿಲಾ ಅರೆಗಂಬಗಳಿರುವುದು ವಿಶೇಷವಾಗಿದೆ. ಈ ಕಮಾನುಗಳ ತುದಿಗಳು ಚೂಪಾಗಿವೆ. ಈ ದ್ವಾರದ ಕಮಾನುಗಳ ಬದಿಗಳಲ್ಲಿ ಅಲಂಕೃತ ತೋರಣಗಳಿವೆ. ಪಶ್ಚಿಮದ ಗೋಡೆಯ ಮಧ್ಯದ ಕಮಾನು ತೆರೆದಿದೆ. ಇಲ್ಲಿ ಬರವಣಿಗೆಯಿದೆ. ಇವುಗಳ ಕಮಾನುಗಳ ಹೊರ ಒಳ ಮುಖಗಳಲ್ಲಿ ಹೂಬಳ್ಳಿ ಮತ್ತು ರೇಖಾಚಿತ್ರಗಳ ಅಲಂಕರಣಗಳಿವೆ. ಮಾಳಿಗೆಯ ಸುತ್ತಲೂ ಅಂಚಿನಲ್ಲಿ

ಫಿರೋಜ್‌ಷಾಹ ಬಹುಮಿನಯ ಗೋರಿ ಗುಮ್ಮಟದಲ್ಲಿ ಮೊಟ್ಟಮೊದಲು ಎರಡು ಅಂತಸ್ತಿನ ಕಟ್ಟಡ ಮುಂಭಾಗದಲ್ಲಿ ಕಾಣುವುದು. ಇದನ್ನು ಅಲಂಕರಿಸಲು ಸಹಾಯವಾಗುವುದು. ಇದು ಬೀದರಿನ 15ನೆಯ ಶತಮಾನದ ಸ್ಮಾರಕಗಳಲ್ಲಿ ಸಾಮಾನ್ಯವಾಗಿದೆ.

ಗುಲ್ಬರ್ಗಾದ ಇನ್ನೆರಡು ಗೋರಿ ಸ್ಮಾರಕಗಳಲ್ಲಿ ಈ ಲಕ್ಷಣಗಳಿವೆ. ಅವು ಚೋರಗುಮ್ಮಜ್ ಮತ್ತು ಭಿಷ್ಮ ಸಾಧು ಹಜರತ್ ಗೀಸುದರಜ್ ಗೋರಿ ಸ್ಮಾರಕಗಳಾಗಿವೆ. ಬೀದರ್‌ನಲ್ಲಿ ಬಹುಮನಿಯರ ಗೋರಿಗಳನ್ನು ಚೌಕಾಕಾರದ ಗುಮ್ಮಟ ಕೋಣೆಗಳಲ್ಲಿ ಹುಗಿಯುವುದು ಮುಂದುವರೆಯಿತು.

ಗುಲಬರ್ಗಾದ ಜಾಮೀ ಮಸೀದಿ ಡೆಕ್ಕನ್ ಮಸೀದಿ ರಚನೆಯ ಇತಿಹಾಸದಲ್ಲಿ ಒಂದು ಪರಿತವರ್ತನೆಯ ಹಂತವೆನಿಸಿದೆ. ತಳಪಾಯವು ಅಪರೂಪದ್ದಾಗಿದೆ. ಮಸೀದಿಗೆ ಸಂಪೂರ್ಣ ಹೊದಿಕೆಯಿದೆ. ಅಂಗಳವಿಲ್ಲ, ಒಳ ಆವರಣಕ್ಕೆ ಹೆಚ್ಚು ಬೆಳಕು ಬೀಳುವುದಿಲ್ಲ. ಪರದೆ ಗೋಡೆಗಳಲ್ಲಿ ಸಣ್ಣ ಪ್ರಮಾಣದ ಕಮಾನು ಸಾಲು ಮುಂದಿವೆ. ಹೊರಗಿನಿಂದ ನೋಡಿದರೆ ಈ ಮಸೀದಿಗೆ ಕಮಾನು ಸಾಲು ಸುತ್ತುವರೆದಿದೆ ಎಂದು ಕಾಣುಸುವುದು.

ಒಳ ಆವರಣವು ಕುತೂಹಲದ್ದಾಗಿದೆ. ಅಗಲ ಕಮಾನುಳ್ಳ ಒಂದು ಕಮಾನನ ಸಾಲು ಮೂರು ಕಡೆಗಳಲ್ಲಿ ವಿಸ್ತರಿಸಿದೆ. ಏಳು ಇಕ್ಕೆಲದ ಹಜಾರಗಳು, ಎರಡು ಶಿಲಾಕಂಬಗಳುಳ್ಳ ದಾರಿಗಳನ್ನು ವಿಭಾಗಿಸಿದೆ. ಇದು ಪಶ್ಚಿಮದ ಪ್ರಾರ್ಥನಾ ಗೃಹಕ್ಕೆ ಸಾಗುವುದು.

ಈ ಸ್ಮಾರಕ ಚೌಕಾಕಾರವಾಗಿದೆ. ಮತ್ತು 22.10 ಚ.ಮೀ. ಯಿರುವುದು. ಈ ಸ್ಮಾರಕದ ಗೋಡೆಯಲ್ಲಿಯೂ ಎರಡೂ ಅಂತಸ್ತುಗಳೀವೆ. ಇವುಗಳ ಗೋಡೆಗಳಲ್ಲಿ ಎರಡು ಸಾಲುಗಳಲ್ಲಿ ಕಮಾನುಗಳಿವೆ. ಒಂದು ಗೋಡೆಯಲ್ಲಿ ಪ್ರವೇಶಕ್ಕೆ (ಉತ್ತರ) ದೊಡ್ಡ ಕಮಾನುಳ್ಳ ದ್ವಾರವಿದೆ. ಇದರ ಒಳಗಡೆಗೆ ಯಾವುದೇ ಗೋರಿಯಿರುವುದಿಲ್ಲ. ಇಲ್ಲೊಂದು ಗೋರಿಯಿದ್ದಿತೆಂದು ನಿಜಾಮರ ಕಾಲದಲ್ಲಿ ಈ ಗೋರಿಯನ್ನು ತೆಗೆದು ಹಾಕಲಾಯಿತೆನ್ನುವರು. ಇದರ ನೆಲ ಮತ್ತು ಜಗತಿ ಹೆಚ್ಚು ಹಾಳಾಗಿವೆ. ಚೌಕ ಗೋಡೆಯ ಮೇಲೆ ಅರ್ಧವೃತ್ತಾಕಾರದ ಗೊಮ್ಮಟವಿದೆ. ಈ ಗೊಮ್ಮಟ ಒಳಗಡೆಗೆ ದುಂಡಾಕಾರದ ಮತ್ತು ವೃತ್ತಪಟ್ಟಿಕೆಗಳಲ್ಲಿ ವರ್ಣಚಿತ್ರಗಳಿವೆ.

ದಕ್ಷಿಣ ಗೋಡೆಯ ಮಧ್ಯಭಾಗದಲ್ಲಿ ಒಂದು ಕಿರು ಕಿಡಕಿಯಿದೆ. ಕಮಾನುಗಳ ಬದಿಯಲ್ಲಿ, ಗೋಡೆಗಳ ದೊಡ್ಡ ಕಮಾನುಗಳಲ್ಲಿ (ಹೊರಗೆ ಮತ್ತು ಒಳಗಡೆಗೆ) ವೃತ್ತಲಂಕಾರಿಕ ಪದಕಗಳಿವೆ. ಗೋಡೆಯ ಕಮಾನುಗಳೆಲ್ಲ ಒಂದೇ ಎತ್ತರ ಮತ್ತು ನಮೂನೆಗಳಲ್ಲಿವೆ. ಹೊರಗಡೆಯ ಉತ್ತರದ ಕಮಾನುಳ್ಳ ದ್ವಾರಕ್ಕೆ ಅರೆಗಂಬಗಳಿವೆ. ಇದರ ಮೇಲೆ ಒಂದು ದೊಡ್ಡ ಕಮಾನದೆ. ಇದರ ದ್ವಾರವನ್ನು ಶಿಲೆಯಿಂದ ಮಾಡಲಾಗಿದ್ದು, ಇದರ ಮೇಲೆ ಕಮಾನದೆ. ಹೊರಗೋಡೆಗಳ ಕಮಾನುಗಳು ಒಂದೇ ಎತ್ತರ ಮತ್ತು ನಮೂನೆಯಲ್ಲಿವೆ. ಕೆಳ ಸಾಲಿನ ಮಧ್ಯದ ಕಮಾನುಗಳ ಮೇಲೆ ಒಂದು ಕಮಾನದೆ. ತಲಾ ಒಂದರ ನಡುವೆ ಸಣ್ಣ ಗೂಡಿದೆ. ಕೆಳಭಾಗ 7.70 ಮೀ. ಎತ್ತರವಿದೆ. ಒಳಗಡೆ ಕಮಾನುಗಳು ಕಮಾನು ಛಾವಣಿ ಮೂಲೆಗಳ ಮೇಲಿವೆ. ಮಾಳಿಗೆ ಅಂಚಿನ ಗೋಡೆಯ ಕಮಾನು ತಲೆಗಳ ತೆರೆಯಿದೆ. ಮೂಲೆಗಳಲ್ಲಿ ಕಿರು ಮಿನರೆಟ್ಸ್‌ಗಳಿವೆ. ಇಲ್ಲಿ ಕಿರುಗಂಬದ ಮೇಲೆ ಗೊಮ್ಮಟಗಳಿವೆ. ಗಾರೆಯ ಗಿಲಾವು ಹೆಚ್ಚು ಹಾಳಾಗಿವೆ.

ಎರಡು ಸಾಲುಗಳಲ್ಲಿಯ ಕಮಾನುಗಳ ಮೇಲೆ ವೃತ್ತಾಲಂಕಾರ ಪದಕಗಳಿವೆ. ಮೇಲಿನ ಸಾಲಿನ ಕಮಾನುಗಳ ಮೇಲೆ ನಳಿಕೆಗಳಿವೆ. ಮಳೆನೀರು ಹೊರಗಡೆ ಹೋಗಲು ಈ ನಳಿಕೆಗಳನ್ನು ಕೂಡಿಸಲಾಗಿದೆ.

ಕೆಳಗೋಡೆಯ ಒಳಗಡೆ ಕೆಳ ಸಾಲಿನ ಒಂದು ಕಮಾನನ ನಡುವೆ ಒಂದು ಗೋಡೆಯಿದೆ. ಮೆಟ್ಟಣಿಕೆಗಳನ್ನು ಪೂರ್ವ ಗೋಡೆಯಿಂದಕ ಎರಡು ಅಂತಸ್ತುಗಳ ಎಡಗಡೆಗೆ ನಿರ್ಮಿಸಲಾಗಿದೆ. ಮೇಲು ಸಾಲಿನ ಕಮಾನುಗಳಲ್ಲಿ ಜಾಲಿಗಳನ್ನು ಕೂಡಿಸಲಾಗಿದೆ. ಮೇಲು ಸಾಲಿನ 4 ಕಮನುಗಳ ಮೇಲೆ ಮೂಲೆಯಲ್ಲಿ 4 ಕಮಾನುಗಳಿವೆ. ಇದರಿಂದ ಇದು ಅಷ್ಟಮುಖವಾಗಿ ರೂಪಾಂತರವಾಗಿವೆ. ಇದರ ಮೇಲಿನ ಭಾಗ ವೃತ್ತಾಕಾರವನ್ನಾಗಿಸಿ ಅದರ ಮೇಲೆ ಅರ್ಧವೃತ್ತಾಕಾರದ ಗೊಮ್ಮಟವನ್ನು ಕಟ್ಟಲಾಗಿದೆ. ಈ ಗೊಮ್ಮಟದ ಬಂಡದ ಸುತ್ತಲೂ ಸಣ್ಣ ಕಮಾನುಗಳು ಒಂದರ ಮೇಲೆ ಒಂದಿವೆ. ಕೆಳಗಿನ ಕಮಾನುಗಳು ಸ್ವಲ್ಪ ದೊಡ್ಡದಾಗಿದೆ. ಈ ಕಮಾನುಗಳಲ್ಲಿ ರೇಖಾಚಿತ್ರಗಳಿವೆ. ಇವುಗಳಲ್ಲಿ ಬಣ್ಣವನ್ನು ತುಂಬಲಾಗಿದೆ. ಉತ್ತರಕ್ಕೆ ಜಗತಿಯ ಮೇಲೆ ಒಂದು ನೀರಿನ ತೊಟ್ಟಿಯನ್ನು ಕಟ್ಟಲಾಗಿದೆ.

ಹೆಸರಿಲ್ಲದ ಗೋರಿ ಗೊಮ್ಮಟ : ನಗರದ ಕೃಷಿ ವಿಶ್ವವಿದ್ಯಾಲಯದ ಮತ್ತು ಆಳಂದ ರಸ್ತೆಯ ಹತ್ತಿರ ಹೆಸರಿಲ್ಲದ ಗೋರಿ ಗುಮ್ಮದ್‌ಯಿದೆ. (14ನೆಯ ಶತಮಾನ). ಈ ಸ್ಮಾರಕವನ್ನು ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಜಗತಿ ಮತ್ತು ನೆಲ ಹಾಳಿಗಿದೆ. ಇದರ ಕೋಣೆ ಚೌಕಾಗಿದೆ ಮತ್ತು 34.20 ಚ.ಮೀ. ಇದೆ. ಈ ಸ್ಮಾರಕಕ್ಕೆ ಮೂರು ಕಡೆಗಳಲ್ಲಿ ಪೂರ್ವ, ಉತ್ತರ ಮತ್ತು ದಕ್ಷಿಣದಲ್ಲಿ ತೆರೆದ ಎತ್ತರದ ಕಮಾನುಗಳಿವೆ. ಪಶ್ಚಿಮದ ಗೋಡೆಯಲ್ಲಿ ಅಷ್ಟೇ ಎತ್ತರದ ಕಮಾನದ್ದರೂ ಅದರಲ್ಲಿ ಒಂದು ಗೂಡಿದೆ. ಕಮಾನಿನ ಅಳತೆ 2.40 ಮೀ. ಜಗತಿಯ ಒಂದು ಕಡೆಯ ಅಳತೆ 6.40.ಮೀ. ಈ ಸ್ಮಾರಕದ ಒಳಗಡೆಗೆ ಹಾಳಾದ ಉತ್ತರ-ದಕ್ಷಿಣಾಭಿಮುಖವಾಗಿ ಮೂರು ಗೋರಿಗಳಿವೆ. ಗೊಮ್ಮಟದ ಒಳಗಡೆಗೆ ಖುರಾನ್ ಪದ್ಯವನ್ನು ಬರೆಯಲಾಗಿದೆ ಮತ್ತು ಹೂಬಳ್ಳಿಗಳ ಅಲಂಕರಣಕ್ಕೆ ಬಣ್ಣವನ್ನು ತುಂಬಲಾಗಿದೆ. (ಕೆಂಪು, ನೀಲಿ ಮತ್ತು ಹಸಿರು). ಪ್ರವೇಶದ್ವಾರದ ಕಮಾನುಗಳಿವೆ ಎರಡು ಹಿಂಚಾಚು-ಮುಂಚಾಚುಗಳಿವೆ. ಅಲಂಕರಣ ಕಮಾನುಗಳು ಎರಡು ಮಗ್ಗಲಿವೆ. ಇಲ್ಲಿಯೂ ಗೊಮ್ಮಟದ ಬುಡವು ಅಷ್ಟಪಟ್ಟಿಕೆಯ ಮೇಲಿನ ವೃತ್ತಪಟ್ಟಿಕೆ ಮೇಲೆ ಕಟ್ಟಲಾಗಿದೆ. ಇದರಿಂದ ಒಟ್ಟು ಎಂಟು ಕಮಾನುಗಳುಳ್ಳ 4 ಚೌಕಗೋಡೆಗಳ ಮೇಲಿವೆ. ಇದರ ಪಶ್ಚಿಮ ಗೋಡೆಯಲ್ಲಿ ಖುರಾನ್ ಪದ್ಯಗಳನ್ನು ಗಾರೆಯಿಂದ ಬರೆಯಲಾಗಿದೆ. ಈ ಗೋಡೆಯಲ್ಲಿರುವ ಕಮಾನಿನ ಬದಿಗಳಲ್ಲಿ ಎರಡು ಗೂಡುಗಳಿವೆ. ಈ ಗೂಡುಗಳ ನಮೂನೆಗಳು ಹಿಂದೂ ದೇವಾಲಯದ ದ್ವಾರಗಳನ್ನು ನೆನಪಿಸುತ್ತವೆ.

ಮುಖ್ಯ ವಾಸ್ತು ಅಂಶಗಳ ಬೆಳವಣಿಗೆ

ಡೆಕ್ಕನ್ನಲ್ಲಿ 14–17ನೆಯ ಶತಮಾನಗಳ ನಡುವೆ ಇಸ್ಲಾಮಿಕ್ ವಾಸ್ತುಶೈಲಿ ಬೆಳವಣಿಗೆಯಾಯಿತು. ಇದು ಭಾರತದ ಮುಸ್ಲಿಂ ಕೇಂದ್ರಗಳ ವಾಸ್ತುಗಿಂತ ಭಿನ್ನವಾಗಿದೆ. ಡೆಕ್ಕನ್ ಗೆದ್ದವರು ತಮ್ಮದೇ ಆದ ಇಸ್ಲಾಮಿಕ್ ವಾಸ್ತುಶೈಲಿಯನ್ನು ಬೆಳೆಸಿದರು.

ಆದಿ ಬಹುಮನಿಯರ ಸ್ಮಾರಕಗಳಲ್ಲಿ ಡೆಕ್ಕನ್ ಇಸ್ಲಾಮಿಕ್ ವಾಸ್ತು ಹಂತದ ಸ್ಪಷ್ಟವಾದ ಲಕ್ಷಣಗಳಿಲ್ಲ. ಇವುಗಳು ಸಮಕಾಲೀನ ಉತ್ತರದ ತುಘಲಕ್‌ನ ವಾಸ್ತುಶೈಲಿಯನ್ನು ಪ್ರತಿಬಿಂಬಿಸುತ್ತವೆ. ಈ ಕಾಲದ ಸ್ಮಾರಕಗಳಲ್ಲಿ ಇಳಿಜಾರು ಗೋಡೆಗಳಿವೆ, ಚಪ್ಪಟೆಯಾಕಾರದ ಗುಮ್ಮಟಗಳಿವೆ ಮತ್ತು ಕಂಬದಂತಹ ಬುರುಜುಗಳಿವೆ. ಈ ಲಕ್ಷಣಗಳು ದೆಹಲಿ ವಾಸ್ತುಲಕ್ಷಣಗಳನ್ನು ಹೋಲುತ್ತವೆ. ಹಸನ್‌ಗಂಗು ಬಹುಮನಿಯ ಗೋರಿ ಸ್ಮಾರಕದಲ್ಲಿ ಮತ್ತು ಆತನ ಮಗ ಮೊದಲನೆಯ ಮಹಮ್ಮದ್ ಷಾಹನ ಸ್ಮಾರಕದಲ್ಲಿ ಇಳಿಜಾರು ಗೋಡೆಗಳು, ಚಪ್ಪಟೆ ಗುಮ್ಮಜ್ ಮತ್ತು ಕಂಬಾಕಾರದ ಬುರುಜುಗಳಿವೆ. ಈ ಕೆಲಸವನ್ನು ದೆಹಲಿಯಿಂದ ಬಂದ ಕರಕುಶಲಗಾರರು ಮಾಡಿರುವುದೆಂದು ಹೇಳುವರು. ತದನಂತರ ಈ ಪರಂಪರೆಯು ಬಲಹೀನವಾಯಿತು.

ಫಿರೋಜಷಾಹನ ಆಳ್ವಿಕೆಯ ಕಾಲದಲ್ಲಿ ದೆಹಲಿ ಸುಲ್ತಾನರ ಜೊತೆಗೆ ಸಂಪರ್ಕ ನಿಂತುಹೋಯಿತು. ಇದರಿಂದ ವಾಸ್ತುಕಾಲಾಕಾರರು ಪಶ್ಚಿಮ ಏಷ್ಯಾದಿಂದ ಅದರಲ್ಲೂ ಪರ್ಷಿಯಾ ಮತ್ತು ತುರ್ಕಿಸ್ಥಾನದ ಕಡೆಗಳಿಂದ ಬಂದರು. ಆದರೆ ಫಿರೋಜಷಾಹನ ಸ್ಮಾರಕ ಗುಮ್ಮಜ್‌ನ ಒಳಗಡೆಗೆ ಪರ್ಷಿಯನ್ ಶೈಲಿಯಲ್ಲಿ ಗಾರೆ ಅಲಂಕರಣ ಮತ್ತು ವರ್ಣಚಿತ್ರಗಳಿವೆ. ಇದೇ ಸ್ಮಾರಕದಲ್ಲಿ ಚಾಲುಕ್ಯರು ಬಳಸಿದ ಕಪ್ಪು ಶಿಲಾದ್ವಾರಗಳ ಪಟ್ಟಿಕೆಗಳನ್ನು ಮತ್ತು ಚಾಚು ಪೀಠಗಳನ್ನು ನೋಡಬಹುದು 1425ರಲ್ಲಿ ಬಹಮನ ರಾಜಧಾನಿ ಬೀದರಿಗೆ ವರ್ಗಾವಣೆಯಾದ ಬಳಿಕ ದೆಹಲಿಯ ಪ್ರಭಾವ ನಿಂತುಹೋಯಿತು.

ಗೋರಿಗಳು: ಭಾರತದಲ್ಲಿ ಮುಸ್ಲಿಮರ ಗೋರಿಯುಳ್ಳ ಸ್ಮಾರಕಕ್ಕೆ ಸಾಮಾನ್ಯವಾಗಿ ಒಂದು ಗುಮ್ಮಟವುಳ್ಳ ಕೋಣೆ ಇರುತ್ತದೆ. ಇದನ್ನು 'ಹುಜ್ರ' ವೆನ್ನುವರು. ಇದರ ನಡುವಿನ ಸಮಾಧಿಯನ್ನು 'ಡರಿ' ಎನ್ನುವರು ಕೆಳಗಡೆ ನಡುವೆ ಶವದ ಕೋಣೆಯಿರುವುದಕ್ಕೆ 'ಮಕರಬ್' ಎನ್ನುವರು. ಚಿಕ್ಕ ಸ್ಮಾರಕಗಳಿಗೆ ಪಶ್ಚಿಮ ಗೋಡೆಯಲ್ಲಿ ಒಂದು ಗೂಡಿರುತ್ತದೆ. ಇದನ್ನು 'ಮಿಹರಬ್' ಎನ್ನುವರು. ಆದರೆ ದೊಡ್ಡ ಸ್ಮಾರಕಗಳಿಗೆ ಕೆಲವೊಮ್ಮೆ ಮಸೀದಿಗಳನ್ನು ಜೋಡಿಸಲಾಗಿದೆ.

ಖ್ವಾಜ ಬಂದೇನವಾಜ್ ದರ್ಗಾ





ಬಹಮನಿಯರ ಗೋರಿ ಗುಮ್ಮಟಗಳು ಅತ್ಯಂತ ಪ್ರಾಚೀನವೆಂದರೆ ಹಸನ್‌ಗಂಗು ಬಹಮನಿ ಮತ್ತು ಆತನ ಮಗ ಮೊದಲನೆಯ ಮಹಮ್ಮದ್ ಷಾಹನದ್ದಾಗಿದೆ. ಇದೇ ರೀತಿ ಮುಜರದ್ಧಮ ಅಥವಾ ದರ್ಗಾ ಆದಿ ಬಹಮನ ವಾಸ್ತು ಶೈಲಿಯಲ್ಲಿವೆ.

ತದನಂತರ ಬಹಮನ ಸುಲ್ತಾನರ ಗೋರಿ ಗುಮ್ಮಟಗಳನ್ನು ಹಾಫ್ತಗುಮ್ಮಜ್ ಸಂಕೀರ್ಣದಲ್ಲಿ ಕಟ್ಟಲಾಗಿದೆ. ಷಾಮುಜಾಹಿದ್‌ನ್‌ನ ಗೋರಿ ಗುಮ್ಮಟವು ಮೊದಲಿನ ಗೋರಿ ಗುಮ್ಮಟಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಅದರ ಅಳತೆ ಮತ್ತು ನಮೂನೆಗಳಲ್ಲಿ ದಾವುದ್ ಸುಲ್ತಾನನ ಸ್ಮಾರಕದಂತಿದೆ. ಇದರ ಗುಮ್ಮಟವು ಅಪರೂಪದ ನಮೂನೆಯಲ್ಲಿ ಆರಂಭವಾಗಿದೆ.

ಗೊಮ್ಮಟವನ್ನು ಕಟ್ಟಲಾಗಿದೆ. ಚೌಕಾಕಾರದ ವೃತ್ತಾಕಾರದ ಪದಕಗಳ ಅಲಂಕರಣ ಕಮಾನನ ಬದಿಗಳಲ್ಲಿವೆ.(ಒಳಗೆ ಮತ್ತು ಹೊರಗಡೆಗೆ). ಈ ಸ್ಮಾರಕವನ್ನು ಆದಿಲ್‌ಷಾಹಿ ಸುಲ್ತಾನನ ರಾಣಿಯಾಗಿದ್ದ ಚಾಂದ್ ಬೀಬಿ ನೆನಪನಲ್ಲಿ ಕಟ್ಟಲಾಗಿದೆ. ಇದರಲ್ಲಿ ಯಾವ ಗೋರಿಯೂ ಇರುವುದಿಲ್ಲ. ಏಕೆಂದರೆ ಈಕೆಯು ಅಹಮದ್‌ಬಾದ್‌ನಲ್ಲಿ ಮಡಿದಳು. ಈ ಸ್ಮಾರಕವನ್ನು ಈಕೆಯು ಜೀವಂತವಿದ್ದಾಗಲ್ಲೇ ಕಟ್ಟಿಸಿದಳೆನ್ನುವರು.

ಕವಾಲಿ ಕೋಣೆ(ನೌಬತ್‌ಖಾನ್) : ಹಜರತ್ ಬಂದೇ ನವಾಜ್ ದರ್ಗಾದ ಸಂಕೀರ್ಣದಲ್ಲಿ ಈ ಸ್ಮಾರಕವಿದೆ ನೌಬತ್‌ಖಾನಾ ಎಂದರೆ ಕವಾಲಿ ಹೇಳುವ ಕೋಣೆ. ಚೌಕಾದ ಕೋಣೆಯುಳ್ಳ ಈ ಭಾಗಕ್ಕೆ ಒಂದು ಪ್ರವೇಶದ್ವಾರವಿದೆ.(17ನೆಯ ಶತಮಾನ)

ಚೀಲ: ಬೋಲೆಬಲೆ ಪೀರನ ಚೀಲಕ್ಕೆ ಆಯತಾಕಾರದ ಎತ್ತರದ ಜಗತಿಯಿದ್ದು, ಹಿಂದಕ್ಕೆ ಒಂದು ಗೋಡೆಯಿರುತ್ತದೆ. ಜಗತಿಯ ಮೇಲೆ ಎರಡು ಗೋರಿಗಳಿವೆ. ಹಿಂದಿನ ಗೋಡೆಯಲ್ಲಿ ಕಮಾನದೆ. ಈ ಕಟ್ಟಡವು ಈದ್ಗಾಗ್ಕಿಂತ ವ್ಯತ್ಯಾಸವಾಗಿದೆ. ಏಕೆಂದರೆ ಇಲ್ಲಿ ಗೋರಿಗಳಿರುತ್ತವೆ.

ಬಾವಿ: ಕೋಟೆಯ ಸಂಕೀರ್ಣದಲ್ಲಿ ಮೂರು ಬಾವಿಗಳಿವೆ. ಇವುಗಳನ್ನು ಹದ್‌ಬೌಲಿ, ಜಭ್‌ಬೌಲಿ ಮತ್ತು ಮಗ ಪತಂಗ ಬೌಲಿ ಎಂದು ಕರೆಯುವರು. ಗುಲ್ಬರ್ಗಾಕ್ಕೆ ಹೊಂದಿರುವ ಹೀರಾಪುರದ ವಾಯವ್ಯಕ್ಕೆ ಒಂದು ಹೊಲದಲ್ಲಿ ಒಂದು ಜಬಲಾದ್ ಬಾವಿಯಿದೆ. ಚೌಕಾದ ಈ ಶಿಲಾ ಬಾವಿಯು 20ಥ20 ಮೀ. ಅಳತೆಯಿದೆ. ಇಳಿಯಲು–ಹತ್ತಲು ಇದರ ಉತ್ತರಕ್ಕೆ ಮೆಟ್ಟಿಲುಗಳಿವೆ. ಇದಕ್ಕೆ 4 ಗೋಡೆ ಮತ್ತು 4 ಜಗತಿಗಳಿವೆ. ಬಾವಿಯ ಪೂರ್ವದ ಮತ್ತು ಪಶ್ಚಿಮದ ಕೆಳ ಜಗತಿಯ ಮೇಲೆ 2 ಕಮಾನುಳ್ಳ ಮುಂಚಾಚಿದ ಗೋಡೆಗಳಿವೆ. ಬದಿಗೆ 2 ತೆರೆದ ಕಮಾನುಗಳಿವೆ. ನೀರನ್ನು ಮೇಲೆತ್ತುವ ವ್ಯವಸ್ಥೆಯನ್ನು ಇಲ್ಲಿ ಮಾಡಲಾಗಿದೆ.

ಬಾವಿಯ ಮೇಲ್ಗಡೆ ಎರಡು ಕೋಣೆಗಳಿವೆ. (1585) ಈ ಬಾವಿಯನ್ನು ಕತ್ತರಿಸಿದ ಕಲ್ಲುಗಳಿಂದ ಮತ್ತಯ ಗಾರೆಯಿಂದ ಕಟ್ಟಲಾಗಿದೆ.

ಮಹಾದ್ವಾರಗಳು : ಮಹಾದ್ವಾರಗಳನ್ನು ಇಲ್ಲಿ ಹಲವು ಮಸೀದಿಗಳ, ದರ್ಗಾಗಳ, ಕೋಟೆಯ ಮತ್ತು ಊರ ಪ್ರವೇಶದಲ್ಲಿ ಕಟ್ಟಲಾಗಿದೆ. ಈ ದ್ವಾರಗಳಿಗೆ ಒಳಗಡೆ ಬದಿಗಳಲ್ಲಿ ಕಟ್ಟೆಗಳು, ಕೋಣೆಗಳು ಮತ್ತು ಕೆಲವೊಮ್ಮೆ ಮೇಲಕ್ಕೆ ಹತ್ತಲು ಮೆಟ್ಟಣಿಕೆಗಳು, ಛಜ್ಜಾಗಳು ಇರುತ್ತವೆ. ಜೊತೆಯಲ್ಲಿ ಎತ್ತರದ ತೆರದ ಎರಡು ಕಮಾನುಗಳ ಏಕ ಮಹಾದ್ವಾರದ ಎರಡು ಮಗ್ಗುಲಿನಲ್ಲಿರುತ್ತವೆ. ಸುಲ್ತಾನಪುರ ಮಸೀದಿ ದ್ವಾರ (14ನೆಯ ಶತಮಾನ) ಹೀರಾಪುರ ದ್ವಾರ (16ನೆಯ ಶತಮಾನ) ಇದಕ್ಕೆ ಕೋಣೆಗಳ ಮೇಲೆ ಗುಮ್ಮಟಗಳಿವೆ, ಖ್ವಾಜಾ ಬಂದೇ ನವಾಜ್ ದರ್ಗಾದ ದ್ವಾರಕ್ಕೆ ಗೊಮ್ಮಟ, ಎತ್ತರದ ಕಂಬಗಳಲ್ಲಿ 5 ಅಂತಸ್ತುಗಳಿವೆ. (17ನೆಯ ಶತಮಾನ)

ಖಾನ್‌ಖಾಗಳು : ನಗರದ ಷಾಬಜಾರ್ ಮತ್ತು ಕೋಟೆ ಸಮೀಪದಲ್ಲಿ ಹಜರತ್ ಖ್ವಾಜಾ ಬಂದೇ ನವಾಜ್ ಖಾನಖಾಯಿದೆ. ಖಾನಖಾವೆಂದರೆ ಮುಸ್ಲಿಂ ಪೀರರ ವಾಸತಾಣ. ಈ ನಗರಕ್ಕೆ ನೂರಾರು ಮುಸ್ಲಿಂ ಸಂತರು ಆಗಮಿಸಿದ್ದಾರೆ. ಕೇವಲ ಬಂದೇ ನವಾಜ್‌ರ ಮೂಲ ವಾಸತಾಣ ಮಾತ್ರ ಇಲ್ಲಿ ಕಾಣಿಸುವುದು. ಈ ಖಾನ್‌ಖಾನನ್ನು ಬಹುಮನಿ ಸುಲ್ತಾನ ಫಿರೋಜ್‌ಷಾಹ ಕಟ್ಟಿಸಿದ ಇದೊಂದು ಆಯತಾಕಾರದ ಮಂಟಪವಾಗಿದ್ದು ಉತ್ತರ–ದಕ್ಷಿಣವಾಗಿದೆ. ಪ್ರವೇಶದ್ವಾರದಲ್ಲಿ ತೆರೆದ ಕಮಾನುಗಳಿವೆ. ಅವುಗಳ ಮೇಲೆ ಶಿಲೆಯ ಭಾರ ಹಿಡಿಯಲು ಶಿಲಾ ಬ್ರಾಕೆಟ್ಸ್‌ಗಳಿವೆ. ಅದರ ಮಂಟಪವು 10 ಭಾಗಗಳಾಗಿ ವಿಂಗಡಿಸಿದ್ದು ಅವುಗಳ ಮೇಲೆ ಆಳವಿಲ್ಲದ ಗೊಮ್ಮಟಗಳಿವೆ.

ಗುಲ್ಬರ್ಗಾದಲ್ಲಿ ಗೀಸುದರಜ್ ಇದ್ದಾಗ ಸೂಫಿ ಚಳುವಳಿ ಶಕ್ತಿಯುತವಾಗಿರಲಿಲ್ಲ. ಆದರೆ ಆಗ ಖಾನ್ಕಾಹಸ್‌ಗಳಿದ್ದವು. ಗೀಸು ದರ್ಜಾಕ್ಕೆ ಹೊಂದಿ ಒಂದು ಶಾಲೆ ಮತ್ತು ಒಂದು ಗ್ರಂಥಾಲಯವದ್ದಿತು. ಖಾದ್ರಿ ಗುಂಪಿಗೆ ಸೇರಿದ ಖಾನ್ಕಾಗಳು

ಸೂಫಿಗಳಿಗೆ ಸಂಬಂಧಿಸಿದ ಸ್ಮಾರಕಗಳು : ಇಸ್ಲಾಂ ಧರ್ಮದಲ್ಲ ಸೂಫಿಗಳದು ಒಂದು ಪ್ರತ್ಯೇಕ ವರ್ಗವಾಗಿದೆ. ಇದರಲ್ಲಿ ಒಬ್ಬ ಮಾರ್ಗದರ್ಶಕನರುತ್ತಾನೆ. ಆತನನ್ನು ಪೀರ್ ಅಥವಾ ಷಯ್ಖ್ ಎನ್ನುವರು. ಮೊದಲು ಸೂಫಿ ವರ್ಗದವರು ಮುಸ್ಲಿಂ ಸೈನ್ಯದೊಂದಿಗೆ ಖೈಬರ್ ಪಾಸ್ ಮುಖಾಂತರ ಬಂದರು. ಕ್ರಮೇಣ ಇವರು ಪ್ರಸಿದ್ಧಿಗೆ ಬಂದರು

ಭಾರತದ ಅನೇಕ ಧರ್ಮ ಮತಗಳಲ್ಲಿ ಛಿಷ್ಕ ಮತ್ತು ಕಾದಿರಿ ಈ ಎರಡು ಗುಲಬರ್ಗಾ, ಬೀದರ ಮತ್ತು ವಿಜಾಪುರದಲ್ಲಿ ಪ್ರಸಿದ್ಧರಾಗಿದ್ದಾರೆ. 1325 ರಲ್ಲಿ ಮಹಮ್ಮದ್ ತುಘಲಕ್ ತನ್ನ ಎರಡನೆಯ ರಾಜಧಾನಿಯಾಗಿದ್ದ ದೇವಗಿರಿಗೆ ದೆಹಲಿಯಿಂದ ಸೂಫಿ ವರ್ಗದವರನ್ನು ಸರ್ಕಾರದ ಅಧಿಕಾರಿಗಳ ಜೊತೆಗೆ ಕರೆ ತಂದರು. ಹೀಗೆ ಅನೇಕರು ಕ್ರಮೇಣ ದಕ್ಷಿಣಕ್ಕೆ ಬಂದರು. ಬಹುಮನ ಸುಲ್ತಾನ ಹಸನ್‌ಗಂಗೂ ಸೂಫಿ ಸಂತರನ್ನು ತನ್ನ ರಾಜ್ಯದಲ್ಲಿ ಹೊಸ ಅಡಳಿತವನ್ನು ಒಟ್ಟುಗೂಡಿಸಲು ಮತ್ತು ಭದ್ರಪಡಿಸಲು ಕರೆಸಿಕೊಂಡನು. ಇದನ್ನು ಆತನ ಉತ್ತರಾಧಿಕಾರಿಗಳು ಅನುಸರಿಸಿದರು. ಗುಲ್ಬರ್ಗಾ, ಬೀದರ ಮತ್ತು ಬಿಜಾಪುರಗಳಲ್ಲಿ ಸೂಫಿ ಮಂದಿರಗಳಿವೆ. ಆದರೆ ಅಲ್ಲಿ ಮಠಗಳು ಅಥವಾ ಖಾನಕಹಗಳು ವಿಜಾಪುರದಲ್ಲಿ ಇರಲಿಲ್ಲ. ಆದರೆ ಬೀದರನಲ್ಲಿ ಇವು ಸಾಮಾನ್ಯ.

ದರ್ಗಾಗಳು : ಒಬ್ಬ ಸೂಫಿಯ, ಪೀರ್, ಷಯ್ಖ್ ಸತ್ತ ಬಳಿಕ ಆತನನ್ನು ಒಂದು ಗೋರಿಯಲ್ಲಿ ಹೂಳುವ ಪರಂಪರೆಯಿದ್ದಿತು. ಈ ಸ್ಥಳವನ್ನು ದರ್ಗಾವೆನ್ನುವರು. ಗುಲಬರ್ಗಾದಲ್ಲಿ ಹಸನ್‌ಗಂಗೂ ಮತ್ತು ಆತನ ಮಗ ಮೊದಲನೆಯ ಮಹಮ್ಮದ್‌ಷಾಹ ಬಹಮನಿಯ ಗುರುಷಯ್ಖ್‌ಜುನಯ್ದಿಯ ದರ್ಗಾಕ್ಕೆ ಆದಿಲ್‌ಷಾಹಿ ಸಮ್ರಾಜ್ಯದ ಗುರುತಿದೆ. 16ನೆಯ ಶತಮಾನದಲ್ಲಿ ಯುಸೂಫ್ ಆದಿಲ್‌ಷಾಹ (ಮೊದಲನೆಯ ಸುಲ್ತಾನ) ಜುನಯ್ದಿಯ ದರ್ಗಾಕ್ಕೆ ಷಯ್ಖ್‌ರಜ್ವ ಮಹಾದ್ವಾರವನ್ನು ನಿರ್ಮಿಸಿದನು. ಇದಕ್ಕೆ ಪ್ರವೇಶದ ಬದಿಗಳ ಕೊನೆಯಲ್ಲಿ ಎರಡು ದೊಡ್ಡದಾದ ಬುರಜುಗಳಂತಹ ಮಿನರೆಟ್ಸ್‌ಗಳಿವೆ. ಇದೇ ರೀತಿಯ ಮಿನರೆಟ್ಸ್‌ಗಳು ಗುಲ್ಬರ್ಗಾದ ಗೀಸುದರಜಾದಿ ಹೊರಗಡೆಯಿಂದ ಮನೆಗಿವೆ. ಗೀಸುದರಜ್ ದರ್ಗಕ್ಕೆ ಒಂದು ದೊಡ್ಡ ಜೋಡಣೆ ದಕ್ಷಿಣಕ್ಕಿದೆ. ಇದರಲ್ಲಿ ಪಶ್ಚಿಮಕ್ಕೆ ಒಂದು ಅವರಣ, ಒಂದು ಮಸೀದಿ ಮತ್ತು ದಕ್ಷಿಣಕ್ಕೆ ಭವ್ಯವಾದ ಕಮಾನದೆ. ಇವುಗಳನ್ನು ಬಿಜಾಪುರ ಆದಿಲ್‌ಷಾಹಿ ಮಂತ್ರಿ ಅಫಜಲ್‌ಖಾನ್ 17ನೆಯ ಶತಮಾನಕ್ಕೆ ಕಟ್ಟಿಸಿ ಜೋಡಿಸಿರುವನು. ಗೀಸುದರಜ್ ಅವರ ತಂತ್ರಜ್ಞಾನದ ಮಾರ್ಗದರ್ಶಕನಾದ ಚಿಷ್ಠಿ ಸಂತ ಲದ್ಲಾಯ್‌ಸಾಹಿಬ್ ಅಥವಾ ಹಜರತ್ ಷಯ್ಖ್ ಅಲ್ಲಾದ್ದೀನ್ ಅನಸಾರಿಯ ದರ್ಗಾ ಆಳಂದದಲ್ಲಿದೆ. ಇಲ್ಲಿ ಎರಡು ದ್ವಾರಗಳಿವೆ. ತಲಾ ಒಂದಕ್ಕೆ ಒಂದೇ ರೀತಿಯ ಎರಡು ಮಿನರೆಟ್ಸ್‌ಗಳಿವೆ. (16ನೆಯ ಶತಮಾನ)

ಎಲ್ಲ ಸಂತರ ದರ್ಗಾಗಳು ಸುಲ್ತಾನರ ಗೋರಿಗಳಿಗಿಂತ ಸ್ವಲ್ಪವೇ ಮೇಲ್ಭಾಗದಲ್ಲಿವೆ. ದರ್ಗಗಳಿಗೆ ಸಂತರ ಗೋರಿಗಳ ಪಶ್ಚಿಮಕ್ಕೆ ಮಸೀದಿಯಿದೆ. ದರ್ಗಾಗಳಲ್ಲಿ ಸಾಮಾನ್ಯವಾಗಿ ಸಂತರ ಗೋರಿ ಮತ್ತು ಅವರ ಉತ್ತರಾಧಿಕಾರಿಗಳ ಗೋರಿಗಳಿರುತ್ತದೆ.

ಗುಲ್ಬರ್ಗಾದ ಕೋಟೆ ದಕ್ಷಿಣದ ಸುಲ್ತಾನರ ಗೋರಿಗಳಿಗೆ ಷಯ್ಖ್ ಜುನಯ್ದಿಯು ದರ್ಗಾಕ್ಕಿದೆ. ಗುಲ್ಬರ್ಗಾದ ತದನಂತರ ಬಹಮನ ಸಲ್ತಾನರ ಗೋರಿಗಳು ಆಫ್ತ್‌ಗುಂಬಜ್‌ನಲ್ಲಿವೆ. ಇವೆಲ್ಲವೂ ಗೀಸೂದರಜ್‌ರ ದರ್ಗಾದ ಬುಡದಲ್ಲಿವೆ.

ಖಾನ್ಕಾಹಗಳು : ಮುಸ್ಲಿಮರಲ್ಲಿ ಪೀರರ ಮನೆಗಳು, ಖಾನ್ಕಾಹಗಳು ಕೇಂದ್ರಗಳಾದವು. ಅತ್ಯಂತ ಹಳೆಯ ಸೂಫಿಗಳೇ ಭಾರತದಲ್ಲಿ ಛಿಷ್ತಗಳಿಗೆ ಸೇರಿದವರಾಗಿದ್ದಾರೆ.

ಗುಲಬರ್ಗಾದಲ್ಲಿ ಗೀಸುದರಜ್ ಇದ್ದಾಗ ಸೂಫಿ ಚಳುವಳಿ ಪ್ರಬಲವಾಗಿರಲಿಲ್ಲ. ಈ ಕಾಲದಲ್ಲಿ ಖಾನ್ಕಾಹಗಳಿದ್ದವು. ಈಗ ಅದರ ಸುಳಿವಿಲ್ಲ. ಗೀಸುದರಜ್ ಅವರ ದರ್ಗಾಕ್ಕೆ ಹೊಂದಿಕೊಂಡು ಒಂದು ಶಾಲೆ ಮತ್ತು ಗ್ರಂಥಲಯವಿದ್ದವು. ಬೀದರ ಸೂಫಿಗಳ ಛಿಷ್ತವರ್ಗದ ಕೇಂದ್ರವಾಗಿತ್ತು. (15 ರಿಂದ 17ನೆಯ ಶತಮಾನ). ಬೀದರನಲ್ಲೇ ಹಜರತ್ ಆಬೂಲ್ ಫರೀದ್ ಖಾನ್ಕಾಹ ಮೊಟ್ಟಮೊದಲನೆಯದು ಮತ್ತು ಮಹತ್ವದ್ದು.

ಬೀದರ ಖಾದ್ರಿವರ್ಗದಲ್ಲೂ ಮಹತ್ವದ ಕೇಂದ್ರ. ಉದಾಹರಣೆಗೆ ಬೀದರಿನ ಮಹಬೂಬ್ ಸುಭಾನ ದೊಡ್ಡ ಖಾನ್ಯಾಹ ಬಹಮನತರ ಕಾಲದ್ದಾಗಿದೆ. ಇದು ನಜ ಎಂದು ಒಪ್ಪಿಕೊಂಡರೆ, ಭಾರತದಲ್ಲಿ ಬೀದರಿನ ಖಾದ್ರಿ ವರ್ಗದ ಖಾನ್ಕಾಹ ಅತ್ಯಂತ ಪ್ರಾಚೀನದ್ದೆಂದು ಹೇಳಬಹುದು. ಇನ್ನೊಂದು ಬೀದರಿನ 1659ರ ಖಾನ್ಕಾಹ ಮಹಬೂಬ್ ಸುಭಾನಯದು. (1644–45) ಇದು ಮೊಘಲರ ಕಾಲದ್ದಾಗಿದೆ.

ಷಿಯಾರಿಗೆ ಸಂಬಂಧಿಸಿದ ಸ್ಮಾರಕಗಳು

ಅಷೂರ್ ಖಾನ್‌ಗಳು : ಮುಸ್ಲಿಮರು ವರ್ಷದ ಮೊದಲ ಮೊಹರಂ ತಿಂಗಳುಗಳು ಷಿಯಾಗಳ ಸಂತರ ಮೊಮ್ಮಕ್ಕಳಾದ ಹಸನ್ ಮತ್ತು ಹುಸೇನ್ ಇವರ ಸ್ಮರಣೆಯದ್ದಾಗಿದೆ. ಇವರ ಮಗಳು ಫಾತಿಮಾ ಮತ್ತು ಅಲಿಯರಾಗಿದ್ದಾರೆ. ವಿಶ್ವದ ಷಿಯಾಗಳು ಮೊಹರಂ ಮೊದಲ ಹತ್ತು ದಿವಸಗಳನ್ನು ಪವಿತ್ರವೆಂದು ತಿಳಿಯುವರು. ಪ್ರತಿಯೊಂದು ಷಿಯಾರ ಮನೆಗಳಲ್ಲಿ ಒಂದು ಇಮಾಂಬರ್ರ ಅಷೂರಖಾನ್ ಹೊಂದಿ ಇರುತ್ತದೆ.



ಮೌನುದ್ದೀನ್ ಚಿಸ್ತಿ



ಔರಂಗಜೇಬ್ ಬರಿಯಲ್

ಮಿನರೆಟ್ಸ್, ಛತ್ರಿಗಳು, ಛಜ್ಜಾಗಳು, ಗೋಡೆ ತುರಾಯಿಗಳು

ಮಿನರೆಟ್ಸ್ : ಗುಲ್ಬರ್ಗಾದಲ್ಲಿ ಆದಿಲ್‌ಷಾಹಿ ಸುಲ್ತಾನ ಯೂಸಫ್ ಆದಿಲ್‌ಷಾಹನು ಎತ್ತರದ ಮಿನರೆಟ್ಸ್‌ಗಳನ್ನು ಪ್ರವೇಶ ಗೋಡೆಗಳ ಬದಿಯಲ್ಲಿ ಕಟ್ಟಲು ಆರಂಭಿಸಿದನು. ಇದರಲ್ಲಿ ಸಂತರ ಸ್ಮಾರಕಗಳನ್ನು ವೈಭವೀಕರಿಸಲಿಕ್ಕೆ ಈತನು ಪ್ರಯತ್ನಪಟ್ಟನು. ಈತನು 16ನೆಯ ಶತಮಾನದಲ್ಲಿ ಗುಲ್ಬರ್ಗಾದ ಸಿರಜ್ ಉಲ್‌ದೀನ್ ಜುನಯ್ದಿಯ ದರ್ಗಾ, ಷಯ್ಖ್ ರವ್ವದ ಮುಖ್ಯದ್ವಾರವನ್ನು ಅಲಂಕರಿಸಲು ಮಿನರೆಟ್ಸ್‌ಗಳನ್ನು ಕಟ್ಟಿಸಿದನು. ಗುಲ್ಬರ್ಗಾದ ಗೀಸುದರಜಾ ದರ್ಗಾದ ಬದಿಗಳಲ್ಲಿ ಮಿನರೆಟ್ಸ್‌ಗಳನ್ನು ಕಟ್ಟಿಸಿದನು. ಗುಲ್ಬರ್ಗಾದ ಅಫಜಲ್‌ಖಾನ್ ಮಸೀದಿಯ ಮಿನರೆಟ್ಸ್‌ಗೆ ಎಂಟು ಮುಖಗಳಿವೆ.

ಮಾಳಿಗೆಯ ನಾಲ್ಕು ಮೂಲೆಗಳನ್ನು ಅಲಂಕರಿಸಲು ವಿಸ್ತಾರವಾದ ಟವರೆಟ್ಸ್‌ಗಳನ್ನು ಕಟ್ಟಿಸಿದರು. ಆದರೆ ಬೇಗನೇ ಈ ಟವರೆಟ್ಸ್‌ಗಳನ್ನು ಕಟ್ಟಡದ ಎತ್ತರಕ್ಕೆ ಏರಿಸಲಾಗಿತು. ಅದು ಮಿನರೆಟ್ ಆಗಿ ಪರಿವರ್ತನೆ ಹೊಂದಿದೆ. 16ನೇಯ ಶತಮಾನದಿಂದ ಮಸೀದಿಗಳ ದ್ವಾರ ಬದಿಗಿನ ಗೋಡೆಗಳಿಗೆ ಹೊಂದಿಕೊಂಡು ಎತ್ತರದ ಮಿನರೆಟ್ಸ್‌ಗಳನ್ನು ಕಟ್ಟುವುದು ಸಾಮಾನ್ಯವಾಯಿತು.

ಕಳಸಗಳು : ಗುಲ್ಬರ್ಗಾ ಮತ್ತು ಬೀದರಿನ ಬಹಮನಿ ಸುಲ್ತಾನರು ತಮ್ಮ ಸ್ಮಾರಕಗಳ ಮಾಳಿಗೆಯ ನಾಲ್ಕು ಮೂಲೆಗಳಲ್ಲಿ ಕಳಸಗಳನ್ನು ನೆಡುವ ಪರಂಪರೆಯನ್ನು ಮುಂದುವರೆಸಿದ್ದಾರೆ. ಮೊದಲು ಇದು ಸಾಮಾನ್ಯ ನಮೂನೆಯದ್ದಾಗಿದೆ. ಇದರಲ್ಲಿ ಸಣ್ಣ ಕಂಬದ ಮೇಲೆ ಅಂತಸ್ತಿನ ಗೊಮ್ಮಟ (ಗೋಪುರ) ವಿರುತ್ತದೆ. ಈ ಲಕ್ಷಣವನ್ನು ಗುಲ್ಬರ್ಗಾದ ಹಸನ್‌ಗಂಗೂ ಗೋರಿ, ಷಾಹಿಬಜಾರ್‌ನ ಮಸೀದಿ, ದಾವುದ್ ಸ್ಮಾರಕ, ಘಿಯಾತ್ ಅಲ್ಲಾದ್ದೀನ್, ಇಮ್ಮಡಿ ಮಹಮ್ಮದ್ ಷಹ ಬಹಮನಿ ಸ್ಮಾರಕ, ಫಿರೋಜ್‌ಷಾಹ ಬಹಮನಿ ಸ್ಮಾರಕಗಳಲ್ಲಿವೆ. ಗುಲ್ಬರ್ಗಾದ ಜಾಮೀ ಮಸೀದಿ ಮಾಳಿಗೆಯ ಮೇಲೆ ಮತ್ತು ದಕ್ಷಿಣದ ಭಾಗದಲ್ಲಿ ಅನೇಕ ಕಳಸಗಳಿವೆ. ಈ ಕಳಸಗಳು ನಂತರದ ಕಾಲದ್ದವು.

15ನೆಯ ಶತಮಾನದ ಮಧ್ಯದಲ್ಲಿ ಗುಲ್ಬರ್ಗಾದ ಗೀಸುದರಜ್ ದರ್ಗಾದಲ್ಲಿ ಎರಡು ಅಂತಸ್ತಿನ ಕಳಸ ಮೊದಲು ಕಾಣಲು ಸಿಗುವುದು. ಇಲ್ಲಿಯ ಲಂಗರ್‌ಕೀ ಮಸೀದೆಗೆ ದುಂಡಾದ ಕಳಸಗಳಿವೆ. ಇದು ಕುಂಭದ ನಮೂನೆಯಲ್ಲಿದೆ. ಕೆಲವುಗಳಿವೆ ಮೂರು ಅಂತಸ್ತಿನ 16 ಕಳಸಗಳಿವೆ. ಇಲ್ಲಿಯ ಸೀದಿ ಅಂಬರ್ ಸ್ಮಾರಕಕ್ಕೆ ಅನೇಕ ಅಲಂಕೃತ ಕಳಸಗಳಿವೆ.

ಛತ್ರಿಗಳು : ಸಣ್ಣ ಹೆಡೆಯಾಕಾರದ ಛತ್ರಿಗಳನ್ನು ಆಗಿಂದಾಗ್ಗೆ ಬಹಮನಿ ಮತ್ತು ಆದಿಲ್‌ಷಾಹಿಗಳು ಮಸೀದಿ ಮತ್ತು ಗೋರಿ ಸ್ಮಾರಕಗಳ ಅಲಂಕರಣಕ್ಕೆ ಬಳಸಿದರು. ಡೆಕ್ಕನ್‌ನಲ್ಲಿ ಮೊಟ್ಟಮೊದಲ ಬಾರಿಗೆ ಛತ್ರಿ ಬಳಸಿದ ಸ್ಮಾರಕವೆಂದರೆ ಗುಲ್ಬರ್ಗಾದ ಚೋರ್‌ಗುಮಜ್. ಇಲ್ಲಿ ಗುಲ್ದಸ್ತಾ ಬದಲಿಗೆ ನಾಲ್ಕು ಸಣ್ಣ ಹೆಡೆ ನಮೂನೆಯ ಕಳಸಗಳಿವೆ. ಮಾಳಿಗೆಯ ನಾಲ್ಕು ಮೂಲೆಗಳಲ್ಲಿ ಒಂದೊಂದಿವೆ.

ಮಾಳಿಗೆ ಇನ್ನಿತರ ಅಲಂಕರಣಗಳು : ಲಂಗರ್‌ಕೀ ಮಸೀದಿಯ ಮಾಳಿಗೆಯ ಪೂರ್ವಕ್ಕೆ ಮೂರು ಕಮಾನುಳ್ಳ ಪರದೆಯಿದೆ. ಪಶ್ಚಿಮಕ್ಕೆ ಮಿಹರಬ್‌ನ ಮೇಲೆ ಕಿರು ಅಗಲದ ಪರದೆಯಿದೆ. ಷಯ್ಖ್‌ರವ್ಜ ದ್ವಾರದ ಮೇಲೆ ಶಿಲಾ ಕಟ್ಟಡವನ್ನು ಕೂಡಿಸಲಾಗಿದೆ. ಇದು ಪ್ರವೇಶಕ ಮೇಲೆ ಒಂದು ಸಣ್ಣ ಜೋಡು ಸ್ಮಾರಕವಾಗಿ ಕಾಣುವುದು.

ಛಜ್ಜಾಗಳು : ಗುಲ್ಬರ್ಗಾದ ಅತ್ಯಂತ ಹಳೆಯ ಮಸೀದಿಗಳ ಒಂದು ಭಾಗದಲ್ಲಿ ಛಜ್ಜಾ ಇವೆ. (ಜಾಮೀಮಸೀದಿಯನ್ನು ಬಿಟ್ಟು) ಫಿರೋಜ್‌ಷಾಹನ ಬಹಮನಿಯ ಗೋರಿಯ ದಕ್ಷಿಣ ದ್ವಾರ ಮತ್ತು ಕಿಡಕಿಗಳ ಮೇಲೆ ಛಜ್ಜಾಗಳನ್ನು ಕಟ್ಟಲಾಗಿದೆ. ಬೀದರನಲ್ಲಿ ಛಜ್ಜಾಗಳನ್ನು ಸ್ಮಾರಕಗಳ ಅಥವಾ ಮಸೀದಿಗಳ ಮುಂಭಾಗದಲ್ಲಿ ಬಳಸಿಲ್ಲ. ಆದರೆ ಚೌಖಂಡಿ ದ್ವಾರ ಪ್ರವೇಶಕ ಹೊರಗಿನ ಸಣ್ಣ ಮಸೀದಿಗಿದೆ. 16ನೆಯ ಶತಮಾನದಲ್ಲಿ ಗುಲ್ಬರ್ಗಾದಲ್ಲಿ ಗೀಸುದರಜ್‌ದ ದರ್ಗಾದಲ್ಲಿನ ಅಫಲ್‌ಖಾನ್‌ನ ಮಸೀದಿಗೆ ಕಟ್ಟಲಾಗಿದೆ.

ಗೋಡೆ ತುರಾಯಿ : ಗೋಡೆಗಳ ಮೇಲೆ ತುರಾಯಿಗಳ ಅಲಂಕಾರ ನಮೂನೆಯು ಪೂರ್ವ ಮತ್ತು ಪಶ್ಚಿಮದಲ್ಲಿ ಒಲವನ್ನು ತೋರಿಸಲಾಯಿತು. ಭಾರತದಲ್ಲಿ ಮಸೀದಿ ಮತ್ತು ಗೋರಿ ಸ್ಮಾರಕ ಗೋಡೆಗಳ ಮೇಲಿನ (ದೆಹಲಿ) ತುರಾಯಿ ಪ್ರಸಿದ್ಧಿಗೆ ಬಂದವು. ಗುಲ್ಬಾರ್ಗದಲ್ಲಿ ಗೋಡೆಗಳ ಮೇಲೆ ಸರಳ ಕಮಾನನ ತುರಾಯಿ ಬಳಕೆಯು ಪ್ರಾಚೀನ ಸುಲ್ತಾನರ ಗೋರಿ ಸ್ಮಾರಕಗಳಲ್ಲಿ, 14ನೆಯ ಶತಮಾನದ ಮಧ್ಯದಲ್ಲಿನ ಕೆಲವು ಸ್ಮಾರಕಗಳಿಗೆ ಗೋಡೆ ತುರಾಯಿ ಅಲ್ಲದೇ ಕಮಾನ ತಲೆ ತುರಾಯಿ ಗುಮ್ಮಟದ ಸುತ್ತಲಿವೆ. ತುರಾಯಿ ಗುಮ್ಮಟದ ಒಂದು ಅಲಂಕಾರವೆಂದು ಡೆಕ್ಕನ್ನನಲ್ಲಿ ಹೆಚ್ಚು 15ರಿಂದ 17ನೆಯ ಶತಮಾನಗಳಲ್ಲಿ ಪ್ರಸಿದ್ಧಿ ಹೊಂದಿತು. ಗುಲ್ಬರ್ಗಾದಲ್ಲಿ ಲಂಗರ್‌ಕೀ ಮಸೀದಿ ಮತ್ತು ಚೋರ್‌ಗುಂಬಜ್, ಬೀದರ್‌ನಲ್ಲಿ ಅಹಮದ್‌ಷಾಹನ ಗೋರಿ ಸ್ಮಾರಕದಲ್ಲಿ ಕಾಣಬಹುದು. ಇಲ್ಲಿ ತ್ರಿಪತ್ರ ಆಕಾರದ ತುರಾಯಿಯನ್ನು ಗೊಮ್ಮಟದ ಮೇಲೆ ಬಳಸಾಯಿತು.

ತ್ರಿಪತ್ರಾಲಂಕಾರ ತುರಾಯಿ ಗುಲ್ಬರ್ಗಾದಲ್ಲಿ ಮೊದಲು ಮುಜರ್ರದ್ ಕಾಮಲ್ ದರ್ಗಾದಲ್ಲಿನ ಮಸೀದಿಯಲ್ಲಿ ಮತು ಜಾಮೀಮಸೀದಿಯಲ್ಲಿ ಮೊಟ್ಟ ಮೊದಲು ಬಳಲಾಗಿದೆ. 15ನೆಯ ಶತಮಾನದಲ್ಲಿ ಬೀದರ್‌ನಲ್ಲಿ ಒಂದು ಸ್ಮಾರಕದಲ್ಲಿ ತ್ರಿಪತ್ರಾಲಂಕಾರ ತುರಾಯಿಯನ್ನು ಗೊಮ್ಮಟ ಮತ್ತು ಗೋಡೆಗಳ ಮೇಲೆ ಅಲಂಕರಿಸಲಾಗಿದೆ. (ಅಲ್ಲಾವುದ್ದೀನ್ ಬಹಮನಿಯ ಗೋರಿಯಲ್ಲಿದೆ) ಗುಲ್ಬರ್ಗಾದಲ್ಲಿ ಷಯ್ಖ್ ರವ್ವ ಮತ್ತು ಜುನಯ್ದಿ ದರ್ಗಾದಲ್ಲಿನ ಕುಂದಮೀರ್‌ನ ಗೋರಿ ಸ್ಮಾರಕದಲ್ಲಿ ತೋಳುಳ್ಳ ಕಮಾನು ತಲೆ – ತುರಾಯಿ ಬಳಸಲಾಗಿದೆ.

ಗುಮ್ಮಟಗಳು : 14ನೆಯ ಶತಮಾನದ ಕೊನೆಯಲ್ಲಿ ಡೆಕ್ಕನ್‌ನಲ್ಲಿ ಕಟ್ಟಿದ ಎಲ್ಲ ಗುಮ್ಮಟಗಳು ದೆಹಲಿ ಫಿರೋಜ್‌ಷಾಹ ತುಗಲಕ್‌ನ ಕಾಲದ ಕಟ್ಟಡಗಳನ್ನು ಹೋಲುತ್ತವೆ. ಗುಮ್ಮಟಗಳು ಚಪ್ಪಟೆಯಾಗಿವೆ. ಸಾಮಾನ್ಯವಾಗಿ ಅಷ್ಟಮುಖ ವೇದಿಕೆಯ ಮೇಲೆ ಗುಮ್ಮಟಗಳು ನಂತಿವೆ. ಕೆಲವೊಮ್ಮೆ ವೇದಿಕೆಯಿಲ್ಲದೆ ಕಟ್ಟಲಾಗಿದೆ. 14ನೆಯ ಶತಮಾನದ ಕೊನೆಯಲ್ಲಿ ಎತ್ತರಿಸಿದ ಗುಮ್ಮಟಗಳನ್ನು ಕಟ್ಟಲಾಗಿದ್ದು ಅವು ದುಂಡಾಕಾರದಲ್ಲಿವೆ. ಇಂಥವನ್ನು ಇಮ್ಮಡಿ ಮೊಹಮ್ಮದ್ ಸ್ಮಾರಕದಲ್ಲಿ ಕಾಣಬಹುದು. ಗುಲ್ಬರ್ಗಾದಲ್ಲಿ ಮುಜರ್ರರ್ ಕಾಮ್‌ಲ್‌ನ ದರ್ಗಾ ಸ್ಮಾರಕ, ಷಾಹಬಜಾರಿನ ಮಸೀದಿಯ ದ್ವಾರ ಮತ್ತು ಫಿರೋಜ್‌ಷಾಹ ಬಹಮನ ಗೋರಿಯ ಸ್ಮಾರಕಗಳ ಮೇಲೆ ಹೊಸ ನಮೂನೆಯ ಗೊಮ್ಮಟಗಳಿವೆ. ಈ ಎಲ್ಲಾ ಗೊಮ್ಮಟಗಳನ್ನು ಅಷ್ಟಮುಖ ವೇದಿಕೆಗಳ ಮೇಲೆ ಇನ್ನುಳಿದವುಗಳಂತೆ ಏರಿಸಲಾಗಿದೆ.

ಜೋಡು ಗುಮ್ಮಟಗಳು : ಭಾರತದಲ್ಲಿ ಜೋಡು ಗೊಮ್ಮಟಗಳ ಬಳಕೆ ಮೊಘಲರ ಕಾಲದ ಮೊದಲು ವಿರಳವಾಗಿತ್ತು. ಡೆಕ್ಕನ್‌ನಲ್ಲಿ ಈ ನಮೂನೆಯ ಗೊಮ್ಮಟವುಳ್ಳ ಎರಡು ಸ್ಮಾರಕಗಳಿವೆ. ನರದುರ್ಗಾದ ಕೋಟೆ ಮತ್ತು ಗುಲ್ಬರ್ಗಾದ ಕೋಟೆಯ ಒಳಗಿನ ಜಾಮೀ ಮಸೀದೆಯಲ್ಲಿವೆ. ಜಾಮೀ ಮಸೀದಿಯಲ್ಲಿ ಒಂದು ದೊಡ್ಡ ಗುಮ್ಮಟ ಮತ್ತು ಮಿಹರಬ್ ಮೇಲೆ ಒಂದು ಆಳವಿಲ್ಲದ ಕಮಾನು ಛಾವಣಿಯಿದೆ. ಈ ಎರಡರ ನಡವೆ ಖಾಲೀ ಜಾಗ ಉಳಿದಿವೆ.

ಗೊಮ್ಮಟವಿಲ್ಲದ ಸ್ಮಾರಕಗಳು : ವಿಜಾಪುರದಲ್ಲಿ ಗೊಮ್ಮಟವಿಲ್ಲದ ಸ್ಮಾರಕಗಳು ಆರರಲ್ಲಿವೆ (16–17ನೇ ಶತಮಾನ) ಗುಲ್ಬರ್ಗಾದಲ್ಲಿ ಆಳಂದ ರಸ್ತೆಯ ಬದಿಗೆ ಒಂದಿದೆ. ಇಲ್ಲಿಯ ಲಂಗರ್ ಕೀ ಮಸೀದಿಗೆ ಅಪರೂಪದ ಕಮಾನನಾಕಾರದ ಛಾವಣಿಯುಳ್ಳ ಛತ್ತಿರುವುದು.

ಚೂಪಾದ ಕಮಾನು ಭಾವಣಿಗಳು : ಡೆಕ್ಕನ್‌ನಲ್ಲಿ ಕಮಾನು ಭಾವಣಿಗಳು ಅಪರೂಪ. ಗುಲ್ಬರ್ಗಾದ ಜಾಮೀ ಮಸೀದಿಯಲ್ಲಿ ಚೂಪಾದ ಕಮಾನುಳ್ಳ ಭಾವಣಿಯಿದ್ದು, ಶಾಲಾ ಮಾದರಿಯ ಶಿಖರವನ್ನು ನೆನಪಿಸುತ್ತದೆ. ಛತ್ತನ್ನು ಮೂರು ಭಾಗಗಳನ್ನಾಗಿ ವಿಭಾಗಿಸಲಾಗಿದೆ. ಅವು ಕೇವಲ ಅಲಂಕಾರಕ್ಕಿವೆ. ಈ ಮಾದರಿ ವಿಜಾಪುರದ ಆದಿಲ್‌ಷಾಹಿಯ ಅಲೀಷಾಹೀದ್ ಪೀರ್ ಮಸೀದಿಯಲ್ಲಿದೆ. ಈ ಪಟ್ಟಿಗಳು ಚೈತ್ಯ ಕೋಣೆಗಳಲ್ಲಿರುವುದನ್ನು ನೆನಪಿಸಬಹುದು.

ಕಮಾನು ಭಾವಣಿ ಮೂಲೆಗಳು (ಸ್ಕ್ವಿಂಚರ್ಸ್) : ಚೌಕ ಕೋಣೆಯಿಂದ ವೃತ್ತಾಕಾರದ ಗೊಮ್ಮಟ ಬದಲಾವಣೆಯನ್ನು ಈ ಮೊದಲು ವಾಸ್ತು ತಜ್ಞರು ವಿಭಿನ್ನ ರೀತಿಯಲ್ಲಿ ತೋರಿಸಿದ್ದರು. ಡೆಕ್ಕನ್‌ನಲ್ಲಿ ಚೌಕಾದ ಕೋಣೆಯಲ್ಲಿ ನಾಲ್ಕು ಕಮಾನುಳ್ಳ ಭಾವಣಿ ಮೂಲೆಗಳಿಂದ ಅಷ್ಟಮುಖಗಳನ್ನಾಗಿ ಪರಿವರ್ತಿಸಲಾಗಿದೆ. (ಇದನ್ನು ಇರಾನ್‌ನ ಸಸಾನಯದಲ್ಲಿ ಕಾಣಬಹುದು) ಇದರ ಮೇಲೆ ಗೊಮ್ಮಟವನ್ನು ಕಟ್ಟಲಾಗಿದೆ. ಅಷ್ಟಮುಖ ಮೂಲೆಯನ್ನು ಕೆಲವೊಮ್ಮೆ ಹದಿನಾರು ಮುಖಗಳನ್ನಾಗಿ ಮಾರ್ಪಾಟು ಮಾಡಲಾಗಿದೆ. ಇದು ಗೊಮ್ಮಟಕ್ಕೆ ಸರಿಯಾದ ಕಂಠವೆಂದು ಗುರುತಿಸುವರು. ಈ ಲಕ್ಷಣವನ್ನು ದೆಹಲಿಯ ಸ್ಮಾರಕಗಳಲ್ಲಿ ಬಳಸಲಾಗಿದೆ. ಡೆಕ್ಕನ್‌ನಲ್ಲಿ ಗೋರಿ ಸ್ಮಾರಕಗಳ ನಿರ್ಮಾಣಕ್ಕೆ ಸಾಮಾನ್ಯವಾಗಿ ಇದನ್ನು ಬಳಸಲಾಗಿದೆ. ಈ ಪರಿವರ್ತನೆಯ ಹೊಸ ಅಂಶಗಳು ಗುಲ್ಬರ್ಗಾದ ಆರಂಭಿಕ ಸುಲ್ತಾನರ ಎಲ್ಲ ಗೋರಿಗಳಲ್ಲಿವೆ.

ಕಮಾನುಗಳು : ಡೆಕ್ಕನ್‌ನಲ್ಲಿ ತೆರೆದ ಕಮಾನುಗಳು ಚೂಪಾಗಿ ಮತ್ತು ಸಾಮಾನ್ಯವಾಗಿ ನಾಲ್ಕು ಕೂಡಿರುತ್ತಿದ್ದವು. ಗುಲ್ಬರ್ಗಾದಲ್ಲಿ ಅತ್ಯಂತ ಹಳೆಯ ಕಮಾನುಗಳು ಎತ್ತರದ ಜೋಡು ಕಂಬಗಳ ಮೇಲಿದ್ದು, ಕಡಿಮೆ ಅಗಲವಾಗಿವೆ. ಹಳೆಯ ಸುಲ್ತಾನರ ಗೋರಿಗಳು ಮತ್ತು ಫಿರೋಜ್‌ಷಾಹ ಬಹಮನಿಯ ಗೋರಿ ಸ್ಮಾರಕಗಳಲ್ಲಿವೆ.

ಗುಲ್ಬರ್ಗಾದ ಜಾಮೀ ಮಸೀದಿಯಲ್ಲಿ ತ್ರಿಪತ್ರಾಲಂಕಾರದ ಕಮಾನುಗಳು ಮಿಹರಬ್ ಮತ್ತು ಕಮಾನು ಭಾವಣಿಯ ಮೂಲೆಯಲ್ಲಿ ಬಳಸಲಾಗಿದೆ. ಇಲ್ಲಿನ ಜಾಮೀ ಮಸೀದಿಯಲ್ಲಿ ಮಾತ್ರ 11 ಸುರುಳಿಗಳು ಇವೆ. ಅನೇಕ ಸುರುಳಿ ಕಮಾನು ಹಿಂದೂ ವಾಸ್ತುಶಿಲ್ಪ ಲಕ್ಷಣದ ಪ್ರಭಾವವಿದೆ. ಇಲ್ಲಿಯ ಮುಜರ್‍ರ್ ಕಮಾಲ್ ದರ್ಗಾದಕಲ್ಲಿದೆ.

ಮಿಹರಬ್‌ಗಳು : ಪ್ರತಿಯೊಂದು ಮುಸ್ಲಿಂ ಸ್ಮಾರಕಕ್ಕೆ ಮಿಹರಬ್ ಮೆಕ್ಕಾ ಕಡೆಗೆ ಮುಖಮಾಡಿರುತ್ತದೆ. ಸಾಮಾನ್ಯವಾಗಿ ಇದಕ್ಕೆ ಜೋಡು ಸ್ತಂಭಗಳ ಮೇಲೆ ಕಮಾನಿರುತ್ತದೆ. ಅತ್ಯಂತ ಹಳೆಯ ಮಿಹರಬ್‌ನ ನಾಲ್ಕು ಹಿಂಚಾಚು-ಮುಂಚಾಚುಳ್ಳ ಕಮಾನುಗಳು ಒಳಗೊಂಡಿವೆ. ಅದು ಪ್ರಾರ್ಥನಾ ಗೂಡಾಗಿದೆ. ಇದನ್ನು ಆಯತಾಕಾರದ ಪಟ್ಟಿಕೆಯಲ್ಲಿ ಹೊಂದಿಸಲಾಗಿದೆ. ಎರಡನೆಯ ಮಹಮ್ಮದ್ ಷಾಹ ಬಹಮನಿಯ ಗೋರಿಯ ಮಿಹರಬ್‌ನಲ್ಲಿ ಜೋಡು ಹಿಂಚಾಚು-ಮುಂಚಾಚುಳ್ಳ ಕಮಾನವೆ. ಜಾಮೀ ಮಸೀದಿಯಲ್ಲಿ ಮೊಟ್ಟ ಮೊದಲು ಇದರ ಬದಲಾವಣೆಯಿದೆ. ಈ ಮಿಹರಬ್‌ಗಳಲ್ಲಿ ಸ್ವಲ್ಪ ಭಿನ್ನತೆಯಿದೆ. ಒಂದೇ ಕಮಾನನೊಳಗಡೆ ಇರುವ ಕಮಾನುಗಳನ್ನು ಪರಿಚಯಿಸಲಾಯಿತು. ಇದನ್ನು ದಾವೂದ್‌ನ ಗೋರಿಯ ಮಿಹರಬ್‌ನ ಕಾಣಬಹುದು.

ಗಾರೆ ಕೆಲಸ : ಬಹಮನಿಯ ಸುಲ್ತಾನರು ಮೊದಲು ಉತ್ತರ ಭಾರತದಲ್ಲಿ ನಿರ್ಮಿಸಿದ ದೊಡ್ಡ ಶಿಲೆಯ ಕಟ್ಟಡಗಳನ್ನು ಅನುಸರಿಸಿದರು. 15ನೆಯ ಶತಮಾನದಲ್ಲಿ ಒರಟಾಗಿ ಕಟ್ಟಿದ ಗುಂಡು ಕಲ್ಲುಗಳಿಗೆ ಸರಳ ಗಾರೆಯ ಪದರನ್ನು ಒರಟಾಗಿ ಲೇಪಿಸುವುದನ್ನು ಅನುಸರಿಸಿದರು.

ಮಧ್ಯದ ಅಂಕಣ : ಮೊದಲು ಬಹಮನಿಯರು ಮಧ್ಯದಂಕಣಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿರಲಿಲ್ಲ. ಆದರೆ ಷಾಹಬಜಾರಿನ ಮಸೀದಿಗೆ ಒಂದು ಚಿಕ್ಕದಾಗಿ ವಿಸ್ತರಿಸಿದ್ದು ಅದು ಮಿಹರಬ್‌ನ ಮೇಲಿದೆ. ಲಂಗರ್‌ಕೀ ಮಸೀದಿಯ ಶಿಲಾ ಕಟ್ಟಡದ ಮೇಲೆ ಮಧ್ಯದ ಅಂಕಣಕ್ಕೆ ಮೂರು ತೆರೆದ ಕಮಾನುಗಳಿವೆ. ಇದಕ್ಕೆರಡು ಚಿಕ್ಕ ಗುಮ್ಮಟ ಮತ್ತು ತುರಾಯಿಗಳಿವೆ.

ಜಾಮೀ ಮಸೀದಿ ವಾಯುವ್ಯದ ಪ್ರವೇಶದ್ವಾರದಲ್ಲಿ ಎತ್ತರವಾದ ತೆರೆದ ಚೂಪಾದ ಕಮಾನಿದೆ. ಇದರ ಮೇಲೆ ಅನೇಕ ದಳಗಳುಳ್ಳ ಕಮಾನದೆ. ಅದರ ಮೇಲೆ ಮತ್ತೊಂದು ಚೂಪಾದ ಕಮಾನಿದೆ. ಬದಿಗಳಲ್ಲಿ ದುಂಡಾದ ಎತ್ತರದ ಅರೆಗಂಬಗಳಿವೆ.

ಗಾರೆ-ಇಟ್ಟಿಗೆ-ಶಿಲೆ

ಗಾರೆ : ಡೆಕ್ಕನ್ನಿನಲ್ಲಿ ಮೊಟ್ಟಮೊದಲು ಗಾರೆಯಿಂದ ವಜ್ರಾಕಾರಗಳ ಅಲಂಕಾರ ನಿರ್ಮಿಸಿದ್ದು ಗುಲ್ಬರ್ಗಾದ ಫಿರೋಜ್‌ಷಾಹ ಬಹಮನಿಯ ಗೋರಿ ಸ್ಮಾರಕದಲ್ಲಿದೆ. ತದನಂತರ ಇದು ಇನ್ನಿತರ ಕಡೆಗಳಿಗೂ ವ್ಯಾಪಿಸಿತು. ಲಂಗರ್‌ಕೀ ಮಸೀದಿ ಕಮಾನಿನಲ್ಲಿ ಸಂಪೂರ್ಣ ಗಾರೆಯ ಹೂಬಳ್ಳಿಗಳ ಅಲಂಕರಣವಿದೆ.

ಇಟ್ಟಿಗೆ : ಗುಲ್ಬರ್ಗಾದಲ್ಲಿ ಇಟ್ಟಿಗೆಯನ್ನು ಬಳಸಲಾಯಿತು. ಸ್ಮಾರಕಗಳಲ್ಲಿ ಗೋಡೆಗಳ ಮಾರ್ನೀಸ್ ಮೇಲೆ, ಕಳಸಗಳು ಮತ್ತು ಗಲ್ದಸ್ತಾಗಳ ಮೇಲೆ ಬಳಸಲಾಗಿದೆ. ಸಾಮಾನ್ಯವಾಗಿ ಒಂದು ಸಾಲಿನಲ್ಲಿ ಇಟ್ಟಿಗೆಯನ್ನು ಇಟ್ಟು ಮೂಲೆಗಳನ್ನು ಮೇಲಕ್ಕೆ ಮುಂಚಾಚುವಂತೆ ನಿರ್ಮಿಸಲಾಗಿದೆ. ಇದನ್ನು ಅನೇಕ ಗುಲ್ಬರ್ಗಾದ ಸ್ಮಾರಕಗಳಲ್ಲಿ ಕಾಣಬಹುದು.

ಶಿಲೆ : ಆದಿ ಬಹಮನಿ ಸ್ಮಾರಕಗಳನ್ನು ಕಟ್ಟಲು ಹೆಚ್ಚಾಗಿ ದುಂಡು ಕಲ್ಲುಗಳನ್ನು ಬಳಸಲಾಯಿತು. ಇದರಿಂದ ಅಲಂಕಾರ ಕಲ್ಪಿಸಲಿಲ್ಲ. ಛಜ್ಜಾಗಳನ್ನು ಶಿಲೆಯಿಂದಲೇ ಮಾಡಲಾಯಿತು. (14ನೆಯ ಶತಮಾನ). 16ನೆಯ ಶತಮಾನದಲ್ಲಿ ಕಲ್ಲಿನ ಸರಪಳಿಗಳನ್ನು ತಯಾರಿಸಿ ಛಜ್ಜಾಕ್ಕೆ ಇಳಿಬಿಟ್ಟಿದ್ದನ್ನು ನಾವು ಗುಲ್ಬಾರ್ಗಾ ಇನ್ನಿತರ ಕಡೆಗಳಲ್ಲಿ ಕಾಣಬಹುದು.

ಮೊಜಾಯಿಕ್ ಹಂಚುಗಳು : ಮೊಜಾಯಿಕ್ ಹಂಚುಗಳನ್ನು ಈ ಪ್ರದೇಶದಲ್ಲಿ ಬೀದರಿನ ಮಹ್ಮದ್ ಗವಾನನ ಮದರಸಗಳಿಗೆ ಮೊಟ್ಟಮೊದಲು ಬಳಸಲಾಗಿದೆ. ಇವು ಬಿಳಿ ಮತ್ತು ಕಪ್ಪು ನೀಲಿಯದ್ದಾಗಿದೆ. ಅಲೀಬರೀದಿ ಗೋರಿ ಸ್ಮಾರಕದ ಒಳಗಡೆಗೆ ಕಮಾನನ ಮೇಲೆ ಕೂಡಿಸಲಾಗಿದೆ.

ವರ್ಣಚಿತ್ರಗಳು : ಚೋರ್‌ಗುಂಬಜ್ ಮತ್ತು ಫಿರೋಜ್‌ಖಾನ್ ಬಹಮನ ಗೋರಿಯ ಸ್ಮಾರಕಗಳ ಗುಮ್ಮಜ್ ಒಳಗಡೆಗೆ ವರ್ಣಚಿತ್ರಗಳ ಪುರಾವೆಗಳಿವೆ.



ಗೋಳಗುಮ್ಮಟ

ಬಿಜಾಪುರದಲ್ಲಿರುವ ಮುಸ್ಲಿಂ ಸ್ಮಾರಕಗಳು

ಬಿಜಾಪುರ : ಕರ್ನಾಟಕದ ಒಂದು ಜಿಲ್ಲೆ. ಆಡಳಿತ ಕೇಂದ್ರ ಸೊಲ್ಲಾಪುರದ ದಕ್ಷಿಣಕ್ಕೆ 96ಕಿಮೀ ದೂರದಲ್ಲೂ ಬೆಂಗಳೂರಿನಿಂದ ವಾಯುವ್ಯಕ್ಕೆ 579ಕಿಮೀ ದೂರದಲ್ಲೀ ಇದೆ. ಚಾರಿತ್ರಿಕವಾಗಿ ಬಿಜಾಪುರ ಆದಿಲ್‌ಶಾಹಿ ಅರಸರ ರಾಜಧಾನಿಯಾಗಿತ್ತು. ಬಿಜಾಪುರದ ಮೂಲ ಹೆಸರು ವಿಜಯಪುರ. ಊರೊಳಗಿನ ಕಲ್ಯಾಣ ಚಾಲುಕ್ಯ ಕಾಲದ ಒಂದು ಹಾಳು ಬಿದ್ದ ದೇವಾಲಯ ಕಂಬಗಳ ಮೇಲಿರುವ ಶಾಸನಗಳು 1036ರ ಸುಮಾರಿಗೆ ಈ ಹೆಸರು ಬಳಕೆಯಲ್ಲಿತ್ತೆಂಬುದನ್ನು ತೋರಿಸುತ್ತವೆ. ಸು 1100ರಲ್ಲಿ ನಾಗಚಂದ್ರ ಬರೆದ ಮಲ್ಲಿನಾಥ ಪುರಾಣದಲ್ಲಿ ವಿಜಯಪುರದ ಹೆಸರು ಬರುತ್ತದೆ. ಬಹಮನಿ ರಾಜ್ಯ ಸ್ಥಾಪನೆಯಾದಾಗ (1347) ಬಿಜಾಪುರ ಆದರ ಒಂದು ಮುಖ್ಯ ಭಾಗವಾಗಿದ್ದು ಗುಲ್ಬರ್ಗ ಪ್ರಾಂತ್ಯಕ್ಕೆ ಸೇರಿತ್ತು. 1478ರಲ್ಲಿ ಈ ಸುತ್ತಣ ಪ್ರದೇಶ ಸೇರಿದ ಒಂದು ಪ್ರಾಂತ್ಯ ರಚನೆಯಾಗಿ ಬಿಜಾಪುರವೇ ಅದರ ಕೇಂದ್ರವಾಗಿತ್ತು. ಇಲ್ಲಿಯ ಪ್ರಾಂತ್ಯಧಿಕಾರಿ ಯೂಸುಫ್ ಆದಿಲ್‌ಖಾನ್ ಸ್ವತಂತ್ರನಾಗಿ ಆದಿಲ್‌ಶಾಹಿ ರಾಜ್ಯ ಸ್ಥಾಪನೆಯಾದಾಗ (1489) ಇದೇ ಅದರ ರಾಜಧಾನಿಯಾಗಿತು. 1686ರಲ್ಲಿ ಔರಂಗಜೇಬ್ ಈ ಪಟ್ಟಣವನ್ನು ವಶಪಡಿಸಿಕೊಂಡ ಅನಂತರ ಇದರ ಪ್ರಾಮುಖ್ಯತೆ ಇಳಿಮುಖವಾಗಲಾರಂಭಿಸಿತು. ಮುಂದೆ ಮೊಗಲರು, ಹೈದರಾಬಾದಿನ ನಿಜಾಮರು, ಪೇಶ್ವೆಗಳು– ಇವರಲ್ಲಿ ಕೈ ಬದಲಾಗುತ್ತಿದ್ದ ಪಟ್ಟಣ 1818ರಲ್ಲಿ ಬ್ರಿಟಿಷರ ವಶವಾಗಿ ಮುಂಬಯಿ ಪ್ರಾಂತ್ಯಕ್ಕೆ ಸೇರಿತು.



ಬಿಜಾಪುರ ಮತ್ತು ಪರಿಸರದಲ್ಲಿ ಬಹಮನ ಹಾಗೂ ಶಾಹಿಸುಲ್ತಾನರು ಕಟ್ಟಿಸಿದ 300ಕ್ಕೂ ಹೆಚ್ಚು ಪ್ರಾಚೀನ ಕಟ್ಟಡಗಳೂ ಕೋಟೆ ಕೊತ್ತಲಗಳೂ ಪ್ರೇಕ್ಷಣೆಯ ಸ್ಥಳಗಳೂ ಇವೆ. ಆದಿಲ್ ಷಾಹಿಗಳ ಕಲೆ ಮತ್ತು ವಾಸ್ತುಶಿಲ್ಪದ ಬಗೆಗೆ ಪ್ರೀತಿಯನ್ನು ತೋರಿಸುವ ಮೂಕ ಸಾಕ್ಷಿಗಳಾಗಿ ಬಿಜಾಪುರದ ಸ್ಮಾರಕಗಳು ವಿಜೃಂಭಿಸಿ ನಂತಿವೆ. ಶೋಭಾಯಮಾನ ಗೋಲ್ ಗುಂಬಜ಼್ ಮತ್ತು ಇಬ್ರಾಹಿಂ ರೋಜ಼ಾಗಳು ರಾಷ್ಟ್ರದ ಪರಂಪರೆಯ ನಕ್ಷೆಯಲ್ಲಿ ಬಿಜಾಪುರಕ್ಕೆ ಸ್ಥಾನವನ್ನು ಕಲ್ಪಿಸಿವೆ. ಆದಿಲ್‌ಷಾಹಿ ನಿರ್ಮಿಸಿದ ಕಟ್ಟಡಗಳು



ಗೋಳಗುಮ್ಮಟದ ಒಳನೋಟ

ಕರ್ನಾಟಕದ ಪರಂಪರಾಗತ ಕಲೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಬಿಜಾಪುರದ ಸ್ಮಾರಕಗಳು ಭಾರತದ ಇಂಡೋ-ಸಾರ್ಸೆನಿಕ್ ಸ್ಮಾರಕಗಳಲ್ಲಿ ಎದ್ದು ಕಾಣುತ್ತವೆ.

ಸಮಾಧಿಗಳು

ಷಾಹ ನವಾಜ಼್ ಖಾನನ ಸಮಾಧಿ

ಇದನ್ನು ಬಾರಾಟಾಂಗ್ ಮಸೀದಿ ಎಂದೂ ಕರೆಯಲಾಗುತ್ತದೆ. ಇದು ಷೋಲಾಪುರ ರಸ್ತೆಯ ಪಶ್ಚಿಮಕ್ಕೆ, ಅಂದರೆ ದರ್ಗಾ ಮತ್ತು ಕಾರಾಗೃಹಕ್ಕೆ ಹೋಗುವ ರಸ್ತೆಯಲ್ಲಿದೆ. ಇದು ಎತ್ತರದಿಂದ ಕೂಡಿದ ದೊಡ್ಡ ಕಟ್ಟಡವಾಗಿದ್ದು ಇರೆ ಎದುರಿಗೆ ಮಸೀದಿಯಿದೆ. ಸಮಾಧಿಯು 66 ಚದರ ಅಡಿಗಳ ಜಗಲಿ(ಜಗತಿ) ಮೇಲಿದೆ. ಸ್ಮಾರಕದ ಮಧ್ಯೆ ಹಸಿರು ಬಣ್ಣದ ಕಲ್ಲಿನ ಗೋರಿಯಿದೆ. ಎತ್ತರದ ಜಗಲಿ, ಅಲಂಕೃತ ಒಳಭಾಗ ಹಾಗೂ ಕಮಾನುಗಳು ಸ್ಮಾರಕಕ್ಕೆ ಮೆರಗನ್ನು ನೀಡಿವೆ.

ಗೋಳ ಗುಮ್ಮಟ (ಗೋಲ್ ಗುಂಬಜ್)

ರೈಲು ನಿಲ್ದಾಣದಿಂದ ಅರ್ಧ ಕಿ.ಮೀ. ಪಶ್ಚಿಮಕ್ಕೆ ಇರುವ ಗೋಳ ಗುಮ್ಮಟ ಬಿಜಾಪುರದ ಎಲ್ಲ ಕಟ್ಟಡಗಳನ್ನು ಮೀರಿಸುವಂತದು ಹಾಗೂ ಸುತ್ತಲೂ ಮೈಲಿಗಳ ತನಕ ಪ್ರಭುತ್ವ ಸ್ಥಾಪಿಸುವ ಸುಂದರ ನೋಟ ಒದಗಿಸುತ್ತದೆ. ಇದರ ಆಕಾರವನ್ನು ಭಾರತದ ಕೆಲವೇ ಕಟ್ಟಡಗಳಿಗೆ ಹೋಲಿಸಬಹುದು. ಇದರ ಉನ್ನತವಾದ ಪ್ರಮಾಣ ಹಾಗೂ ಅದ್ವಿತೀಯವಾದ ಗುಮ್ಮಟವನ್ನು ದೂರದಿಂದಲೇ ಪೂರ್ತಿಯಾಗಿ ಕಾಣಬಹುದು. ಈ ಬೃಹತ್ ಸಮಾಧಿ ಭವನವು ಅಸರ್ ಮಹಲ್‌ನ ಮೇಲಿನ ಹಜಾರದಿಂದ ನೋಡಿದಾಗ ಅದ್ಭುತವಾಗಿ ಕಾಣುತ್ತದೆ. ಒಂದನೇಯ ಇಬ್ರಾಹಿಂ ಅಲಂಕಾರದಿಂದ ಮತ್ತು ಶ್ರೀಮಂತಿಕೆಯ ಗಾಂಭಿರ್ಯದಿಂದ ಕೂಡಿದ ಸುಂದರವಾದ ಇಬ್ರಾಹಿಂ ರೋಜ಼ಾವನ್ನು ನಿರ್ಮಿಸಿದ ಅಂತಹ ಕಟ್ಟಡ ಮತ್ತೆ ಒಂದಿರಲಿಲ್ಲ. ಅದರಂತೆ ನಿರ್ಮಿಸಲು ಸಾಧ್ಯವಿಲ್ಲವೆಂದರಿತ ಮುಮದ್, ಅದಕ್ಕಿಂತ ವಿಭಿನ್ನವಾದ ಶೈಲಿಯಲ್ಲಿ ರೋಜ಼ಾವನ್ನು ಕಿರಿದಾಗುವಂತೆ ಮಾಡಲು ಈ ಬೃಹತ್ ಕಟ್ಟಡದ ನಿರ್ಮಾಣಕ್ಕೆ ಕೈಹಾಕಿದ.

ಇವೆರಡರಲ್ಲಿನ ವಿಭಿನ್ನತೆಯೆಂದರೆ, ಗೋಳ ಗುಮ್ಮಟ ಶಕ್ತಿಯುತ ಪುರುಷತ್ವದ ಕಲ್ಪನೆಯಾದರೆ ರೋಜ಼ಾನಯವಾದ ಸ್ತ್ರೀ ಲಕ್ಷಣದ ಪ್ರತೀಕವಾಗಿದೆ. ಆದಾಗ್ಯೂ, ಗೋಳಗುಮ್ಮಟ ಮಸೀದಿಯ ಜೊತೆಗೆ, ನಗರ್‌ಖಾನಾ, ಪ್ರವೇಶದ್ವಾರ, ವಿಶ್ರಾಂತಿಗೃಹ ಮತ್ತು ಇತರೆ ಸೌಲಭ್ಯಗಳಿಂದ ಕೂಡಿದ ಸಾಮ್ರಾಟರ ಸಮಾಧಿಯಾಗಿದ್ದು ವಾಸ್ತುಕಲೆಯಲ್ಲಿ ಅದ್ವಿತೀಯ ಅವರಣದಲ್ಲಿದೆ. ಇದು ಅದರ ವೈಶಿಷ್ಟ್ಯ.

ಗೋಳ ಗುಮ್ಮಟ ಸರಳವಾದ ಕಟ್ಟಡ. ಇದರ ಚೌಕಾಕಾರದ ಸಭಾಂಗಣ, ನಾಲ್ಕು ಬೃಹತ್ ಗೋಡೆಗಳಿಂದ ಆವೃತವಾಗಿದ್ದು ಮೂಲೆಗಳಲ್ಲಿ ಅಷ್ಟ ಕೋನಾಕೃತಿಯ ಗೋಪುರಗಳನ್ನು ಹೊಂದಿದ್ದು ಇವೆಲ್ಲ ಅರ್ಧ ವೃತಾಕಾರದ ಗುಮ್ಮಟದಿಂದ ಅವೃತವಾಗಿವೆ.

ಒಂಭತ್ತು ಅಡಿ ದಪ್ಪವಿರುವ ಚೌಕದ ನಾಲ್ಕೂ ಕಡೆ ಕಲ್ಲಿನಿಂದ ಕಟ್ಟಿದು, ಅವು 100 ಅಡಿಗಳಷ್ಟು ಎತ್ತರವಿದೆ. ಚೌಕದ ಮೂಲೆಯ ಹೊರಭಾಗದಲ್ಲಿ ಅಷ್ಟಕೋನಾಕೃತಿಯ ಗೋಪುರವಿದ್ದು ಇದು ಏಳು ಅಂತಸ್ತುಗಳನ್ನು ಹೋದಿದೆ. ಪ್ರತಿಯೊಂದು ಅಂತಸ್ತಿನ ಹೊರಮುಖವು ಸಲಾಕಿಗಳ ಆಕಾರದ ಕಿಟಕಿಗಳನ್ನು

ಹೊಂದಿದೆ.ಹೊರಭಾಗದ ಅಡಿಯಲ್ಲಿ ಕಟ್ಟಡದ ಸುತ್ತ ಜಗಲಿಯಿದೆ ಹಾಗೂ ಅದು ಕಲ್ಲಿನ ಕೈಪಿಡಿ ಗೋಡೆಯಿಂದ ರಕ್ಷಣೆ ಪಡೆದಿದೆ.ಜಗಲಿಯಿಂದ ಕೆಲವು ಹೆಜ್ಜೆ ಹತ್ತಿದರೆ, ಕಟ್ಟಡದ ಪ್ರತಿ ಮೂಲೆಯಲ್ಲಿನ ಬಾಗಿಲಿನ ಮೂಲಕ ಗುಮ್ಮಟದ ಒಳಭಾಗಕ್ಕೆ ಪ್ರವೇಶಿಸಬಹುದು. ಗೋಡೆಗಳು ಮತ್ತು ಕೈಪಿಡಿ ಗೋಡೆಗಳ ಕಮಾನುಗಳ ಮೇಲ್ಭಾಗದ ನಡುವಿನ ಕಟ್ಟಡದ ಸುತ್ತಲಿರುವ ಸದೃಢವಾದ ಛಾವಣಿಯ ಮೇಲಿನ ಅಲಂಕಾರ ಗಮನಸಬೇಕಾದ ಅಂಶವಾಗಿದೆ. ಇದು ಬಿಜಾಪುರದಲ್ಲಿರುವ ಅದ್ವಿತೀಯ ಹಾಗೂ ದೇಶದಲ್ಲೇ ಚಮತ್ಕಾರದ ಕೆಲಸದಿಂದ ಕೂಡಿದ ಒಂದು ಕಟ್ಟಡ. ಸಭಾಂಗಣದ ಒಳಭಾಗ 135 ಅಡಿಗಳ ವ್ಯಾಸ ಹಾಗೂ 178 ಅಡಿ ಎತ್ತರದಿಂದ ಕೂಡಿದೆ. ಒಟ್ಟಾರೆ ಇದರ ಒಳಭಾಗದ ವಿಸ್ತೀರ್ಣನು 18000 ಚದರಡಿಗಳಷ್ಟಿದೆ. ಈ



ಇಬ್ರಹೀಂ ರೋಜಾ

ಲೆಕ್ಕಾಚಾರದ ಪ್ರಕಾರ ಇದು 15833 ಚದರಡಿ ವಿಸ್ತಾರ ಹೊಂದಿರುವ ರೋಂನ ಸರ್ವದೇವ ಸಭೆಯ ಕಟ್ಟಡಕ್ಕಿಂತ ವಿಶಾಲವಾದುದು.

ಗೋಳ ಗುಮ್ಮಟದ ಇನ್ನೊಂದು ಪ್ರಮುಖ ಲಕ್ಷಣವೆಂದರೆ, ಗುಮ್ಮಟದ ಒಳಭಾಗದಲ್ಲಿನ ಪಿಸುಗುಟ್ಟುವ ಉಪ್ಪರಿಗೆ. ಗುಮ್ಮಟದ ತಳಭಾಗ ಸುತ್ತ ಇರುವ ಎಂಟು ಚಿಕ್ಕ ದ್ವಾರಗಳ ಮೂಲಕ ಮೇಲ್ಛಾವಣಿಯಿಂದ ಇದರೊಳಕ್ಕೆ ಹೋಗಬಹುದು.

ಗೋಳ ಗಿಮ್ಮಟ ಪ್ರವೇಶಿಸುತ್ತಿದ್ದಂತೆ, ಪ್ರವಾಸಿಗರ ಜೋರಾದ ಪ್ರತಿಧ್ವನಿಯನ್ನು ಕೇಳಬಹುದು. ಉಪ್ಪರಿಗೆ ಹೋಗುತ್ತಿದ್ದಂತೆ ಈ ಪ್ರತಿಧ್ವನಿಯ ಶಬ್ದ ಹೆಚ್ಚಾಗುತ್ತದೆ ಸಣ್ಣ ಪಿಸುಮಾತು ಕೂಡ ಉಪ್ಪರಿಗೆಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕೇಳಿಸುತ್ತದೆ. ನಿಸ್ಶಬ್ದ ಸ್ಥಿತಿಯಲ್ಲಿ ಪ್ರತಿಧ್ವನಿಯು ಅನೇಕ ಬಾರಿ ಕೇಳಿಸುತ್ತದೆ.

ಗುಮ್ಮಟ ಮಧ್ಯಭಾಗದಲ್ಲಿ ಎತ್ತರವಾದ ಜಗಲಿಯಿದ್ದು, ಅದರ ಮೇಲೆ ಸುಲ್ತಾನ್ ಮಹಮ್ಮದನ ಮೊಮ್ಮಗ, ಮಹಮ್ಮದನ ಕಿರಿಯ ಹೆಂಡತಿ, ಸುಲ್ತಾನ ಹಾಗೂ ಅವನ ಪ್ರೀತಿ ಪಾತ್ರಳಾಗಿದ್ದ ರಂಭಾ ಆತನ ಮಗಳು ಹಾಗೂ ಹಿರಿಯ ಮಗಳು ಹಾಗೂ ಹಿರಿಯ ಪತ್ನಿಯ ಅನುಕರಣೆಯ ಗೋರಿಗಳಿವೆ. ಅದರೆ ಇವರುಗಳ ನಜವಾದ ಸಮಾಧಿಗಳು ಕೆಳಗಿನ ನೆಳಮಾಳಿಗೆಯಲ್ಲಿವೆ. ಈ ಮಹಾ ಸಮಾಧಿ ಮಂದಿರದ ಪಶ್ಚಿಮಕ್ಕೆ ಗುಮ್ಮಟದಿಂದ ಕೂಡಿದ ಮಸೀದಿಯಿದೆ. ಇದು ಒಳ್ಳೆಯ ಪ್ರಮಾಣದಲ್ಲಿ ಕಟ್ಟಿದ ಬೃಹತ್ ಕಟ್ಟಡವಾಗಿದ್ದು ತೆಳುವಾದ ಮಿನಾರ್‌ಗಳು ಮತ್ತು ಛಾವಣಿಯ ಕೆಳಭಾಗದಲ್ಲಿ ಸುಂದರ ಕೆತ್ತನೆಗಳಿವೆ. ಇತಿಹಾಸಕಾರ ಪರ್ಸಿಬ್ರೌನ್ ಪ್ರಕಾರ, ಗೋಲ್ ಗುಂಬಝ್ (ಗೋಳ ಗುಮ್ಮಟ) ಅದರ ಅದ್ಭುತವಾದ ಸಮಕಟ್ಟಿನ ನಿರ್ಮಾಣದಿಂದಾಗಿ, ಅದು ಭಾರತೀಯ ಶಿಲ್ಪಿಯ ನಿರ್ಮಾಣಗಳಲ್ಲಿ ಅತ್ಯುತ್ತಮವಾದುದು ಎಂಬ ವಿಷಯ ಪ್ರಶ್ನಾತೀತವಾದುದು.



ದ್ವಾರ ಬಾಗಿಲು

ಗೋಳ ಗುಮ್ಮಟ ಎದುರುಗಡೆ ಇರುವ ನಗರ್ ಖಾನಾ ಈಗ ವಸ್ತು ಸಂಗ್ರಹಾಲಯವಾಗಿ ಮಾರ್ಪಟ್ಟಿದ್ದು, ಇದೂ ಸಹ ಒಂದು ಆಕರ್ಷಣೀಯ ಕಟ್ಟಡ. ಈ ಸಂಗ್ರಹಾಲಯದಲ್ಲಿ ಶಿಲ್ಪಗಳು, ಹಸ್ತಪ್ರತಿಗಳು, ವರ್ಣಚಿತ್ರಗಳು, ಪರ್ಷಿಯನ್ ಮತ್ತು ಅರೇಬಿಕ್ ಹಸ್ತಾಕ್ಷರಗಳು, ನಾಣ್ಯಗಳು, ಶಸ್ತ್ರಾಸ್ತ್ರಗಳು ಮುಂತಾದವುಗಳ ಅಧಿಕ ಪ್ರಮಾಣದ ಸಂಗ್ರಹವಿದೆ.

ಗೋಳ ಗುಮ್ಮಟದ ಸುತ್ತಮುತ್ತ ಪೂರ್ತಿ ಜಾಗವನ್ನು ದಕ್ಷಿಣ ಭಾರತದ ಅಪರೂಪದ ಮಧ್ಯಕಾಲೀನ ಸ್ಮಾರಕವನ್ನು ಸ್ವಾಭಾವಿಕವಾಗಿ ಕಾಣುವಂತೆ ಕಾಪಾಡಲಾಗಿದೆ.

ಇಬ್ರಾಹಿಂ ರೋಜಾ

ಎರಡನೆಯ ಇಬ್ರಾಹಿಂ ಆದಿಲ್‌ಷಾನ ಈ ಸಮಾಧಿಯನ್ನು ಡಾ. ಕಸೆನ್ಸ್ "ದಕ್ಷಿಣದ ತಾಜ್‌ಮಹಲ್" ಎಂದು ಕರೆದಿರುವುದು ಉಚಿತವಾಗಿದೆ. ಎತ್ತರದ ಜಗಲಿಯ ಮೇಲೆ, ಕಮಾನುಗಳ ಸಾಲಿನ ಆಧಾರ ಪಡೆದಿರುವ ಇದುಅವಲಿ ಕಟ್ಟಡಗಳನ್ನು ಹೊಂದಿದೆ. ಒಂದು ಪ್ರಾರ್ಥನಾ ಮಂದಿರವಾದರೆ(ಮಸೀದಿ) ಇನ್ನೊಂದು ಗೋರಿಯಾಗಿದೆ. ವಿಶಾಲವಾದ ಖಾಲಿ ಜಾಗದ ಎರಡೂ ಕಡೆ ಒಂದಕ್ಕೊಂದು ಮುಖಮಾಡಿ ನಿಂತಿರುವ ಈ ಕಟ್ಟಡಗಳು ಚೌಕಾಕಾರದಲ್ಲಿದ್ದು ಮೂಲೆಗಳಲ್ಲಿ ಮಿನಾರ್ಗಳನ್ನು ಹೊಂದಿವೆ. ಮಧ್ಯಭಾಗದಲ್ಲಿ ದುಂಡನೆಯ ಗುಮ್ಮಟವಿದ್ದು ಮೇಲ್ಭಾಗದಲ್ಲಿ ಕಳಸದಂತಹ ವಿನ್ಯಾಸವಿದೆ. ಗುಮ್ಮಟವು ತಾವರೆಯ ದಳಗಳ ಮೇಲೆ ಎದ್ದುನಿಂತಂತಿದೆ.

ಗೋರಿಗಳ ಮಧ್ಯಭಾಗದ ಗೋಡೆಗಳು ಮತ್ತು ಕಂಬಗಳು ಲಿಪಿಗಳು, ಪುಷ್ಪಗಳು ಮತ್ತು ಜ್ಯಾಮಿತಿಯ ರೇಖಾ ಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ.

ಇದರ ಇಡೀ ವಿನ್ಯಾಸ "ಕಲಾ ಪ್ರೇಮಿಯ ಕಣ್ಣುಗಳನ್ನು ಸೆರೆಹಿಡಿದು ಅವಕ್ಕೆ ಹಬ್ಬವನ್ನುಂಟು ಮಾಡುತ್ತದೆ". ಅದರ ತೇಜಸ್ಸಿಗೆ "ಸರಿದೂಗುವಂತಹುದು ಪ್ರಪಂಚದ ಯಾವುದೇ ಭಾಗದಲ್ಲಿ ಸಿಗುವುದು



ಇಬ್ರಹೀಂ ರೋಜಾ ಒಳನೋಟ

ಕಪ್ಪ" ಇಬ್ರಾಹಿಂ ರೋಜ಼ಾವನ್ನು 'ಕಪ್ಪು ತಾಜ್‌ಮಹಲ್' ಎಂದೂ ಕರೆಯಲಾಗುತ್ತದೆ. ಈ ಮಹಾ ಸಮಾಧಿಯ ಒಳಾಂಗಣದಲ್ಲಿ ಇಬ್ರಾಹಿಂ ಆದಿಲ್‌ಷಾ, ಆತನ ರಾಣಿ ತಾಜ್ ಸುಲ್ತಾನ ಹಾಗೂ ಅವರ ಕುಟುಂಬದ ಸದ್ಯಸರ ಸಮಾಧಿಗಳಿವೆ.

ಜೋಡ್ ಗುಂಬಜ಼್

ತಾಜ್ ಬವಡಿಯ ಪೂರ್ವಕ್ಕೆ 200ಮೀ ದೂರದಲ್ಲಿ ಎರಡು ಗುಮ್ಮಟಗಳಿರುವ ಸಮುಚ್ಛಯವಿದೆ. ಇದನ್ನು "ಇಬ್ಬರು ಸಹೋದರಿಯರು" ಅಥವಾ "ಜೋಡ್ ಗುಂಬಜ಼್" ಎಂದು ಕರೆಯುವರು. ಇವು ಎರಡನೇ ಆದಿಲ್ ಷಾಹನ ಸೇನಾಧಿಕಾರಿ ಖಾನ್ ಮಹಮದ್ ಹಾಗೂ ಅವನ ಧಾರ್ಮಿಕ ಗುರು ಅಬ್ದುಲ್ ರಜ಼ಾಕನ ಗೋರಿಗಳಿವೆ. ಈ ಧಾರ್ಮಿಕ ಗುರು ಸಂತನ ದರ್ಗಾವನ್ನು ಆತನ ಶಿಷ್ಯ ಖಾನ್ ಮಹಮದ್ ನಿರ್ಮಿಸಿದ್ದು ವಿಶಲವಾಗಿ ಸಹಜತೆಯಿಂದ ಕೂಡಿದೆ. ಇದು ಸರಳವಾದ ಚೌಕಾ ಕೃತಿಯ ಕಟ್ಟಡವಾಗಿದ್ದು ನೆಲಮಾಳಿಗೆಯಲ್ಲಿ ಸಮಾಧಿಯನ್ನು ಹೊಂದಿರುವ ಇದು ಯಾವುದೇ ಅಲಂಕಾರವಿಲ್ಲದ ಗುಮ್ಮಟದಿಂದ ಸತ್ತುವರೆದಿದೆ. ಇದನ್ನು ಬಿಜಾಪುರದ ಮುಸಲ್ಮಾನರುಬಹಳ ಗೌಅವದಿಂದ ಕಾಣುವರು.

ಅಬ್ದುಲ್ ರಜ಼ಾಕ್ ಖಾದ್ರಿಯ ಸಮಾಧಿಯ ದಕ್ಷಿಣಕ್ಕಿರುವ ಅಷ್ಟಕೋನಾಕೃತಿಯ ಕಟ್ಟಡವು ಖಾನ್ ಮಹಮದ್ ಹಾಗೂ ಅವನ ಮಗ ಖವಾಸ್ ಖಾನನ ವಿಶ್ರಾಂತಿ ಗೃಹವಾಗಿತ್ತು. ಇವರನ್ನು



ರಾಜದ್ರೋಹದ ಅರೋಪದ ಮೇರೆಗೆ ಕೊಲ್ಲಲಾಯಿತು. ಈ ಸ್ಮಾರಕಗಳ ಸುತ್ತಲೂ ವಿಸ್ತಾರವಾದ ಒಳ್ಳೆಯ ತೋಟವಿದೆ.

ಎರಡನೇ ಆಲಿಆದಿಲ್ ಷಾನ ಸಮಾಧಿ (ಬಾರಾ ಕಮಾನ್)

ನಗರದ ಮಧ್ಯಭಾಗದಲ್ಲಿ ರಾಜಪ್ರಾಂಗಣಕ್ಕೆ ವಾಯುವ್ಯ ದಿಕ್ಕಿನಲ್ಲಿರುವ ವಿಶಾಲವಾದ ಚೌಕಾಕೃತಿಯ ಛಾವಣಿ ರಹಿತ ಹಾಗೂ ಅಪೂರ್ವವಾದ ಕಮಾನುಗಳಿಂದ ಕೂಡಿದ ಕಂದು ಬಣ್ಣದ ಅಗ್ನಿಶಿಲೆಯ ಕಟ್ಟಡವೇ ಎರಡನೇಯ ಆದಿಲ್‌ಷಾನ (1656–72) ಸಮಾಧಿ. ಪ್ರಾಯಶಃ ಇದನ್ನು ಅವನು



ಸಮಾಧಿಯ ಒಳನೋಟ

ಸಿಂಹಾಸನವೇರಿದಾಗ ಕಟ್ಟಲು ಪ್ರಾರಂಭಿಸಿದ್ದು. ಆತನ ತಂದೆ ಮಹಮದ್ ಆದಿಲ್‌ಷಾನ ಸ್ಮಾರಕ ಗೋಲಗ ಗುಂಬಜ್‌ನ್ನು ಮೀರಿಸುವಂತೆ ಬೃಹತ್ ಪ್ರಮಾಣದಲ್ಲಿ ನಿರ್ಮಿಸಲು ಯೋಜಿಸಿದ್ದರೂ ಅದು ಪೂರ್ತಿಗೊಳ್ಳಲಿಲ್ಲ.ಎತ್ತರವಾದ ಬುನಾದಿಯ ಮೇಲೆ ನಂತಿರುವ ಕಟ್ಟಡ 215 ಅಡಿಗಳ ಚೌಕಾಕಾರವನ್ನು ಹೊಂದಿದೆ. ಇಲ್ಲಿ ಎರಡನೇ ಆದಿಲ್‌ಷಾ ಮತ್ತು ಅವನ ಕೆಲ ಕುಟುಂಬದ ಸದ್ಯಸರ ಸಮಾಧಿ ಕಲ್ಲುಗಳಿದ್ದರೂ ನಿಜವಾದ ಸಮಾಧಿಗಳು ನೆಳಮಾಳಿಗೆಯಲ್ಲಿದ್ದು ಅವನ್ನು ಪೂರ್ವದಿಕ್ಕಿನಲ್ಲಿರುವ ಬಾಗಿಲಿನಿಂದ ಪ್ರವೇಶಿಸಬಹುದಾಗಿದೆ.

ಇಡೀ ಕಟ್ಟಡವು ಭದ್ರವಾದ ಅಡಿಪಾಯವನ್ನು ಹೊಂದಿದ್ದು ಒಂದು ವೇಳೆ ಪೂರ್ಣಗೊಂಡಿದ್ದರೆ, ಅದು ಬಿಜಾಪುರದಲ್ಲಿನ ಅತ್ಯಂತ ಆಕರ್ಷಕ ಸ್ಮಾರಕವಾಗುತ್ತಿತ್ತು. 300 ವರ್ಷಗಳ ಕಾಲ ಇದು ಬಿಸಿಲು ಮಳೆಗಳ ಹೊಡೆತಕ್ಕೆ ಸಿಕ್ಕಿದರೂ, ಇದರ ಕಮಾನುಗಳು ಸುರಕ್ಷಿತವಾಗಿವೆ. ಇದರಿಂದ ಅಂದಿನ ಶಿಲ್ಪಿಗಳ ನಿರ್ಮಿತಿ ಕೌಶಲ್ಯದ ಪ್ರತಿಭೆಯನ್ನು ತಿಳಿಯಬಹುದು. ಈ ಕಟ್ಟಡವು ನಗರದ ಹಾಳು ಬಿದ್ದ ಕಟ್ಟಡಗಳಲ್ಲಿ ಒಂದಾಗಿದೆ.

ಬಿಜಾಪುರ ನಗರದೆಲ್ಲೆಡೆ ಹಲವಾರು ಸಣ್ಣ ಪುಟ್ಟ ಗುಮ್ಮಟಗಳಿವೆ. ಆ ಪೈಕಿ ನೌ (ಒಂಭತ್ತು) ಗುಂಬಜ್ ಮತ್ತು ಮೋತಿ ಗುಂಬಜ್ ಮಸೀದಿಗಳು ಮುಖ್ಯವಾದವು.

ಹಾಸಿಂ ಪೀರ್ ದರ್ಗಾ

ಹಜ಼ರತ್ ಹಾಸಿಂ ಪೀರ್ ಬಿಜಾಪುರದ ಪ್ರಮುಖ ಸೂಫಿ ಸಂತರಲ್ಲಿ ಒಬ್ಬರು (1575–1646) ಷಾ ಬುರಾನುದ್ದೀನನ ಮಗನಾದ ಷಟ್ಟಾರಿ ಸೂಫಿ ಬಾಲ್ಯವನ್ನು ಅಹಮದಾಬಾದಿನಲ್ಲಿ ಕಳೆದ ಅಲ್ಲಿಂದ ಆತ ಸೌದಿ ಅರೇಬಿಯಾಗೆ ಹೋಗಿ, 1612ರಲ್ಲಿ ಎರಡನೇಯ ಇಬ್ರಾಹಿಂ ಆದಿಲ್‌ಷಾನ ಕಾಲದಲ್ಲಿ ಬಿಜಾಪುರಕ್ಕೆ ಬಂದನು. ಮಹಮ್ಮದ್ ಆದಿಲ ಷಾಹನು ಖಾಹಿಲೆಯಿಂದ ಮರಣಾವಸ್ಥೆಗೆ ಬಂದಿದ್ದಾಗ 1646ರಲ್ಲಿ ಅವನಗೆ ಹಾಸಿಂ ಪೀರ್ ಹತ್ತು ವರ್ಷಗಳ (1646–1656) ಆಯುಷ್ಯವನ್ನು ಕೊಟ್ಟನೆಂದು ಹೇಳಲಾಗಿದೆ. ಆಗಿನ್ನೂ ಗೋಲ್ ಗುಂಬಜ್ ಪೂರ್ಣಗೊಂಡಿರಲಿಲ್ಲ. 1656ರಲ್ಲಿ ಅದರ ನಿರ್ಮಾಣ ಪೂರ್ಣಗೊಂಡ ನಂತರ ಮಹಮದ್ ಆದಿಲ್‌ಷಾ ಮೃತನಾದ.

ಹಾಸಿಂ ಪೀರ್ ಕೋಮು ಸಾಮರಸ್ಯದ ಪ್ರತೀಕ ಈಗಲೂ ಎಲ್ಲ ಜನಾಂಗದವರು ಈ ದರ್ಗಾದಲ್ಲಿ ಪೂಜೆ ಸಲ್ಲಿಸುತ್ತಾರೆ. ಈ ದರ್ಗಾ ಗೋಲ್ ಗುಂಬಜ್‌ನ ಪಶ್ಚಿಮಕ್ಕಿದೆ.

ಗುಲಬರ್ಗಾವನ್ನು ಸ್ಥಳೀಯರು ಕಲಬುರ್ಗೆ, ಕಲಬುರ್ಗಿ ಎಂದು ಕರೆಯುತ್ತಾರೆ. ಇದು ಹಿಂದೆ ಬಹಮನಿ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಗುಲಬರ್ಗಾವು ಶ್ರೀಮಂತಿಕೆಯಿಂದ ಕೂಡಿದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ದಕ್ಷಿಣ ಭಾಅತದ ಅತ್ಯಂತ ಹಳೆಯ ಮುಸ್ಲಿಂ ಸಾಮ್ರಾಜ್ಯದವರಾದ ಬಹಮನಿಗಳು ಗುಲಬರ್ಗಾವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. 1347 ರಿಂದ 1424ರವರೆಗೆ ಆಳ್ವಿಕೆ ನಡೆಸಿದರು.

ಕಲಬುರ್ಗಿ, ಕಲಂಬರಿಗೆ, ಕಲಬರ್ಗೆ ಮುಂತಾಗಿ ಪುರಾತನ ಶಾಸನಗಳಲ್ಲಿ ಹೇಳಲ್ಪಟ್ಟಿರುವ ಗುಲಬರ್ಗಾವನ್ನು ಸ್ಥಳಿಯರು 'ಕಲಬುರ್ಗಿ' ಎಂದು ಕರೆಯುತ್ತಾರೆ. ಗುಲಬರ್ಗಾ ಜಿಲ್ಲೆಯು ಸಮೃದ್ಧವಾದ ಇತಿಹಾಸಡವನ್ನು ಹೊಂದಿದೆ. ಈ ಜಿಲ್ಲೆಯನ್ನು ದಕ್ಷಿಣದ ಪ್ರಖ್ಯಾತ ರಾಜವಂಶಸ್ಥರಾದ ಶಾತವಾಹನರು, ಬಾದಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರಿಗಳು, ಬಹಮನಿಗಳು, ಆದಿಲ್‌ಷಾಹಿಗಳು, ನಿಜಾಮ್ ಷಾಹಿಗಳು ಆಳಿದ್ದರು. ಪ್ರಾಚ್ಯವಸ್ತುವಿನ ಪ್ರಾಮುಖ್ಯತೆಯನ್ನು ಪಡೆದ ಹಲವಾರು ಸ್ಮಾರಕಗಳು ಜಿಲ್ಲೆಯಾದ್ಯಂತ ಹರಡಿವೆ. ಮಳಖೇಡ್ ರಾಷ್ಟ್ರಕೂಟರ ರಾಜಧಾನಿಯಾಗಿತ್ತೆಂದು ನಂಬಲಾಗಿದೆ. ಇದಕ್ಕೆ ಮೊದಲು, ಅಶೋಕನ ಸಾಮ್ರಾಜ್ಯದ ದಕ್ಷಿಣ ಭಾಗದಲ್ಲಿ ಸನ್ನತಿಯು ಮುಖ್ಯ ನಗರವಾಗಿತ್ತು. ಇಲ್ಲಿ ನಡೆದ ಉತ್ಖನನದಿಂದ ಮೌರ್ಯರ ಕಾಲಕ್ಕೆ ಸೇರಿದ ವಿಶೇಷ ಪ್ರಾಮುಖ್ಯತೆ ಪಡೆದ ಪಳೆಯುಳಿಕೆಗಳು ದೊರೆತಿವೆ.

ಬೆಳಗಾವಿ ಸ್ಮಾರಕಗಳು ಮತ್ತು ಸಮಾಧಿಗಳು

ಬಹುಮನೀಯರು

ಬೆಳಗಾವಿ ಪ್ರದೇಶವು ಬಹುಮನ ಸುಲ್ತಾನರ ಸ್ಥಾಪಕವಾದ ಅಲ್ಲಾವುದ್ದೀನ್ ಹಸನ್‌ಬಹುಮನ್-ಶಹಾನ ಆಳ್ವಿಕೆಗೆ ಒಳಪಟ್ಟಿತ್ತು. ಬಹುಮನ ಅರಸರ ಮಂತ್ರಿಯಾದ ಮಹಮದ್‌ಗವಾನನು ಬೆಳಗಾವಿ ಕೋಟೆಯನ್ನು ವಶಪಡಿಸಿಕೊಂಡು ಮುಸ್ತಫಾ ಎಂಬುವನನ್ನು ಅಲ್ಲಿ ತನ್ನ ಪ್ರತಿನಿಧಿಯನ್ನಾಗಿ ನೇಮಿಸಿ, ಬೆಳಗಾವಿಗೆ "ಮುಸ್ತಫಾಬಾದ್" ಎಂದು ಹೆಸರಿಟ್ಟನು.

ಮೊಘಲರು

ಬಿಜಾಪುರದ ಆದಿಲ್‌ಶಾಹಿಯವರು ಪತನವಾದ ನಂತರ ಮೊಘಲರು ಈ ಪ್ರದೇಶವನ್ನು ಆಳತೊಡಗಿದರು. ಕ್ರಿ.ಶ. 1692ರಲ್ಲಿ ರಾಮದುರ್ಗದ ಕೋಟೆಯನ್ನು ಔರಂಗಜೇಬನು ಗೆದ್ದುಕೊಂಡನು. ನಂತರ ಅವನ ಮಗನಾದ ಮಹಮ್ಮದ್‌ನು ಬೆಳಗಾವಿಯ ಉತ್ತರಕ್ಕಿರುವ ದೋಡೆಗ್ರಾಮದಲ್ಲಿ ತಂಗಿದ್ದನು. ದೋಡೆಗ್ರಾಮಕ್ಕೆ ಪಾದಶಹಾಪುರವೆಂದು ಹೆಸರಿಟ್ಟನು. ಈಗ ಇದು ಪಶ್ಚಾಪುರ ಎಂದು ಕರೆಯಲ್ಪಟ್ಟಿದೆ. ಈ ರೀತಿಯಾಗಿ ಮೊಘಲರು ಬೆಳಗಾವಿ ಪ್ರದೇಶದಲ್ಲಿ ರಾಜ್ಯವಾಳಿದರು.

ಬೆಳಗಾವಿ ಜಿಲ್ಲೆಯ ಮುಸ್ಲಿಂ ಸ್ಮಾರಕಗಳು ಹೆಚ್ಚಾಗಿ ಬಹಮನ ಮತ್ತು ಆದಿಲ್‌ಶಾಹಿ ಕಾಲಕ್ಕೆ ಸೇರಿವೆ. ಮುಸ್ಲಿಂರ ಧಾರ್ಮಿಕ ಸ್ಮಾರಕಗಳಲಿ ಮಸೀದಿ, ಜಾಮೀಮಸೀದಿ, ದರ್ಗಾ, ಗೋರಿ ಮತ್ತು ಈದ್ಗಾಗಳು ಕಂಡುಬರುತ್ತವೆ. ಈ ಸ್ಮಾರಕಗಳು ಬೆಳಗಾವಿ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿಯೂ ಇವೆ. ಪ್ರತಿಯೊಂದು ತಾಲ್ಲೂಕನ್ನೂ ಅಧ್ಯಯನ ಮಾಡಿದಾಗ ಕೆಲವೇ ತಾಲ್ಲೂಕುಗಳಲ್ಲಿ ಧಾರ್ಮಿಕ ಸ್ಮಾರಕಗಳನ್ನು ಕಟ್ಟಿಸಿದುದರ ಬಗ್ಗೆ ಕೆಲವು ಶಾಸನಗಳಿವೆ. ಕೆಲವು ಸಲ ವಿದ್ವಾಂಸರು ಸ್ಮಾರಕಗಳ ಶೈಲಿಯ ಆಧಾರದ ಮೇಲೂ ಧಾರ್ಮಿಕ ಸ್ಮಾರಕಗಳನ್ನು ಇವರದ್ದೇ ಕಾಲದ್ದೆಂದು ಗುರುತಿಸಿದ್ದಾರೆ. ಕರ್ನಾಟಕ್ ಗೆಜೆಟಿಯರ್‌ಗಳಲ್ಲಿ ಮುಸ್ಲಿಂ ಧಾರ್ಮಿಕ ಸ್ಮಾರಕಗಳ ಹೆಸರುಗಳು ಪ್ರಸ್ತಾಪಗೊಂಡಿವೆ.

ಬೆಳಗಾವಿ ಪಟ್ಟಣದಲ್ಲಿ ಒಟ್ಟು 7 ಪ್ರಮುಖ ದರ್ಗಾಗಳಿವೆ.

1. ಕಂಜರ್‌ವಾಲಿ ದರ್ಗಾ
2. ಭಾಷಿಬನ್ ದರ್ಗಾ
3. ಖಥಾಲ್‌ವಾಲಿ ದರ್ಗಾ
4. ಮುರದಾಲಿ ಶಹಾದರ್ಗಾ
5. ಅಸದ್‌ಖಾನ್ ದರ್ಗಾ
6. ಮಹಬೂಬ್ ಸುಭಾನದರ್ಗಾ
7. ಕಿಸ್ವರ್‌ಖಾನ್ ದರ್ಗಾ



ಗುಂಬಜ್

ಇವುಗಳಲ್ಲಿ ಕೇವಲ ಅಸದ್‌ಖಾನ್ ದರ್ಗಾಕ್ಕೆ ಮಾತ್ರ ಶಾಸನವು ಇದೆ. ಮಿಕ್ಕಿದವುಗಳಿಗೆ ಶಾಸನಗಳಿರುವುದಿಲ್ಲ. ಕ್ರಿ.ಶ. 1530ರ ಶಾಸನದ ಪ್ರಕಾರ ಬೆಳಗಾವಿ ಊರಿನ ಪಕ್ಕದ ಪ್ರದೇಶದಲ್ಲಿ ಅಸದ್‌ಖಾನನ ಗೋರಿ ಕಟ್ಟಲ್ಪಟ್ಟಿದೆ. ಇದನ್ನು ಈಗ ಅಸದ್‌ಖಾನ್ ದರ್ಗಾ ಎಂದು ಕರೆಯುತ್ತಾರೆ. ಈಗಲೂ ಕೂಡ ಹಿಂದೂ ಮತ್ತು ಮುಸಲ್ಮಾನರು ಈ ಗೋರಿಗೆ ಮಾನ್ಯತೆ ನೀಡುತ್ತಾರೆ.



ಗುಂಬಜ್ ಸಮಾಧಿಯ ಒಳನೋಟ

ಹುಕ್ಕೇರಿ ತಾಲೂಕು ಕೇಂದ್ರವಾಗಿದ್ದು, ಬೆಳಗಾವಿಯಿಂದ 48ಕಿ.ಮೀ. ದೂರದಲ್ಲಿದೆ. ಹುಕ್ಕೇರಿ ಎಂಬ ಹೆಸರು ಹೂವಿನ ಕೇರಿಯಿಂದ

ಬಂದಿದೆ. ಆದಿಲ್‌ಶಾಹಿ ಕಾಲದಲ್ಲಿ ಈ ಉತ್ತಮ ಜಾತಿಯ ಗುಲಾಬಿ ಹೂಗಳನ್ನು ಬೆಳೆದು ಬಿಜಾಪುರಕ್ಕೆ ಕೊಂಡೊಯ್ಯುತ್ತಿದ್ದರು. ಕ್ರಿ.ಶ. 1347ರಲ್ಲಿ ಹುಕ್ಕೇರಿಯಲ್ಲಿ ಅಮೀರ್ ಎಂಬ ಉನ್ನತ ಅಧಿಕಾರಿ ಇದ್ದ ಬಗ್ಗೆ ಉಲ್ಲೇಖವಿದೆ.

ಹುಕ್ಕೇರಿ ತಾಲೂಕಿನಲ್ಲಿರುವ ಮುಸ್ಲಿಂ ಧಾರ್ಮಿಕ ಸ್ಮಾರಕಗಳು

1. ಹೆಣ್ಣು ಮಕ್ಕಳ ಹೆಸರಿನಂದ ನಿರ್ಮಿಸಿದ ಖಾನ್‌ಸಾಹಿಬ್ ದರ್ಗಾವು ಇಲ್ಲಿರುವ ಶಾಸನದಿಂದ (ಕ್ರಿ.ಶ. 1567–1568) ತಿಳಿದುಬರುತ್ತದೆ.

2. ಹಮಿದುದ್ದೀನ್ ದರ್ಗಾವು ಗಜಬರ್‌ವಾಡಿಯಲ್ಲಿರುವ ಗಂಜೂಲ್ ಬಹಾರ್ ಮಸೀದಿಯ ಹತ್ತಿರವಿದೆ.

3. ಆಲಂ ಬುಖಾರಿ ದರ್ಗಾ ಜಾಮೀ ಮಸೀದಿಯ ಆವರಣದಲ್ಲಿದೆ.

4. ಕರೀಮ್ ಬಾಶಾ ದರ್ಗಾವು ಮಕ್ಕ ಮಸೀದಿಯ ಹತ್ತಿರವಿದೆ.

5. ಆಯೆಷ ಸುಲ್ತಾನಳ ದರ್ಗಾ ಹುಕ್ಕೇರಿಯಲ್ಲಿದೆ. (ಇವಳು ಫಿರೋಜಾಶಾಹ ಬಹಮನಿಯ ಮಗಳು).

ಹುಕ್ಕೇರಿಯಲ್ಲಿರುವ ಗೋರಿಗಳು

1. ಹುಕ್ಕೇರಿಯಲ್ಲಿರುವ ದೊಡ್ಡಗಾತ್ರದ ಗೋರಿಯನ್ನು ಐನ್–ಉಲ್–ಮುಲ್ಕ್‌ನು ಕ್ರಿ.ಶ. 1509ರಲ್ಲಿ ಕಟ್ಟಿಸಿದ್ದಾನೆ. ಆದರೆ ಐನ್–ಉಲ್–ಮುಲ್ಕ್‌ನನ್ನು ಇಲ್ಲಿ ಊಳಲಿಲ್ಲ.

ಚಿಕ್ಕ ಗುಮ್ಮಟವನ್ನು ಫತೇ–ಉಲ್–ಮುಲ್ಕ್‌ನು ಕ್ರಿ.ಶ. 1555ರಲ್ಲಿ ಕಟ್ಟಿಸಿದನು. ಮೂರನೆಯ ಗೋರಿಯನ್ನು ಕ್ರಿ.ಶ. 1569ರಲ್ಲಿ ರಣದುಲ್ಲಾಖಾನನು ಕಟ್ಟಿಸಿದನು.

ಶ್ರೀರಂಗಪಟ್ಟಣ (ಗುಂಬಜ್)

ಶ್ರೀರಂಗ ಪಟ್ಟಣದಲ್ಲಿರುವ ಟಿಪ್ಪುವಿನ ಭವ್ಯ ನಿರ್ಮಾಣಗಳಲ್ಲಿ ಜುಮ್ಮಾ ಮಸೀದಿ ಹಾಗೂ ತನ್ನ ತಂದೆ–ತಾಯಿಯರಾದ ಹೈದರ್ ಆಲಿ ಹಾಗೂ ಫಾತೀಮಾ (ಫಾಕ್ರುನ್ನೀಸಾ) ಬೇಗಂರ ಸಮಾಧಿ.

ಇಲ್ಲಿರುವ ಗುಮ್ಮಟ (ಗುಂಬಜ್) ಹೈದರ್ ಆಲಿಯ ಅಪೇಕ್ಷೆಯಂತೆ ಟಿಪ್ಪು ಕಟ್ಟಿಸಿದನೆಂದು ಪ್ರತೀತಿ. ಕಾವೇರಿಯ ಕವಲುಗಳು ಮತ್ತೆ ಕೊಡುವ ಸ್ಥಳಗಳಲ್ಲಿ ವಿಶಾಲವಾದ ತೋಟದ ನಡುವೆ ಕಟ್ಟಿರುವ ಈ ಗುಂಬಜ್ ವಿಶಾಲವಾದ ಜಗತಿಯ ಮೇಲೆ ಇರುವ ಚೌಕ ವಿನ್ಯಾಸದ ಕಟ್ಟಡದ ಸುತ್ತಲೂ ನುಣುಪಾಗಿ ಹೊಳಪು ಬರುವಂತೆ ಕಡೆದಿರುವ ಕರಿಯ ಕಲ್ಲಿನ ಕಂಬಗಳಿರುವ ಕೈಸಾಲೆ ಮನಮೋಹಕವಾದ ಗೋರಿಯ ಗ್ರಾನೈಟಿನ ಚಾವಣಿ ಕೆತ್ತನೆಗಳಿಂದ ಕೂಡಿದ ಗೋಡೆಗಳು ಟಿಪ್ಪು ಹಾಗೂ ಹೈದರಾಲಿಯ ಮೈಸೂರನ್ನು ಆಳಿದುದನ್ನು ಪ್ರದರ್ಶಿಸುವ ಸಲುವಾಗಿ 36 ಗ್ರಾನೈಟ್ ಸ್ಥಂಭಗಳನ್ನು ಹೊಂದಿದೆ. 220 ವರ್ಷ ಹಳೆಯದಾದ ಇದು ಇಂಡೋಇಸ್ಲಾಮಿಕ್ ವಾಸ್ತು ಶೈಲಿಯನ್ನು ಹೊಂದಿದೆ. ಸಮಾಧಿಯ ನಾಲ್ಕೂಕಡೆಗೂ ಅದೇ ರೀತಿಯ ಕಲ್ಲಿನ ಬಾಗಿಲುವಾಡಗಳನ್ನು ಚೌಕ ಸಮಾಧಿಕೋಣೆ ಚೌಕನಾಗಿಯೇ ಮತ್ತೊಂದು ಅಂತಸ್ತು ಮೇಲಿದ್ದು ಅದರ ಮೇಲೆ ದೊಡ್ಡದಾದ ಗುಮ್ಮಟವಿರುವ ಈ ಕಟ್ಟಡ ಮುಸ್ಲೀಂ ಶೈಲಿಯಲ್ಲಿಯೇ ವಿಶಿಷ್ಟವಾದುದಾದರೂ ಇದರ ಎತ್ತರಕ್ಕೆ ಸುತ್ತಲಿನ ಕೈಸಾಲೆ ತಗ್ಗಾಗಿದ್ದು ತೂಕ ತಪ್ಪಿದಂತಿದೆ. ಈ ಗುಂಬಜ್ ಬಾಗಿಲುಗಳನ್ನು ಎಬೋನ ಮರದಿಂದ ಮಾಡಲಾಗಿದ್ದು ಅವುಗಳನ್ನು ಆನೆದಂತಗಳಿಂದ ಹಾಗೂ ಮರಗಳಿಂದ ಇನ್ನೆ ಕುಸುರಿ ಕೆಲಸಗಳನ್ನು ಮಾಡಿ ಅಲಂಕರಿಸಲಾಗಿದ್ದು, ಇವುಗಳನ್ನು ಲಾರ್ಡ್ ಡಾಲ್ ಹೌಸಿ ನೀಡಿದ್ದನಂತೆ. ಬ್ರಿಟೀಷರು ಶ್ರೀರಂಗಪಟ್ಟಣವನ್ನು ತಮ್ಮ ವಶಕ್ಕೆ ತೆಗೆದುಕೊಂಡಾಗ ಇಲ್ಲಿ ಇದ್ದ ಚಿನ್ನ ಮತ್ತು ಬೆಳ್ಳಿಯಿಂದ ಮಾಡಿದ ಮೂರು ಬಾಗಿಲುಗಳನ್ನು ಲಂಡನ್‌ಗೆ ಸಾಗಿಸಿದರು. ಪ್ರಸ್ತುತ ಅವುಗಳನ್ನು ಲಂಡನ್ನನ ಆಲ್ಬರ್ಟ್ ಮ್ಯೂಸಿಯಂನಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿನ ಒಳಗೋಡೆಗಳಲ್ಲಿ ಹೊಂಬಣ್ಣದ ಹುಲಿಯ ಪಟ್ಟಿಗಳು ಹಾಗೂ ಜೊತೆಗೆ ಮೊಗಸಾಲೆಯಲಲಿ ಕಪ್ಪುಸ್ಥಂಭಗಳನ್ನು ಕಾಣಬಹುದು. ಇದಲ್ಲದೇ ಈ ಸಮಾಧಿಯ ಹೊರಗೆ ಟಿಪ್ಪುವಿನ ಸಮಾಧಿ ಇದೆ. ಹಾಗೂ ಟಿಪ್ಪುವಿನ ಪಟದ್ವ ರಾಣಿ ಮತ್ತು ಮಂತ್ರಿಗಳು, ರಾಜ ಪರಿವಾರದವರು,ಸಂಬಂಧಿಕರುಗಳು ಹಾಗೂ ವೀರರ ಸಮಾಧಿಗಳಿವೆ. ಇವುಗಳೆಲ್ಲವೂ ಸೇರಿದಂತೆ ಉದ್ಯಾನವನವನ್ನೊಳಗೊಂಡಿವೆ. ಈ ಸ್ಮಾರಕದ ಹತ್ತಿರವಾದಂತೆ ಜುಮ್ಮಾ ಮಸೀದಿ ಹಾಗೂ ರಂಗನಾಥಸ್ವಾಮಿಂಯು ದೇವಸ್ಥಾನವಿಎ. ಈ ಸ್ಥಳವು ಪ್ರಶಾಂತವಾಗಿ ನೋಡುಗರ ಮನಸೂರೆಗೊಳ್ಳುವಂತೆಮಾಡುತ್ತದೆ. ಹಾಗೂ ಶ್ರೀರಂಗಪಟ್ಟಣದಿಂದ ಸುಮಾರು 10 ಕಿ.ಮೀ. ದೂರದಲ್ಲಿ ಫೆಂಚರ್ ಸಮಾಧಿಗಳನ್ನು ನೋಡಬಹುದಾಗಿದೆ. ಟಿಪ್ಪುವಿನ ಕಾಲದಲ್ಲಿ ಯುದ್ಧದ ಸಂದರ್ಭದಲ್ಲಿ ಮಾಡಿದ ವೀರರ ಹಾಗೂ ಅವರ ಸಂಬಂಧಿಕರ, ಮಕ್ಕಳ ವಿವಿಧ ರೀತಿಯ ಸಮಾಧಿಗಳನ್ನು ವಿವಿಧ ಶೈಲಿಯಲ್ಲಿ, ವಿವಿಧ ಆಕೃತಿಯಲ್ಲಿ ಕಾಣಬಹುದಾಗಿದೆ.

ಅಧ್ಯಾಯ-8

ಮಧುವನಗಳು

ಮೈಸೂರನ್ನು ಆಳಿದ ಮಹಾರಾಜರು ಮತ್ತು ಅವರ ಕುಟುಂಬದವರ ಸಮಾಧಿಗಳಿರುವ ರುದ್ರಭೂಮಿಯನ್ನು 'ಮಧುವನ' ಎಂದು ಕರೆಯುತ್ತಾರೆ. ಈ ತಾಣ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಮೈಸೂರು ನಂಜನಗೂಡು ರಸ್ತೆಯ ಬದಿಯಲ್ಲಿ ಸುಮಾರು 8 ಎಕರೆಗಳಷ್ಟು ವಿಸ್ತಾರವಾಗಿ ಹರಡಿಕೊಂಡಿದೆ. ಅದು ಸ್ಮಶಾನವಾದರೂ ನೋಡುಗರಿಗೆ ಆ ಭಾವನೆ ಬರದೆ ಅದೊಂದು ವಾಸ್ತುವೈಭವದ ಮಂಟಪಗಳು ಮತ್ತು ಬೃಂದಾವನಗಳಿಂದ ಕೂಡಿಕೊಂಡು ಒಂದು ಅಪೂರ್ವ ಕಲೆಯ ನೆಲೆಯಾಗಿದೆ. ಒಂದು ಕಿರುದೇಗುಲಗಳ ಸಂಕೀರ್ಣವು ಎಂಬಂತೆ ಭಾಸವಾಗುತ್ತಿದೆ. ಗೌರವ ಮತ್ತು ಭಕ್ತಿಯ ಭಾವನೆಯನ್ನುಂಟುಮಾಡುತ್ತದೆ.



ಈ ರುದ್ರಭೂಮಿಯಲ್ಲಿ 9ನೆಯ ಚಾಮರಾಜ ಒಡೆಯರಾದಿಯಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು, ನಾಲ್ವಡಿಕೃಷ್ಣರಾಜ ಒಡೆಯರು, ಯುವರಾಜ ಕಂಠೀರವ ನರಸರಾಜ ಒಡೆಯರು, ಚಾಮರಾಜ ಒಡೆಯರು ಮೊದಲಾದ ಆಳಿದ ಮಹಾರಾಜರ ಸಮಾಧಿಗಳೇ ಅಲ್ಲದೇ ಮಹಾರಾಣಿಯವರಾದ ರಾಮವಿಲಾಸ ಸನ್ನಧಾನ, ಸೀತಾವಿಲಾಸ ಸನ್ನಧಾನ, ವಾಣಿವಿಲಾಸ ಸನ್ನಧಾನ, ರಾಜಕುಮಾರಿಯರಾದ ಚಲುವಾಜಮ್ಮಣ್ಣಿ, ಕೆಂಪನಂಜಮ್ಮಣ್ಣಿ, ಕೃಷ್ಣಜಮ್ಮಣ್ಣಿ, ದೇವಾಜಮ್ಮಣ್ಣಿ ಮೊದಲಾದವರೇ ಅಲ್ಲದೇ ಮೈಸೂರು ರಾಜಮನೆತನದವರ ರಕ್ತ ಸಂಬಂಧಿಗಳ ಸಾಲುಗಳೇ ಅಲ್ಲಿದೆ. ಹೀಗಾಗಿ ಅವು ಮೈಸೂರು ಅರಸರ ದೀರ್ಘಕಾಲದ ಇತಿಹಾಸವನ್ನು ಸಾರುತ್ತವೆ.



ನಾವು ಮಧುವನವನ್ನು ಪ್ರವೇಶಿಸಿದ ಕೂಡಲೇ ನಮಗೆ ಮೊದಲು ಎದುರಾಗುವುದು ಮಧುವನದ ಹೆಬ್ಬಾಗಿಲು. ಅದು ಸುಮಾರು 15 ಅಡಿ ಅಗಲ, 20 ಅಡಿ ಎತ್ತರವಾಗಿದೆ. ಗಜ್ಜುಗಾರೆಯಿಂದ ಭದ್ರಾವಿ ನಿರ್ಮಿಸಿರುವ ಆ ಮಹಾದ್ವಾರ ಚಿತ್ತಾಕರ್ಷಕ ವಾಸ್ತುವೈಭವದಿಂದ ಕೂಡಿದೆ. ಅದರ ಬಲಭಾಗದಲ್ಲಿ ವೀರಭದ್ರೇಶ್ವರನ ದೇವಾಲಯವಿದೆ. ಅದರಲ್ಲಿರುವ ವೀರಭದ್ರನ ಕಪ್ಪುಶಿಲೆಯ ವಿಗ್ರಹ ಬಲು ಸುಂದರವಾಗಿದೆ. ಇದನ್ನು ಸ್ಥಾಪಿಸಿದವರು ಮುಮ್ಮಡಿ ಕೃಷ್ಣರಾಜ ಒಡೆಯರು. ಹೆಬ್ಬಾಗಿಲಿನ ಎಡಭಾಗದಲ್ಲಿ ಮುಮ್ಮಡಿಯವರ

ಸಮಾಧಿಯಿದೆ. ಅದೊಂದು ಭವ್ಯವಾದ ಕಲಾತ್ಮಕ ಕಟ್ಟಡ. ಒಂದು ಸಣ್ಣ ದೇವಾಲಯದಂತೆ ಕಾಣುವ ಅದರಲ್ಲಿ 5 ಕಲ್ಲಿನ ಮೆಟ್ಟಿಲುಗಳನ್ನುಳ್ಳ ಎತ್ತರದ ಸಮಾಧಿ ಮತ್ತು ಮೇಲೊಂದು ಬೃಂದಾವನವಿದೆ. ಅದರೊಳಗೊಂದು ಕೃಷ್ಣನ ವಿಗ್ರಹ ಆ ಮಂಟಪ ಸುಮಾರು 25 ಅಡಿ ಚಚೌಕವಾಗಿದ್ದು, ಸುತ್ತಲೂ ಇರುವ 13 ಕಂಬಗಳ ಮೇಲೆ ಎತ್ತರದ ಗೋಪುರ ನಂತಿದೆ.



ಮಧುವನ ಸಮಾಧಿ ಮಂಟಪಗಳು

ಆ ಪಂಟಪದ ಎಡಭಾಗದಲ್ಲಿ ಚಾಮರಾಜ ಒಡೆಯರ ಸಮಾಧಿ ಮಂಟಪವಿದೆ. ಅದು ಕೂಡ ಆಕರ್ಷಕವಾಗಿದ್ದು, ಅದರ ಒಳಗಡೆ ಒಡೆಯರ ಭಾವಚಿತ್ರವನ್ನು ಇಡಲಾಗಿದೆ. ಆ ಬೃಂದಾವನದ ಎದುರಿಗೆ ಮುಮ್ಮಡಿಯವರ ಪತ್ನಿ ರಾಮವಿಸಾಲ ಸನ್ನಧಿಯವರ ಬೃಂದಾವನವಿದೆ. ಸುಮಾರು 6 ಅಡಿ ಚಚೌಕವಾಗಿರುವ ಅದರ ತಳಭಾಗದಲ್ಲಿ ಕಲ್ಲಿನ ಮೇಲೆ "ಆಳಿದ ಮಹಾಸ್ವಾಮಿ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್‌ರವರ ಧರ್ಮಪತ್ನಿ ಶ್ರೀ ರಾಮವಿಲಾಸ ಸನ್ನಧಾನದವರ ಬೃಂದಾವನ" ಎಂದು ಬರೆಯಲಾಗಿದೆ. ಇದೇ ಚಾಮರಾಜ ಒಡೆಯರ್ ಬೃಂದಾವನದ ಬಲಭಾಗದಲ್ಲಿ ಬೇರೆ 5 ಬೃಂದಾವನಗಳಿವೆ. ಅವೆಲ್ಲವೂ 4 ಅಡಿ ಚಚೌಕವಾಗಿದ್ದು, ಅವುಗಳಲ್ಲಿ ಒಂದು "ಆಳಿದ ಮಹಾಸ್ವಾಮಿ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಪತ್ನಿ ಸೀತಾವಿಲಾಸ ಸನ್ನಧಾನ" ಅವರದು. ಅದರ ಹಿಂಭಾಗದಲ್ಲಿ ತೃತೀಯ ಮಹಾರಾಜ ಕುಮಾರಿ ಚಲುವಾಜಮ್ಮಣ್ಣಿ ಅವರ ಬೃಂದಾವನ ಆಕರ್ಷಕವಾಗಿದೆ. ಅದರ ಪಕ್ಕದಲ್ಲಿ

ರಾಜಕುಮಾರಿಯರಾದ ಕೆಂಪನಂಜಮ್ಮಣ್ಣಿ, ಕೃಷ್ಣಾಜಮ್ಮಣ್ಣಿ, ದೇವಾಜಮ್ಮಣ್ಣಿ ಚಾಮರಾಜ ಒಡೆಯರ್ ದ್ವಿತೀಯ ರಾಜಕುಮಾರಿ ಕೃಷ್ಣಾಜಮ್ಮಣ್ಣಿಯವರ ಬೃಂದಾವನಗಳಿವೆ. ಅವೆಲ್ಲವೂ ಕಲಾತ್ಮಕ ಸ್ಮಾರಕಗಳು. ಇನ್ನೊಂದು ಭಾಗದಲ್ಲಿ ಮಹಾರಾಣಿ ಸುಜಯಾದೇವಿಯವರ ಬೃಂದಾವನವಿದೆ. ಅದರ ಮುಂದೆ "ಆಳಿದ ಮಹಾಸ್ವಾಮಿಯವರಾದ ಚಾಮರಾಜ ಒಡೆಯರ್‌ರವರ ಧರ್ಮಪತ್ನಿ ಮಹಾರಾಣಿ ರೀಜೆಂಟರಾದ ಶ್ರೀ ವಾಣಿವಿಲಾಸ ಸನ್ನಿಧಾನ" ಅವರ ಬೃಂದಾವನವಿದೆ.

ಅದರ ಸಮೀಪದಲ್ಲಿ ಶ್ರೀ ಮದ್ಯುವ ರಾಜರಾದ ಶ್ರೀ ಕಂಠೀರವ ನರಸರಾಜ ಒಡೆಯರ್ ಅವರ ಬೃಂದಾವನವಿದೆ. ಅದರ ಹಿಂಭಾಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಬೃಂದಾವನವಿದೆ. ಹೀಗೆ ಕೆಲವರಲ್ಲಿ ಮಾತ್ರ ಹೆಸರು, ಜನನ ಮತ್ತು ಮರಣದ ಹೆಸರುಗಳನ್ನು ಕೆತ್ತಲಾಗಿದೆ. ಉಳಿದವುಗಳಲ್ಲಿ ಇಲ್ಲ. ಅಲ್ಲದೇ ಈ ಭಾಗದಲ್ಲಿ ಮೈಸೂರು ರಾಜಮನೆತನಕ್ಕೆ ಸೇರಿದವರೆಲ್ಲರ ಸಮಾಧಿಗಳು ಇಲ್ಲಿವೆ. ಅವುಗಳಲ್ಲಿ ಕೆಲವರಲ್ಲಿ ಮಾತ್ರ ಬೃಂದಾವನಗಳಿವೆ. ಅವೆಲ್ಲವೂ ಕಲಾತ್ಮಕವಾಗಿವೆ.

ಈ ಬೃಂದಾವನಗಳೇ ಅಲ್ಲದೇ ಈ ರುದ್ರಭೂಮಿಯಲ್ಲಿ ವೀರಭದ್ರಸ್ವಾಮಿ ದೇವಾಲಯವೇ ಅಲ್ಲದೇ ಬೇರೊಂದು ಶಿವ ದೇವಾಲಯವಿದೆ. ಅದರ ಮುಂಭಾಗದಲ್ಲಿ ಪಾರ್ವತಿಯ ಗುಡಿಯಿದ್ದು ಅದರಲ್ಲಿದ್ದ ಪಾರ್ವತಿಯ ಸುಂದರ ವಿಗ್ರಹವನ್ನು ದುಷ್ಕರ್ಮಿಗಳು ನಾಶಮಾಡಿದ್ದಾರೆ. ಅದರ ಪಕ್ಕದಲ್ಲಿಯೇ ದೀಪಗಳನ್ನು ಹತ್ತಿಸುವುದಕ್ಕೆ ಬಳಸುವ ಒಂದು ಉದ್ದದ ಗೋಡೆ ಇದೆ. ಅಲ್ಲಿಯೇ ತುಸು ದೂರದಲ್ಲಿ ಒಂದು ಮೈಸಾಸುರನ ವಿಗ್ರಹವಿದ್ದು ಅದು ಚಾಮುಂಡಿ ಬೆಟ್ಟದಲ್ಲಿರುವ ವಿಗ್ರಹವನ್ನು ಹೋಲುತ್ತದೆ. ಅದೇ ಮಧುವನದ ಮಧ್ಯಭಾಗದಲ್ಲಿ ಕಾಶೀ ವಿಶ್ವನಾಥನ ದೇವಾಲಯವೂ ಅವರ ಬಲಭಾಗದಲ್ಲಿ ಸಣ್ಣದೊಂದು ಗಣೇಶನ ಗುಡಿ ಮತ್ತು ಎಡಭಾಗದಲ್ಲಿ ಕಾಳಮ್ಮದೇವಿಯ ಗುಡಿಯೂ ಇದೆ.

ಇಂಥ ಒಂದು ಪವಿತ್ರವಾದ ಮತ್ತು ಕಲಾಸೌಂದರ್ಯಭರಿತವಾದ ತಾಣ ಇಲ್ಲಿಯವರೆಗೆ ಸ್ವಲ್ಪ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಆದರೆ ಈಗ ಪುನಃ ತನ್ನ ಪೂರ್ವದ ರೂಪವನ್ನು ಹೊಂದುವ ಕಾಲ ಒದಗಿಬಂದಿದೆ. ಮಾನ್ಯ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಇಂದು ಅದನ್ನೊಂದು ನಿಜವಾದ ಮಧುವನವನ್ನಾಗಿಸುವ ತೀರ್ಮಾನ ಕೈಗೊಂಡಿದ್ದರು. ಬೃಂದಾವನ ಚಾಮುಂಡಿಬೆಟ್ಟಗಳ ರೀತಿಯಲ್ಲಿ ಅದನ್ನೊಂದು ಸುಂದರ ಹಾಗೂ ಪವಿತ್ರ ಪ್ರವಾಸಿ ತಾಣವನ್ನಾಗಿ ಪರಿವರ್ತಿಸಲು ಕ್ರಮಕೈಗೊಂಡಿದ್ದರು. ಅದರ ಪರಿಣಾಮವಾಗಿ ಈ ವನದ ಸುತ್ತ ಸಿಮೆಂಟ್‌ಗೋಡೆ ನಿರ್ಮಿಸಲಾಗಿದೆ. ಹೆಬ್ಬಾಗಿಲನ್ನು ದುರಸ್ಥಿಗೊಳಿಸಲಾಗಿದೆ. ಮುಂಭಾಗದಲ್ಲಿ ಹೂದೋಟಗಳನ್ನು ಬೆಳೆಸಲಾಗಿದೆ. ಅಲ್ಲಿಯ ಈಜು ಕೊಳವನ್ನು

ಪುನಃ ಸ್ಥಾಪಿಸಲಾಗಿದೆ. ಆ ವನದ ನಟ್ಟನಡುವೆ ಗಗನಚುಂಬಿಯಾಗಿ ತಲೆಯೆತ್ತಿ ಮೈಚಾಚಿ ಗತವೈಭವದ ಇತಿಹಾಸವನ್ನು ಸಾರಿ ಹೇಳುತ್ತಾ ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ಬೃಹತ್ ಅರಳಿಮರ ಇದನ್ನೆಲ್ಲಾ ಗಮನಿಸುತ್ತಾ ನಿಟ್ಟುಸಿರು ಬಿಡುತ್ತಾ ಓಲಾಡುತ್ತಿದೆ.

ಚಂದ್ರವನ

ಮಧುವನದಂತೆ 'ಚಂದ್ರವನ' ಕೂಡಾ ಮೈಸೂರು ರಾಜವಂಶದವರ ರುದ್ರಭೂಮಿಯಾಗಿದ್ದು, ಅದು ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಯ ಸಮೀಪದಲ್ಲಿ ಮೈಸೂರು ಬೆಂಗಳೂರು ಹೆದ್ದಾರಿಯಿಂದ ಸುಮಾರು 1 ಕಿ.ಮೀ. ದೂರದಲ್ಲಿದೆ. ಮೈಸೂರು ಒಡೆಯರು ಮೈಸೂರನ್ನು ರಾಜಧಾನಿಯನ್ನಾಗಿಸಿ ಮಾಡಿಕೊಂಡು ಆಳುವುದಕ್ಕೆ ಮೊದಲು ಶ್ರೀರಂಗಪಟ್ಟಣ ಅವರ ರಾಜಧಾನಿಯಾಗಿತ್ತು. ಆದರೆ ಅದರ ಪ್ರಾಚೀನತೆ ಏನು? ಮತ್ತು ಅದಕ್ಕೆ 'ಚಂದ್ರವನ' ಎಂಬ ಹೆಸರನ್ನಿಡುವುದಕ್ಕೆ ಕಾರಣವೇನೆಂಬುದು ತಿಳಿದುಬಂದಿಲ್ಲ. ಆ ರುದ್ರಭೂಮಿ ಸುಮಾರು 2–3 ಎಕರೆಗಳಷ್ಟು ವಿಸ್ತಾರವಾಗಿದ್ದು ಅದರ ಮೂರು ಕಡೆಗಳಲ್ಲಿ ಶಿಥಿಲವಾದ ಗೋಡೆಯಿದೆ. ಅಲ್ಲೆಲ್ಲ ಗಿಡಗಂಟೆಗಳು ಬೆಳೆದಿದ್ದು ಅದು ನಿರ್ಜನ ಪ್ರದೇಶವಾಗಿದೆ. ಅಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಗಿಂತ ಪೂರ್ವದ ಕುಟುಂಬದವರ ಸಮಾಧಿಗಳಿದ್ದುದಾಗಿ ತಿಳಿದುಬರುತ್ತದೆ. ಹಾಗೂ ಅವುಗಳ ಕುರುಹುಗಳೂ ಕೂಡಾ ಅಲ್ಲಿವೆ. ಆದರೆ ಈಗ ಉಳಿದಿರುವ ಸಮಾಧಿ ಮಂಟಪವೆಂದರೆ ಅದು ಖಾಸಚಾಮರಾಜ ಒಡೆಯರದ್ದು. ಅವರು ಮುಮ್ಮಡಿ ಕೃಷ್ಣರಾಜ ಒಡೆಯರ ತಂದೆ. ಮೈಸೂರು ಸಂಸ್ಥಾನವನ್ನಾಳಿದ 21ನೇ ಮಹಾರಾಜರು. ಈ ಸಮಾಧಿ ಮಂಟಪ ಸುಮಾರು 20 ಅಡಿ ಚಚೌಕವಾಗಿದ್ದು, ಸುಮಾರು 15 ಅಡಿ ಎತ್ತರವಾಗಿದೆ. ಮೇಲೆರಡು ಕಲಾತ್ಮಕ ಗೋಪುರವಾಗಿದೆ. ಕಲ್ಲು ಕಂಬಗಳು ಮತ್ತು ತೊಲೆಗಳನ್ನು ಬಳಸಿ ಭದ್ರವಾಗಿ ಕಟ್ಟಿರುವ ಈ ಕಟ್ಟಡ ಒಂದು ಸುಂದರ ದೇವಾಲಯದ ಮಾದರಿಯಲ್ಲಿದೆ. ಒಳಗೆ ವಿಶಾಲವಾದ ಹಜಾರವಿದ್ದು ಅದರ ಮಧ್ಯ ಒಂದು ಬೃಂದಾವನವಿದೆ. ಆದರೆ ಅದರ ತುಂಬ ಕಸ, ಧೂಳು ತುಂಬಿದ್ದು ಒಳಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಟ್ಟಡವನ್ನು ಭದ್ರವಾಗಿ ನಿರ್ಮಿಸಿರುವುದರಿಂದ ಅದಿನ್ನೂ ನಾಶವಾಗದೇ ಉಳಿದುಕೊಂಡಿದೆ. ಅದರ ಬಲಭಾಗದಲ್ಲಿ ಇನ್ನೊಂದು ಸಣ್ಣದಾದ ಸಮಾಧಿ ಮಂಟಪವಿದ್ದು ಶಿಥಿಲಗೊಂಡು ಬಿದ್ದುಹೋಗಿದೆ. ಅದು ಯಾರ ಸಮಾಧಿ ಎಂದು ತಿಳಿಯುವುದಿಲ್ಲ.

ನಾಯಿ ಸ್ಮಾರಕಗಳು

ಮೈಸೂರು ರಾಜಮನೆತನದವರು ತಾವು ಸಾಕುತ್ತಿದ್ದ ನಾಯಿ, ಕುದುರೆ, ಒಂಟೆ, ಆನೆ ಮೊದಲಾದ ಪ್ರಾಣಿಗಳು ಸಾವನ್ನಪ್ಪಿದಾಗ ಅದನ್ನು ಸಮಾಧಿ ಮಾಡಿ ಆ ಸ್ಥಳಗಳಲ್ಲಿ ಅವುಗಳ ಸ್ಮರಣಾರ್ಥ ಶಾಸನಗಳನ್ನು ಹಾಕಿಸುತ್ತಾ ಬಂದಿರುವುದನ್ನು ಹಲವೆಡೆ ಕಾಣುತ್ತೇವೆ. ಅಂಥ ಸಮಾಧಿಗಳಲ್ಲಿ ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿರುವ ನಾಯಿ ಸ್ಮಾರಕಗಳು ಕೂಡಾ ಸೇರುತ್ತವೆ.

ಮೈಸೂರು ಒಡೆಯರ ಅರಮನೆಗಳಲ್ಲಿ ಒಂದಾದ 'ಜಯಲಕ್ಷ್ಮಿ ವಿಲಾಸ ಅರಮನೆ' ಮಾನಸಗಂಗೋತ್ರಿಯ ಆವರಣದಲ್ಲಿದೆ. ಈ ಅರಮನೆಯಲ್ಲಿ ಈ ಹಿಂದೆ ಚಾಮರಾಜ ಒಡೆಯರ ಪ್ರಥಮ ಮಹಾರಾಜ ಕುಮಾರಿ ಜಯಲಕ್ಷ್ಮಮ್ಮಣ್ಣಿ ಯವರ ಕುಟುಂಬ ವಾಸಿಸುತ್ತಿತ್ತು. ಅಂದು ಅವರು ಕೆಲವು ನಾಯಿಗಳನ್ನು ಸಾಕಿದರು. ಅವು ಸಾವನ್ನಪ್ಪಿದಾಗ ಅವುಗಳ 'ಶವ'ಗಳನ್ನು ಬೇರೆಲ್ಲೂ ಎಸೆಯದೆ ಅಲ್ಲಿಯೇ ಒಂದೆಡೆ ಸಾಲಾಗಿ ಸಮಾಧಿ ಮಾಡಿಸಿ, ಅವುಗಳ ಸ್ಮರಣಾರ್ಥ ಶಾಸನಗಳನ್ನು ಹಾಕಿಸಿದ್ದರೂ ಕೆಲವು ಶಾನಗಳು ಈ ಅರಮನೆಯ ಮುಂಭಾಗದ ಬಯಲಿನಲ್ಲಿದೆ. ಅವು ಒಟ್ಟು 8 ಶಾಸನಗಳಿದ್ದು, 2 ರಿಂದ 3 ಅಡಿ ಎತ್ತರ 1 ರಿಂದ 1 $^1/_2$ ಅಡಿ ಅಗಲವಾಗಿದೆ. ಅವನ್ನು 1941 ಮತ್ತು 1945ರ ನಡುವಿನ ಅವಧಿಯಲ್ಲಿ ಸ್ಥಾಪಿಸಲಾಗಿದೆ. ಅವುಗಳ ಮೇಲೆ ಕ್ರಮವಾಗಿ 'ಅಲೆಗ್ಸಾಂಡರ್', 'ಮಮ್ಮಿ', 'ಮಿಕ್ಕಿ', 'ಟಾಮ್', 'ಫಿಫಿ', 'ಬಬಿ', 'ಕೋಕಿ' ಮತ್ತು 'ಮಿಟ್ಟಿ' ಎಂದು ನಾಯಿಗಳ ಹೆಸರುಗಳನ್ನು ಅವು ಸತ್ತ ದಿನಾಂಕಗಳನ್ನು ಹಾಗೂ ಅವು ಸತ್ತಾಗಿನ ಅವುಗಳ ವಯಸ್ಸನ್ನು ಕೆತ್ತಲಾಗಿದೆ. ಈ ಸ್ಮಾರಕಗಳು ಈಗಲೂ ಮೈಸೂರು ಒಡೆಯರ ಪ್ರಾಣಿಪ್ರೀತಿ ಮತ್ತು ಪ್ರಾಣಿದಯೆಯನ್ನು ಸಾರುವ ಕುರುಹುಗಳಾಗಿವೆ. ಅವರ ಗತ ಇತಿಹಾಸದ ಭಾಗಗಳಾಗಿವೆ. ಆದುದರಿಂದ ಆ ಸ್ಮಾರಕಗಳು ಆ ಸ್ಥಳಗಳಲ್ಲಿ ಆ ಸ್ಥಿತಿಯಲ್ಲಿರದೇ ಅವಸಾನದ ಹಂಚಿನಲ್ಲಿವೆ.

ಹೀಗೆ ನಾಯಿಗಳ ಸ್ಮಾರಕಗಳೇ ಅಲ್ಲಿವೆ. ರಾಜಕುಟುಂಬದವರು ತಮ್ಮ ಪ್ರೀತಿಯ ಪ್ರಾಣಿಗಳಾಗಿದ್ದ ಕುದುರೆ, ಒಂಟೆ ಮತ್ತು ಆನೆಗಳ ಸ್ಮಾರಕಗಳನ್ನು ಹಾಕಿಸಿರುವುದುಂಟು. ಅಂಥ ಸ್ಮಾರಕಗಳು ಈಗಿನ ಜಯಲಕ್ಷ್ಮಿಪುರಂ ಬಡಾವಣೆಯಲ್ಲಿರುವ ಬಿ.ಎಂ.ಆಸ್ಪತ್ರೆ ಕಟ್ಟಡ ಇರುವ ಜಾಗದಲ್ಲಿಯೂ ಯುವರಾಜ ಕಾಲೇಜಿನ ಸಮೀಪದ ಬಯಲು ಜಾಗದಲ್ಲಿಯೂ ಇದ್ದುದಾಗಿ ತಿಳಿದುಬರುತ್ತದೆ. ಆದರೆ ಅವನ್ನು ನಾವಿಂದು ನೋಡಲಾಗುತ್ತಿಲ್ಲ. ಒಟ್ಟಿನಲ್ಲಿ ಇಂಥ ಸ್ಮಾರಕಗಳು ನೂರಾರು ವರ್ಷಗಳ ಕಾಲ ನಾಡನ್ನಾಳಿದ ಯದುವಂಶವ ಗತವೈಭವದ ಪಳೆಯುಳಿಕೆಗಳೇ ಆಗಿವೆ. ಐತಿಹಾಸಿಕ ಮಹತ್ವದ ದಾಖಲೆಗಳಾಗಿವೆ. ಅವನ್ನು ಸಂರಕ್ಷಿಸಿಡುವುದು ನಮ್ಮ ಹಾಗೂ ಮುಂದಿನ ಪೀಳಿಗೆಯ ಆದ್ಯ ಕರ್ತವ್ಯವಾಗಿದೆ.

ಇತ್ತೀಚಿನ ಸಮಾಧಿಗಳು:



ಆಧುನಕತೆ ಬೆಳೆದಂತೆ ಸಮಾಧಿಗಳ ವಿನ್ಯಾಸಗಳು, ಪದ್ಧತಿಗಳು ಬದಲಾಗುತ್ತಾ ಇವೆ. ನಮ್ಮ ಎಲ್ಲಾ ಗತಿಸಿದ ನಾಯಕ ಶ್ರೇಷ್ಠರಿಗೆ ಸಮಾಧಿಗಳಿವೆ. ಎಕರೆಗಟ್ಟಲೆ ಸ್ಥಳದಲ್ಲಿ ನಿರ್ಮಿಸಲಾದ ಭವ್ಯಗೋರಿಗಳಿವೆ. ಕಾಲಾಂತರದಲ್ಲಿ ಆ ಸಮಾಧಿಗಳು ಯಾತ್ರಾ ಹಾಗೂ ಪ್ರವಾಸೋದ್ಯಮ ಸ್ಥಳಗಳಾಗಿವೆ. ಮಹಾತ್ಮಾ ಗಾಂಧಿ- ರಾಜ್‌ಘಾಟ್, ನೆಹರು-ಶಾಂತಿವನ, ಇಂದಿರಾಗಾಂಧಿ-ಶಕ್ತಿಸ್ಥಳ, ಲಾಲ್‌ಬಹದ್ದೂರ್‌ಶಾಸ್ತ್ರಿ-ವಿಜಯಘಾಟ್, ಸ್ವತಂತ್ರಬಂದ ನಂತರ ನಮ್ಮ ನೇತಾರರಾದ ರಾಜೀವ್‌ಗಾಂಧಿ-ವೀರಭೂಮಿ, ಗುಜ್ಜಾರಿಲಾಲ್‌ನಂದ-ನರೇನ್‌ಘಾಟ್, ಅಂಬೇಡ್ಕರ್-ಚೈತ್ಯಭೂಮಿ ಇವುಗಳು ಇಂದು ಪೂಜ್ಯನೀಯ ಸ್ಥಳಗಳಾಗಿದ್ದು ಆ ಮಹನೀಯರನ್ನು ಪ್ರತಿನಿತ್ಯ ಪೂಜಿಸುವ ಪುಣ್ಯಸ್ಥಳಗಳಾಗಿವೆ. ಇಷ್ಟೇ ಅಲ್ಲದೇ ಸಿನಿಮಾ ತಾರೆಯರಾದ ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್ ರಂತಹ ಮೇರುನಟರ ಸ್ಮಾರಕಗಳು ಇಂದು ಪ್ರವಾಸಿ ತಾಣಗಳಾಗಿವೆ. ನೆರೆಯ ರಾಜ್ಯದ ಎಂ.ಜಿ.ಆರ್., ಎನ್.ಟಿ.ಆರ್. ರಂತಹ ಗಣ್ಯರ ಸ್ಮಾರಕಗಳನ್ನು ಇದೇ ರೀತಿಯಾಗಿ ಕಾಣಬಹುದು.



ಹಳ್ಳಿಗಳಲ್ಲಿ ಪ್ರತ್ಯೇಕ ಸಮಾಧಿಗಳಿದ್ದಂತೆ, ನಗರ ಪ್ರದೇಶಗಳಲ್ಲಿಯೂ ಇದೆ. ಆದರೆ ಸ್ಥಳಗಳ ಅಭಾವದಿಂದಾಗಿ ನಗರ ಪ್ರದೇಶದಲ್ಲಿ ಸುಡುವುದು ಹೆಚ್ಚು ರೂಢಿಯಲ್ಲಿದೆ. ಮಹಾನಗರಗಳಲ್ಲಿ ಸಮಾಧಿ ನಿರ್ಮಿಸಲು ಒಂದು ವರ್ಷ ಅಷ್ಟೇ ಅವಕಾಶವಿದೆ. ನಂತರ ಅದನ್ನು ನಾಶಮಾಡಿ ಸ್ಥಳವನ್ನು ಖಾಲಿ ಬಿಡುತ್ತಾರೆ.



ಹಾಗೇ ಸಮಾಧಿ ಕಟ್ಟಲು ಇಂದು ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿ, ನಗರಗಳಲ್ಲಿ ನಗರ ಪಾಲಿಕೆಗಳಿಂದ ಕಾನೂನು ಬದ್ಧವಾಗಿ ನೋಂದಣಿ ಮಾಡಿಬೇಕು. ಗ್ರಾಮೀಣ ಪ್ರದೇಶದಲ್ಲಿ ಇದನ್ನು ಹೆಚ್ಚು ಪಾಲಿಸದೇ ಇದ್ದರೂ, ನಗರ ಪ್ರದೇಶದಲ್ಲಿ ಕಡ್ಡಾಯವಾಗಿ ಪಾಲಿಸಲೇಬೇಕು.

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಸ್ಮಶಾನಗಳಿಗೆಂದೇ ಕೆಲವು ಕಡೆಗಳಲ್ಲಿ ಸರ್ಕಾರದಿಂದ ಜಾಗವನ್ನು ಬಿಟ್ಟು ಅಲ್ಲಿ ಸಾರ್ವಜನಕರು ಸತ್ತರೆ ಅವರ ಸಂಬಂಧಿಕರುಗಳು ಸೇರಿ ಸ್ಮಶಾನಗಳಲ್ಲಿ ಆ ಸತ್ತ ವ್ಯಕ್ತಿಯ ದೇಹವನ್ನು ಆಯ್ದ ಸ್ಥಳಕ್ಕೆ ಹೂಳುತ್ತಾರೆ. ನಂತರ ಆ ಹೂತ ಸ್ಥಳಗಳಲ್ಲಿ ಆ ವ್ಯಕ್ತಿಯ ನೆನಪಿಗಾಗಿ ಸಮಾಧಿ ನಿರ್ಮಿಸುತ್ತಾರೆ. ಸ್ಮಶಾನದಲ್ಲಿನ ತನ್ನವರನ್ನು ಹೂತ ಸ್ಥಳದ ಗುರ್ತಿಗಾಗಿಯೋ ಅವರ ಆರ್ಥಿಕ ಅನುಕೂಲಕ್ಕೆ ತಕ್ಕಹಾಗೆ ಗಾರೆಗಳಿಂದ, ಅಥವಾ



ಗ್ರಾನೈಟ್‌ಗಳಿಂದ ನಿರ್ಮಿಸುತ್ತಾರೆ. ಹಳ್ಳಿಗಾಡಿನಲ್ಲಿ ಸತ್ತ ಜಾಗದಲ್ಲಿ ಅವರ ನೆನಪಿಗಾಗಿ ಹೂತ ಸ್ಥಳಗಳಲ್ಲಿ ಮರಗಳನ್ನು ನೆಡುವ ಪ್ರತೀತಿಯಿದೆ. ಅಂತೆಯೇ ಸಮಾಧಿಗಳಿಗೆ ಹಾಕಲು ಗ್ರಾನೈಟ್‌ಗಳಿಂದ ಸತ್ತವ್ಯಕ್ತಿಯ ಭಾವಚಿತ್ರವನ್ನು ಕೊರೆಸಿ ಅಥವಾ ಶಿಲ್ಪವನ್ನು ರಚನೆ ಮಾಡಿಸಿ ಹಾಕಿರುವುದನ್ನು ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಸ್ಮಶಾನದಲ್ಲಿ ಹಲವಾರು ವಿಧಗಳನ್ನು ಕಾಣಬಹುದು.

ಪ್ರತಿಯೊಂದು ಧರ್ಮದಲ್ಲೂ ಶವ ಸಂಸ್ಕಾರ ಪದ್ಧತಿಯು ಭಿನ್ನವಾಗಿರುತ್ತದೆ. ಮುಸ್ಲಿಂ ಧರ್ಮದಲ್ಲಿ ಶವವನ್ನು ಪೆಟ್ಟಿಗೆಯಲ್ಲಿ ಹೊಯ್ದು ನಂತರ ಹೂಳುತ್ತಾರೆ ಹಾಗೆ ಕ್ರೈಸ್ತ ಧರ್ಮದವರು ಪೆಟ್ಟಿಗೆಯ ಸಮೇತ ಹೂಳುತ್ತಾರೆ. ಶವ ಸಾಗಿಸುವ ಪೆಟ್ಟಿಗೆಗಳನ್ನು ಧರ್ಮಕ್ಕೆ, ಆರ್ಥಿಕತೆ ಅನುಗುಣವಾಗಿ ವಿನ್ಯಾಸ ಮಾಡಲಾಗಿರುತ್ತದೆ. ಶವ ಪೆಟ್ಟಿಗೆಗಳಲ್ಲಿ ಕುಸುರಿ ಕಲೆಗಳು ಕಂಡು ಬರುತ್ತವೆ. ಇವು ಮಾರುಕಟ್ಟೆಯಲ್ಲಿ ಲಭ್ಯವಿರುತ್ತವೆ.

ಹಿಂದೂ ಧರ್ಮದಲ್ಲಿ ಹೂಳುವ ಸುಡುವ ಎರಡೂ ಪದ್ಧತಿಗಳು ಆಚರಣೆಯಲ್ಲಿವೆ. ಬಿದಿರು ಬಂಬೂಗಳನ್ನು ಚಟ್ಟ ಕಟ್ಟಿ ಶವ ಸಾಗಿಸಲಾಗುತ್ತದೆ. ಇದಕ್ಕೆ ಹೂವಿನಂದ ಅಲಂಕರಿಸುವುದು ರೂಢಿಯಲ್ಲಿದೆ. ಈ ರೀತಿಯಾಗಿ ಇತ್ತೀಚಿನ ಸಮಾಧಿಗಳಲ್ಲಿ ಕೇವಲ ಆಡಂಬರಗಳಲ್ಲದೆ ಸಾಮಾನ್ಯವಾಗಿ ಗುರ್ತಿಗಷ್ಟೆ ನಿರ್ಮಿಸಲು ಸಮಾಧಿಗಳನ್ನು ಕಾಣಬಹುದಾಗಿದೆ.

ಪರಾಮರ್ಶನ ಗ್ರಂಥಗಳು:

1) ಕರ್ನಾಟಕ ಕಲೆಗಳು, (ವಾಸ್ತು) ನಾಲ್ಕನೇ ಸಂಪುಟ – ಡಾ॥ ಬಾ.ರಾ.ಗೋಪಾಲ್

2) ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

3) ಲೋಥಲ್ ಮತ್ತು ಸಿಂಧೂ ನಾಗರೀಕತೆ – ಮೂಲ ಎಸ್.ಆರ್.ರಾವ್, ಅನುವಾದ – ಎಸ್.ಗುರುರಾಜ್

4) ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಆರ್.ಗೋಪಾಲ್

5) ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಆರ್.ಗೋಪಾಲ್

6) ಕರ್ನಾಟಕದ ವೀರಗಲ್ಲುಗಳು

7) ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ – ಸಂಪಾದಕರು ರಮೇಶ್ ನಾಯಕ್

8) ಮೈಸೂರು ಅರಮನೆ

9) ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಡಾ. ವಾರಿಜಾ ಆರ್.ಬೋಲಾರ್

10) ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.

11) ಮೆಘಾಲಥಿಕ್ ಕೂರ್ಗ್ – ಡಾ. ಸುಬ್ಬಯ್ಯ

12) ಗುಲ್ಬರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

13) ದೊಡ್ಡಬಳ್ಳಾಪುರದ ಹತ್ತಿರ ರಾಜಘಟ್ಟ – ಎಂ.ಎಸ್.ಕೃಷ್ಣಮೂರ್ತಿ

14) ಯೂರೋಪಿಯನ್ ಟೂಂಬ್ಸ್ – ಬಿ.ಎಲ್.ರೈಸ್

15) ಎನ್‌ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಆರ್ಕಿಟೆಕ್ಟ್ – ಡಾ॥ ಡೋಕೆ

16) ಉಡುಪಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಪ್ರೊ. ಟಿ.ಮುರಟಗೇರಿ

17) ಅರಸೀಕೆರೆಯ ಪರಿಸರದ ಬೃಹತ್ ಶಿಲಾಯುಗದ ನೆಲೆಗಳು ಒಂದು ಶೋಧ – ಆರ್.ವೆಂಕಟೇಶಮೂರ್ತಿ

18) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ಕಬ್ಬಿಣದ ಬೃಹತ್ ಶಿಲಾಯುಗ ಸಂಸ್ಕೃತಿ) – ಅ.ಸುಂದರ.

19) ದ.ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ತುಳುನಾಡಿನ ಪ್ರಗೈತಿಹಾಸ) ಡಾ॥ ಪ್ರಣಿಕ್ಕಾ ಗಣಪಯ್ಯ ಭಟ್ – ಸಂಪಾದಕರು ಆರ್.ಗೋಪಾಲ್

20) ಸಮಾಧಿ – ಬಲಿದಾನ ವೀರಮರಣ ಸ್ಮಾರಕಗಳು – ಎಂ.ಎಂ.ಕಲ್ಬುರ್ಗಿ

21) ಮೈಸೂರು ದಸರಾ – ಗೌರಿ ಸುಂದರ್

22) ಸಾವಿಗೆ ಆಹ್ವಾನ – ಷ.ಶೆಟ್ಟರ್

23) ಕನ್ನಡ ವಿಶ್ವಕೋಶ – ಸಂಪುಟ 2, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು

24) ಮಾಸಿಗಲ್ಲು, ವೀರಗಲ್ಲು ಮತ್ತು ನಿಷಿಧಿ ಶಾಸನಗಳು – ಡಾ. ಎಂ.ರಂಗಸ್ವಾಮಿ

25) ವೀರಗಲ್ಲುಗಳು ಹಾಗೂ ಮಾಸ್ತಿಗಲ್ಲುಗಳು – ಡಾ. ಎಂ.ಚಿದಾನಂದ

26) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಡಾ. ಚಿದಾನಂದಮೂರ್ತಿ

27) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ

28) ಕಲಾಚರಿತ್ರೆ – ಅಶೋಕ ಅಕ್ಕಿ

29) ಶ್ರವಣಬೆಳಗೊಳ – ಬಿ.ವಿ.ಶಿರೂರ

30) ಕೋಲಾರ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ – ಆರ್.ಗೋಪಾಲ್

31) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಡಾ. ಕೆ.ಬಿ.ಶಿವತಾರಕ್

